ಶುಕ್ರವಾರ, ನವೆಂಬರ್ 29, 2024 | ₹ 7.00
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ರೀಡಾ ಸ್ಫೂರ್ತಿ

ಬಾಲಿವುಡ್ ನಟಿ ಅಂಕಿತಾ ಲೋಖಂಡೆ ಗುರುವಾರ ಮುಂಬೈನಲ್ಲಿ ನಡೆದ 'ಆಲ್ ಸ್ಟಾರ್ ಟೆನಿಸ್ ಬಾಲ್ ಕ್ರಿಕೆಟ್ ಲೀಗ್'ನ ಆರಂಭಿಕ ಪಂದ್ಯದಲ್ಲಿ ಕಾಣಿಸಿಕೊಂಡಿದ್ದು ಹೀಗೆ...



KNS INFRA®

KNS CANDRILL
Themed Villa Plots
DODDABALLAPUR
ಕೆ ಎನ್ ಎಸ್ ಕ್ಯಾಂಡ್ರಿಲ್

MANAGED BY
Unitern
Money I Material I Management

A SANCTUARY SURROUNDED BY NATURE'S EMBRACE
ಪ್ರಕೃತಿಯಿಂದ ಆವೃತವಾದ ಅಭಯಾರಣ್ಯ

*Artistic Impression

*T&C Apply

27 ಎಕರೆ ವಿಸ್ತೀರ್ಣದ ಅಭಿವೃದ್ಧಿ

PRICE STARTING FROM

₹50.49 Lakhs*

FLAT 2 LAKHS* DISCOUNT BEFORE 1ST DEC, 2024.

ಮುಂಬರುವ ಕ್ವಿನ್ ಸಿಟಿ ಮತ್ತು ಫಾಕ್ಸ್‌ಕಾನ್ ಇವಿ ಪ್ಲಾಂಟ್‌ಗೆ ಹತ್ತಿರದಲ್ಲಿದೆ

80000 ಉದ್ಯೋಗಗಳನ್ನು ಸೃಷ್ಟಿಸಲು ಹೊಂದಿಸಲಾಗಿದೆ

ಮಣಿಪಾಲ್ ಆಸ್ಪತ್ರೆಯಿಂದ 14 ನಿಮಿಷಗಳು

STRR ನಿಂದ 6 ನಿಮಿಷಗಳು

FREE PICK UP & DROP AVAILABLE
BMRDA APPROVED & DPA SANCTIONED

DIMENSION (SQ. FT.):
30X40 | 30X45 | 30X50
APPROVED BY ALL MAJOR BANKS

HURRY! 150+ UNITS ALREADY SOLD

ಸೀಮಿತ ಸಮಯದ ಕೊಡುಗೆಯನ್ನು ಪಡೆದುಕೊಳ್ಳಿ

CONTACT US TODAY 99000 07343

RERA NO. PRM/KA/RERA/1250/301/PR/050924/007000

presales@knscandrill.co.in

www.knscandrill.co.in

ರಾಜ್ಯಪಾಲರ ಬದಲು ಸಿ.ಎಂ ಕುಲಾಧಿಪತಿ

ಬೆಂಗಳೂರು: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಾಧಿಪತಿ ಅಧಿಕಾರವನ್ನು ರಾಜ್ಯಪಾಲರಿಂದ ಕಿತ್ತು ಮುಖ್ಯಮಂತ್ರಿ ಅವರಿಗೆ ನೀಡಲು ಸರ್ಕಾರ ನಿರ್ಧರಿಸಿದೆ.

ಈ ಬದಲಾವಣೆ ತರಲು, ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿ 'ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ 2024' ಮಂಡಿಸಲಾಗುವುದು ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಈ ವಿಶ್ವವಿದ್ಯಾಲಯವನ್ನು ಹೆಚ್ಚು ಕ್ರಿಯಾಶೀಲವಾಗಿಸಲು ಈ ನಿರ್ಣಯ ತೆಗೆದುಕೊಳ್ಳಲಾಗಿದೆ. ಇದರಿಂದ ಉಪಕುಲಪತಿಯ ನೇಮಕವೂ ಸೇರಿ ರಾಜ್ಯಪಾಲರಿಗಿದ್ದ ಸಂಪೂರ್ಣ ಅಧಿಕಾರ ಮುಖ್ಯಮಂತ್ರಿಯವರಿಗೆ ಹಸ್ತಾಂತರವಾಗಲಿದೆ. ಈ ಮಸೂದೆಗೆ ರಾಜ್ಯಪಾಲರ ಅಂಕಿತ ಅಗತ್ಯವಿದೆ ಎಂದು ಅವರು ಹೇಳಿದರು.

ಸಂಪುಟ ಪುನಾರಚನೆಯ ಚರ್ಚೆ ಬೆನ್ನಲ್ಲೇ, ಪಕ್ಷದ ಸಾರಥಿ ಬದಲಿಸುವ ಮಾತು

ಕೆಪಿಸಿಸಿಗೆ ಹೊಸ ಅಧ್ಯಕ್ಷ: ವರಿಷ್ಠರ ಅಂಗಳಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸಚಿವ ಸಂಪುಟ ಪುನರ್ ರಚನೆಯ ವಿಷಯ ಚರ್ಚೆಯಲ್ಲಿರುವಾಗಲೇ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರ ಬದಲಾವಣೆ ವಿಚಾರವೂ ಮುನ್ನೆಲೆಗೆ ಬಂದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೆಹಲಿಯಲ್ಲಿ ಶುಕ್ರವಾರ (ನ.29) ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯಲ್ಲಿ ಭಾಗವಹಿಸಿದ ನಂತರ ಹೈಕಮಾಂಡ್ ನಾಯಕರ ಜೊತೆ ಈ ಕುರಿತು ಮಾತುಕತೆ ನಡೆಸುವ ಸಾಧ್ಯತೆಯಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬುಧವಾರ ರಾತ್ರಿ ದೆಹಲಿಯಲ್ಲಿ ಭೇಟಿ ಮಾಡಿದ್ದ ಡಿ.ಕೆ. ಶಿವಕುಮಾರ್, ರಾಜ್ಯದಲ್ಲಿ ನಡೆದ ಉಪಚುನಾವಣೆ ಫಲಿತಾಂಶ, ಬೆಳಗಾವಿಯಲ್ಲಿ ಡಿ. 27ರಂದು ನಡೆಯಲಿರುವ ಕಾಂಗ್ರೆಸ್ ಅಧಿವೇಶನ, ಸಂಪುಟ ಪುನರ್‌ರಚನೆ, ಸಚಿವರ ಸಾಧನೆ, ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಸಮಾಲೋಚನೆ ನಡೆಸಿದ್ದಾರೆ.

'ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡಿದೆ'

'ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಸಂಬಂಧಿಸಿದಂತೆ ಹಲವು ಕಡೆಗಳಲ್ಲಿ ಮಾತುಗಳಿವೆ. ಹೈಕಮಾಂಡ್ ಯಾವ ರೀತಿ ಬದಲಾವಣೆ ಮಾಡುತ್ತದೋ ಕಾದು ನೋಡಬೇಕು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

'ಡಿ.ಕೆ. ಶಿವಕುಮಾರ್ ಅವರು ಅಧ್ಯಕ್ಷರಾಗಿ ಹಗಲು–ರಾತ್ರಿ ಪಕ್ಷವನ್ನು ಕಟ್ಟಿ, ಅಧಿಕಾರಕ್ಕೆ ತಂದಿದ್ದಾರೆ. ಅದರಲ್ಲಿ ಎರಡು ಮಾತಿಲ್ಲ. ಆದರೆ, ಅವರು ಅಧ್ಯಕ್ಷರಾಗಿ ಐದು ವರ್ಷಕ್ಕಿಂತ ಹೆಚ್ಚು ಸಮಯವಾಗಿದೆ. ಅವರಿಗೂ ಬೇರೆ ಬೇರೆ ಕೆಲಸ ಕಾರ್ಯಗಳು ಹೆಚ್ಚಾಗಿವೆ. ಅವರು ಮುಂದುವರಿದರೂ ನಮಗೆ ತೊಂದರೆ ಇಲ್ಲ. ಪೂರ್ಣ ಅವಧಿಗೆ ಯಾರನ್ನಾದರೂ ನೇಮಿಸುವುದೂ ತಪ್ಪಲ್ಲ' ಎಂದು ಸುದ್ದಿಗಾರರಿಗೆ ಗುರುವಾರ ಪ್ರತಿಕ್ರಿಯೆ ನೀಡಿದರು.

ದಿನೇಶ್ ಗುಂಡೂರಾವ್

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ವಿಚಾರದ ಕುರಿತು ಪಕ್ಷದ ವರಿಷ್ಠರು ತೀರ್ಮಾನಿಸುತ್ತಾರೆ

ಈಶ್ವರ ಖಂಡ್ರೆ, ಸಚಿವ

ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ. ಶಿವಕುಮಾರ್ ಅವರು ನಾಲ್ಕು ವರ್ಷ ಪೂರ್ಣಗೊಳಿಸಿದ್ದಾರೆ. ಲೋಕಸಭೆ ಚುನಾವಣೆ ಬಳಿಕ ಪದತ್ಯಾಗದ ಸುಳಿವನ್ನು ಅವರು ಈ ಹಿಂದೆಯೇ ನೀಡಿದ್ದಾರೆ. ಹೀಗಾಗಿ, ಹೊಸ ಅಧ್ಯಕ್ಷರ ನೇಮಕ ಕುರಿತು ಕಾಂಗ್ರೆಸ್ ವಲಯದಲ್ಲಿ ಆಗಾಗ ಮಾತುಗಳು ಕೇಳಿಬರುತ್ತಿದ್ದವು. ಆ ಪಟ್ಟದ ಮೇಲೆ ಕಣ್ಣಿಟ್ಟಿರುವ ಸಚಿವ ಕೆ.ಎನ್. ರಾಜಣ್ಣ ಸೇರಿದಂತೆ ಕೆಲವರು ಈ ವಿಚಾರವನ್ನು ಆಗಾಗ ಬಹಿರಂಗವಾಗಿ ಪ್ರಸ್ತಾಪಿಸುತ್ತಲೇ ಇದ್ದಾರೆ.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಗೃಹ ಸಚಿವ ಜಿ. ಪರಮೇಶ್ವರ, 'ರಾಜ್ಯ ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆ ಮತ್ತು ಸಂಪುಟ ಪುನರ್‌ರಚನೆ ಕುರಿತು ದೆಹಲಿಯಲ್ಲಿ ಚರ್ಚೆ ನಡೆಯಲಿದೆ. ಅಂತಿಮವಾಗಿ ವರಿಷ್ಠರು ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದು ತಿಳಿಸಿದರು.

'ಸಂಪುಟ ಪುನರ್‌ರಚನೆಯ ಜೊತೆಗೆ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆಯೂ ಮಾತುಗಳಿವೆ. ಈ ಎರಡೂ ವಿಚಾರಗಳ ಬಗ್ಗೆ ವರಿಷ್ಠರ ಜೊತೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಚರ್ಚೆ ಮಾಡಿ ಏನು ತೀರ್ಮಾನ ಮಾಡಿಕೊಂಡು ಬರುತ್ತಾರೋ ಗೊತ್ತಿಲ್ಲ. ಅದೇ ರೀತಿ ಖಾತೆಗಳ ಬದಲಾವಣೆ ಬಗ್ಗೆಯೂ ಏನು ತೀರ್ಮಾನ ಮಾಡುತ್ತಾರೋ ಗೊತ್ತಿಲ್ಲ' ಎಂದರು.

ಸುದ್ದಿ 2 ನಿಮಿಷ

ಚಂದ್ರಶೇಖರನಾಥ ಸ್ವಾಮೀಜಿ ವಿರುದ್ಧ ಎಫ್‌ಐಆರ್

ಬೆಂಗಳೂರು: 'ಮುಸ್ಲಿಂ ಸಮುದಾಯದ ಮತದಾನದ ಹಕ್ಕು ರದ್ದುಪಡಿಸಲು ಕಾನೂನು ಜಾರಿಗೆ ತರಬೇಕು' ಎಂಬ ಹೇಳಿಕೆ ನೀಡಿದ್ದ ವಿಶ್ವ ಒಕ್ಕಲಿಗ ಸಂಸ್ಥಾನ ಮಠದ ಚಂದ್ರಶೇಖರ ನಾಥ ಸ್ವಾಮೀಜಿ ವಿರುದ್ಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ವಾಮೀಜಿ ಅವರು ಪ್ರಚೋದನಾತ್ಮಕ ಹೇಳಿಕೆ ನೀಡಿದ್ದಾರೆ ಎಂದು ಸೈಯದ್ ಅಬ್ಬಾಸ್ ಎಂಬುವವರು ನೀಡಿರುವ ದೂರು ಆಧರಿಸಿ ಬಿಎನ್ ಎಸ್ ಸೆಕ್ಷನ್ 299 ರ ಅಡಿ ಎಫ್ ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ನ.26ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಮುಸ್ಲಿಮರಿಗೆ ಮತದಾನದ ಹಕ್ಕು ನೀಡಬಾರದು ಎಂದು ಸ್ವಾಮೀಜಿ ಹೇಳಿಕೆ ನೀಡಿದ್ದರು.

ವಿವಾದಾತ್ಮಕ ಹೇಳಿಕೆಗೆ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಸ್ವಾಮೀಜಿ ಕ್ಷಮೆ ಕೋರಿದ್ದರು.

'ಮುಸ್ಲಿಮರು ಕೂಡ ಈ ದೇಶದ ಪ್ರಜೆಗಳು. ಎಲ್ಲರಂತೆ ಅವರಿಗೂ ಮತದಾನದ ಹಕ್ಕಿದೆ. ನನ್ನ ಹೇಳಿಕೆಯಿಂದ ಮುಸ್ಲಿಂ ಬಾಂಧವರಿಗೆ ನೋವಾಗಿದ್ದರೆ, ಅದಕ್ಕಾಗಿ ಪ್ರಾಮಾಣಿಕವಾಗಿ ಕ್ಷಮೆಯಾಚಿಸುತ್ತೇನೆ' ಎಂದಿದ್ದರು.

ಊಟಕ್ಕಾಗಿ ಬಾಲಮಂದಿರ ಸೇರಿದ್ದ ಬಾಲಕ

ಬೆಂಗಳೂರು : ಹೊಟ್ಟೆ ತುಂಬ ತಿಂಡಿ, ಊಟ ಸಿಗುತ್ತದೆ ಎಂಬ ಕಾರಣಕ್ಕೆ ಮನೆ ಬಿಟ್ಟು ಬಂದು ಬಾಲಮಂದಿರ ಸೇರಿಕೊಳ್ಳುತ್ತಿದ್ದ ಬಾಲಕನನ್ನು ಮತ್ತೆ ಪೋಷಕರ ಮಡಿಲಿಗೆ ಶಂಕರಪುರ ಠಾಣೆ ಪೊಲೀಸರು ಸೇರಿಸಿದ್ದಾರೆ.

'ಪಾನಮತ್ತ ತಂದೆ, ಕೂಲಿ ಕೆಲಸ ಮಾಡುವ ತಾಯಿ, ಓದಿನಲ್ಲಿ ಆಸಕ್ತಿ ಇರದ ಬಾಲಕ ಮನೆ ಬಿಟ್ಟು ಬಂದು ಪಾದಚಾರಿ ಮಾರ್ಗದಲ್ಲಿ ನಿಂತುಕೊಳ್ಳುತ್ತಿದ್ದ. ಬಾಲಕನನ್ನು ಗಮನಿಸಿದವರು ಸಹಜವಾಗಿಯೇ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದರು. ವಿಚಾರಿಸಿದಾಗ, ಸರಿಯಾದ ಮಾಹಿತಿ ನೀಡುತ್ತಿರಲಿಲ್ಲ. ಹಾಗಾಗಿ ಬಾಲಕನನ್ನು ಸರ್ಕಾರಿ ಬಾಲಮಂದಿರಕ್ಕೆ ಬಿಟ್ಟು ಬರುತ್ತಿದ್ದರು. ಅಲ್ಲಿಯೇ ಊಟ, ತಿಂಡಿ ಮಾಡಿಕೊಂಡು ಇರುತ್ತಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ. ಈ ಹಿಂದೆಯೂ ಅತ್ತಿಬೆಲೆ, ಸರ್ಜಾಪುರ, ಹೊಸಕೋಟೆ ಪೊಲೀಸರು ಬಾಲಮಂದಿರಕ್ಕೆ ಒಪ್ಪಿಸಿದ್ದರು. ಬಳಿಕ ಪೋಷಕರನ್ನು ಪತ್ತೆ ಹಚ್ಚಿ ಆತನನ್ನು ಮನೆಗೆ ಕಳಿಸಿಕೊಡಲಾಗಿತ್ತು ಎಂದು ಹೇಳಿದ್ದಾರೆ.

'ವಾರದ ಹಿಂದೆ ರಾತ್ರಿ ಪಾದಚಾರಿ ಮಾರ್ಗದಲ್ಲಿ ನಿಂತಿದ್ದ ಬಾಲಕನನ್ನು ಶಂಕರಪುರ ಠಾಣೆಯ ಇನ್‌ಸ್ಪೆಕ್ಟರ್ ಉದಯರವಿ ಗಮನಿಸಿದ್ದರು. ವಿಚಾರಿಸಿದಾಗ ಬಾಲಕ 'ತಂದೆ, ತಾಯಿ ಗೊತ್ತಿಲ್ಲ, ಊರು ಗೊತ್ತಿಲ್ಲ' ಎಂದು ಉತ್ತರಿಸಿದ್ದ. ಬಳಿಕ ಆತನನ್ನು ಬಾಲಮಂದಿರಕ್ಕೆ ಬಿಟ್ಟು ಬಂದಿದ್ದ ಪೊಲೀಸರು, ಪೋಷಕರ ಪತ್ತೆಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ್ದರು. ಅತ್ತಿಬೆಲೆ ಠಾಣೆಗೆ ಪೋಷಕರು ಬಂದು ಬಾಲಕನನ್ನು ಕರೆದೊಯ್ದರು' ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ. ಜಗಲಾಸರ್ ಮಾಹಿತಿ ನೀಡಿದ್ದಾರೆ.

ಕಾಂಗ್ರೆಸ್ ಮುಖಂಡ ಗುರಪ್ಪ ನಾಯ್ಡು ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಅಡಿ ತ್ಯಾಗರಾಜ ನಗರದ ಶಾಲೆಯೊಂದರ ಮುಖ್ಯಸ್ಥ, ಕಾಂಗ್ರೆಸ್ ಮುಖಂಡ ಗುರಪ್ಪ ನಾಯ್ಡು ಅವರ ವಿರುದ್ಧ ಚೆನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನವೆಂಬರ್ 26ರಂದು ಶಿಕ್ಷಕಿಯೊಬ್ಬರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಶಿಕ್ಷಕಿಯ ಹೇಳಿಕೆ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಶಿಕ್ಷಕಿಯರೂ ಸೇರಿದಂತೆ 75ಕ್ಕೂ ಹೆಚ್ಚು ಮಹಿಳೆಯರು ಆ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆರೋಪಿ ಗುರಪ್ಪ ನಾಯ್ಡು ಕೆಲವು ಶಿಕ್ಷಕಿಯರು ಹಾಗೂ ಸಿಬ್ಬಂದಿಗೆ ಗೊತ್ತಾಗದಂತೆ ಬೆತ್ತಲೆ ಹಾಗೂ ಅಶ್ಲೀಲ ವಿಡಿಯೊಗಳನ್ನು ಚಿತ್ರೀಕರಿಸಿಕೊಂಡಿದ್ದಾರೆ. ಅವುಗಳನ್ನು ತಮ್ಮ ಬಳಿ ಇಟ್ಟುಕೊಂಡು ಹೆದರಿಸುತ್ತಿದ್ದಾರೆ. ಹೇಳಿದಂತೆ ಕೇಳದಿದ್ದರೆ ವಿಡಿಯೊ ಬಹಿರಂಗಪಡಿಸುವುದಾಗಿ ಬೆದರಿಕೆ ಹಾಕುತ್ತಿದ್ದಾರೆ. ಹೆಣ್ಣುಮಕ್ಕಳನ್ನು ಲೈಂಗಿಕ ತೃಷೆಗೆ ಬಳಸಿಕೊಂಡಿದ್ದಾರೆ' ಎಂದು ಶಿಕ್ಷಕಿ ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಗುರಪ್ಪ ನಾಯ್ಡು ಅವರ ವಿರುದ್ಧ ಈ ಹಿಂದೆ ದೂರು ನೀಡಲು ಕೆಲವು ಶಿಕ್ಷಕಿಯರು ಹಾಗೂ ಸಿಬ್ಬಂದಿ ನಿರ್ಧಾರ ಮಾಡಿದ್ದೆವು. ಆದರೆ, ಗುರಪ್ಪ ನಾಯ್ಡು ಪ್ರಭಾವಿ ಹಾಗೂ ಸ್ಥಿತಿವಂತನೆಂದು ತಿಳಿದು ಸುಮ್ಮನಿದ್ದೆವು' ಎಂದು ದೂರಿನ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

'2021ರಿಂದ 2023ರವರೆಗೆ ಶಿಕ್ಷಕಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಉದ್ದೇಶಪೂರ್ವಕವಾಗಿಯೇ ಅವರ ಕೊಠಡಿಗೆ ಕರೆಯುವುದು, ಯಾವಾಗ ರೆಡಿ ಆಗುತ್ತೀಯಾ? ಎಂದು ಕೇಳುತ್ತಾರೆ. ಅವರ ವರ್ತನೆಯಿಂದ ಸಾಕಷ್ಟು ಮಾನಸಿಕ ಕಿರುಕುಳ ಉಂಟಾಗಿದೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಗುರಪ್ಪ ನಾಯ್ಡು ಅವರು ನನ್ನೊಂದಿಗೆ ಅಸಭ್ಯವಾಗಿ ವರ್ತಿಸಿದ್ದರು. ಲೈಂಗಿಕ ಚಟುವಟಿಕೆಗೆ ಪ್ರಚೋದಿಸಿ ತಮ್ಮ ಕೋಣೆಯಲ್ಲಿ ಕೈಹಿಡಿದು ಎಳೆದಾಡಿದ್ದರು. ಮರ್ಯಾದಸ್ಥ ಕುಟುಂಬದಿಂದ ಬಂದಿದ್ದೇನೆ. ಆ ರೀತಿ ವರ್ತಿಸಬೇಡಿ ಎಂದಾಗ ಕೋಪ ಮಾಡಿಕೊಂಡರು. ಬೂಟಿನಲ್ಲಿ ಹೊಡೆಯುತ್ತೇನೆಂದು ಬೆದರಿಕೆ ಹಾಕಿದ್ದರು. ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಘಟನೆಯಿಂದ ಭೀತಿಗೆ ಒಳಗಾಗಿದ್ದೇನೆ. ಆಘಾತದಿಂದ ಸುಧಾರಿಸಿಕೊಳ್ಳಲು ನಾನು ಸಾಕಷ್ಟು ಸಮಯ ತೆಗೆದುಕೊಂಡಿದ್ದೇನೆ' ಎಂದು ದೂರುದಾರೆ ತಿಳಿಸಿದ್ದಾರೆ.

ಕಬ್ಬನ್ ಉದ್ಯಾನದ ಆವರಣದಲ್ಲಿ ಹೂರಾಶಿಯಲ್ಲಿ ಅರಳಿದ ಕಲಾಕೃತಿಗೆ ಕಲಾವಿದರು ಅಂತಿಮ ಸ್ಪರ್ಶ ನೀಡಿದ ಕಲಾವಿದರು —ಪ್ರಜಾವಾಣಿ ಚಿತ್ರ: ಎಸ್.ಕೆ.ದಿನೇಶ್

ಇಂದಿನಿಂದ ಪುಷ್ಪ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ದಿನಾಚರಣೆಯ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಜವಾಹರ ಬಾಲಭವನ ಸೊಸೈಟಿ ಹಾಗೂ ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ನವೆಂಬರ್ 29ರಿಂದ ಡಿಸೆಂಬರ್ 1ರ ವರೆಗೆ ಕಬ್ಬನ್ ಉದ್ಯಾನದ ಆವರಣದಲ್ಲಿರುವ ಬಾಲಭವನದಲ್ಲಿ ಮಕ್ಕಳ ವಿಷಯಾಧಾರಿತ ಪುಷ್ಪ ಪ್ರದರ್ಶನ ಆಯೋಜಿಸಲಾಗಿದೆ.

ಇದಕ್ಕಾಗಿ ಈಗಾಗಲೇ ತೋಟಗಾರಿಕೆ ಇಲಾಖೆ ವಿವಿಧ ಬಗೆಯ ಅಲಂಕಾರಿಕ, ದೇಶಿ–ವಿದೇಶಿ ಹೂಗಳ ಕುಂಡಗಳನ್ನು ಸಿದ್ಧತೆ ಮಾಡಿಕೊಂಡಿದೆ. ರಾಕೆಟ್, ನವಿಲು, ಆನೆ ಕುಟುಂಬ, ರೋಬೊ, ಚಿಟ್ಟೆ, ಡೈನೋಸಾರಸ್, ಬಾತುಕೋಳಿ ಸೇರಿದಂತೆ ವಿವಿಧ ಕಲಾಕೃತಿಗಳು ಪುಷ್ಪಗಳಲ್ಲಿ ಅರಳಿ ನಿಂತಿದ್ದು, ಮಕ್ಕಳನ್ನು ಕೈಬೀಸಿ ಕರೆಯುತ್ತಿವೆ. ಹೂ ರಾಶಿಯಲ್ಲಿ ಅರಳಿದ ಕಲಾಕೃತಿಗಳು ಚಿಣ್ಣರನ್ನು ಆಕರ್ಷಿಸುತ್ತಿವೆ.

25 ಸಾವಿರ ಹೂ ಕುಂಡಗಳನ್ನು ಕಬ್ಬನ್ ಉದ್ಯಾನದ ಬ್ಯಾಂಡ್ ಸ್ಟ್ಯಾಂಡ್ ಹತ್ತಿರ, ಜಯಚಾಮರಾಜೇಂದ್ರ ಒಡೆಯರ್ ಪ್ರತಿಮೆ ಮುಂಭಾಗದಲ್ಲಿ ಹಾಗೂ ಬಾಲಭವನದ ಆವರಣದಲ್ಲಿ ಜೋಡಿಸಿ ಇಡಲಾಗಿದೆ. ಈ ಪುಷ್ಪ ಪ್ರದರ್ಶನವೂ ಮೂರು ದಿನ ನಡೆಯಲಿದೆ. ಬೆಳಿಗ್ಗೆ 6 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಪ್ರದರ್ಶನ ನಡೆಯಲಿದ್ದು, ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದು ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕಿ (ಕಬ್ಬನ್ ಉದ್ಯಾನ) ಕುಸುಮಾ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ನ. 29ರ ಬೆಳಿಗ್ಗೆ 10ಕ್ಕೆ ನಡೆಯುವ ಮಕ್ಕಳ ದಿನಾಚರಣೆ–2024 ಹಾಗೂ ಜವಾಹರ ಬಾಲ ಭವನ ಕಲಾಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ ಉದ್ಘಾಟಿಸಲಿದ್ದಾರೆ. ಮಕ್ಕಳಿಗೆ ಶೌರ್ಯ ಪ್ರಶಸ್ತಿ, ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಮಾಡಿದ ಸಂಸ್ಥೆ ವಿಭಾಗ ಹಾಗೂ ವ್ಯಕ್ತಿ ವಿಭಾಗ ರಾಜ್ಯ ಮಟ್ಟದ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ' ಎಂದು ಜವಾಹರ ಬಾಲಭವನ ಸೊಸೈಟಿ ಅಧ್ಯಕ್ಷ ಬಿ.ಆರ್. ನಾಯ್ಡು ಮಾಹಿತಿ ನೀಡಿದರು.

ಆಸ್ಪತ್ರೆ ಶೌಚಾಲಯ ಗುಂಡಿಯಲ್ಲಿ ನವಜಾತ ಶಿಶು ಶವ ಪತ್ತೆ

ಪ್ರಜಾವಾಣಿ ವಾರ್ತೆ

ಹಾರೋಹಳ್ಳಿ: ತಾಲ್ಲೂಕಿನ ಬೆಂಗಳೂರು–ಕನಕಪುರ ರಸ್ತೆಯಲ್ಲಿರುವ ಡಾ. ಚಂದ್ರಮ್ಮ ದಯಾನಂದ ಸಾಗರ ಆಸ್ಪತ್ರೆಯ ಮಹಿಳಾ ಶೌಚಾಲಯದ ಗುಂಡಿಯಲ್ಲಿ ನವಜಾತ ಗಂಡು ಶಿಶುವಿನ ಶವ ಪತ್ತೆಯಾಗಿದೆ. ಘಟನೆ ಕುರಿತು ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಸ್ಪತ್ರೆ ಸಂಕೀರ್ಣದ 'ಎಫ್' ಕಟ್ಟಡದ ನೆಲಮಹಡಿಯ ರೇಡಿಯಾಲಜಿ ವಿಭಾಗದ ಪಕ್ಕದ ಮಹಿಳಾ ಶೌಚಾಲಯದ ಪೈಪ್‌ಲೈನ್ ನ. 27ರಂದು ಬುಧವಾರ ಕಟ್ಟಿಕೊಂಡಿತ್ತು. ಸ್ವಚ್ಛತಾ ಕೆಲಸಗಾರರನ್ನು ಕರೆಯಿಸಿದ್ದ ಆಸ್ಪತ್ರೆ ಸಿಬ್ಬಂದಿ, ಪ್ರೆಶರ್ ಪಂಪ್‌ನಿಂದ ಶುದ್ಧೀಕರಣ ಮಾಡಿಸಿದ್ದರು. ನಂತರ ಶೌಚಾಲಯದ ಪಿಟ್ ಗುಂಡಿ ಪರಿಶೀಲಿಸಿದಾಗ ಶಿಶುವಿನ ಶವ ಪತ್ತೆಯಾಯಿತು. ಆಸ್ಪತ್ರೆಗೆ ಬಂದಿರುವ ಮಹಿಳೆ ತನಗೆ ಜನಿಸಿದ ಶಿಶುವಿನ ಜನನ ಮರೆಮಾಚಲು ಶೌಚಾಲಯದ ಕಮೋಡ್‌ನಲ್ಲಿ ಮಗುವನ್ನು ಹಾಕಿ ನೀರನ್ನು ಫ್ಲಶ್ ಮಾಡಿ ಹೋಗಿದ್ದಾರೆ. ಶವವು ಪೈಪ್‌ನಲ್ಲಿ ಸಿಲುಕಿದ್ದರಿಂದ ಶೌಚಾಲಯ ಕಟ್ಟಿಕೊಂಡಿತ್ತು. ಅದನ್ನು ಸ್ವಚ್ಛಗೊಳಿಸಿದಾಗ ಮಗುವಿನ ಶವ ಇದ್ದ ಸಂಗತಿ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದರು.

ಆರೋಪಿಗಳ ಪತ್ತೆಗಾಗಿ ಶೌಚಾಲಯವಿದ್ದ ಕಟ್ಟಡದ ಸಿ.ಸಿ. ಟಿ.ವಿ. ಕ್ಯಾಮೆರಾ ಪರಿಶೀಲಿಸಲಾಗುತ್ತಿದೆ. ಜೊತೆಗೆ ಮಗುವಿನ ತಂದೆ–ತಾಯಿ ಪತ್ತೆಗಾಗಿ ಡಿಎನ್‌ಎ ಪರೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಸಲ್ಮಾನ್ 7 ದಿನ ನ್ಯಾಯಾಂಗ ಬಂಧನಕ್ಕೆ

ಪ್ರಜಾವಾಣಿ ವಾರ್ತೆ

ಸಲ್ಮಾನ್

ಬೆಂಗಳೂರು: ಬೆಂಗಳೂರಿನಲ್ಲಿ ನಡೆದಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿನ ತಲೆ ಮರೆಸಿಕೊಂಡಿದ್ದ ಆರೋಪಿ ಸಲ್ಮಾನ್ ಖಾನ್ ಅನ್ನು ಎನ್‌ಐಎ ಪೊಲೀಸರು ಗುರುವಾರ ಸಂಜೆ ನಗರದ ವಿಶೇಷ ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ನ್ಯಾಯಾಲಯ ಆರೋಪಿಯನ್ನು ಏಳು ದಿನಗಳವರೆಗೆ ನ್ಯಾಯಾಂಗ ಬಂದನಕ್ಕೆ ಒಪ್ಪಿಸಿದೆ.

ಪ್ರಕರಣದ 8ನೇ ಆರೋಪಿಯಾದ ಸಲ್ಮಾನ್ ಖಾನ್ ಅಲಿಯಾಸ್ ಸಲ್ಮಾನ್ ಬಿನ್ ರಿಯಾಜ್ ಅಹಮದ್ ಅವರನ್ನು ಎನ್‌ಐಎ ಪೊಲೀಸರು ಗುರುವಾರ ಸಂಜೆ ಬಿಗಿ ಭದ್ರತೆಯ ನಡುವೆ ಸಿಟಿ ಸಿವಿಲ್ ಕೋರ್ಟ್‌ನ 50ನೇ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಈ ವೇಳೆ ಎನ್‌ಐಎ ಪರ ಹಾಜರಿದ್ದ ಪಿ.ಪ್ರಸನ್ನ ಕುಮಾರ್ ಬಂಧನದ ವಿವರವನ್ನು ನ್ಯಾಯಾಲಯಕ್ಕೆ ನೀಡಿದರು.

ವಿವರಣೆಯನ್ನು ಪರಿಶೀಲಿಸಿದ ನ್ಯಾಯಾಧೀಶ ಸಿ.ಎಂ.ಗಂಗಾಧರ ಅವರು ಆರೋಪಿಯನ್ನು ಡಿ. 6ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು.

ರುವಾಂಡದಿಂದ ಭಾರತಕ್ಕೆ ಉಗ್ರನ ಹಸ್ತಾಂತರ

ಬೆಂಗಳೂರಿನಲ್ಲಿ ನಡೆದಿದ್ದ ಭಯೋತ್ಪಾದಕ ದಾಳಿ ಪ್ರಕರಣ: ಸಿಬಿಐ, ಎನ್‌ಐಎ ಜಂಟಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ನಡೆದಿದ್ದ ಭಯೋತ್ಪಾದಕ ದಾಳಿ ಪ್ರಕರಣದಲ್ಲಿ ಬೇಕಾಗಿದ್ದ ಆರೋಪಿಯನ್ನು ಸಿಬಿಐ, ಎನ್‌ಐಎ ಹಾಗೂ ಇಂಟರ್‌ಪೋಲ್ ಜಂಟಿಯಾಗಿ ಕಾರ್ಯಾಚರಣೆ ನಡೆಸಿ ರುವಾಂಡದಿಂದ ಭಾರತಕ್ಕೆ ಕರೆತಂದಿವೆ.

ಸಲ್ಮಾನ್ ರೆಹಮಾನ್ ಖಾನ್, ಭಾರತಕ್ಕೆ ರುವಾಂಡ ಹಸ್ತಾಂತರ ಮಾಡಿರುವ ಆರೋಪಿ. ಈತ ಲಷ್ಕರ್–ಎ–ತಯಬಾ (ಎಲ್‌ಇಟಿ) ಸದಸ್ಯ ಎಂದು ಹೇಳಲಾಗಿದೆ. ಈತನನ್ನು ಭಾರಿ ಭದ್ರತೆಯೊಂದಿಗೆ ಗುರುವಾರ ಕರೆತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈತನ ವಿರುದ್ಧ ಇಂಟರ್‌ಪೋಲ್ 'ರೆಡ್ ನೋಟಿಸ್' ಜಾರಿ ಮಾಡಿತ್ತು.

'ಬೆಂಗಳೂರಿನಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ವಿಸ್ತರಿಸುವುದಕ್ಕಾಗಿ ಆಯುಧಗಳು ಮತ್ತು ಸ್ಫೋಟಕ ವಸ್ತುಗಳ ಪೂರೈಕೆಗೆ ನೆರವಾಗುತ್ತಿದ್ದ ಎಂಬ ಆರೋಪ ಈತನ ವಿರುದ್ಧ ಇದ್ದು, ಎನ್‌ಐಎಗೆ ಬೇಕಾಗಿದ್ದ' ಎಂದು ಸಿಬಿಐ ವಕ್ತಾರರು ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಸಿಬಿಐನ ಅಂಗಸಂಸ್ಥೆಯಾದ ಜಾಗತಿಕ ಕಾರ್ಯಾಚರಣೆಗಳ ಕೇಂದ್ರವು (ಜಿಒಸಿ) ಎನ್‌ಐಎ ಹಾಗೂ ರುವಾಂಡ ರಾಜಧಾನಿ ಕಿಗಾಲಿಯಲ್ಲಿರುವ ಇಂಟರ್‌ಪೋಲ್ ನ್ಯಾಷನಲ್ ಸೆಂಟ್ರಲ್ ಬ್ಯುರೊ ಜೊತೆ ಸಮನ್ವಯ ಸಾಧಿಸಿ, ಈತನನ್ನು ಭಾರತಕ್ಕೆ ತರಲು ನೆರವಾಯಿತು' ಎಂದು ತಿಳಿಸಿದ್ದಾರೆ.

'ಎನ್‌ಐಎ ಮನವಿ ಮೇರೆಗೆ, ಆಗಸ್ಟ್ 2ರಂದು ಇಂಟರ್‌ಪೋಲ್‌ನಿಂದ 'ರೆಡ್ ನೋಟಿಸ್' ಜಾರಿ ಮಾಡಿಸುವಲ್ಲಿ ಎನ್‌ಐಎ ಯಶಸ್ವಿಯಾಗಿತ್ತು. ಸಲ್ಮಾನ್ ಪತ್ತೆಗಾಗಿ ವಿಶ್ವದ ಎಲ್ಲ ತನಿಖಾ ಸಂಸ್ಥೆಗಳಿಗೆ ಈ ನೋಟಿಸ್ ರವಾನಿಸಲಾಗಿತ್ತು' ಎಂದೂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸಲ್ಮಾನ್‌ನನ್ನು ನವೆಂಬರ್ 9ರಂದು ಬಂಧಿಸಲಾಗಿತ್ತು. ಭಾರತಕ್ಕೆ ಹಸ್ತಾಂತರಿಸುವ ಪ್ರಕ್ರಿಯೆ ಬುಧವಾರವಷ್ಟೆ ಪೂರ್ಣಗೊಂಡಿತ್ತು' ಎಂದು ರವಾಂಡ ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳು ಹೇಳಿವೆ.

ಸೌದಿಯಿಂದ ಇಬ್ಬರನ್ನು ಕರೆತಂದ ಸಿಬಿಐ, ಕೇರಳ ಪೊಲೀಸ್

ಮತ್ತೊಂದು ಬೆಳವಣಿಗೆಯಲ್ಲಿ, ಇಂಟರ್‌ಪೋಲ್ ಜೊತೆಗಿನ ಸಮನ್ವಯದಿಂದ ಇಬ್ಬರು ಆರೋಪಿಗಳನ್ನು ಸೌದಿ ಅರೇಬಿಯಾದಲ್ಲಿ ಬಂಧಿಸಿ, ಭಾರತಕ್ಕೆ ಕರೆತರುವಲ್ಲಿ ಸಿಬಿಐ ಹಾಗೂ ಕೇರಳ ಪೊಲೀಸರು ಯಶಸ್ವಿಯಾಗಿದ್ದಾರೆ.

ಬರ್ಕತ್ ಅಲಿ ಖಾನ್ ಹಾಗೂ ರೇಹಾನ್ ಅರಬಿಕ್ಕಳಲರಿಕ್ಕಲ್, ಭಾರತಕ್ಕೆ ಕರೆತರಲಾಗಿರುವ ಆರೋಪಿಗಳು.

'2012ರ ಗಲಭೆ ಹಾಗೂ ಸ್ಫೋಟಕಗಳನ್ನು ಬಳಸಿದ ಪ್ರಕರಣದಲ್ಲಿ ಬರ್ಕತ್ ಅಲಿ ಸಿಬಿಐಗೆ ಬೇಕಾಗಿದ್ದ. ಈತನ ವಿರುದ್ಧ ಇಂಟರ್‌ಪೋಲ್ ರೆಡ್ ಕಾರ್ನರ್ ನೋಟಿಸ್ ಜಾರಿ ಮಾಡಿತ್ತು. ಈತನನ್ನು ನವೆಂಬರ್ 14ರಂದು ಸೌದಿ ಅರೇಬಿಯಾದಿಂದ ಕರೆತರಲಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಮಕ್ಕಳ ಮೇಲೆ ಅತ್ಯಾಚಾರ ಹಾಗೂ ಲೈಂಗಿಕ ಅಪರಾಧ ಪ್ರಕರಣಗಳಲ್ಲಿ ಕೇರಳ ಪೊಲೀಸರಿಗೆ ಬೇಕಾಗಿದ್ದ ರೇಹಾನ್‌ನನ್ನು ನವೆಂಬರ್ 10ರಂದು ಕರೆತರಲಾಗಿದೆ' ಎಂದೂ ತಿಳಿಸಿದ್ದಾರೆ.

ನಾಗೇನಹಳ್ಳಿಯಲ್ಲಿ ವಾಸವಿದ್ದ ಸಲ್ಮಾನ್ ರೆಹಮಾನ್ ಖಾನ್

'29 ವರ್ಷದ ಸಲ್ಮಾನ್ ರೆಹಮಾನ್ ಖಾನ್ ಬೆಂಗಳೂರು ಉತ್ತರದ ವಿ. ನಾಗೇನಹಳ್ಳಿಯಲ್ಲಿ ವಾಸವಿದ್ದ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಕ್ರಿಮಿನಲ್ ಪಿತೂರಿ, ಶಸ್ತ್ರಾಸ್ತ್ರ ಕಾಯ್ದೆ ಹಾಗೂ ಸ್ಫೋಟಕ ವಸ್ತುಗಳ ಕಾಯ್ದೆಯಡಿ ಈತನ ವಿರುದ್ಧ ಎನ್‌ಐಎ ಕಳೆದ ವರ್ಷ ಪ್ರಕರಣ ದಾಖಲಿಸಿದೆ. ಈತನ ವಿರುದ್ಧ ಬೆಂಗಳೂರಿನ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಪೋಕ್ಸೊ ಪ್ರಕರಣದಲ್ಲಿ ಸಲ್ಮಾನ್‌ನನ್ನು 2018ರಿಂದ 2022ರ ವರೆಗೆ ಜೈಲಿನಲ್ಲಿರಿಸಲಾಗಿತ್ತು. ಜೈಲಿನಲ್ಲಿದ್ದಾಗಲೇ ಈತನನ್ನು, ಭಯೋತ್ಪಾದನೆ ಪ್ರಕರಣವೊಂದರಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ತಡಿಯಂತವಿಡೆ ನಜೀರ್ ಎಂಬಾತ ಉಗ್ರ ಸಂಘಟನೆಗೆ ನೇಮಕ ಮಾಡಿಕೊಂಡಿದ್ದ' ಎಂದು ಎನ್‌ಐಎ ಅಧಿಕಾರಿಗಳು ಹೇಳಿದ್ದಾರೆ.

'ನಜೀರ್ ಅನೇಕ ಯುವಕರನ್ನು ಮೂಲಭೂತವಾದಿಗಳನ್ನಾಗಿಸಿ, ಅವರನ್ನು ಭಾರತದಲ್ಲಿ ಎಲ್‌ಇಟಿ ಚಟುವಟಿಕೆಗಳಲ್ಲಿ ತೊಡಗಿಸಿದ್ದ ಎನ್ನಲಾಗಿದೆ. ನಜೀರ್ ಮೂಲಕ ಎಲ್‌ಇಟಿಯ ಘಟಕವನ್ನು ಪತ್ತೆ ಹಚ್ಚಿದ ನಂತರ, ಸಲ್ಮಾನ್ ಭಾರತದಿಂದ ಪರಾರಿಯಾಗಿದ್ದ. ಎನ್‌ಐಎ ಸಲ್ಲಿಸಿದ್ದ ಆರೋಪಪಟ್ಟಿ ಆಧಾರದಲ್ಲಿ ಈತನನ್ನು ನ್ಯಾಯಾಲಯವು ದೇಶಭ್ರಷ್ಟ ಎಂದು ಘೋಷಿಸಿತ್ತು' ಎಂದೂ ಹೇಳಿದ್ದಾರೆ.

'ಬಿಜೆಪಿಯಿಂದ ಗೂಬೆ ಕೂರಿಸುವ ಕೆಲಸ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಕ್ಫ್ ಆಸ್ತಿ ವಿಚಾರದಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ರೈತರಿಗೆ ಮತ್ತು ಭೂ ಮಾಲೀಕರಿಗೆ ಅತೀ ಹೆಚ್ಚು ನೋಟಿಸ್ ನೀಡಲಾಗಿದ್ದರೂ, ಈಗ ಕಾಂಗ್ರೆಸ್ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ' ಎಂದು ರಾಜ್ಯ ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಚ್.ಎಂ. ರೇವಣ್ಣ ಆರೋಪಿಸಿದರು.

ಕೆಪಿಸಿಸಿಯ ಉಪಾಧ್ಯಕ್ಷ ವಿ.ಎಸ್. ಉಗ್ರಪ್ಪ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ಆಡಳಿತದ ಅವಧಿಯಲ್ಲಿ 2,001 ನೋಟಿಸ್ ನೀಡಲಾಗಿತ್ತು. ಕಾಂಗ್ರೆಸ್ ಆಡಳಿತದಲ್ಲಿ ಕೇವಲ 1,500 ನೋಟೀಸ್ ನೀಡಲಾಗಿದೆ' ಎಂದರು.

ಅದಾನಿ ನೇತೃತ್ವ: 'ಮಹಾರಾಷ್ಟ್ರ ಚುನಾವಣೆಯಲ್ಲಿ ಅದಾನಿ ಪರೋಕ್ಷವಾಗಿ ಬಿಜೆಪಿಯನ್ನು ಬೆಂಬಲಿಸಿದ್ದಾರೆ. ಅವರ ವಿರುದ್ಧ ಹಗರಣಗಳ ಆರೋಪದ ವಿಚಾರವಾಗಿ ಯಾವುದೇ ಚರ್ಚೆ ಆಗದೆ ಕ್ಲೀನ್ ಚಿಟ್ ಕೊಡಲು ಹೇಗೆ ಸಾಧ್ಯ? ಹಲವು ರಾಷ್ಟ್ರಗಳು ಅದಾನಿ ಮೇಲೆ ಆರೋಪಿಸುತ್ತಿರುವ ಬಗ್ಗೆ ಲೋಕಸಭೆ ಕಲಾಪದಲ್ಲಿ ಚರ್ಚೆ ಮಾಡಲು ಅವಕಾಶ ಕೊಡದೆ ಇರುವುದು ಖಂಡನೀಯ' ಎಂದರು.


ಎಚ್.ಎಂ. ರೇವಣ್ಣ

'ಆಂತರಿಕ ಕೋಲಾಹಲವನ್ನು ಮುಚ್ಚಿಹಾಕಲು ರಾಜ್ಯ ಸರ್ಕಾರದ ಮೇಲೆ ಬಿಜೆಪಿ ಕೆಸರೆರಚುವ ಕೆಲಸ ಮಾಡುತ್ತಿದೆ. ತಮ್ಮ ಪಕ್ಷದಲ್ಲೇ ಕಿತ್ತಾಟ, ಹುಳುಕುಗಳು ಇಡೀ ರಾಜ್ಯಕ್ಕೆ ಕಾಣುತ್ತಿದ್ದರೂ, ಮುಡಾ ಹಾಗೂ ವಕ್ಫ್ ವಿಚಾರವನ್ನು ಬಿಜೆಪಿ ನಾಯಕರು ಪದೇ ಪದೇ ಎತ್ತುತ್ತಿದ್ದಾರೆ' ಎಂದು ವಿ.ಎಸ್ ಉಗ್ರಪ್ಪ ದೂರಿದರು.

ಕೆಪಿಸಿಸಿ ಅಧ್ಯಕ್ಷರ ಮಾಧ್ಯಮ ಸಲಹೆಗಾರ ದೀಪಕ್ ತಿಮಯ್ಯ, ಮಾಜಿ ಮೇಯರ್ ರಾಮಚಂದ್ರಪ್ಪ ಇದ್ದರು.

ಬಾಂಗ್ಲಾದ ಬೆಳವಣಿಗೆ: ಪ್ರಧಾನಿಗೆ ಸಚಿವ ಎಸ್.ಜೈಶಂಕರ್ ವಿವರಣೆ

ಪ್ರಜಾವಾಣಿ ವಾರ್ತೆ

ಜೈಶಂಕರ್

ನವದೆಹಲಿ: ಬಾಂಗ್ಲಾದೇಶದಲ್ಲಿನ ಪ್ರಸ್ತುತ ಸ್ಥಿತಿ ಮತ್ತು ಹಿಂದೂ ಸಮುದಾಯದವರ ಮೇಲೆ ನಡೆಯುತ್ತಿರುವ ಹಲ್ಲೆ ಸ್ಥಿತಿ ಹಾಗೂ ಮುಂದೆ ಕೈಗೊಳ್ಳಬಹುದಾದ ಕ್ರಮಗಳ ಕುರಿತು ವಿದೇಶಾಂಗ ಸಚಿವ ಎಸ್.ಜೈಶಂಕರ್ ಗುರುವಾರ ಪ್ರಧಾನಿ ಮೋದಿ ಅವರಿಗೆ ಮಾಹಿತಿ ನೀಡಿದರು.

ನೆರೆ ರಾಷ್ಟ್ರದ ಬೆಳವಣಿಗೆಗಳನ್ನು ಭಾರತ ಭಾರತ ಸೂಕ್ಷ್ಮವಾಗಿ ಗಮನಿಸುತ್ತಿದೆ. ಜಮೈತ್–ಉಲೇಮಾ–ಎ–ಇಸ್ಲಾಂ ಮತ್ತು ಇತರೆ ಸಂಘಟನೆಗಳು ದೇಶದಲ್ಲಿ ಇಸ್ಕಾನ್ ನಿಷೇಧಿಸಲು ಪಟ್ಟುಹಿಡಿದಿವೆ. ಆದರೆ, ಇನ್ನೊಂದೆಡೆ ಬಂಧಿತ ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ ಜೊತೆಗೆ ಸಂಪರ್ಕ ಕುರಿತು ಬಾಂಗ್ಲಾದ ಇಸ್ಕಾನ್ ಅಂತರವನ್ನು ಕಾಯ್ದುಕೊಂಡಿದೆ.

'ಬಂಧಿತ ಸನಾತನ ಧಾರ್ಮಿಕ ಮುಖಂಡರನ್ನು ಕೂಡಲೇ ಬಿಡುಗಡೆ ಮಾಡಬೇಕು' ಸದ್ಯ ಭಾರತದಲ್ಲಿ ಇರುವ ಬಾಂಗ್ಲಾದ ಮಾಜಿ ಪ್ರಧಾನಿ ಶೇಖ್ ಹಸೀನಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಬಾಂಗ್ಲಾದ ಮಧ್ಯಂತರ ಸರ್ಕಾರದ ಕಾರ್ಯವೈಖರಿಯನ್ನು ಟೀಕಿಸಿರುವ ಅವರು, ಹಿಂದೂ ಮುಖಂಡನ ಬಂಧನ ಅಸಾಂವಿಧಾನಿಕ ಎಂದು ಟೀಕಿಸಿದ್ದಾರೆ. ಅಲ್ಲದೆ, ವಕೀಲ ಸೈಫುಲ್ ಇಸ್ಲಾಂ ಹಲೀಫ್ ಹತ್ಯೆಯನ್ನು ಶೇಖ್ ಹಸೀನಾ ವರು ಖಂಡಿಸಿದ್ದಾರೆ.

ಈ ಮಧ್ಯೆ, ಇಸ್ಕಾನ್ ಅನ್ನು ನಿಷೇಧಿಸಬೇಕು ಎಂದು ಕೋರಿದ್ದ ಅರ್ಜಿಯನ್ನು ಬಾಂಗ್ಲಾದೇಶದ ಹೈಕೋರ್ಟ್ ವಜಾ ಮಾಡಿದೆ. ಈ ಕುರಿತು ಸರ್ಕಾರವೇ ತೀರ್ಮಾನ ಕೈಗೊಳ್ಳಬೇಕು ಎಂದು ಹೇಳಿದೆ. ಇಸ್ಕಾನ್ ನಿಷೇಧಿಸಬೇಕು ಎಂದು 'ಜಮೈತ್ ಉಲೇಮಾ ಇ ಇಸ್ಲಾಂ ಬಾಂಗ್ಲಾದೇಶ' ಸಂಘಟನೆಯ ಉಪಾಧ್ಯಕ್ಷ ಅಬ್ದುಲ್ ರಾಬ್ಯೂಸುಫ್ ಮುಖಂಡರು ಪುನರುಚ್ಚರಿಸಿದ್ದಾರೆ.

ಬಾಂಗ್ಲಾ ಇಸ್ಕಾನ್‌ನ ಪ್ರಧಾನ ಕಾರ್ಯದರ್ಶಿ ಚಾರು ಚಂದ್ರದಾಸ್ ಬ್ರಹ್ಮಚಾರಿ, 'ಶಿಸ್ತು ಉಲ್ಲಂಘಿಸಿದ್ದಕ್ಕೆ ಚಿನ್ಮಯಿ ಅವರನ್ನು ಹಿಂದೆಯೇ ಎಲ್ಲ ಹೊಣೆಗಳಿಂದ ಮುಕ್ತಗೊಳಿಸಲಾಗಿದೆ. ಚಿನ್ಮಯಿ ಅವರಿಗೂ ಇಸ್ಕಾನ್‌ಗೂ ಸಂಬಂಧವಿಲ್ಲ ಎಂದು ಹೇಳಿದ್ದಾರೆ' ಎಂದು ತಿಳಿಸಿದ್ದಾರೆ.

ವಿಶ್ವಸಂಸ್ಥೆ ಪ್ರವೇಶಕ್ಕೆ ಬೊಮ್ಮಾಯಿ ಆಗ್ರಹ

ಪ್ರಜಾವಾಣಿ ವಾರ್ತೆ


ಬಸವರಾಜ ಬೊಮ್ಮಾಯಿ

ಬೆಂಗಳೂರು: ಬಾಂಗ್ಲಾ ದೇಶದ ಸರ್ಕಾರ ಅಲ್ಲಿನ ಹಿಂದುಗಳ ಮೇಲಿನ ದೌರ್ಜನ್ಯವನ್ನು ನಿಲ್ಲಿಸಬೇಕು. ಇಸ್ಕಾನ್ ಸ್ವಾಮೀಜಿಯನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಒತ್ತಾಯಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಹೇಳಿಕೆ ಪೋಸ್ಟ್ ಮಾಡಿರುವ ಅವರು, ಹಿಂದುಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಗೆ ವಿಶ್ವಸಂಸ್ಥೆ ಮಧ್ಯಪ್ರವೇಶ ಮಾಡಬೇಕು. ಅಲ್ಲಿನ ಅಲ್ಪಸಂಖ್ಯಾತ ಹಿಂದುಗಳ ಜೀವನ, ಆಸ್ತಿ ಸಂರಕ್ಷಿಸಲು ಸೂಚಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಮಾಜಿ ಶಾಸಕ ಉಮಾಪತಿಗೆ ಮೂರು ತಿಂಗಳ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಾಯುಕ್ತಕ್ಕೆ ಸಲ್ಲಿಸಲಾದ ಆಸ್ತಿ ವಿವರಗಳಲ್ಲಿ ಸತ್ಯಾಂಶ ಮುಚ್ಚಿಟ್ಟ ಆರೋಪಹೊತ್ತಿದ್ದ ಹೊಳಲ್ಕೆರೆ ಮಾಜಿ ಶಾಸಕ ಎ.ವಿ.ಉಮಾಪತಿ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮೂರು ತಿಂಗಳ ಸಾದಾ ಜೈಲು ಶಿಕ್ಷೆ ಮತ್ತು ₹1 ಸಾವಿರ ದಂಡ ವಿಧಿಸಿ ಆದೇಶಿಸಿದೆ.

ಈ ಸಂಬಂಧ ಕರ್ನಾಟಕ ಲೋಕಾಯಕ್ತ ರಿಜಿಸ್ಟ್ರಾರ್ ದಾಖಲಿಸಿದ್ದ ಕ್ರಿಮಿನಲ್ ದೂರಿನ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಈ ಕುರಿತಂತೆ ಆದೇಶಿಸಿದ್ದಾರೆ.

'ಭಾರತೀಯ ದಂಡ ಸಂಹಿತೆ–1860ರ ಕಲಂ 177ರ ಅಡಿಯಲ್ಲಿ ಆರೋಪಿಯು ತಪ್ಪು ಮಾಹಿತಿ ನೀಡಿರುವುದು ಸಾಬೀತಾಗಿದೆ. ಈ ಹಿನ್ನೆಲೆಯಲ್ಲಿ ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 255(2) ಅಡಿಯಲ್ಲಿ ಮೂರು ತಿಂಗಳ ಸಾದಾ ಜೈಲು ಶಿಕ್ಷೆ ಮತ್ತು ₹1 ಸಾವಿರ ದಂಡ ವಿಧಿಸಲಾಗುತ್ತಿದೆ. ದಂಡ ಪಾವತಿಸಲು ವಿಫಲವಾದಲ್ಲಿ ಒಂದು ತಿಂಗಳ ಜೈಲು ಶಿಕ್ಷೆ ವಿಸ್ತರಿಸಬೇಕು' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಡಾ.ಶ್ರೀನಿವಾಸ್‌ಗೆ ಐಎಂಎ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವೈದ್ಯಕೀಯ ಸಂಘ (ಐಎಂಎ) ನೀಡುವ 'ರಾಷ್ಟ್ರೀಯ ಅಧ್ಯಕ್ಷರ ಮೆಚ್ಚುಗೆ ಪ್ರಶಸ್ತಿ'ಗೆ ಇಲ್ಲಿನ ಡಾ. ಶ್ರೀನಿವಾಸ್ ಎಸ್. ಆಯ್ಕೆಯಾಗಿದ್ದಾರೆ.

ಅವರು 2023–24ನೇ ಸಾಲಿಗೆ ಐಎಂಎ ಕರ್ನಾಟಕ ಶಾಖೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಈ ಅವಧಿಯಲ್ಲಿ ಕಾರ್ಯನಿರ್ವಹಣೆ ಹಾಗೂ ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಆಯ್ಕೆ ಮಾಡಲಾಗಿದೆ.

ಡಾ.ಶ್ರೀನಿವಾಸ್

ಡಿ.27ರಂದು ಹೈದರಾಬಾದ್‌ನ ಹೈಟೆಕ್ ಪ್ರದರ್ಶನ ಕೇಂದ್ರದಲ್ಲಿ ನಡೆಯುವ ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಐಎಂಎ ಪ್ರಧಾನ ಕಾರ್ಯದರ್ಶಿ ಡಾ. ಅನಿಲ್ ಕುಮಾರ್ ಜೆ. ನಾಯಕ್ ತಿಳಿಸಿದ್ದಾರೆ.

ಮುಂದುವರಿದ ಸೋಂಪುರ ಕೈಗಾರಿಕಾ ಪ್ರದೇಶದ ಜನರ ಆತಂಕ

ನಾಯಿ ಹೊತ್ತೊಯ್ದ ಚಿರತೆ: ಕ್ಯಾಮೆರಾದಲ್ಲಿ ಸೆರೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಅಂಜನಾದ್ರಿ ಬಡಾವಣೆಯಲ್ಲಿ ಮನೆ ಮುಂದೆ ಮಲಗಿದ್ದ ನಾಯಿಯನ್ನು ಬುಧವಾರ ರಾತ್ರಿ ಚಿರತೆ ಹೊತ್ತೊಯ್ದಿದೆ. ಶಿವಗಂಗೆ ಬೆಟ್ಟದ ತಪ್ಪಲಿನಲ್ಲಿ ಮೂರು ಚಿರತೆಗಳನ್ನು ಬೋನಿನ ಮೂಲಕ ಸೆರೆ ಹಿಡಿದ ಬಳಿಕವೂ ಚಿರತೆಗಳ ಓಡಾಟ ಕಡಿಮೆಯಾಗಿಲ್ಲ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಕಂಬಾಳು ಗೊಲ್ಲರಹಟ್ಟಿಯಲ್ಲಿ ಹತ್ತು ದಿನಗಳ ಹಿಂದೆ ಕರಿಯಮ್ಮ ಎಂಬ ಮಹಿಳೆಯನ್ನು ಚಿರತೆ ಕೊಂದು ಹಾಕಿದ ಬಳಿಕ ಮೂರು ಚಿರತೆಗಳನ್ನು ಸೆರೆಹಿಡಿಯಲಾಗಿತ್ತು. ಆದರೂ ಬುಧವಾರ ರಾತ್ರಿ ನಾಯಿಯನ್ನು ಚಿರತೆ ಹೊತ್ತೊಯ್ದ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿರುವುದನ್ನು ಕಂಡು ಜನರು ಆತಂಕಗೊಂಡಿದ್ದಾರೆ.

ನಾಯಿಯನ್ನು ಚಿರತೆ ಹೊತ್ತೊಯ್ಯುವ ದೃಶ್ಯ ಸಿ.ಸಿ.ಟಿ.ವಿ.ಕ್ಯಾಮೆರಾದಲ್ಲಿ ಸೆರೆಯಾಗಿದೆ

ಸೋಂಪುರ ಐದು ಹಂತದ ಕೈಗಾರಿಕಾ ಪ್ರದೇಶ ಹೊಂದಿದ್ದು, ಸಾವಿರಾರು ಜನರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡುತ್ತಾರೆ. ಅವರು ಕೆಲಸ ಮುಗಿಸಿಕೊಂಡು ತೆರಳುವಾಗ ಚಿರತೆಗಳು ದಾಳಿ ಮಾಡಬಹುದು ಎಂದು ದಿಗಿಲುಗೊಂಡಿದ್ದಾರೆ.

ದಾಬಸ್ ಪೇಟೆ ಪಟ್ಟಣದ ಜನ ರಾತ್ರಿ ಸಮಯದಲ್ಲಿ ಒಂಟಿಯಾಗಿ ಮನೆಯಿಂದ ಹೊರಬರಲು ಹೆದರುವಂತಾಗಿದೆ

ಪಟ್ಟಣಕ್ಕೆ ಸನಿಹದಲ್ಲಿ ಕೆಂಗಲ್ ಅರಣ್ಯ ಪ್ರದೇಶವಿದೆ. ಇಲ್ಲಿ ಕುರುಚಲು ಗಿಡ, ಬಂಡೆಗಳು ಇದ್ದು, ಚಿರತೆಗಳ ಅಡಗುತಾಣವಾಗಿವೆ. ಹಾಗಾಗಿ ಇಲ್ಲಿ ಅಧಿಕ ಸಂಖ್ಯೆಯಲ್ಲಿ ಚಿರತೆಗಳು ವಾಸಿಸುತ್ತಿರಬಹುದು ಎಂದು ಸ್ಥಳೀಯರು ತಿಳಿಸಿದ್ದಾರೆ.

ಈ ಬಗ್ಗೆ ಅರಣ್ಯ ಇಲಾಖೆಯ ಗಮನಕ್ಕೆ ಹಲವು ಬಾರಿ ತಂದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಎಚ್ಚೆತ್ತುಕೊಳ್ಳಲು ಕಂಬಾಳು ಗೊಲ್ಲರಹಟ್ಟಿಯಲ್ಲಿ ನಡೆದಂತೆ ಮತ್ತೆ ಜೀವಹಾನಿಗೆ ಕಾಯುತ್ತಿರಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅರಣ್ಯ ಇಲಾಖೆ ಬೋನು ಇಟ್ಟು ಚಿರತೆಗಳನ್ನು ಹಿಡಿದು ದೂರದ ಕಾಡುಗಳಿಗೆ ಬಿಡಬೇಕು ಎಂದು ಆಗ್ರಹಿಸಿದ್ದಾರೆ.

ಶುಕ್ರವಾರ, ನವೆಂಬರ್ 29, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 330 | ಪುಟ 16
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ಲಾಫಿಂಗ್ ಬುದ್ಧ’ ಸಿನಿಮಾ ಮೂಲಕ ಹೀರೊ ಆದ ಪ್ರಮೋದ್ ಶೆಟ್ಟಿ ‘ಜಲಂಧರ’ನ ಹುಡುಕಾಟ ಆರಂಭಿಸಿದ್ದಾರೆ

ವಿದೇಶ ವಿದ್ಯಮಾನ

ಮತ್ತೆ ಅಂತಃಕಲಹದ ಹೊಸ್ತಿಲಲ್ಲಿ ಪಾಕಿಸ್ತಾನ

ದರ್ಶನ್‌ಗೆ ರಕ್ತದೊತ್ತಡ ಏರುಪೇರು 11

ಅಜ್ಮೇರ್: ಜೋರಾದ ಜಟಾಪಟಿ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,043	23,914	₹79,820 (ಬೆಂಗಳೂರು)	₹94,700 (ಬೆಂಗಳೂರು)	84.47

ಯತ್ನಾಳ, ವಿಜಯೇಂದ್ರ ಗುಂಪುಗಳ ನಡುವೆ ಕಿತ್ತಾಟ • ಪಟ್ಟು, ಪ್ರತಿಷ್ಠೆ ಬಿಡದ ನಾಯಕರು

ಬಿಜೆಪಿ ಬಣ ಜಗಳ: ಕಮಲ ವಿದಳ

ಪ್ರಜಾವಾಣಿ ವಾರ್ತೆ

ವಿಜಯೇಂದ್ರ

ಬೆಂಗಳೂರು: ಬಿಜೆಪಿಯೊಳಗಿನ ಬಣ ಕಿತ್ತಾಟ ಸ್ಫೋಟಕ ಸ್ಥಿತಿಯತ್ತ ಸಾಗುತ್ತಿದ್ದು, ಪ್ರತಿಷ್ಠೆಗೆ ಬಿದ್ದಿರುವ ಬಣಗಳು ಪಕ್ಷದ ಮೇಲಿನ ಹಿಡಿತಕ್ಕೆ ಅಂತರ್ಯುದ್ಧವನ್ನು ತೀವ್ರಗೊಳಿಸಿವೆ.

ವಕ್ಫ್ ವಿರುದ್ಧ ಹೋರಾಟವನ್ನು ಮುಂದುವರಿಸಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣ ವಿಜಯೇಂದ್ರ ಪದಚ್ಯುತಿಯಾಗಲೇಬೇಕು ಎಂಬ ಹೊಸ ವಾದ ಮುಂದಿಟ್ಟಿದೆ. ಬಿ.ವೈ. ವಿಜಯೇಂದ್ರ ಬೆಂಬಲಕ್ಕೆ ನಿಂತಿರುವ ಮಾಜಿ ಸಚಿವರಾದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಎಂ.ಪಿ. ರೇಣುಕಾಚಾರ್ಯ ಮತ್ತಿತರರ ನೇತೃತ್ವದ ಬಣ, ಯತ್ನಾಳ ವಿರುದ್ಧ ಶಿಸ್ತುಕ್ರಮ ಜರುಗಿಸಲೇಬೇಕು ಎಂಬ ಪಟ್ಟನ್ನು ಮತ್ತಷ್ಟು ಬಿಗಿಗೊಳಿಸಿದೆ.

ಏತನ್ಮಧ್ಯೆ, ದೆಹಲಿಗೆ ಬರುವಂತೆ ಪಕ್ಷದ ವರಿಷ್ಠರು ನೀಡಿದ ಸೂಚನೆ ತಿರಸ್ಕರಿಸಿರುವ ಯತ್ನಾಳ, ‘ಹೋರಾಟ ಕೈಬಿಟ್ಟು ದೆಹಲಿಗೆ ತೆರಳುವುದಿಲ್ಲ. ಬೆದರಿಸಬಹುದು ಎಂದು ತಿಳಿದುಕೊಂಡಿದ್ದರೆ ನಾನು ಯಾವುದಕ್ಕೂ ಬೆದರುವುದಿಲ್ಲ, ಕ್ಷಮಾಪಣೆ ಕೇಳುವುದಿಲ್ಲ, ನಾನು ಇದುವರೆಗೆ ಮಾತನಾಡಿರುವ ಒಂದೇ ಒಂದು ಪದವನ್ನೂ ವಾಪಸ್ ತೆಗೆದುಕೊಳ್ಳುವುದಿಲ್ಲ’ ಎಂದು ಸಡ್ಡು ಹೊಡೆದಿದ್ದಾರೆ.

ಯತ್ನಾಳ ತಂಡದ ವಿರುದ್ಧ ಕ್ರಮ ಜರುಗಿಸುವಂತೆ ಆಗ್ರಹಿಸಿ, ಕೋಲಾರ ಜಿಲ್ಲೆಯ ಕುರುಡುಮಲೆ ಗಣಪತಿ ದೇವಸ್ಥಾನದಿಂದ ಶುಕ್ರವಾರ ಪ್ರವಾಸ ಹೊರಟಿರುವ ವಿಜಯೇಂದ್ರ ಬಣ, ಹೋರಾಟದತ್ತ ಹೆಜ್ಜೆ ಇಟ್ಟಿದೆ. ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಲಿರುವ ಈ ಬಣ, ದಾವಣಗೆರೆಯಲ್ಲಿ ಬೃಹತ್ ಸಮಾವೇಶ ನಡೆಸಲು ತಯಾರಿ ನಡೆಸಿದೆ.

‘50 ಮಾಜಿ ಶಾಸಕರು ತಮ್ಮ ಬಣದಲ್ಲಿದ್ದಾರೆ’ ಎಂದು ವಿಜಯೇಂದ್ರ ಬಣದ ಎಂ.ಪಿ. ರೇಣುಕಾಚಾರ್ಯ ಹೇಳಿದ್ದಾರೆ.

ತಮಟೆ ಬಾರಿಸಿ ನಾಯಕರಾಗಲು ಅಸಾಧ್ಯ: ಡಿವಿಎಸ್

ಸದಾನಂದ ಗೌಡ

‘ಬೀದಿಯಲ್ಲಿ ತಮಟೆ ಬಾರಿಸಿದ ಮಾತ್ರಕ್ಕೆ ಯಾರೂ ನಾಯಕರಾಗಲು ಸಾಧ್ಯವಿಲ್ಲ. ಬೀದಿಯಲ್ಲಿ ಮಾತನಾಡುವವರು ನಮ್ಮ ಪಕ್ಷದಲ್ಲಿ ಇರಲು ಯೋಗ್ಯರಲ್ಲ. ಅಂಥವರು ಎರೆಹುಳು–ನಾಗರಹಾವುಗಳಿದ್ದಂತೆ’ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಟೀಕಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಇಂತಹ ಬೆಳವಣಿಗೆಗಳನ್ನು ಸಹಿಸಿಕೊಂಡು ಇರುವ ಬದಲು, ಒಬ್ಬಿಬ್ಬರ ವಿರುದ್ಧ ಕ್ರಮಕೈಗೊಂಡರೆ ಉಳಿದವರೂ ಸರಿದಾರಿಗೆ ಬರುತ್ತಾರೆ. ಕ್ರಮ ಕೈಗೊಳ್ಳದೇ ಇರುವ ಕಾರಣ ಪಕ್ಷಕ್ಕೆ ಇಂತಹ ಪರಿಸ್ಥಿತಿ ಬಂದಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿಯ ಶಾಸಕರು, ನಾಯಕರು ಪ್ರತ್ಯೇಕ ಸಭೆ ನಡೆಸುವ, ಬೀದಿಗೆ ಇಳಿಯುವ ಬದಲು ದೆಹಲಿ ವಿಮಾನ ಏರಿದ್ದರೆ ಸಮಸ್ಯೆ ಬಗೆಹರಿಯುತ್ತಿತ್ತು. ಹೀಗೆ ಬೀದಿಯಲ್ಲಿ ಕಿತ್ತಾಡಿಕೊಂಡರೆ ಪಕ್ಷದ ನಿಷ್ಠರೆನಿಸಿಕೊಳ್ಳಲು ಹೇಗೆ ಸಾಧ್ಯ? ಪಕ್ಷದ ಪ್ರಸ್ತುತ ಸ್ಥಿತಿ ಕೈಮೀರಿದೆ. ಬೀದಿಗೆ ಇಳಿದವರ ಜತೆ ಹಿರಿಯರು ಮಾತನಾಡಿ ಏನು ಪ್ರಯೋಜನ ಎಂದು ಪ್ರಶ್ನಿಸಿದರು.

‘ಕಳೆದ ಒಂದೂವರೆ ವರ್ಷದಿಂದ ಪ್ರಬಲ ವಿರೋಧ ಪಕ್ಷವಾಗುವಲ್ಲಿ ಬಿಜೆಪಿ ಸೋತಿದೆ. ಏನೇ ಆಗಲಿ ಶಸ್ತ್ರತ್ಯಾಗ ಮಾಡಲಾರೆ, ಪಕ್ಷದ ಶುದ್ಧೀಕರಣಕ್ಕಾಗಿ ಪ್ರಯತ್ನಿಸುವೆ’ ಎಂದರು.

ಭ್ರಷ್ಟರ ಕಿತ್ತೊಗೆದರೆ ಮೋದಿ ಮಾತಿಗೆ ಗೌರವ: ಯತ್ನಾಳ

ಬಸನಗೌಡ ಪಾಟೀಲ ಯತ್ನಾಳ

ವಿಜಯಪುರ: ‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಬದಲಾವಣೆ ಆಗುವುದಿದ್ದರೆ, ಅವರ ಇಡೀ ತಂಡ ತೊಲಗಬೇಕು’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ವಂಶವಾದ, ಭ್ರಷ್ಟಾಚಾರದ ವ್ಯಕ್ತಿಗಳು ಯಾವುದೇ ರಾಜ್ಯದಲ್ಲಿ ಇರಲಿ ಅವರನ್ನು ಕಿತ್ತೊಗೆಯುವ ಕೆಲಸವಾಗಬೇಕು, ಆಗ ಮಾತ್ರ ಪ್ರಧಾನಿ ನರೇಂದ್ರ ಮೋದಿ ಅವರ ಮಾತಿಗೆ ಗೌರವ ಬರುತ್ತದೆ’ ಎಂದರು.

‘ಯಾವುದೇ ವ್ಯಕ್ತಿಗೆ ಬಲಿಯಾಗದೇ ಇರುವವರು ಪ್ರಾಮಾಣಿಕರು ಬಿಜೆಪಿ ರಾಜ್ಯ ಘಟಕದ ಸಾರಥ್ಯ ವಹಿಸಲಿ. ವರಿಷ್ಠರು ಎಲ್ಲರ ಅಭಿಪ್ರಾಯ ಪಡೆದು ಹೊಸಬರನ್ನು ನೇಮಿಸಬೇಕು. ಯಾರನ್ನೋ ತಂದು ಹೇರಿದರೆ ಒಪ್ಪಿಕೊಳ್ಳುವುದಿಲ್ಲ’ ಎಂದರು.

10ನೇ ಪುಟ ನೋಡಿ

ಬಿಎಸ್‌ವೈ ವಿರುದ್ಧ ತನಿಖಾ ಅಸ್ತ್ರ

ಪ್ರಜಾವಾಣಿ ವಾರ್ತೆ

ಬಿ.ಎಸ್. ಯಡಿಯೂರಪ್ಪ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಕುಟುಂಬದ ವಿರುದ್ಧ ತನಿಖಾಸ್ತ್ರ ಬಳಸಲು ರಾಜ್ಯ ಸರ್ಕಾರ ಮುಂದಾಗಿದೆ.

2020ರ ಪ್ರಕರಣವನ್ನು ತನಿಖೆಗೆ ಒಳಪಡಿಸಲು ಪೂರ್ವಾನುಮತಿ ನೀಡಬೇಕು ಎಂದು ರಾಜ್ಯಪಾಲರನ್ನು ಕೋರಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಎಚ್‌.ಕೆ.ಪಾಟೀಲ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಅವರು ಯಡಿಯೂರಪ್ಪ ಕುಟುಂಬದ ವಿರುದ್ಧ ಕ್ರಮ ಜರುಗಿಸುವಂತೆ 2020ರ ನವೆಂಬರ್ 10ರಂದು ರಾಜ್ಯಪಾಲರಿಗೆ ದೂರು ನೀಡಿದ್ದರು. 2021ರಲ್ಲಿ ರಾಜ್ಯಪಾಲರು ದೂರನ್ನು ತಿರಸ್ಕರಿಸಿದ್ದರು. ಆ ದೂರಿನಲ್ಲಿ 16 ಆರೋಪಗಳಿದ್ದು, ಅವು ಅತ್ಯಂತ ಗಂಭೀರ ದೂರುಗಳಾಗಿವೆ.

11ನೇ ಪುಟ ನೋಡಿ

ಅದಾನಿ ಹಗರಣ: ಕಲಾಪ ಹರಣ

ನವದೆಹಲಿ: ಉದ್ಯಮಿ ಅದಾನಿ ಲಂಚ ಹಗರಣ, ಹಿಂಸಾಚಾರ ಪ್ರಕರಣಗಳ ಚರ್ಚೆಗೆ ನಡೆಸುವಂತೆ ‘ಇಂಡಿಯಾ’ ಆಗ್ರಹಿಸಿದ್ದರಿಂದ ಕಲಾಪ ನಡೆಯಲಿಲ್ಲ

13ನೇ ಪುಟ ನೋಡಿ

ಗೂಗಲ್ ವಿರುದ್ಧ ಸಿಸಿಐ ತನಿಖೆ

ನವದೆಹಲಿ: ನ್ಯಾಯಸಮ್ಮತವಲ್ಲದ ವ್ಯಾಪಾರ ನಡೆಸಿರುವ ಆರೋಪದ ಮೇರೆಗೆ ಗೂಗಲ್ ಕಂಪನಿ ವಿರುದ್ಧ ಸಿಸಿಐ ತನಿಖೆಗೆ ಆದೇಶಿಸಿದೆ.

12ನೇ ಪುಟ ನೋಡಿ

ಅಬಕಾರಿ ನಿರೀಕ್ಷಕ ಅಮಾನತು

ಬಾರ್ ಲೈಸೆನ್ಸ್: ₹20 ಲಕ್ಷ ಲಂಚಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ರವಿಶಂಕರ್

ಶಿವಶಂಕರ್

ಮಂಡ್ಯ: ‘ಬಾರ್ ಲೈಸೆನ್ಸ್ (ಸಿಎಲ್–7 ಮಂಜೂರಾತಿ) ನೀಡಲು ಅಧಿಕಾರಿಗಳು ₹20 ಲಕ್ಷ ಲಂಚ ಕೇಳಿದ್ದಾರೆ’ ಎಂಬ ಆರೋಪ ಸಂಬಂಧ ಮದ್ದೂರು ವಲಯ ಅಬಕಾರಿ ನಿರೀಕ್ಷಕ ಶಿವಶಂಕರ್ ಆರಾಧ್ಯ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಮದ್ದೂರು ತಾಲ್ಲೂಕು ಚಂದಾಪುರದ ಎಸ್. ಪುನೀತ್‌ಕುಮಾರ್ ಅವರು ಅಬಕಾರಿ ಉಪ ಆಯುಕ್ತ ಎ.ರವಿಶಂಕರ್ ಹಾಗೂ ಶಿವಶಂಕರ್ ಆರಾಧ್ಯ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿದ ಬೆನ್ನಿಗೇ ಅಬಕಾರಿ ಆಯುಕ್ತರು ಆದೇಶ ಹೊರಡಿಸಿದ್ದಾರೆ. ಉಪ ಆಯುಕ್ತರು ‘ಎ’ ವೃಂದದ ನೌಕರರಾಗಿದ್ದು, ಸರ್ಕಾರದ ಹಂತದಲ್ಲಿಯೇ ಶಿಸ್ತು ಕ್ರಮ ಕೈಗೊಳ್ಳಲು ಅಥವಾ ಅಮಾನತುಗೊಳಿಸಲು ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ದೂರಿಗೆ ಪೂರಕವಾಗಿ ಪುನೀತ್ ಅವರು ಸಲ್ಲಿಸಿರುವ ಆಡಿಯೊ ಮತ್ತು ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಮದ್ದೂರು ಶಾಸಕರ ಬಗ್ಗೆ ಆಡಿಯೊದಲ್ಲಿ ಪ್ರಸ್ತಾಪವಾಗಿದೆ ಎನ್ನಲಾಗಿದೆ.

‘ಪುನೀತ್ ಅವರು ಎಸ್.ಐ ಹಾಗಲಹಳ್ಳಿಯಲ್ಲಿ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ನಡೆಸುತ್ತಿದ್ದು, ಉದ್ಯಮ ವಿಸ್ತರಿಸಲು ಸಿಎಲ್–7 ಬಾರ್ ಲೈಸೆನ್ಸ್ ಕೋರಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

11ನೇ ಪುಟ ನೋಡಿ

ಒಳಪುಟಗಳಲ್ಲಿ

ಎನ್‌ಕೌಂಟರ್: ನ್ಯಾಯಾಂಗ ತನಿಖೆಗೆ ಒತ್ತಾಯ 10

ಜಾರ್ಖಂಡ್: ಸಿ.ಎಂ ಆಗಿ ಹೇಮಂತ್ ಪ್ರಮಾಣ 13

ತಾಲ್ಲೂಕು ಕಚೇರಿ ಮುಂದೆ ಶವ ಸುಡಲು ಯತ್ನ 11

500 ಶಾಲೆಗಳಿಗೆ ಕೆಪಿಎಸ್ ಭಾಗ್ಯ 10

₹1.44 ಲಕ್ಷ ಕೋಟಿ ಟೋಲ್ ಸಂಗ್ರಹ

ನವದೆಹಲಿ (ಪಿಟಿಐ): ಸರ್ಕಾರಿ– ಖಾಸಗಿ ಸಹಭಾಗಿತ್ವದಡಿ (ಪಿಪಿಪಿ) 2000ನೇ ಇಸವಿಯ ಡಿಸೆಂಬರ್‌ನಿಂದ ಇಲ್ಲಿಯವರೆಗೆ ದೇಶದ ರಾಷ್ಟ್ರೀಯ ಹೆದ್ದಾರಿ ಪ್ಲಾಜಾಗಳಲ್ಲಿ ₹1.44 ಲಕ್ಷ ಕೋಟಿ ಟೋಲ್ ಸಂಗ್ರಹಿಸಲಾಗಿದೆ ಎಂದು ಕೇಂದ್ರ ಸರ್ಕಾರವು ಲೋಕಸಭೆಗೆ ಗುರುವಾರ ತಿಳಿಸಿದೆ.

ರಾಷ್ಟ್ರೀಯ ಹೆದ್ದಾರಿಗಳ ಶುಲ್ಕ (ದರ ನಿಗದಿ ಮತ್ತು ಸಂಗ್ರಹ) ನಿಯಮ 2008 ಹಾಗೂ ರಿಯಾಯಿತಿ ಒಪ್ಪಂದದ ಅಡಿ ಹೆದ್ದಾರಿಗಳಲ್ಲಿ ನಿರ್ಮಿಸಿರುವ ಪ್ಲಾಜಾಗಳಲ್ಲಿ ಬಳಕೆದಾರರಿಂದ ಶುಲ್ಕ ಸಂಗ್ರಹಿಸಲಾಗುತ್ತಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಎಲೆಕ್ಟ್ರಾನಿಕ್ ಟೋಲ್ ಸಂಗ್ರಹ ದಡಿ(ಇಟಿಸಿ) ಫಾಸ್ಟ್ಯಾಗ್ ವ್ಯವಸ್ಥೆ ಬಳಸಿಕೊಂಡೇ ಟೋಲ್ ಸಂಗ್ರಹಿಸಲಾಗುತ್ತದೆ. ಇದರಿಂದ ಬಳಕೆದಾರರು ಯಾವುದೇ ಅಡೆತಡೆ ಇಲ್ಲದೆಯೇ ಸಂಚರಿಸಲು ಅನುಕೂಲವಾಗಿದೆ ಎಂದು ಹೇಳಿದ್ದಾರೆ.

ಜಿಎನ್‌ಎಸ್‌ಎಸ್ (ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಂ) ಆಧರಿತ ಎಲೆಕ್ಟ್ರಾನಿಕ್ ಟೋಲ್ ಸಂಗ್ರಹ (ಇಟಿಸಿ) ಕಾರ್ಯಾಚರಣೆಯು ಇನ್ನೂ ಆರಂಭಗೊಂಡಿಲ್ಲ ಎಂದು ತಿಳಿಸಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಒಟಿಎಸ್ ಯೋಜನೆ ನಾಳೆ ಅಂತ್ಯ; ಡಿ.1ರಿಂದ ಎರಡು ಪಟ್ಟು ತೆರಿಗೆ ಹೆಚ್ಚಳ

ಮನೆ ಆಸ್ತಿ: ಹೆಚ್ಚು ತೆರಿಗೆ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಬಾರಿ ಪರಿಹಾರ ಯೋಜನೆ (ಒಟಿಎಸ್) ನವೆಂಬರ್ 30ರಂದು ಮುಕ್ತಾಯವಾಗುತ್ತಿದೆ. ಪ್ರಸಕ್ತ ವರ್ಷದ ಆಸ್ತಿ ತೆರಿಗೆ ಪಾವತಿಯಲ್ಲಿ ವಸತಿಯೇತರ ಆಸ್ತಿಗಳಿಗಿಂತ ವಸತಿ ಆಸ್ತಿಗಳಿಂದಲೇ ಹೆಚ್ಚು ತೆರಿಗೆ ಬಾಕಿ ಉಳಿದಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ 20.57 ಲಕ್ಷ ಆಸ್ತಿಗಳಿಂದ ತೆರಿಗೆ ಪಾವತಿಯಾಗಬೇಕಿದ್ದು, ₹3,814.68 ಕೋಟಿ ಸಂಗ್ರಹವಾಗಬೇಕಿದೆ. ₹15.45 ಲಕ್ಷ ಆಸ್ತಿಗಳಿಂದ ₹3,231 ಕೋಟಿ ಸಂಗ್ರಹವಾಗಿದೆ. 5.12 ಲಕ್ಷ ಆಸ್ತಿಗಳಿಂದ ಇನ್ನೂ ₹583.54 ಕೋಟಿ ಬಾಕಿ ಉಳಿದಿದೆ.

ಆರ್ಥಿಕ ವರ್ಷದಲ್ಲಿ ನವೆಂಬರ್ 28ರವರೆಗೆ ₹3,820.23 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿದೆ. ಇದು ದಾಖಲೆಯ ಮೊತ್ತವಾಗಿದ್ದರೂ, ಸುಸ್ತಿದಾರರಿಂದ ಇನ್ನೂ ₹365 ಕೋಟಿ ಸಂಗ್ರಹವಾಗಬೇಕಿದೆ. ಒಟಿಎಸ್ ಯೋಜನೆಯಲ್ಲಿ ₹733.61 ಕೋಟಿ ಸಂಗ್ರಹಿಸುವ ಗುರಿಯನ್ನು ಬಿಬಿಎಂಪಿ ಹೊಂದಿತ್ತು. ಆದರೆ, ಈವರೆಗೆ ₹368.14 ಕೋಟಿಯಷ್ಟು ಮೊತ್ತವನ್ನು 1.67 ಲಕ್ಷ ಆಸ್ತಿಗಳ ಮಾಲೀಕರು ಬಾಕಿ ಉಳಿಸಿಕೊಂಡಿದ್ದಾರೆ.

ಫೆಬ್ರುವರಿಯಲ್ಲಿ ಮೊದಲ ಬಾರಿಗೆ ಜಾರಿಯಾಗಿದ್ದ ಒಟಿಎಸ್ ಯೋಜನೆ ಜುಲೈ 31ರಂದು ಕೊನೆಗೊಂಡಿತ್ತು. 'ಇನ್ನಷ್ಟು ಕಾಲಾವಕಾಶ ನೀಡಬೇಕು' ಎಂದು ನಾಗರಿಕರು, ಸಂಘ–ಸಂಸ್ಥೆಗಳು ಮನವಿ ಮಾಡಿಕೊಂಡಿದ್ದವು. ಅದರಂತೆ, ಸರ್ಕಾರ ಒಟಿಎಸ್ ಅವಧಿಯನ್ನು ಸೆಪ್ಟೆಂಬರ್‌ವರೆಗೆ ವಿಸ್ತರಿಸಿತ್ತು. ಮತ್ತೆ ಗಡುವನ್ನು ಎರಡನೇ ಬಾರಿಗೆ ನವೆಂಬರ್ 30ರವರೆಗೂ ವಿಸ್ತರಿಸಿತ್ತು.

ಜುಲೈ 31ರ ಅಂತ್ಯಕ್ಕೆ ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆಯಡಿ ಹಲವು ವರ್ಷಗಳಿಂದ ತೆರಿಗೆ ಬಾಕಿ ಉಳಿಸಿಕೊಂಡಿದ್ದ 1.07 ಲಕ್ಷ ಆಸ್ತಿಗಳ ಮಾಲೀಕರು ಪ್ರಯೋಜನ ಪಡೆದು, ₹217.50 ಕೋಟಿ ಪಾವತಿಸಿದ್ದರು. 6,723 ಆಸ್ತಿಗಳ ತೆರಿಗೆಯ ಪುನರ್ ವಿಮರ್ಶೆಯೂ ಸೇರಿ ಒಟ್ಟು ₹380.83 ಕೋಟಿ ಸಂಗ್ರಹವಾಗಿತ್ತು. 2024ರ ಆಗಸ್ಟ್ 1ರಂತೆ 3,04,810 ಆಸ್ತಿಗಳಿಂದ ₹831.53 ಕೋಟಿ ತೆರಿಗೆ ಹಿಂಬಾಕಿ ಪಾವತಿಯಾಗಬೇಕಿತ್ತು.

ಪ್ರಸಕ್ತ ಆರ್ಥಿಕ ವರ್ಷದ ಆಸ್ತಿ ತೆರಿಗೆಯನ್ನು ಮಾತ್ರ ಬಾಕಿ ಉಳಿಸಿಕೊಂಡವರೂ ನ. 30ರ ನಂತರ ತೆರಿಗೆ ಜತೆಗೆ ಬಡ್ಡಿ ಪಾವತಿಸಬೇಕಾಗುತ್ತದೆ.

ಆಸ್ತಿ ತೆರಿಗೆ ಸಂಗ್ರಹ (ನವೆಂಬರ್ 28ರವರೆಗೆ)

ವಲಯ	ಮೊತ್ತ (ಕೋಟಿಗಳಲ್ಲಿ)
ಮಹದೇವಪುರ	₹1,010.10
ಪೂರ್ವ	₹658.08
ದಕ್ಷಿಣ	₹547.90
ಪೂರ್ವ	₹405.37
ಯಲಹಂಕ	₹394.99
ಬೊಮ್ಮನಹಳ್ಳಿ	₹388.63
ರಾಜರಾಜೇಶ್ವರಿನಗರ	₹300.14
ದಾಸರಹಳ್ಳಿ	₹115.03
ಒಟ್ಟು	₹3,820.23
ಆರ್ಥಿಕ ವರ್ಷದ ಒಟ್ಟು ಗುರಿ	₹5,210.48

ಅಂಕಿ ಅಂಶಗಳು

5,12,561 ಆಸ್ತಿ ತೆರಿಗೆ ಬಾಕಿ ಇರುವ ಆಸ್ತಿಗಳು (2024–25)

3,44,372 ವಸತಿ ಆಸ್ತಿಗಳು

19,698 ವಸತಿಯೇತರ ಆಸ್ತಿಗಳು

21,875 ಮಿಶ್ರ ಆಸ್ತಿಗಳು

1,126,616 ಖಾಲಿ ನಿವೇಶನಗಳು

ವಿಸ್ತರಣೆ ಇಲ್ಲ: ಮುನೀಶ್

'ಒಂದು ಬಾರಿ ಪರಿಹಾರ ಯೋಜನೆಯನ್ನು ವಿಸ್ತರಿಸುವುದಿಲ್ಲ. ಈಗಾಗಲೇ ಸಾಕಷ್ಟು ಸಮಯ ನೀಡಲಾಗಿದೆ. ಡಿಸೆಂಬರ್ 1ರಿಂದ ದಂಡ, ಬಡ್ಡಿ ವಿಧಿಸಿ, ಎಲ್ಲ ರೀತಿಯ ಕಾನೂನು ಪ್ರಕ್ರಿಯೆಗಳನ್ನೂ ನಡೆಸಲಾಗುತ್ತದೆ' ಎಂದು ಬಿಬಿಎಂಪಿ ಕಂದಾಯ ವಿಭಾಗ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಹೇಳಿದರು.

'ವಾಣಿಜ್ಯ ಕಟ್ಟಡಗಳಿಗೆ ಈಗಾಗಲೇ ನೋಟಿಸ್ ಜಾರಿ ಮಾಡಲಾಗುತ್ತಿದ್ದು, ಅತಿ ಹೆಚ್ಚು ಬಾಕಿ ಉಳಿಸಿಕೊಂಡ ಕಟ್ಟಡಗಳಿಗೆ ಬೀಗಮುದ್ರೆ ಹಾಕಲಾಗುತ್ತಿದೆ. ಡಿ. 2ರಿಂದ ಈ ಅಭಿಯಾನ ಹೆಚ್ಚಿನ ಪ್ರಮಾಣದಲ್ಲಿ ನಡೆಯಲಿದೆ' ಎಂದರು.

ಶ್ರೀ ಗಣಪತಿ ಪ್ರೌಢಶಾಲೆಗೆ ಪ್ರಶಸ್ತಿ

ಬೆಂಗಳೂರು: ಸಾಹಿತಿ ಪ್ರೊ.ಎಲ್.ಎಸ್.ಶೇಷಗಿರಿರಾವ್ ಅವರ ಶತಮಾನೋತ್ಸವ ಸ್ಮರಣಾರ್ಥ ಕನ್ನಡ ಗೆಳೆಯರ ಬಳಗ ನೀಡುವ 'ಉತ್ತಮ ಶಾಲೆ ಬಹುಮಾನ'ಕ್ಕೆ ತುಮಕೂರು ಜಿಲ್ಲೆಯ ಹೆಬ್ಬೂರಿನ ಕನ್ನಡ ಮಾಧ್ಯಮ ಅನುದಾನಿತ 'ಶ್ರೀ ಗಣಪತಿ ಪ್ರೌಢಶಾಲೆ' ಆಯ್ಕೆಯಾಗಿದೆ.

ಬಹುಮಾನವು ₹10 ಸಾವಿರ ನಗದು ಒಳಗೊಂಡಿದೆ. ಉತ್ತಮ ನಿರ್ವಹಣೆ ತೋರುವ ಕನ್ನಡ ಮಾಧ್ಯಮ ಶಾಲೆಗೆ ಈ ಬಹುಮಾನ ನೀಡಲಾಗುತ್ತಿದೆ. ಡಿ. 3ರಂದು ಬೆಂಗಳೂರಿನ ನಯನ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಗುವುದು ಎಂದು ರಾ.ನಂ. ಚಂದ್ರಶೇಖರ್ ತಿಳಿಸಿದ್ದಾರೆ.

'ನಾನೂ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿ'

ಬೆಂಗಳೂರು: 'ನಾನು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದು, ಆ ಸ್ಥಾನ ಸಿಕ್ಕಿದರೆ ಸಚಿವ ಸ್ಥಾನ ತೊರೆಯಲು ಸಿದ್ಧ ಎಂದು ಹಿಂದೆಯೇ ಹೇಳಿದ್ದೆ. ಈಗಲೂ ಅದಕ್ಕೆ ಬದ್ಧನಾಗಿದ್ದೇನೆ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಪೀಣ್ಯ ದಾಸರಹಳ್ಳಿಯ ಬಿ.ಎನ್‌ಆರ್ ಶಾಲೆಗೆ ಎಫ್‌ಎಪಿ ರಾಜ್ಯ ಪ್ರಶಸ್ತಿ 2024ರ ಚಂಡೀಗಢ ವಿಶ್ವವಿದ್ಯಾಲಯ ಹಾಗೂ ಕಾಮ್ಸ್ ಕರ್ನಾಟಕ ವತಿಯಿಂದ 'ಉತ್ತಮ ಶೈಕ್ಷಣಿಕ ಸಾಧನೆ' ಪ್ರಶಸ್ತಿ ಮತ್ತು ಶಾಲೆಯ ಪ್ರಾಂಶುಪಾಲ ಭೂಷಣ್ ಎನ್. ಅವರಿಗೆ 'ಉತ್ತಮ ನವೀನ, ಕ್ರಿಯಾಶೀಲ' ಪ್ರಶಸ್ತಿ, ಆಡಳಿತದಲ್ಲಿ ಅತ್ಯುತ್ತಮ ಪ್ರಾಂಶುಪಾಲ ಪ್ರಶಸ್ತಿಯನ್ನು ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ಪ್ರದಾನ ಮಾಡಿದರು

ನಗರದಲ್ಲಿ ಇಂದು

ಅರಿಹಂತ್ ಕನ್ನಡ ಉತ್ಸವ: ಅತಿಥಿಗಳು: ಎಲ್. ಹನುಮಂತಯ್ಯ, ಅಶೋಕ್ ಎಸ್. ನಗೋರಿ, ಸುಧೀರ್ ಜೈನ್, ಅಧ್ಯಕ್ಷತೆ: ಯಶಸ್ವಿ ನಗೋರಿ, ಆಯೋಜನೆ ಮತ್ತು ಸ್ಥಳ: ಅರಿಹಂತ್ ಸಮೂಹ ಸಂಸ್ಥೆಗಳು, ಗ್ಲೋಬಲ್ ಕ್ಯಾಂಪಸ್, ತಲಘಟ್ಟಪುರ, ಬೆಳಿಗ್ಗೆ 9

ರೇವಾ ವಿಶ್ವವಿದ್ಯಾಲಯದ ಒಂಬತ್ತನೇ ಘಟಿಕೋತ್ಸವ: ಉಪಸ್ಥಿತಿ: ಥಾವರಚಂದ್ ಗೆಹಲೋತ್, ಡಾ.ಎಂ.ಸಿ. ಸುಧಾಕರ್, ಪಿ. ಶ್ಯಾಮರಾಜು, ಮಮಿದಾಲ ಜಗದೀಶ್ ಕುಮಾರ್, ಆಯೋಜನೆ ಮತ್ತು ಸ್ಥಳ: ಸೌಗಂಧಿಕ, ರುಕ್ಮಿಣಿ ನಾಲೇಜ್ ಪಾರ್ಕ್ ರೇವಾ ವಿಶ್ವವಿದ್ಯಾಲಯ, ಬೆಳಿಗ್ಗೆ 9.30

'ಡೆಮ್‌ಕಾನ್-2024' ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ದಿನೇಶ್ ಗುಂಡೂರಾವ್, ರಾಜಿಂದರ್ ಕೆ. ದಮ್ಮಾಜಿ, ಆಯೋಜನೆ: ಡಿಮೆನ್ಷಿಯಾ ಇಂಡಿಯಾ ಅಲಯನ್ಸ್, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಳಿಗ್ಗೆ 10

ವಾರ್ಷಿಕ ದತ್ತಿ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ದಿಕ್ಸೂಚಿ ಭಾಷಣ: ಎಚ್.ಸಿ. ಮಹದೇವಪ್ಪ, ಅತಿಥಿಗಳು: ಕೆ.ವಿ. ಪ್ರಭಾಕರ್, ಎಚ್. ಆಂಜನೇಯ, ಹೇಮಂತ್ ಎಂ. ನಿಂಬಾಳ್ಕರ್, ಶಿವಾನಂದ ತಗಡೂರು, ಆಯೇಷಾ ಖಾನಂ, ಎಚ್.ಬಿ. ಮದನ್ ಗೌಡ, ಶಿವಕುಮಾರ ಬೆಳ್ಳಿತಟ್ಟೆ, ಅಧ್ಯಕ್ಷತೆ: ಚೆಲುವರಾಜು, 'ಡಾ. ಬಾಬಾಸಾಹೇಬ ಅಂಬೇಡ್ಕರ್ ದತ್ತಿ' ಪ್ರಶಸ್ತಿ ಪುರಸ್ಕೃತರು: ಜಿ.ಎನ್. ಮೋಹನ್, 'ಬಿ. ರಾಮಯ್ಯ ದತ್ತಿ' ಪ್ರಶಸ್ತಿ ಪುರಸ್ಕೃತರು: ಬಿ.ಎಂ. ಹನೀಫ್, 'ಪ್ರೊ.ಬಿ. ಕೃಷ್ಣಪ್ಪ ದತ್ತಿ' ಪ್ರಶಸ್ತಿ ಪುರಸ್ಕೃತರು: ಮಾವಳ್ಳಿ ಶಂಕರ್, 'ಬಿ. ಬಸವಲಿಂಗಪ್ಪ ದತ್ತಿ' ಪ್ರಶಸ್ತಿ ಪುರಸ್ಕೃತರು: ಮಂಜುಳಾ ಹುಲಿಕುಂಟೆ, ಸಂಪಾದಕರಿಗೆ ಸಂಘದ ಗೌರವ ಪ್ರಶಸ್ತಿ ಪುರಸ್ಕೃತರು: ಕೆ. ಏಕಾಂತಪ್ಪ, ಸೊಗಡು ವೆಂಕಟೇಶ್, ಮಂಜುಳಾ ಕಿರುಗಾವಲು, ಸುರೇಶ್ ಸಿಂಧೆ, ಆಯೋಜನೆ: ಕರ್ನಾಟಕ ರಾಜ್ಯ ಎಸ್ಸಿ/ಎಸ್ಟಿ ಪತ್ರಿಕಾ ಸಂಪಾದಕರ ಸಂಘ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 11

ಶರಣ್ಯಾ ಶೆಟ್ಟಿ

'ಜನಪದ ಹಬ್ಬ-2024': ಉದ್ಘಾಟನೆ: ಅನು ಪ್ರಭಾಕರ್ ಮುಖರ್ಜಿ, ಅತಿಥಿಗಳು: ಸವಿತಕ್ಕ, ಶರಣ್ಯಾ ಶೆಟ್ಟಿ, ಅಧ್ಯಕ್ಷತೆ: ಚಂದ್ರಶೇಖರ ಬಿ., ಆಯೋಜನೆ ಮತ್ತು ಸ್ಥಳ: ಸರ್ಕಾರ ರಾಂನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಅರಮನೆ ರಸ್ತೆ, ಬೆಳಿಗ್ಗೆ 10.30

ಕನಕದಾಸರ ಜಯಂತಿ, ಅವರ ಕೀರ್ತನೆಗಳ ಗಾಯನ: ಆಯೋಜನೆ: ಕನಕ ಜಯಂತ್ಯುತ್ಸವ ಸಮಿತಿ, ಸ್ಥಳ: ವಕೀಲರ ಭವನ, ಸಿಟಿ ಸಿವಿಲ್ ಕೋರ್ಟ್ ಆವರಣ, ಮಧ್ಯಾಹ್ನ 12.30

11ನೇ ಪದವಿ ದಿನ: ಅತಿಥಿಗಳು: ಶಾಲಿನಿ ರಜನೀಶ್, ಆಯೋಜನೆ ಮತ್ತು ಸ್ಥಳ: ನಿಮ್ಹಾನ್ಸ್, ಮಧ್ಯಾಹ್ನ 3.30

ಭೃಗುಶಾಪ ಪ್ರದರ್ಶನ: ವಿನಯ್ ಆರ್. ಶೆಟ್ಟಿ, ಸಂಪತ್ ಆಚಾರ್ಯ, ಪನ್ನಗ ಮಯ್ಯ, ದೇವೇಂದ್ರ: ಜಬ್ಬಾರ್ ಸಮೋ, ಖ್ಯಾತಿ: ಸತೀಶ್ ಶೆಟ್ಟಿ ಮೂಡುಬಗೆ, ವಿಷ್ಣು: ಜಗದೀಶ್ ಶೆಟ್ಟಿ ಸಿದ್ಧಾಪುರ, ಭೃಗು: ಅವಿನಾಶ್ ಉಬರಡ್ಕ, ತಮಾಸುರ: ಸುಧಾಕರ ಜೈನ್ ಹೊಸಬೆಟ್ಟುಗುತ್ತು, ಬೃಹಸ್ಪತಿ: ನಾಗರಾಜ್ ನೈಕಂಬ್ಳಿ, ಆಯೋಜನೆ: ಗೊ-ಕೋಲ್ ಮಿತ್ರ ಬಳಗ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಕಾರ್ತಿಕ ಸಂಗೀತೋತ್ಸವ: ಲಯರಾಗ ಸಮರ್ಪಣಂ: ಘಟ ತರಂಗ, ಘಟ: ಸುಕನ್ಯಾ ರಾಮಗೋಪಾಲ್, ಕೊಳಲು: ವಾಣಿ ಮಂಜುನಾಥ್, ಮೃದಂಗ: ಜಿ.ಎಸ್. ನಾಗರಾಜ್, ಖಂಜೀರ: ಬಿ.ಜೆ. ಕಿರಣ್‌ಕುಮಾರ್, ಆಯೋಜನೆ: ನಾದರಂಜಿನಿ ಸಂಗೀತ ಸಭಾ, ಸ್ಥಳ: ಧರಿಣಿ ಮಹಿಳಾ ಸಂಘ, ಬಸವೇಶ್ವರನಗರ, ಸಂಜೆ 6ರಿಂದ

'ಕದಂಬ ಕಶಿಕೆ' ತಾಳಮದ್ದಳೆ: ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ಶ್ರೀರಾಮಕೃಷ್ಣ ವೇದ ವಿಜ್ಞಾನ ಪ್ರತಿಷ್ಠಾನ, ರಾಗಿಹಳ್ಳಿ ಗೇಟ್, ಸಂಜೆ 6ರಿಂದ

ಯುವ ನಾಯಕತ್ವ ಕಾರ್ಯಕ್ರಮ 30ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮರ್ಸಿ ಮಿಷನ್ ಫೆಲೋಶಿಪ್ ಇದೇ 30ರಂದು ಬೆಳಿಗ್ಗೆ 9.30ಕ್ಕೆ ಶಿವಾಜಿನಗರದ ಎಚ್‌ಬಿಎಸ್ ಆಸ್ಪತ್ರೆಯಲ್ಲಿ 'ಬಿಯಾಂಡ್ ರೈಟ್ ಆ್ಯಂಡ್ ರಾಂಗ್' ಶೀರ್ಷಿಕೆಯಡಿ ಯುವ ನಾಯಕರ ಸಮಾಗಮಕ್ಕೆ ವೇದಿಕೆ ಕಲ್ಪಿಸಿದೆ.

ಯುವ ನಾಯಕತ್ವಕ್ಕೆ ಅಗತ್ಯ ಪ್ರೋತ್ಸಾಹ ನೀಡುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಯುವ ನಾಯಕರು, ಶಿಕ್ಷಣ ತಜ್ಞರು, ನೀತಿ ನಿರೂಪಕರು, ದಾನಿಗಳು ಹಾಗೂ ಯುವಜನರನ್ನು ಒಂದೇ ಸೂರಿನಡಿ ತಂದು, ಒಗ್ಗೂಡಿಸಲಾಗುತ್ತದೆ. ನವೀನ ಆಲೋಚನೆಗಳ ಬಗ್ಗೆ ಚರ್ಚೆ, ಅದನ್ನು ಮುನ್ನೆಲೆಗೆ ಕೊಂಡೊಯ್ಯಲು ಇರುವ ಅವಕಾಶಗಳ ಬಗ್ಗೆ ಸಮಾಲೋಚನೆ ನಡೆಸಲಾಗುತ್ತದೆ.

ಸಮಾಜದಲ್ಲಿನ ವಿವಿಧ ಸಮಸ್ಯೆಗಳಿಗೆ ಪರಿಹಾರೋಪಾಯ ಕಂಡುಕೊಳ್ಳಲು ಹಾಗೂ ಹೊಸ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರಲು ಹೂಡಿಕೆಗೆ ಪ್ರೋತ್ಸಾಹಿಸುವ ಕಾರ್ಯಚಟುವಟಿಕೆಗಳೂ ನಡೆಯಲಿವೆ. ಆಸಕ್ತರು ಮುಂಚಿತವಾಗಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ನೋಂದಣಿಗೆ: https://forms.gle/jdKQSKnaEbqgnUVD8

ಸುಧಾ, ಮಯೂರ ಓದಿರಿ...

वित्त मंत्रालय
वित्तीय सेवाएं विभाग
Ministry of Finance
Department of Financial Services

F. No. 19/1/2019 PR
2nd Floor, Jeevan Deep Building, Parliament Street, New Delhi 110001

Inviting applications for the post of Chairperson in Pension Fund Regulatory and Development Authority (PFRDA), New Delhi

Applications are invited for the post of Chairperson, Pension Fund Regulatory and Development Authority (PFRDA), New Delhi, which has a tenure period of 5 (five) years or up to 65 years of age, whichever is earlier.

The pay and allowances of the Chairperson shall be ₹5,62,500/- consolidated per month without facility of house and car. The particulars of the post and eligibility conditions are given on the Ministry's Website http://financialservices.gov.in as well as on PFRDA's website http://www.pfrda.org.in. The last date and time for receiving the completed applications is 30.12.2024 till 5.30 PM. The candidates can apply through online mode on https://rect.pfrda.org.in/ or through offline mode clearly demonstrating eligibility at the address indicated below:

Shri Harkesh Chander,
Under Secretary to the Government of India,
Department of Financial Services, Ministry of Finance, Government of India, Room No. 1, 2nd Floor, Jeevan Deep Building, Parliament Street, New Delhi 110001. Tele No. 011-23748760

वित्त मंत्रालय
वित्तीय सेवाएं विभाग
Ministry of Finance
Department of Financial Services

F. No. 19/2/2019 PR
2nd Floor, Jeevan Deep Building, Parliament Street, New Delhi 110001

Inviting applications for the post of Whole-time Member(Law) in Pension Fund Regulatory and Development Authority (PFRDA), New Delhi

Applications are invited for the post of Whole-time Member(Law), Pension Fund Regulatory and Development Authority (PFRDA), New Delhi, which has a tenure period of 5 (five) years or up to 62 years of age, whichever is earlier.

The pay and allowances of the Whole-time Member(Law) shall be ₹ 5.00 lakh consolidated per month without facility of house and car. The particulars of the post and eligibility conditions are given on the Ministry's Website http://financialservices.gov.in as well as on PFRDA's website http://www.pfrda.org.in. The last date and time for receiving the completed applications is 30.12.2024 till 5.30 PM. The candidates can apply through online mode on https://rect.pfrda.org.in/ or through offline mode clearly demonstrating eligibility at the address indicated below:

Shri Harkesh Chander,
Under Secretary to the Government of India, Department of Financial Services, Ministry of Finance, Government of India,
Room No. 1,2nd Floor, Jeevan Deep Building, Parliament Street,
New Delhi 110001. Tele No. 011-23748760

वित्त मंत्रालय
वित्तीय सेवाएं विभाग
Ministry of Finance
Department of Financial Services

F. No. 19/2/2019 PR
2nd Floor, Jeevan Deep Building, Parliament Street, New Delhi 110001

Inviting applications for the post of Whole-time Member(Finance) in Pension Fund Regulatory and Development Authority (PFRDA), New Delhi

Applications are invited for the post of Whole-time Member(Finance), Pension Fund Regulatory and Development Authority (PFRDA), New Delhi, which has a tenure period of 5 (five) years or up to 62 years of age, whichever is earlier.

The pay and allowances of the Whole-time Member(Finance) shall be ₹5.00 lakh consolidated per month without facility of house and car. The particulars of the post and eligibility conditions are given on the Ministry's Website http://financialservices.gov.in as well as on PFRDA's website http://www.pfrda.org.in. The last date and time for receiving the completed applications is 30.12.2024 till 5.30 P.M. The candidates can apply through online mode on https://rect.pfrda.org.in/ or through offline mode clearly demonstrating eligibility at the address indicated below:

Shri Harkesh Chander,
Under Secretary to the Government of India, Department of Financial Services, Ministry of Finance, Government of India, Room No. 1, 2nd Floor, Jeevan Deep Building, Parliament Street, New Delhi 110001.
Tele No. 011-23748760

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕೋಲಾರ ಜಿಲ್ಲೆ
DISTRICT INSTITUTE OF EDUCATION AND TRAINING, KOLAR DISTRICT, K.N.S. Post, Chikkahasala, Kolar-563102
ಸಂಖ್ಯೆ: ಡಯಕೋ/ಡಿಎಸ್‌ಇಆರ್‌ಟಿ:ಎಲ್‌ಲ್‌ಟಿ:ಎ–ಪ್ರೋ:ಟೆಂಡರ್ 01/2024–25
ದಿನಾಂಕ: 25.11.2024

ಇ–ಟೆಂಡರ್ ಪ್ರಕಟಣೆ

2022–23ನೇ ಸಾಲಿನ ಆಯವ್ಯಯ ಘೋಷಣೆಯಂತೆ ಕೋಲಾರ ಜಿಲ್ಲೆಯ ಏಳು ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಸಾಧನ ಸಾಮಗ್ರಿ ಮತ್ತು 2022–23ನೇ ಸಾಲಿನಲ್ಲಿ TWF & TALP ಯೋಜನೆ ಅಡಿ 4 ಪಿಯು ಕಾಲೇಜುಗಳಿಗೆ ಒಂದು ಪಿಯು ಡಿಡಿ ಕಚೇರಿಗೆ ಯಂತ್ರೋಪಕರಣಗಳ ಸರಬರಾಜು ಮಾಡಲು ಜಿಲ್ಲಾ ಹಂತದಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಮತ್ತು ಜಿಲ್ಲೆಯ 4 ಪಿ.ಯು. ಕಾಲೇಜುಗಳಿಗೆ ಸ್ಮಾರ್ಟ್ ಕ್ಲಾಸ್ ಸೌಲಭ್ಯ ಒದಗಿಸುವ ಸಂಬಂಧ ಪ್ರತ್ಯೇಕ ಇ–ಟೆಂಡರ್ ಕರೆಯಲಾಗಿದೆ. ಈ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಇಲಾಖೆ ವೆಬ್ಸ್ https://kppp.karnataka.gov.in ನಲ್ಲಿ ವೀಕ್ಷಿಸಬಹುದು.

ಸಹಿ/– ಪ್ರಾಂಶುಪಾಲರು ಮತ್ತು ಪದನಿಮಿತ್ತ
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕೋಲಾರ ಜಿಲ್ಲೆ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:344 /ಕೆಎಸ್‌ಎಂಸಿಎ/2024–25

ಆಡಳಿತ ಪ್ರಾಧಿಕಾರ, ಗಣಿ ಸಚಿವಾಲಯ,
ಭಾರತ ಸರ್ಕಾರ
ಕೊಠಡಿ ಸಂಖ್ಯೆ.: 101–ಎ, 'ಡಿ' ವಿಂಗ್,
ಗಣಿ ಸಚಿವಾಲಯ, ಶಾಸ್ತ್ರಿ ಭವನ, ನವದೆಹಲಿ–110001,
011–23384741

"ಕಡಲಾಚೆಯ ಖನಿಜ ಪ್ರದೇಶ ಘಟಕಗಳನ್ನು ಚಲಾಯಿಸುವ ಹಕ್ಕುಗಳ ಅನುದಾನಕ್ಕಾಗಿ ಬಿಡ್‌ಗಳ ಆಹ್ವಾನ"

ಕಾಲ ಕಾಲಕ್ಕೆ ತಿದ್ದುಪಡಿಗೆ ಒಳಗಾಗಿರುವ ಕಡಲಾಚೆಯ ಖನಿಜ ಪ್ರದೇಶ (ಹರಾಜು) ನಿಯಮಗಳು, 2024ರ ಪ್ರಕಾರ ಕಡಲಾಚೆ ಪ್ರದೇಶ ಖನಿಜ ಘಟಕಗಳನ್ನು ಚಲಾಯಿಸುವ ಹಕ್ಕುಗಳ ಮಂಜೂರಾತಿ ಉದ್ದೇಶಕ್ಕೆ ಸಂಬಂಧಿಸಿದಂತೆ ಆಡಳಿತ ಪ್ರಾಧಿಕಾರಕ್ಕೆ ಕಡಲಾಚೆಯ ಪ್ರದೇಶ ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 2002ರ ಸೆಕ್ಷನ್ 12ರ ಅಡಿಯಲ್ಲಿ ಪ್ರದತ್ತವಾದ ಹರಾಜು ಹಕ್ಕನ್ನು ಚಲಾಯಿಸುವ ಮೇರೆಗೆ, ಭಾರತ ಸರ್ಕಾರವು ತನ್ನ ಗಣಿ ಸಚಿವಾಲಯದ ಆಡಳಿತ ಪ್ರಾಧಿಕಾರದ ಮೂಲಕ 13 ಖನಿಜ ಘಟಕಗಳನ್ನು ಗುರುತಿಸಿದ್ದು, ಇವುಗಳನ್ನು ವಿದ್ಯುನ್ಮಾನ ಹರಾಜಿಗಾಗಿ ಸಂಯುಕ್ತ ಪರವಾಣಿಗೆ ಮಂಜೂರು ಮಾಡಲು, ಏತನ್ಮೂಲಕ ಸದರಿ ಉದ್ದೇಶಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತದೆ. ಇದಕ್ಕೆ ಸಂಬಂಧಿತ ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) ಯನ್ನು ಎಂಎಸ್‌ಟಿಸಿ ಇ–ಹರಾಜು ಪೋರ್ಟಲ್‌ನಲ್ಲಿ 28.11.2024 ರಂದು ಪ್ರಕಟಿಸಲಾಗಿದೆ. ಟೆಂಡರ್ ದಸ್ತಾವೇಜು ಮತ್ತು ಇನ್ನಿತರ ವಿವರಗಳನ್ನು ಇಲ್ಲಿ ಪಡೆಯಬಹುದು (https://www.mstcecommerce.com/auctionhome/mlcln/index.jsp).

CBC 26101/11/0005/2425

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:
ಟೆಂಡರು ಸೂಚನೆ ಸಂ.: CAO/CN/BNC/34/2024
ದಿನಾಂಕ: 21.11.2024

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ತೊಲಹುಣಿಸೆ – ದಾವಣಗೆರೆ ನಿಲ್ದಾಣಗಳ ನಡುವೆ ಚೈ. 324125 ರಲ್ಲಿ ಪ್ರೀಕಾಸ್ಟ್ ಸೆಗ್ಮೆಂಟಲ್ ಆರ್‌ಸಿಸಿ ಬಾಕ್ಸ್ ಮೂಲಕ ಸಬ್‌ವೇ ನಂ. 199ಎ (2 x 7.5 x 4.5 ಮೀ) ಯ ಪ್ರಸ್ತಾವಿತ ನಿರ್ಮಾಣ. (ಟಂಡರು ಉಲ್ಲೇಖ ಸಂ. TK-DVG-23)	ರೂ. 13,26,01,191/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17.12.2024, 15:00 ಗಂಟೆಯವರೆಗೆ

ಟೆಂಡರು ಸೂಚನೆ ಸಂ.: CAO/CN/BNC/EPC/26/2024 ಮೇಲಿನ ತಿದ್ದುಪಡಿ
ದಿನಾಂಕ: 06.09.2024

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ತುಮಕೂರು – ರಾಯದುರ್ಗ ಹೊಸ ಲೈನ್ ಯೋಜನೆಯಡಿ ಕೊರಟಗೆರೆ (ಹೊರತುಪಡಿಸಿ) ಮತ್ತು ಮಧುಗಿರಿ (ಒಳಗೊಂಡಂತೆ) ರೈಲ್ವೆ ವಿದ್ಯುತೀಕರಣ, ಸಿವಿಲ್ ಕೆಲಸಗಳು, ಸಿಗ್ನಲ್ & ದೂರಸಂಪರ್ಕ ಕಾಮಗಾರಿ ಮತ್ತು ಎಲೆಕ್ಟ್ರಿಕಲ್ ಸಾಮಾನ್ಯ ಸೇವೆಗಳು ಸೇರಿದಂತೆ ಚೈ. 30/500 & ಚೈ. 51/500 ರ ನಡುವೆ ಹೊಸ ಬ್ರಾಡ್ ಗೇಜ್ ಲೈನ್ ನಿರ್ಮಾಣಕ್ಕಾಗಿ ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ನಿರ್ಮಾಣ (ಇಪಿಸಿ). (ಟಂಡರು ಉಲ್ಲೇಖ ಸಂ. TK-RDG-EPC-3)	ರೂ. 370,38,97,671/-

ಕೊನೆಯ ದಿನಾಂಕ	
ಪ್ರಸ್ತುತ	ಪರಿಷ್ಕೃತ
05.12.2024 (15:00 ಗಂಟೆಗೆ)	27.12.2024 (15:00 ಗಂಟೆಗೆ)

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯಗಳು/ಬೆಂಗಳೂರು ದಂಡು
PUB/595/AAMO/PRB/SWR/2024-25
South Western Railway - SWR | SWRRLY | SWRRLY

PUBLIC NOTICE

My client has negotiated to purchase the Schedule Property from **Sri.O.JANARDHAN,** aged about 56 years, Son of Sri.S.P.Obbaiah, residing at No.67, New Kempegowda Layout, Banashankair 3rd Stage, Kathriguppe, Bangalore-560085 who has represented that he is having clear and marketable title over the Schedule Property.

Any persons claiming to have any right or claims or objection, may lodge their objections or claim along with supporting documents with the undersigned within **5 days** from the date of publication of this notice.

If no such objection or claims is received within the prescribed time, my client will proceed to complete the transaction. If any objection and claim is lodged beyond the prescribed period it shall not be reckoned and it shall be deemed that all objections and claims by whomsoever are waived.

SCHEDULE PROPERTY

All that piece and parcel of Immovable agricultural land bearing **a) Sy No.19/6,** measuring 1.11.00.00 (1 Acre 11 Guntas) and 0.05.00.00 (5 Guntas) of Kharab Land, **b) Sy No.20,** measuring 4.03.00.00 (Four Acre 03 Guntas) and 0.25.00.00 (Twenty Five Guntas) of Kharab Land, **c) Sy.No.21/1 (Old Sy.No.21),** measuring 2.04.08.00 (2 Acres 4 ½ Guntas) and 0.01.08.00 (1 ½ Guntas) of Kharab Land d) Sy.No.21/2 (old Sy.No.21), measuring 2.04.12.00 (2 Acres 4 ¾ Guntas) and 0.02.00.00 (2 Guntas) of Kharab Land, e) Sy.No.21/3 (old Sy.No.21), measuring 2.04.12.00 (2 Acres 4 ¾ Guntas) and 0.05.08.00 (5 ½ Guntas) of Kharab Land, all properties situated at Bokipura Village, Doddavelavangala Hobli, Doddaballapur Taluk, Bangalore Rural District and commonly bounded on the **East by**: Road, West by : Private Property, **North by**: Road, **South by:** Road

B. Srinivas, Advocate
"SUNDERA RAMA"
No.230, 39th 'C' Cross, 9th Main, 5th Block, Jayanagar, Bangalore-560041.
Mobile: 9900148162
srinivasadvocate@gmail.com
Bangalore Date: 27-11-2024

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ
ಟಿ.ಬಿ. ಸರ್ಕಲ್ ಹತ್ತಿರ, ತುಮಕೂರು ರಸ್ತೆ, ದೊಡ್ಡಬಳ್ಳಾಪುರ – 561203,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ: 080–29799416
ಇ–ಮೇಲ್: apmc.dbpur@gmail.com
ಸಂಖ್ಯೆ: ಕೃಉಮಾಸ/ದೊ/298/2024–25 ದಿನಾಂಕ: 28–11–2024

ಪ್ರಕಟಣೆ

[illegible]

ಸಹಿ/– ಕಾರ್ಯದರ್ಶಿ, ಕೃಉಮಾಸ, ದೊಡ್ಡಬಳ್ಳಾಪುರ
ಸಹಿ/– ಆಡಳಿತಾಧಿಕಾರಿಗಳು, ಕೃಉಮಾಸ, ದೊಡ್ಡಬಳ್ಳಾಪುರ

ಸಾರ್ವಜನಿಕ ಪ್ರಕಟಣೆ

[illegible]

ದಿನಾಂಕ: 29.11.2024

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Engg/ Production Technical

'JOB OPPORTUNITIES' Wanted OPERATORS FOR FANUC WIRE CUT. Experience: 1 or 2 Years Call: 9845046771

General

WANTED HELPER & PACKER (Male) Bommanahalli (B'lore). Ph: 9980140661/ 08025631755 Mail: starsilks@gmail.com

Marketing & Sales

A KERALA based Sofa and Mattress manufacturer is looking for`a Freelance Marketing Consultant for their Bangalore office.Call- 7090022466

LOCAL REP. Retired but Active. Should move around city, industrial areas. Fast selling technical textiles. Salary 20000 + 3000 to bring back lost customers and create new. resume@urjafabrics.com 9825524055

Teachers/ Professors

TEACHER REQUIRED for Science and Social for Primary and High school Contact kenmoreschool@gmail.com whatsapp 9901501185

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Commerical

Hosur Road

ONLY FOR commercial. Hosur Bus stand opposite near Axis bank. 2400 square feet. contact 9005008073

Sites

Mysore

SITE FOR SALE in MYSORE
- 50 x 80 site for sale (can be used for commercial purpose) with built up area of 24 sqft in No 982, Panchamantra Road, Kuvempu Nagar, Mysuru.
- 11979 sqft of land on Chamundi hill, Mysuru.
- No.32 SBM Layout Srirampura, Mysuru 1125 sqft

Call: 93416 22476 93796 12572

Vishweshwariah Layout

AVAILABLE 40X60 BDA Site Vishveshwaraiah Layout 60ft, 3rd Block Near Ullal Main Road Amma Asharmma: 9844603127

BDA SITES AVAILABLE NADAPRABHU KEMPEGOWDA LAYOUT VISHVESHWARAIYA LAYOUT 40X60, 50X80 GOOD LOCATION. CONTACT: 9686469799

BDA 40X60 Site Sale, East Face, Sir M.V. Layout 8th Block,Site No. 2085, Price 12000/- sqft. Negotiable, Call: 9743322555

Hegganahalli

SALE- NORTH East face 30x40 Corner Site No. 28, Katha No. 958, Ward No. 70, Srigandadakavalu, Hegganahalli Ground + 3 floor with lift facility, Rs. 2.7 Crores slightly negotiable. Ph: 9148662924, 9538541614, 7892150764

DH Classifieds More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560| +91 9901641752 | 080-45557163/164

PROPERTY CORNER

SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

MSME LOANS:WE arrange msme business loans against your existing or new businesses also.Contact: 7204995189

PERSONAL

Change of Name

CHANGE OF NAME
I, **Swetha Reddy Eddula,** residing at No. 71/2-1, Ground Floor, Pearl Nursery Road, Behind Chavara Church, Ejipura, Bengaluru-560047, have changed my name to **RANIYAH HILAL RABBANI** and changed my religion from Hinduism to Islam. vide affidavit dated 21/11/2024 before Notary P.N. Nagesha Bengaluru. Henceforth I shall be called as **RANIYAH HILAL RABBANI** only.

CHANGE OF NAME
I, **VASUDEVA** Residing at # 303, 3rd Floor, Amarachandra Pranav Apartment, Srinivasapura Cross, BEML 10th Stage, Rajarajeshwarinagar, Bengaluru-560098 have changed my name to **VASUDEV TALAVANE DEVAPPA GOWDA** vide affidavit dated 28.11.2024 before Notary K. Venkateshan, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

A Bagpiper Scotland, UK

Mount Titlis, Switzerland

ಯುರೋಪ್ ಸಂದರ್ಶಿಸುವುದು ಪ್ರತಿಯೊಬ್ಬ ಭಾರತೀಯನ ಬಹುದಿನಗಳ ಕನಸಾಗಿರುತ್ತದೆ. ಆರ್ಟ್ ಮತ್ತು ಕಲ್ಚರ್, ಇತಿಹಾಸ ಮತ್ತು ಜಾನಪದ, ನಿಸರ್ಗ ಮತ್ತು ಸ್ವಾದಿಷ್ಟ ಊಟೋಪಚಾರಗಳು... ಯುರೋಪನ್ನು ಆನಂದಿಸಿದಷ್ಟೂ ಇನ್ನೂ ಬೇಕೆನಿಸುತ್ತದೆ.

Flamenco Dancer, Spain

ನೀವು ನಿಮ್ಮ ಯುರೋಪ್ ಟೂರ್ ಬುಕ್ ಮಾಡುವಾಗ ಜಾಗರೂಕರಾಗಿರಿ; ಜಾಣ್ಮೆಯಿಂದ ಆರಿಸಿಕೊಳ್ಳಿ, ಸಮರ್ಪಕ ಆಯ್ಕೆ ಮಾಡಿ. ಅಲ್ಪ ಉಳಿತಾಯಕ್ಕಾಗಿ, ದೊಡ್ಡ ಮೊತ್ತ ಕಳೆದುಕೊಳ್ಳಬೇಡಿ.

Changing the guard, London

Eiffel Tower, Paris

Sagrada Familia, Spain

Reindeer Sledging Ride, Finland

Nyhavn Waterfront, Denmark

Jungfraujoch Switzerland

Halstatt, Austria

ಕಳೆದ 11 ವರ್ಷಗಳಲ್ಲಿ, 75,000 ಕ್ಕಿಂತಲೂ ಹೆಚ್ಚು ಅತಿಥಿಗಳು ವೀಣಾ ವರ್ಲ್ಡ್‌ನೊಂದಿಗೆ ಯುರೋಪನ್ನು ಅನ್ವೇಷಿಸಿದ್ದಾರೆ; ಈ ಪೈಕಿ 16,000+ ಮಂದಿ ಇದೇ ವರ್ಷ ಎಪ್ರಿಲ್‌ನಿಂದ ನವೆಂಬರ್ ಅವಧಿಯಲ್ಲಿ ಟೂರ್ ಕೈಗೊಂಡಿದ್ದರು.

Stonehenge, UK

ವೀಣಾ ವರ್ಲ್ಡ್ ಯುರೋಪ್

ಎಂದೆಂದೂ ಸರಿಯಾದ ಆಯ್ಕೆ! ಸಾಬೀತಾಗಿದೆ ಮತ್ತು ಸಾವಿರಾರು ಮಂದಿಯ ವಿಶ್ವಾಸಪಾತ್ರ!

ಮನಮೋಹಕ ಯುರೋಪ್ ಖಂಡವನ್ನು ಪ್ರವೇಶಿಸಿರಿ; ಇಲ್ಲಿನ ಪ್ರತಿಯೊಂದು ದೇಶವೂ ಕಥೆಪುಸ್ತಕಗಳು ಜೀವಂತಗೊಂಡಂತೆ ಅನಿಸುತ್ತದೆ. ವರ್ಲ್ಡ್‌ವೈಡ್ ಪ್ರವಾಸಿಗಳು ಯುರೋಪನ್ನು ತುಂಬ ಇಷ್ಟಪಡುತ್ತಾರೆ; ಯುರೋಪ್ ಒಂದು ಪ್ರೇಕ್ಷಣೀಯ ಸ್ಥಳ ಮಾತ್ರವಲ್ಲ, ಇದು ನೀವು ಮತ್ತೆ ಮತ್ತೆ ಆನಂದಿಸಲು ಬಯಸುವ ಅನುಭೂತಿಯಾಗಿದೆ! ವೀಣಾ ವರ್ಲ್ಡ್ ವ್ಯಾಪಕ 47 ದೇಶಗಳಿಗೆ, ನಿಮಗೆಂದೇ ರೂಪಿಸಲಾಗಿರುವ ಟೂರ್ಸ್ ಆಫರ್ ಮಾಡುತ್ತದೆ. ಮೊದಲ ಬಾರಿಗೆ ಪ್ರಯಾಣಿಸುವವರು 8 ದಿನಗಳಲ್ಲಿ 8 ದೇಶಗಳ, 10 ದಿನಗಳಲ್ಲಿ 10 ದೇಶಗಳ ಅಥವಾ 11 ದಿನಗಳಲ್ಲಿ 11 ದೇಶಗಳ ಆನಂದಾನುಭವ ಕೂಡ ಪಡೆಯಬಹುದಾಗಿದೆ-ಯುರೋಪಿನ ಪಕ್ಷಿನೋಟ ಪಡೆಯಲು ಇದು ಅತ್ಯಂತ ಯೋಗ್ಯವಾಗಿದೆ. ಇನ್ನೂ ಆಳವಾದ ಅಡ್ವೆಂಚರ್ಸ್‌ನ ಅನುಭವ ಪಡೆಯಬಯಸುವವರಿಗೆ, ನಾವು 6 ದಿನಗಳಿಂದ ತೊಡಗಿ ಅಮೋಘ 60 ದಿನಗಳವರೆಗಿನ ಟೂರ್ಸ್ ಒದಗಿಸುತ್ತೇವೆ; ಇವು ಪ್ರಯಾಣದ ಪ್ರತಿಯೊಂದು ಶೈಲಿಗೆ ಸೂಕ್ತವಾಗಿರುತ್ತವೆ. ನಾವು ಇಷ್ಟೆಲ್ಲ ಆಫರ್ ಮಾಡುತ್ತಿರುವುದರಿಂದ, ನಮ್ಮ ಯುರೋಪ್ ಟೂರ್ಸ್‌ಗೆ ಅತಿಥಿಗಳು ಎಂಟನೇ ಸಲ, ಅಷ್ಟೇಕೆ ಹತ್ತನೇ ಸಲ ಕೂಡ ಬರುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ! ಬನ್ನಿ, ಯುರೋಪ್ಸ್ ವಂಡರ್ಸ್‌ನಲ್ಲಿ ಶಾಮೀಲಾಗಿರಿ ಮತ್ತು ಜೀವನಪರ್ಯಂತ ಉಳಿಯುವ ನೆನಪುಗಳನ್ನು ನಿಮ್ಮದಾಗಿಸಿರಿ. ನಿಮ್ಮ ಕನಸಿನ ಖಂಡ ನಿಮಗಾಗಿ ಕಾದಿದೆ, ವೀಣಾ ವರ್ಲ್ಡ್ ಅದನ್ನು ನನಸಾಗಿಸಲಿದೆ!

ಚಲೋ, ಬ್ಯಾಗ್ ಭರೋ, ನಿಕಲ್ ಪಡೋ ವೀಣಾ ವರ್ಲ್ಡ್‌ನೊಂದಿಗೆ ಯುರೋಪ್‌ಗೆ!

ತ್ವರೆಮಾಡಿ, ಇಂದೇ ಬುಕ್ ಮಾಡಿ; ಕಾನ್ಸುಲೇಟ್‌ಗಳಲ್ಲಿ ಜನದಟ್ಟಣೆಯಾಗುವ ಮೊದಲೇ ನಿಮ್ಮ ವೀಸಾ ಪ್ರಕ್ರಿಯೆ ಪೂರ್ತಿಸಿಕೊಳ್ಳಿ. 110 ವೀಸಾ ಎಕ್ಸಿಕ್ಯೂಟಿವ್ಸ್‌ನ ನಮ್ಮ ಟೀಮ್ ನಿಮ್ಮ ಸಹಾಯಕ್ಕಿದೆ!

ಮೈ ಹೂಂ ನ! ಟೂರ್‌ನಲ್ಲಿ ನಿಮ್ಮೊಂದಿಗೆ

ನಿಮ್ಮ ಯುರೋಪ್ ಮತ್ತು ಯುಎಸ್‌ಎ ಟೂರ್ಸ್‌ಗಾಗಿ ಸ್ಕ್ಯಾನ್ ಮಾಡಿ

ವೀಣಾ ವರ್ಲ್ಡ್ ಅಂದರೆ ಡಿಸ್ಕೌಂಟ್ಸ್ ಇಲ್ಲ! ಸುಪ್ತ ವೆಚ್ಚಗಳಿಲ್ಲ! ಆಪ್ಷನಲ್ಸ್ ಇಲ್ಲ! ಜೀವನಪರ್ಯಂತ ಉಳಿಯುವ ಆಪ್ತ ನೆನಪುಗಳು ಮಾತ್ರ! ಬನ್ನಿ, ನಿಮ್ಮ ಪ್ರೀತಿಪಾತ್ರರೊಂದಿಗೆ ಆನಂದ-ಸಂಭ್ರಮದ ನೆನಪುಗಳನ್ನು ಸೃಷ್ಟಿಸೋಣ.

Windmills & Tulip Gardens, Amsterdam

Polar Bear, from Arctic Cruise

ಯುರೋಪಿನ ವ್ಯಾಪಕ ಸೌಂದರ್ಯವನ್ನು ತಾವಾಗಿಯೆ ನೋಡುವುದೆಂದರೆ ಆತಂಕ ಉಂಟಾಗಬಹುದು; ಆದರೆ ನಿಮ್ಮೊಂದಿಗೆ ಡೆಡಿಕೇಟೆಡ್ ವೀಣಾ ವರ್ಲ್ಡ್ ಟೂರ್ ಮ್ಯಾನೇಜರ್ ಇರುವಾಗ, ನಿಮ್ಮ ಯುರೋಪ್ ಅಡ್ವೆಂಚರ್ ಹೆಜ್ಜೆಹೆಜ್ಜೆಗೂ ನಿರಾಳ ಹಾಗೂ ಆನಂದದಾಯಕವಾಗುತ್ತದೆ.


San Marino, the world's oldest republic

Leaning Tower, Pisa, Italy

Northern Lights, Iceland

Hot Air Ballooning, Turkey

Lowicz Folk Dance, Poland

Santorini, Greece

Big Ben, London

Pena Palace, Sintra, Portugal

ವೆಸ್ಟರ್ನ್, ಈಸ್ಟರ್ನ್, ನಾರ್ದರ್ನ್ ಮತ್ತು ಮೆಡಿಟರೇನಿಯನ್ ಯುರೋಪ್ ಕ್ಷೇತ್ರಗಳಲ್ಲಿ ವೀಣಾ ವರ್ಲ್ಡ್ ವಿಭಿನ್ನ ಟೂರ್ಸ್ ಒದಗಿಸುತ್ತದೆ. ಮೊದಲ ಬಾರಿಯ ಟ್ರಾವೆಲರ್ಸ್, 35+ ವೆಸ್ಟರ್ನ್ ಯುರೋಪ್ ಆಪ್ಷನ್ಸ್‌ನಿಂದ ಆರಿಸಿಕೊಳ್ಳಬಹುದಾಗಿದೆ.

The Kelpies, Scotland

ಫಾರಿನ್ ಎಕ್ಸ್‌ಚೇಂಜ್ ಏರಿಳಿತಗಳು ಅನಿರೀಕ್ಷಿತವಾಗಿರುತ್ತವೆ; ಆದರೆ, ವೀಣಾ ವರ್ಲ್ಡ್ ಇರುವಾಗ ನೀವು ಚಿಂತಿಸಬೇಕಾಗಿಲ್ಲ; ಏಕೆಂದರೆ, ನೀವು ನಿಮ್ಮ ಸಂಪೂರ್ಣ ಯುರೋಪ್ ಟೂರ್ ಪ್ರೈಸನ್ನು ಇಂಡಿಯನ್ ರುಪೀಸ್‌ನಲ್ಲಿ ಪಾವತಿಸಿರುತ್ತೀರಿ.


Luxembourg City

ವೀಣಾ ವರ್ಲ್ಡ್ಸ್ ಆಲ್-ಇನ್‌ಕ್ಲೂಸಿವ್ ಗ್ರೂಪ್ ಟೂರ್ಸ್‌ನಿಂದ ಆರಿಸಿಕೊಳ್ಳಿ. ಭಾರತದಲ್ಲಿ ಮತ್ತು ವಿಶ್ವಾದ್ಯಂತ ಇನ್ನೂ ಅನೇಕ ರೋಚಕ ಟೂರ್ಸ್ ಕಂಡುಕೊಳ್ಳಿ, veenaworld.comನಲ್ಲಿ.

- ಏರ್‌ಫೇರ್ ಮತ್ತು ವೀಸಾ ಫೀಸ್ ಒಳಗೊಂಡಿರುವ ಆಲ್-ಇನ್‌ಕ್ಲೂಸಿವ್ ಟೂರ್ಸ್
- ಡಿಸ್ಕೌಂಟ್ಸ್ ಇಲ್ಲ ಆಪ್ಷನಲ್ಸ್ ಇಲ್ಲ ಗಿಮಿಕ್ಸ್ ಇಲ್ಲ ಸುಪ್ತ ವೆಚ್ಚಗಳಿಲ್ಲ
- ಕನ್‌ಫರ್ಮ್ಡ್ ಏರ್‌ಲೈನ್ಸ್ ಕಂಫರ್ಟೆಬಲ್ ಹೋಟೆಲ್ಸ್ AC ಕೋಚಸ್
- ಇಂಡಿಯನ್ ಯುರೋಪಿಯನ್ ಸ್ಥಳೀಯ ಊಟೋಪಚಾರ ಬ್ರೇಕ್‌ಫಾಸ್ಟ್ ಲಂಚ್ ಡಿನ್ನರ್ ಒಳಗೊಂಡಿವೆ
- ನಿರ್ದಿಷ್ಟ ಪ್ರೇಕ್ಷಣೀಯ ಸ್ಥಳಗಳಲ್ಲಿ 'ವೀಣಾ ವರ್ಲ್ಡ್ ಟ್ರೀಟ್ಸ್'
- ಗರಿಷ್ಠ 'ನೋಡಲೇಬೇಕಾದ' ಪ್ರೇಕ್ಷಣೀಯ ಸ್ಥಳಗಳು ಎಂಟ್ರೆನ್ಸ್ ಫೀಸ್‌ನೊಂದಿಗೆ
- ಒಳಗೊಂಡಿವೆ: ವೀಸಾ ಫೀ ಟ್ರಾವೆಲ್ ಇನ್ಶೂರೆನ್ಸ್* ಡ್ರೈವರ್-ಗೈಡ್ ಟಿಪ್ಸ್
- ಮುಂಬಯಿಯಿಂದ ಮುಂಬಯಿಯವರೆಗೆ ವೀಣಾ ವರ್ಲ್ಡ್ ಟೂರ್ ಮ್ಯಾನೇಜರ್ ನಿಮ್ಮ ಸೇವೆಗಾಗಿ
- ಯೂರೊ ಬದಲಾಗುತ್ತಿದೆಯೆ ಚಿಂತಿಸಬೇಡಿ! ಪೂರ್ತಿ ಟೂರ್ ಪ್ರೈಸನ್ನು ಇಂಡಿಯನ್ ರೂಪಾಯಿಗಳಲ್ಲಿ ಪಾವತಿಸಿರಿ
- ನೇರ ಜಾಯಿನಿಂಗ್ ಲೀವಿಂಗ್ ಎಕ್ಸ್-ಡೆಸ್ಟಿನೇಶನ್ ಟೂರ್ ಪ್ರೈಸ್ ಲಭ್ಯವಿದೆ
- ನಿಮ್ಮ ಫಾರಿನ್ ಎಕ್ಸ್‌ಚೇಂಜ್ ಖರೀದಿಸಿರಿ ವೀಣಾ ವರ್ಲ್ಡ್ ಫಾರೆಕ್ಸ್‌ನಲ್ಲಿ
- ನಿಮ್ಮ ಪ್ರೈವೇಟ್ ಯುರೋಪ್ ಹಾಲಿಡೇ ಪಡೆಯಿರಿ, ವೀಣಾ ವರ್ಲ್ಡ್‌ನಿಂದ ಕಸ್ಟಮೈಜ್ಡ್

ವೆಸ್ಟರ್ನ್ ಯುರೋಪ್ - ಮೋಸ್ಟ್ ಪಾಪ್ಯುಲರ್ ಟೂರ್ಸ್

ಯುರೋಪಿಯನ್ ಎಕ್ಸ್‌ಪ್ಲೋರರ್ (27D) 625000-650000
ಯುರೋಪಿಯನ್ ಡ್ರೀಮ್ (23D) 535000-550000
ಯುರೋಪಿಯನ್ ಮ್ಯಾಜಿಕ್ (19D) 475000-490000
ಯುರೋಪಿಯನ್ ಮಾರ್ವೆಲ್ಸ್ (17D) 415000-430000
ಯುರೋಪಿಯನ್ ಜ್ಯುಯೆಲ್ಸ್ ವಿಥ್ ವೆರ್ಸಾಯಿ/ಡಿಸ್ನಿಲ್ಯಾಂಡ್ (15D) 365000 - 380000
ಯುರೋಪಿಯನ್ ಡಿಲೈಟ್ (13D) 330000-345000
ಯುರೋಪಿಯನ್ ವಂಡರ್ಸ್ (13D) 310000-325000
ಯುರೋಪಿಯನ್ ಹೈಲೈಟ್ಸ್ (11D) 290000-305000
ಯುರೋಪಿಯನ್ ಚಾರ್ಮ್ (11D) 275000-290000
ಯುರೋಪಿಯನ್ ಸ್ಪ್ಲೆಂಡರ್ಸ್ (10D) 250000-265000
ಯುರೋಪಿಯನ್ ಪನೋರಮ (8D) 225000-240000
ಗ್ಲಿಂಪ್ಸ್ ಆಫ್ ಯುರೋಪ್ (6D) 185000 - 200000
ಲಂಡನ್ ಪ್ಯಾರಿಸ್ ಸ್ವಿಸ್ ಇಟಲಿ (9D) 260000-275000
ಸ್ವಿಸ್ ಪ್ಯಾರಿಸ್ ಆ್ಯಮ್‌ಸ್ಟರ್‌ಡ್ಯಾಮ್ ಬ್ರಸೆಲ್ಸ್ (8D/11D) 210000 - 330000
ಲಂಡನ್ ಪ್ಯಾರಿಸ್ ಆ್ಯಮ್‌ಸ್ಟರ್‌ಡ್ಯಾಮ್ ಬ್ರಸೆಲ್ಸ್ (7D) 230000-245000
ಆ್ಯಮ್‌ಸ್ಟರ್‌ಡ್ಯಾಮ್ ಬ್ರಸೆಲ್ಸ್ ಬ್ರೂಶ್ (7D) 200000-225000
ಇಂಗ್ಲೆಂಡ್ ಸ್ಕಾಟ್‌ಲ್ಯಾಂಡ್ ಐರ್‌ಲ್ಯಾಂಡ್ ವೇಲ್ಸ್ ಲಂಡನ್ (15D) 425000 - 440000
ಇಂಗ್ಲೆಂಡ್ ಸ್ಕಾಟ್‌ಲ್ಯಾಂಡ್ (10D) 300000-315000
ಸ್ವಿಸ್ ಪ್ಯಾರಿಸ್ (8D) 245000 - 260000
ಸ್ವಿಸ್ ಪ್ಯಾರಿಸ್ ಲಂಡನ್ (11D) 330000 - 345000
ಸ್ವಿಸ್ ಪ್ಯಾರಿಸ್ ಇಟಲಿ (11D) 300000 - 315000
ಸ್ವಿಸ್ ಆಸ್ಟ್ರಿಯಾ ಇಟಲಿ (11D) 300000 - 315000
ಸ್ವಿಸ್ ಆಸ್ಟ್ರಿಯಾ (8D) 245000 - 260000
ಸ್ವಿಸ್ ಪ್ಯಾರಿಸ್ ಆಸ್ಟ್ರಿಯಾ (11D) 315000 - 330000
ಬೆಸ್ಟ್ ಆಫ್ ಸ್ವಿಟ್ಜರ್‌ಲ್ಯಾಂಡ್ (7D) 240000-255000
ಆಲ್ ಆಫ್ ಸ್ವಿಟ್ಜರ್‌ಲ್ಯಾಂಡ್ (10D) 325000-340000
ಬೆಸ್ಟ್ ಆಫ್ ಆಸ್ಟ್ರಿಯಾ (8D) 240000 - 255000
ಬೆಸ್ಟ್ ಆಫ್ ಫ್ರಾನ್ಸ್ (11D) 300000 - 325000
ಬೆಸ್ಟ್ ಆಫ್ ಇಟಲಿ (8D) 235000 - 250000
ಆಲ್ ಆಫ್ ಇಟಲಿ (15D) 375000
ವೆಸ್ಟರ್ನ್ ಯುರೋಪ್ + ಆಲ್ ಆಫ್ ಈಸ್ಟರ್ನ್ ಯುರೋಪ್ (30D) 675000
ವೆಸ್ಟರ್ನ್ ಯುರೋಪ್ ವಿಥ್ ಈಸ್ಟರ್ನ್ ಯುರೋಪ್ + ಸ್ಪೇನ್ ಪೋರ್ಚುಗಲ್ ಮೊರೊಕೊ (60D) 1350000

ನಾರ್ದರ್ನ್ ಯುರೋಪ್

ಬೆಸ್ಟ್ ಆಫ್ ಸ್ಕ್ಯಾಂಡಿನೇವಿಯಾ (10D)/15D)310000-390000
ನಾರ್ವೆ+ಲೊಫೊಟನ್ ಐಲ್ಯಾಂಡ್ಸ್ (9D) 525000- 550000
ಸ್ಕ್ಯಾಂಡಿನೇವಿಯಾ ನಾರ್ದರ್ನ್ ಲೈಟ್ಸ್ (9D/10D ಐಸ್‌ಬ್ರೇಕರ್) 370000 - 410000
ಸ್ಕ್ಯಾಂಡಿನೇವಿಯಾ ಮಿಡ್‌ನೈಟ್ ಸನ್ (10D/16D) 390000-495000
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ (15D) 510000-525000
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ ನಾರ್ದರ್ನ್ ಲೈಟ್ಸ್ (14D/15D ಐಸ್‌ಬ್ರೇಕರ್) 495000 - 545000
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ ಮಿಡ್‌ನೈಟ್ ಸನ್ (14D) 575000–590000
ಐಸ್‌ಲ್ಯಾಂಡ್ ನಾರ್ದರ್ನ್ ಲೈಟ್ಸ್ (10D) 475000-500000
ಸ್ಪಿಟ್ಸ್‌ಬರ್ಗನ್ ಆರ್ಕ್ಟಿಕ್ (9D) 875000 - 900000

ಈಸ್ಟರ್ನ್ ಯುರೋಪ್

ಆಲ್ ಆಫ್ ಈಸ್ಟರ್ನ್ ಯುರೋಪ್ (17D) 360000-375000
ಕ್ರೊಏಶಿಯಾ ಸ್ಲೊವೇನಿಯಾ ಸ್ಲೊವಾಕಿಯಾ ಹಂಗೆರಿ (12D) 285000 - 300000
ವಿಯೆನ್ನಾ ಪ್ರಾಗ್ ಬುಡಾಪೆಸ್ಟ್ ಬ್ರಾಟಿಸ್ಲಾವಾ (8D) 225000-240000
ವಿಯೆನ್ನಾ ಪ್ರಾಗ್ ಸಾಲ್ಸ್‌ಬರ್ಗ್ ಮ್ಯೂನಿಕ್ (8D) 210000-225000
ಬೆಸ್ಟ್ ಆಫ್ ಕ್ರೊಏಶಿಯಾ (8D)(ಎಕ್ಸ್-ಝಾಗ್ರೆಬ್) 265000
ಉಜ್ಬೆಕಿಸ್ತಾನ್ ಕಝಕ್‌ಸ್ತಾನ್ ಕಿರ್ಗಿಜ್‌ಸ್ತಾನ್ (9D) 200000 - 225000
ಬೆಸ್ಟ್ ಆಫ್ ಬಾಕು ಅಝರ್‌ಬೈಜಾನ್ (7D) 135000-150000
ಜಾರ್ಜಿಯಾ ಆರ್ಮೇನಿಯಾ ಅಝರ್‌ಬೈಜಾನ್ (10D) 200000-215000
ಜಾರ್ಜಿಯಾ ಆರ್ಮೇನಿಯಾ (8D) 165000 - 175000

ಸದರ್ನ್ ಮೆಡಿಟರೇನಿಯನ್ ಬಾಲ್ಟಿಕ್ ಬಾಲ್ಕನ್ ಯುರೋಪ್

ಬೆಸ್ಟ್ ಆಫ್ ಸ್ಪೇನ್ (10D) 250000 - 265000
ಆಲ್ ಆಫ್ ಸ್ಪೇನ್ (15D) 350000 - 365000
ಸ್ಪೇನ್ ಪೋರ್ಚುಗಲ್ (13D) 300000 - 315000
ಸ್ಪೇನ್ ಪೋರ್ಚುಗಲ್ ಮೊರೊಕೊ (16D) 345000-360000
ಬೆಸ್ಟ್ ಆಫ್ ಈಜಿಪ್ಟ್ (9D) 197000 - 207000
ಈಜಿಪ್ಟ್ ಗ್ರೀಸ್ ಟರ್ಕಿ (15D) 375000 - 390000
ಗ್ರೀಸ್ ಟರ್ಕಿ (12D) 350000 - 365000
ಟರ್ಕಿ (10D/15D) 225000 - 325000
ಗ್ರೀಸ್ (8D/10D/15D) 250000 - 425000
ಟ್ಯುನೀಸಿಯಾ ಮಾಲ್ಟಾ ಸಿಸಿಲಿ (10D) 325000-340000
ಎಸ್ಟೋನಿಯಾ ಲಾಟ್ವಿಯಾ ಲಿಥುವೇನಿಯಾ (8D) 225000-240000
ರೊಮೇನಿಯಾ ಬಲ್ಗೇರಿಯಾ...Coming Soon

ಅಮೆರಿಕಾ ಯುಎಸ್‌ಎ ಕೆನಡಾ

ಅಮೆರಿಕನ್ ಎಕ್ಸ್‌ಪ್ಲೋರರ್ (21D) 750000-765000
ಅಮೆರಿಕನ್ ಡ್ರೀಮ್ (19D) 700000 - 715000
ಅಮೆರಿಕನ್ ಸ್ಪ್ಲೆಂಡರ್ಸ್ (18D) 635000 - 650000
ಅಮೆರಿಕನ್ ವಂಡರ್ಸ್ (15D) 575000 - 590000
ಅಮೆರಿಕನ್ ಡಿಸ್ಕವರಿ (15D) 625000 - 640000
ಅಮೆರಿಕನ್ ಮ್ಯಾಜಿಕ್ (13D) 525000 - 540000
ಯುಎಸ್‌ಎ ಈಸ್ಟ್ ಕೋಸ್ಟ್ (7D) 300000 - 315000
ಕ್ಯಾಲಿಫೋರ್ನಿಯಾ ಕಾರ್ನಿವಲ್ (10D) 400000-415000
ಬೆಸ್ಟ್ ಆಫ್ ಅಲಾಸ್ಕ (9D) 400000 - 415000
ಬೆಸ್ಟ್ ಆಫ್ ಅಲಾಸ್ಕ ಕೆನಡಾ (17D) 650000
ಬೆಸ್ಟ್ ಆಫ್ ಕೆನಡಾ (10D) 475000 - 490000
ಆಲ್ ಆಫ್ ಕೆನಡಾ (17D) 725000 - 740000
ಬೆಸ್ಟ್ ಆಫ್ ಯುಎಸ್‌ಎ ಆ್ಯಂಡ್ ಕೆನಡಾ (19D) 750000-765000
ಬೆಸ್ಟ್ ಆಫ್ ಹವಾಯಿ ಮೆಕ್ಸಿಕೊ (13D) 775000-790000
ಬೆಸ್ಟ್ ಬ್ರೆಜಿಲ್ ಅರ್ಜೆಂಟೀನಾ (13D) 750000-765000
ಸೌತ್ ಅಮೆರಿಕಾ (21D) 1225000
ಅಂಟಾರ್ಕ್ಟಿಕಾ ದಿ 7th ಕಾಂಟಿನೆಂಟ್ (14D) Mar 9 - 1295000

ಕಸ್ಟಮೈಜ್ಡ್ ಹಾಲಿಡೇಸ್ ನಿಮ್ಮ ಪ್ರೈವೇಟ್ ಹಾಲಿಡೇ, ನೀವು ಬಯಸುವ ರೀತಿಯಲ್ಲಿ!

ವೀಣಾ ವರ್ಲ್ಡ್ ಅತಿಥಿಗಳ ಅಭಿಪ್ರಾಯವನ್ನು ತಿಳಿದುಕೊಳ್ಳಲು, ಸ್ಕ್ಯಾನ್ ಮಾಡಿ ನೋಡಿರಿ

ವೀಣಾ ವರ್ಲ್ಡ್ ಅತಿಥಿಗಳ ಆನಂದಮಯ ಶುಭಾರಂಭ! 8 ಟೂರ್ ಆಪ್ಷನ್ಸ್

ಇನ್ನಷ್ಟು ಟೂರ್ಸ್, ಆಸ್ಟ್ರೇಲಿಯಾ ಅಮೆರಿಕಾ ಆಫ್ರಿಕಾ ಅಂಟಾರ್ಕ್ಟಿಕಾ ಏಷ್ಯಾಕ್ಕೆ

ಸೀನಿಯರ್ಸ್ ಸ್ಪೆಶಲ್ ಗೋಲ್ಡನ್ ಏಜ್ ಸೆಲಿಬ್ರೇಶನ್! 53 ಟೂರ್ ಆಪ್ಷನ್ಸ್

ಭಾರತಾದ್ಯಂತ ಒಂದೇ ಟೂರ್ ಪ್ರೈಸ್ - ಮುಂಬಯಿ, ಕೋಲ್ಕತಾ, ದೆಹಲಿ, ಬೆಂಗಳೂರು, ಹೈದರಾಬಾದ್, ಚೆನ್ನೈ, ಕೊಚ್ಚಿ, ಅಹಮದಾಬಾದ್‌ಗಳಿಂದ ಹೊರಡುವ ಟೂರ್ಸ್‌ಗೆ, ಡಿಸೆಂಬರ್ 31, 2024ಕ್ಕಿಂತ ಮುಂಚೆ ಬುಕ್ ಮಾಡಿದಲ್ಲಿ.

ವಿಮೆನ್ಸ್ ಸ್ಪೆಶಲ್ ಬನ್ನಿ, ಜೀವನದ ಸಂಭ್ರಮ ಆಚರಿಸೋಣ 66 ಟೂರ್ ಆಪ್ಷನ್ಸ್

ಇನ್ನಷ್ಟು ಟೂರ್ಸ್, ರಾಜಸ್ತಾನ ಕೇರಳ ಕಾಶ್ಮೀರ ಹಿಮಾಚಲ ಗುಜರಾತ್ ನಾರ್ತ್‌ಈಸ್ಟ್‌ಗೆ

0% ಕನ್ವೀನಿಯನ್ಸ್ ಫೀ ರುಪೇ, ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ಸ್, ವೀಸಾ ಹಾಗೂ ಮಾಸ್ಟರ್‌ಕಾರ್ಡ್

ವೀಣಾ ವರ್ಲ್ಡ್ ಗಿಫ್ಟ್ ಕಾರ್ಡ್ಸ್!

ಕಾರ್ಪೊರೇಟ್ ಟೂರ್ಸ್ MICE ಕಾನ್ಫರೆನ್ಸ್‌ಗಳು, ಇನ್ಸೆಂಟಿವ್ ಟೂರ್ಸ್ ಮತ್ತು ಅವಾರ್ಡ್ ಫಂಕ್ಷನ್ಸ್‌ಗಾಗಿ

ನಿಮ್ಮ ಫ್ಯಾಮಿಲಿ ಮತ್ತು ಫ್ರೆಂಡ್ಸ್‌ನ ಗ್ರೂಪ್‌ಗಾಗಿ, ಎಕ್ಸ್‌ಕ್ಲೂಸಿವ್ ಟೂರ್ಸ್‌ಗಾಗಿ ನಮ್ಮನ್ನು ಸಂಪರ್ಕಿಸಿರಿ.

Travel Now Pay Later!
EMI options available (3 months to 24 months) subject to EMI partner approval. T&C apply

Group tour price includes return airfare, transport, accommodation, all meals: breakfast lunch dinner, sightseeing with entrance fees, driver tips, travel insurance*, services of a Tour Manager and VISA fee (except for Free Visa Countries). USA tours for valid US visa holders only.

Sharada Plaza, 9th Main Rd, 3rd block, Jayanagar, Opp. SBI, Bengaluru 560011, Call: 887 9972 217
2005, 100 feet Road, HAL 2nd Stage, Indiranagar, Bengaluru 560038, Call: 887 9979 500
veenaworld.com | Call: 1800 22 7979 | Mon-Sat 10 to 7

Applications invited for Sales Partners/Agents across Southern Region. Call : 887 997 9733

Dadar 887 997 2203	Parle 887 997 2213	Borivali 887 997 2201	Ghatkopar 887 997 2226	Thane 887 997 2205	Pune 887 997 2300	Vashi 887 997 2207	Bengaluru Jayanagar 887 997 2217
Girgaon 887 997 2215	Andheri 887 997 2216	Kandivali 887 997 7500	Chembur 887 997 2202	Thane Pokhran 887 997 2204	Baner 887 997 9300	Ahmedabad 887 997 7200	Bengaluru Indiranagar 887 997 9500
Bandra 887 997 2212	Versova 887 997 9100	Bhayandar 887 997 7400	Mulund 887 997 9600	Dombivali 887 997 2206	Chinchwad 887 997 2310	Kolkata 887 997 2288	Hyderabad 887 997 9700
Matunga 887 997 2214	Malad 887 997 2219	Vasai 887 997 2209	Vidyavihar 887 997 2221	Airoli 887 997 9200	Hadapsar 887 997 7300	New Delhi 887 997 2700	MICE 704 599 3391

Veena World Sales Partners: Karnataka: Belgaum-College Rd 9980428880 • Belgaum-Goaves Circle 7338685500 • Belgaum-Tilakwadi 9845092772 • Dharwad 9036715969 • Hubli 7204411007 Malleshwaram 9845066469 • Basavanagudi 9900268233 • Vijaynagar 9036610005 • Chikodi 9448627771 • Udupi 9448372824 • Gulburga 9632655010 • Vijayapur 9980857595 • Tamil Nadu: Coimbatore 9994666522

All group tours are ex-Mumbai. Tour price is per person and on twin sharing basis. These tour prices are nett and no discount is applicable. At the time of booking, tour price to be paid in full INR by UPI/NEFT/RTGS/Cheque, in the name of 'Veena Patil Hospitality Pvt. Ltd.' No cash transactions at Veena World. Government taxes apply. Any increase in YQ taxes, airport taxes, VISA fees, surcharges (if any) will have to be borne by the travellers. T&C apply.

VEENA WORLD
Travel. Explore. Celebrate Life.

ಚಾಮರಾಜಪೇಟೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ನಗರದ ಎರಡನೇ ಘಟಕದ ಉದ್ಘಾಟನೆ

ಘನತ್ಯಾಜ್ಯ ಎಸ್‌ಟಿಎಸ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳಿಂದ ಸಂಗ್ರಹವಾಗುವ ತ್ಯಾಜ್ಯ ಆಟೊಗಳಿಂದ ನೇರವಾಗಿ ವಿಂಗಡಣೆ ಘಟಕಕ್ಕೆ ವಿಲೇವಾರಿಯಾಗುವ 'ದ್ವಿತೀಯ ಹಂತದ ವರ್ಗಾವಣೆ ಘಟಕ'ಕ್ಕೆ (ಎಸ್‌ಟಿಎಸ್) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಚಾಲನೆ ನೀಡಿದರು.

ಚಾಮರಾಜಪೇಟೆ ಹಾಗೂ ಗಾಂಧಿನಗರ ವಿಧಾನಸಭೆ ಕ್ಷೇತ್ರಗಳ ಒಂಬತ್ತು ವಾರ್ಡ್‌ಗಳ ತ್ಯಾಜ್ಯವನ್ನು ಆಟೊಗಳ ಮೂಲಕ ಘಟಕಗಳಲ್ಲಿ ಸಂಗ್ರಹಿಸಲಾಗುತ್ತದೆ. ಅಲ್ಲಿಂದ ಬೃಹತ್ ಕಂಟೈನರ್‌ಗಳಲ್ಲಿ (ಕ್ಯಾಪ್ಸೂಲ್) ಯಾವುದೇ ದ್ರವತ್ಯಾಜ್ಯ ಹೊರಬೀಳದಂತೆ ಸಂಸ್ಕರಣೆ ಘಟಕ ಅಥವಾ ಭೂಭರ್ತಿ ಸ್ಥಳಗಳಿಗೆ ರವಾನಿಸಿ ವಿಲೇವಾರಿ ಮಾಡಲಾಗುತ್ತದೆ.

'ಮನುಷ್ಯನ ಆರೋಗ್ಯ ಅತ್ಯಂತ ಮುಖ್ಯ. ಹೀಗಾಗಿ ಮನೆ, ರಸ್ತೆ ಸುತ್ತಮುತ್ತ ತ್ಯಾಜ್ಯ ಇಲ್ಲದೆ ಸ್ವಚ್ಛ ಇರುವುದು ಅಗತ್ಯ. ಎಸ್‌ಟಿಎಸ್ ವ್ಯವಸ್ಥೆಯಿಂದ ಸ್ವಚ್ಛತೆ ಜೊತೆಗೆ, ಒಣ ತ್ಯಾಜ್ಯ, ಹಸಿ ತ್ಯಾಜ್ಯ ಸ್ವಯಂಚಾಲಿತವಾಗಿ ವಿಂಗಡಣೆಯಾಗುತ್ತದೆ. ಯಾವುದೇ ರೀತಿಯ ವಾಸನೆ ಇಲ್ಲದೆ ಘಟಕ ಕಾರ್ಯ ನಿರ್ವಹಿಸುತ್ತದೆ. ಇಂತಹ ವ್ಯವಸ್ಥೆ ಎಲ್ಲೆಡೆ ಕ್ಷಿಪ್ರವಾಗಿ ಬರಬೇಕು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

'ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಒಳ್ಳೆಯ ಸೌಲಭ್ಯವಿದೆ. ಕೆಲವು ಬಾರಿ ಲೋಪಗಳಾಗಿರಬಹುದು. ಅದರ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

ಎಸ್‌ಟಿಎಸ್‌ಗಳಿಂದ ಸಂಸ್ಕರಣೆ ಘಟಕಕ್ಕೆ ಬೃಹತ್ ಕಂಟೈನರ್‌ಗಳ ಮೂಲಕ ತ್ಯಾಜ್ಯವನ್ನು ಸಾಗಿಸಲಾಗುತ್ತಿದೆ. ಈ ವಾಹನಗಳು ದ್ರವತ್ಯಾಜ್ಯ ಸೋರಿಕೆಯಾಗದಂತೆ ತಡೆಯುವ ತಂತ್ರಜ್ಞಾನವನ್ನು ಹೊಂದಿವೆ. ಪ್ರಸ್ತುತ ಪಾಲಿಕೆಯಲ್ಲಿ 14 ಘನ ಮೀಟರ್ ಸಾಮರ್ಥ್ಯದ ಕಾಂಪ್ಯಾಕ್ಟರ್‌ಗಳು ತ್ಯಾಜ್ಯವನ್ನು ಸಾಗಿಸುತ್ತಿವೆ. ಎಸ್‌ಟಿಎಸ್‌ಗಳಿಂದ 20 ಘನ ಮೀಟರ್ ಸಾಮರ್ಥ್ಯದ ಕಂಟೈನರ್‌ಗಳ ಮೂಲಕ ತ್ಯಾಜ್ಯ ಸಾಗಿಸುವುದರಿಂದ ವಾಹನಗಳ ಸಂಖ್ಯೆ ಕಡಿಮೆಯಾಗಿ, ವಾಯುಮಾಲಿನ್ಯ ನಿಯಂತ್ರಣಕ್ಕೂ ಸಹಕಾರಿಯಾಗಲಿದೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ನಿರ್ದೇಶನದಂತೆ ತ್ಯಾಜ್ಯವನ್ನು ಯಾಂತ್ರೀಕೃತವಾಗಿ ಹಾಗೂ ವೈಜ್ಞಾನಿಕವಾಗಿ ನಿರ್ವಹಿಸಬಹುದು ಎಂದು ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಮಾಹಿತಿ ನೀಡಿದರು. 'ವಿಂಗಡಣೆಯಾಗದ ಕಸವನ್ನೂ ಎಸ್‌ಟಿಎಸ್‌ನಲ್ಲಿ ಸ್ವಯಂಚಾಲಿತ ಯಂತ್ರದ ಮೂಲಕ ವಿಂಗಡಣೆ ಮಾಡಲಾಗುತ್ತದೆ' ಎಂದರು.

ಬಿನ್ನಿಮಿಲ್ ರಸ್ತೆಯಲ್ಲಿರುವ ಘನತ್ಯಾಜ್ಯದ ದ್ವಿತೀಯ ಹಂತದ ವರ್ಗಾವಣೆ ಘಟಕಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಚಾಲನೆ ನೀಡಿದರು. ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್, ವಸತಿ ಸಚಿವ ಜಮೀರ್ ಅಹಮದ್ ಖಾನ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉಪಸ್ಥಿತರಿದ್ದರು(ಎಡಚಿತ್ರ). ಘಟಕದಲ್ಲಿರುವ ಸ್ವಯಂಚಾಲಿತ ತ್ಯಾಜ್ಯ ವಿಂಗಡಣೆ ಯಂತ್ರ ಪ್ರಜಾವಾಣಿ ಚಿತ್ರಗಳು

₹12.50 ಕೋಟಿ	40 ಟನ್	200 ಟನ್	3 ಪಾಳಿಯಲ್ಲಿ	18 ಟನ್
ವೆಚ್ಚದಲ್ಲಿ ಎಸ್‌ಟಿಎಸ್ ನಿರ್ಮಾಣ	ನಿತ್ಯ ತ್ಯಾಜ್ಯ ವಿಂಗಡಣೆ (ಪ್ರತಿ ಗಂಟೆಗೆ 5 ಟನ್)	ಪ್ರತಿನಿತ್ಯ ತ್ಯಾಜ್ಯ ಸಂಗ್ರಹ	ತ್ಯಾಜ್ಯ ಸಂಗ್ರಹ, ವಿಂಗಡಣೆ	ಪ್ರತಿ ಕಂಟೈನರ್‌ನಲ್ಲಿ (ಕ್ಯಾಪ್ಸೂಲ್) ರವಾನೆಯಾಗುವ ತ್ಯಾಜ್ಯ

ತ್ಯಾಜ್ಯ ವಿಂಗಡಣೆ: ಶೇ 55ರಷ್ಟು ಪ್ರಗತಿ

'ಘನತ್ಯಾಜ್ಯ ನಿರ್ವಹಣಾ ನಿಯಮ-2016ರ ಪ್ರಕಾರ ತ್ಯಾಜ್ಯ ಉತ್ಪಾದಕರು ತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸಿ ಪಾಲಿಕೆ ವಾಹನಗಳಿಗೆ ನೀಡುವುದು ಕಡ್ಡಾಯವಾಗಿದೆ. ಆದರೆ, ಈವರೆಗೆ ತ್ಯಾಜ್ಯ ವಿಂಗಡಣೆಯಲ್ಲಿ ಸರಾಸರಿ ಶೇ 55ರಷ್ಟು ಮಾತ್ರ ಪ್ರಗತಿ ಸಾಧಿಸಲಾಗಿದೆ' ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ತಿಳಿಸಿದರು.

'ಹಸಿ, ಒಣ ತ್ಯಾಜ್ಯವನ್ನು ವಿಂಗಡಿಸಿ ನೀಡುವಂತೆ ಸಾರ್ವಜನಿಕರಿಗೆ ಮಾಹಿತಿ ನೀಡಲು, ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಇಷ್ಟಾದರೂ ಶೇ 50ರಿಂದ ಶೇ 85ರಷ್ಟು ಪ್ರಗತಿಯಾಗಿದೆ. ವಿಂಗಡಣೆಯಾಗದ ತ್ಯಾಜ್ಯವನ್ನು ಭೂಭರ್ತಿ ಪ್ರದೇಶಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ಇದರಿಂದ ಪರಿಸರದ ಮೇಲೆ ತೀವ್ರ ಪ್ರಮಾಣದ ತೊಂದರೆಯುಂಟಾಗುತ್ತಿದೆ' ಎಂದರು.

ದ್ವಿತೀಯ ಹಂತದ ವರ್ಗಾವಣೆ ಘಟಕದಲ್ಲಿರುವ ಕಂಟೈನರ್‌ಗಳು (ಕ್ಯಾಪ್ಸೂಲ್)

33 ಕಾಂಪ್ಯಾಕ್ಟರ್ ಸ್ಥಗಿತ: ತುಷಾರ್ ಗಿರಿನಾಥ್

'ಎಸ್‌ಟಿಎಸ್ ಸ್ಥಾಪನೆಯಿಂದಾಗಿ ಒಂಬತ್ತು ವಾರ್ಡ್‌ಗಳಲ್ಲಿ 33 ಕಾಂಪ್ಯಾಕ್ಟರ್‌ಗಳ ಸಂಚಾರ ಸ್ಥಗಿತಗೊಳ್ಳಲಿದೆ. 211 ಆಟೊಗಳು ನೇರವಾಗಿ ಎಸ್‌ಟಿಎಸ್‌ಗೆ ಕಸವನ್ನು ವಿಲೇವಾರಿ ಮಾಡಲಿವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಮನೆಯಿಂದ ಸಂಗ್ರಹಿಸುವ ತ್ಯಾಜ್ಯವನ್ನು ಆಟೊದಲ್ಲಿ ತೆಗೆದುಕೊಂಡು ಹೋಗಿ, ಕಾಂಪ್ಯಾಕ್ಟರ್‌ಗಳಿಗೆ ರಸ್ತೆಗಳಲ್ಲಿ ತುಂಬಲಾಗುತ್ತಿತ್ತು. ಇದರಿಂದ ವಾಸನೆ ಸೇರಿದಂತೆ ಹಲವು ಸಮಸ್ಯೆಗಳು ಉಂಟಾಗುತ್ತಿವೆ. ಹೊಸ ವ್ಯವಸ್ಥೆಯಿಂದ ಇದು ನಿಯಂತ್ರಣಕ್ಕೆ ಬರಲಿದೆ. ಆಟೊದಿಂದ ನೇರವಾಗಿ ಎಸ್‌ಟಿಎಸ್‌ಗೆ ತ್ಯಾಜ್ಯ ವಿಲೇವಾರಿಯಾಗುತ್ತದೆ. ಪ್ರತಿ ಆಟೊ ಎಷ್ಟು ಪ್ರಮಾಣದ ತ್ಯಾಜ್ಯ ವಿಲೇವಾರಿ ಮಾಡುತ್ತದೆ ಎಂಬುದನ್ನು ದಾಖಲಿಸಲಾಗುತ್ತದೆ. ಈ ಘಟಕದಿಂದ ನಾಗರಿಕರಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ, ವಾಸನೆಯೂ ಇರುವುದಿಲ್ಲ' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿಯೊಂದು ವಿಧಾನಸಭೆ ಕ್ಷೇತ್ರದಲ್ಲೂ ಒಂದು ಎಸ್‌ಟಿಎಸ್ ನಿರ್ಮಾಣ ಮಾಡಲು ಸೂಚಿಸಿದ್ದಾರೆ. ಅದರಂತೆ ನಗರದಲ್ಲಿ 27 ಎಸ್‌ಟಿಎಸ್ ನಿರ್ಮಾಣ ಮಾಡಲು ನಿರ್ಧಾರ ಮಾಡಲಾಗಿದೆ. ಇದೀಗ ಎರಡು ಆರಂಭವಾಗಿದ್ದು, ಇನ್ನೊಂದು ಜನವರಿಯಲ್ಲಿ ಆರಂಭವಾಗಲಿದೆ. ಪ್ರತಿ ಘಟಕಕ್ಕೆ ₹13 ಕೋಟಿ ವೆಚ್ಚ ಮಾಡಲಾಗುತ್ತದೆ' ಎಂದರು.

ಯಾವ ವಾರ್ಡ್‌ಗಳಿಂದ ತ್ಯಾಜ್ಯ ರವಾನೆ?

ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯ ಜಗಜೀವನರಾಮ್ ನಗರ, ರಾಯಪುರ, ಛಲವಾದಿಪಾಳ್ಯ, ಕೆ.ಆರ್. ಮಾರುಕಟ್ಟೆ (ಮಾರುಕಟ್ಟೆ ಪ್ರದೇಶ ಹೊರತುಪಡಿಸಿ), ಚಾಮರಾಜಪೇಟೆ, ಆಜಾದ್ ನಗರ ವಾರ್ಡ್ ಹಾಗೂ ಗಾಂಧಿನಗರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಕಾಟನ್‌ಪೇಟೆ, ಬಿನ್ನಿಪೇಟೆ, ಚಿಕ್ಕಪೇಟೆ ವಾರ್ಡ್‌ಗಳಿಂದ ಆಟೊಗಳಲ್ಲಿ ಸಂಗ್ರಹವಾಗುವ ತ್ಯಾಜ್ಯ ಬಿನ್ನಿಪೇಟೆಯಲ್ಲಿರುವ 'ದ್ವಿತೀಯ ಹಂತದ ಘನತ್ಯಾಜ್ಯ ವರ್ಗಾವಣೆ ಘಟಕ'ಕ್ಕೆ ರವಾನೆಯಾಗಲಿದೆ.

ಎಲ್ಲೆಲ್ಲಿ ಎಸ್‌ಟಿಎಸ್?

- ಬಿಟಿಎಂ ಲೇಔಟ್ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಈಜಿಪುರದಲ್ಲಿ 2024ರ ಮಾರ್ಚ್ 13ರಂದು ಎಸ್‌ಟಿಎಸ್ ಕಾರ್ಯಾರಂಭ
- ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಛಲವಾದಿಪಾಳ್ಯದಲ್ಲಿ 2024ರ ನವೆಂಬರ್ 28ರಂದು ಚಾಲನೆ
- ಸರ್ವಜ್ಞನಗರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಎಚ್‌ಬಿಆರ್ ಬಡಾವಣೆ ಪ್ರದೇಶದಲ್ಲಿ ಎಸ್‌ಟಿಸ್ ನಿರ್ಮಾಣವಾಗುತ್ತಿದ್ದು, 2025 ಜನವರಿಗೆ ಪೂರ್ಣ

ಸುದ್ದಿ 2 ನಿಮಿಷ

ಬೀದಿ ಬದಿ ವ್ಯಾಪಾರಿಗಳಿಗೆ ಆರ್ಥಿಕ ನೆರವಿಗೆ ಸೂಚನೆ

ಬೆಂಗಳೂರು: ನಗರದ ಬೀದಿ ಬದಿ ವ್ಯಾಪಾರಿಗಳಿಗೆ ಪಿ.ಎಂ ಸ್ವ-ನಿಧಿ ಯೋಜನೆಯಡಿ ನೀಡಲಾಗುವ ಆರ್ಥಿಕ ಬೆಂಬಲ ನೀಡುವ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಬೇಕು ಎಂದು ಬ್ಯಾಂಕ್‌ಗಳ ಪ್ರತಿನಿಧಿಗಳಿಗೆ ಬಿಬಿಎಂಪಿ ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಸೂಚಿಸಿದರು.

ಬ್ಯಾಂಕ್‌ಗಳ ಮುಖ್ಯಸ್ಥರು ಹಾಗೂ ಅಧಿಕಾರಿಗಳ ಜೊತೆ ಗುರುವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ನಗರ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ಕಾಯ್ದೆ- 2014 ಮತ್ತು ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ, ಬೀದಿ ಬದಿ ವ್ಯಾಪಾರದ ನಿಯಂತ್ರಣ ಮತ್ತು ಪರವಾನಗಿ) ಯೋಜನೆ-2020ರಂತೆ ಬೀದಿ ಬದಿ ವ್ಯಾಪಾರಿಗಳಿಗೆ 'ಪಿಎಂ ಸ್ವ ನಿಧಿ' ಯೋಜನೆ ಮುಖಾಂತರ ಬ್ಯಾಂಕುಗಳಿಂದ ಆರ್ಥಿಕ ಬೆಂಬಲ ನೀಡಲಾಗುತ್ತಿದೆ. 75 ಬ್ಯಾಂಕ್‌ಗಳಲ್ಲಿ ಬಾಕಿಯಿರುವ 34,651 ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಬೇಕು' ಎಂದರು.

ಬೀದಿ ಬದಿ ವ್ಯಾಪಾರಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಮೂಲಕ ಅರ್ಹ ಬ್ಯಾಂಕ್‌ಗಳಿಂದ ಮೊದಲನೇ ಹಂತದಲ್ಲಿ ₹10 ಸಾವಿರ, ಎರಡನೇ ಹಂತದಲ್ಲಿ ₹20 ಸಾವಿರ, ಮೂರನೇ ಹಂತದಲ್ಲಿ ₹50 ಸಾವಿರಗಳ ಕಿರು ಸಾಲ ಪಡೆಯಬಹುದಾಗಿದೆ ಎಂದು ಮಾಹಿತಿ ನೀಡಿದರು.

ವ್ಯಾಪಾರ ವಲಯಗಳ ಗುರುತು: ಪಾಲಿಕೆಯ ಎಲ್ಲ ಎಂಟು ವಲಯಗಳಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ವ್ಯಾಪಾರ ವಲಯಗಳನ್ನು ಗುರುತಿಸುವ ಪ್ರಕ್ರಿಯೆ ನಡೆಯುತ್ತಿದೆ. ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆಯೂ ನಡೆಯುತ್ತಿದ್ದು, ಈವರೆಗೆ 20,600ಕ್ಕೂ ಹೆಚ್ಚು ಬೀದಿ ಬದಿ ವ್ಯಾಪಾರಿಗಳನ್ನು ಗುರುತಿಸಲಾಗಿದೆ ಎಂದರು.

ಎಸ್‌ಪಿಬಿ ಸ್ಮಾರಕ ನಿರ್ಮಾಣ ಸಂಗೀತ ಸಂಜೆ ಡಿ. 8ಕ್ಕೆ

ಬೆಂಗಳೂರು: ತಮಿಳುನಾಡಿನ ತಿರುವಳ್ಳುವರ್‌ನಲ್ಲಿ ನಿರ್ಮಾಣಗೊಳ್ಳಲಿರುವ ಗಾಯಕ ಎಸ್‌.ಪಿ. ಬಾಲಸುಬ್ರಹ್ಮಣ್ಯಂ ಅವರ ಸ್ಮಾರಕ ಮತ್ತು ವಸ್ತು ಸಂಗ್ರಾಹಲಯಕ್ಕಾಗಿ ನಿಧಿ ಸಂಗ್ರಹಿಸುವ ಉದ್ದೇಶದಿಂದ ಡಿಸೆಂಬರ್ 8ರಂದು ನಗರದ ಕನಕಪುರ ರಸ್ತೆಯಲ್ಲಿರುವ ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾಮಿಂಗ್ ಆರ್ಟ್ಸ್‌ನಲ್ಲಿ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್‌.ಪಿ. ಬಾಲಸುಬ್ರಹ್ಮಣ್ಯಂ ಅವರ ಪುತ್ರ ಎಸ್‌.ಪಿ. ಚರಣ್, 'ಎಸ್‌.ಪಿ. ಬಾಲಸುಬ್ರಹ್ಮಣ್ಯಂ ಅವರು ಹಾಡಿರುವ ಕನ್ನಡ ಸಿನಿಮಾಗಳ ಜನಪ್ರಿಯ ಹಾಡುಗಳನ್ನು ಹಿನ್ನೆಲೆ ಗಾಯಕರಾದ ರಾಜೇಶ್ ಕೃಷ್ಣನ್, ವಿಜಯ್ ಪ್ರಕಾಶ್ ಮತ್ತು ಇತರೆ ಗಾಯಕರು ಹಾಡಲಿದ್ದಾರೆ, ಸಂಗೀತ ಪ್ರಿಯರನ್ನು ರಂಜಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಡಿ.8ರಂದು ನಡೆಯುವ ಸಂಗೀತ ಕಾರ್ಯಕ್ರಮದ ಮೂಲಕ ನಿಧಿಯನ್ನು ಸಂಗ್ರಹಿಸಿ ಅದನ್ನು ಸ್ಮಾರಕ, ವಸ್ತು ಸಂಗ್ರಹಾಲಯಕ್ಕೆ ನಿರ್ಮಾಣಕ್ಕೆ ಬಳಸಲಾಗುತ್ತದೆ. ಬುಕ್ ಮೈ ಶೋ ಮೂಲಕ ಟಿಕೆಟ್ ಕಾಯ್ದಿರಿಸಬಹುದು' ಎಂದರು.

ಉಪನಗರ ರೈಲು ಯೋಜನೆಗೆ ₹2,135 ಕೋಟಿ: ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ರೈಲ್ವೆ ಯೋಜನೆಗೆ 306 ರೈಲು ಕೋಚ್‌ಗಳ (ರೋಲಿಂಗ್ ಸ್ಟಾಕ್) ಖರೀದಿಗೆ ರಾಜ್ಯದ ಪಾಲು ₹2,135 ಕೋಟಿ ಒದಗಿಸುವ ಪ್ರಸ್ತಾವಕ್ಕೆ ಸಚಿವ ಸಂಪುಟ ಗುರುವಾರ ಒಪ್ಪಿಗೆ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಕಾನೂನು ಸಚಿವ ಎಚ್‌.ಕೆ.ಪಾಟೀಲ, 'ಮುಂದಿನ 5 ವರ್ಷಗಳಲ್ಲಿ 306 ಕೋಚ್‌ಗಳನ್ನು ಖರೀದಿಸಲು ಈ ಮೊತ್ತವನ್ನು ಕೆಆರ್‌ಐಡಿಇಗೆ ಒದಗಿಸಲಾಗುವುದು. ಈ ಯೋಜನೆಯ ಅಂದಾಜು ಮೊತ್ತ ₹4,300 ಕೋಟಿ ಆಗಿದ್ದು, ರಾಜ್ಯವು ₹2,135 ಕೋಟಿ ಭರಿಸಲಿದೆ' ಎಂದರು.

ಆಸ್ತಿ ತೆರಿಗೆ ಸ್ವಯಂ ಪರಿಷ್ಕರಣೆ: ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವಯಂ ಘೋಷಣೆ ಅಡಿ ಆಸ್ತಿ ತೆರಿಗೆಯನ್ನು ಘೋಷಿಸಿಕೊಂಡಿರುವ ಸ್ವತ್ತಿನ ಮಾಲೀಕರು ಮೇಲ್ಮುಖ ಸ್ವಯಂ ಪರಿಷ್ಕರಣೆ ಮಾಡಿಕೊಳ್ಳಲು ಅನುಕೂಲ ಮಾಡಿಕೊಡಲು ಬಿಬಿಎಂಪಿ (ಎರಡನೇ ತಿದ್ದುಪಡಿ) ಮಸೂದೆಯನ್ನು ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಲು ಒಪ್ಪಿಗೆ ನೀಡಲಾಗಿದೆ.

ಸ್ವಯಂ ಪರಿಷ್ಕರಣೆಗೆ ನಿಯಮಗಳಲ್ಲಿ ಅವಕಾಶವಿರದ ಕಾರಣ, ಅನಗತ್ಯ ವಿಳಂಬ ತಪ್ಪಿಸಲು ಬಿಬಿಎಂಪಿ (ತಿದ್ದುಪಡಿ) ಸುಗ್ರೀವಾಜ್ಞೆ 2024 ಹೊರಡಿಸಲಾಗಿತ್ತು. ಸುಗ್ರೀವಾಜ್ಞೆಗೆ ಬದಲಿಗೆ ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಿ, ಅನುಮೋದನೆ ಪಡೆಯಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಚಾಣಕ್ಯ ವಿ.ವಿಗೆ ಸರ್ಕಾರದ ಪ್ರಾತಿನಿಧ್ಯ: ಚಾಣಕ್ಯ ವಿಶ್ವ ವಿದ್ಯಾಲಯದ ಪ್ರಬಂಧಕ ಮಂಡಳಿಗೆ ಸರ್ಕಾರದ ಪ್ರತಿನಿಧಿಯನ್ನು ನೇಮಿಸಲು ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ 2024 ಅನ್ನು ಅಧಿವೇಶನದಲ್ಲಿ ಮಂಡಿಸಲು ಒಪ್ಪಿಗೆ ನೀಡಲಾಗಿದೆ.

ವಂತಿಗೆ ಹೆಚ್ಚಿಸಲು ತಿದ್ದುಪಡಿ: ಕಾರ್ಮಿಕ ಕಲ್ಯಾಣ ಮಂಡಳಿಯ ವಂತಿಗೆ ಮೊತ್ತ ಹೆಚ್ಚಿಸುವ ಉದ್ದೇಶದಿಂದ 'ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ'ಗೆ ತಿದ್ದುಪಡಿ ತರಲಾಗುವುದು. ಇದರಿಂದ ಕಾರ್ಮಿಕ ಕಲ್ಯಾಣ ನಿಧಿಗೆ ಕಾರ್ಮಿಕರಿಂದ ₹50, ಮಾಲೀಕರಿಂದ ಪ್ರತಿ ಕಾರ್ಮಿಕರಿಗೆ ₹100 ಮತ್ತು ಸರ್ಕಾರದಿಂದ ಪ್ರತಿ ಕಾರ್ಮಿಕರಿಗೆ ₹50ರಂತೆ ವಂತಿಗೆ ಹೆಚ್ಚಿಸಲು ತೀರ್ಮಾನಿಸಲಾಗಿದೆ.

ಬಿಎಲ್‌ಆರ್ 'ನಮ್ಮ ಜಾತ್ರೆ'ಗೆ ನಾಳೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್‌ಬಾಕ್ಸಿಂಗ್ ಬಿಎಲ್‌ಆರ್ ಫೌಂಡೇಶನ್ ಆಯೋಜಿಸಿರುವ 'ಬಿಎಲ್‌ಆರ್ ಹಬ್ಬ' ನವೆಂಬರ್ 30ರಂದು ಆರಂಭವಾಗಲಿದ್ದು, ಇದರ ಅಂಗವಾಗಿ 'ನಮ್ಮ ಜಾತ್ರೆ'ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ 'ನಮ್ಮ ಜಾತ್ರೆ' ಆಯೋಜಿಸಲಾಗುತ್ತಿದ್ದು, ರಾಜ್ಯದ ವಿವಿಧ ಭಾಗಗಳಿಂದ 500ಕ್ಕೂ ಹೆಚ್ಚು ಜನಪದ ಕಲಾವಿದರು ನೃತ್ಯ, ಕಲಾ ಪ್ರದರ್ಶನ ನೀಡಲಿದ್ದಾರೆ ಎಂದು ಬಿಎಲ್‌ಆರ್ ಹಬ್ಬದ ಮುಖ್ಯ ಸಂಚಾಲಕ ವಿ. ರವಿಚಂದರ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಮುಂಭಾಗ ನವೆಂಬರ್ 30ರಂದು (ಶನಿವಾರ) ಸಂಜೆ 5ಕ್ಕೆ ಹಬ್ಬಕ್ಕೆ ಚಾಲನೆ ನೀಡಲಿದ್ದಾರೆ. ಅಂದು ಜನಪದ ನೃತ್ಯಗಾರರ ಪ್ರದರ್ಶನ, ಪರಂಪರೆ, ಆಚರಣೆಗಳೊಂದಿಗೆ ಉತ್ಸವ ಪ್ರಾರಂಭಗೊಳ್ಳಲಿದೆ ಎಂದರು.

ನೃತ್ಯಗಾರರು, ಗಾಯಕರು, ಎತ್ತಿನ ಬಂಡಿಗಳು ಮತ್ತು ಹೂವಿನ ಪಲ್ಲಕ್ಕಿಗಳ ಮೂಲಕ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಪರಂಪರೆಯ ಅತ್ಯುನ್ನತ ಅಂಶಗಳನ್ನು ಮೆರವಣಿಗೆಯಲ್ಲಿ ಪ್ರದರ್ಶಿಸಲಾಗುತ್ತದೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದವರ ಚಿತ್ರಮಾಹಿತಿ ಒಳಗೊಂಡ ಹೂವಿನ ಪಲ್ಲಕ್ಕಿಗಳು ಮೆರವಣಿಗೆಯಲ್ಲಿರಲಿವೆ. ವಿಧಾನ ಸೌಧದಿಂದ ಮಹಾತ್ಮ ಗಾಂಧಿ ರಸ್ತೆಯವರೆಗೆ ಮೆರವಣಿಗೆ ಸಂಚರಿಸಲಿದೆ. ರಾತ್ರಿ 10 ಗಂಟೆಯವರೆಗೂ ಮೆಟ್ರೊ ರಂಗೋಲಿ– ಬುಲೇವಾರ್ಡ್‌ನಲ್ಲಿ ಸಂಗೀತ–ನೃತ್ಯ ಪ್ರದರ್ಶನ ನಡೆಯಲಿವೆ ಎಂದು ಮಾಹಿತಿ ನೀಡಿದರು.

ಅನ್‌ಬಾಕ್ಸಿಂಗ್ ಬಿಎಲ್‌ಆರ್ ಫೌಂಡೇಶನ್ ಸಿಇಒ ಮಾಲಿನಿ ಗೋಯಲ್ ಮಾತನಾಡಿ, 'ಬೆಂಗಳೂರಿನ ವಿಶಿಷ್ಟ ಸಾಂಸ್ಕೃತಿಕ ಗುರುತು ಮತ್ತು ಕ್ರಿಯಾತ್ಮಕ ಮನೋಭಾವವನ್ನು ಆಚರಿಸಲು ಬಿಎಲ್‌ಆರ್ ಹಬ್ಬದಲ್ಲಿ ವೇದಿಕೆ ಸಿದ್ಧಪಡಿಸಲಾಗಿದೆ' ಎಂದರು.

ನವೆಂಬರ್ 30ರಿಂದ ಡಿಸೆಂಬರ್ 15ರವರೆಗೆ 16 ದಿನ ನಡೆಯುವ ಬಿಎಲ್‌ಆರ್ ಹಬ್ಬದ ಸಂಪೂರ್ಣ ಮಾಹಿತಿಯನ್ನು ವೆಬ್‌ಸೈಟ್ https://blrhubba.in ನಲ್ಲಿ ಪಡೆಯಬಹುದು ಎಂದು ತಿಳಿಸಿದರು.

ಟ್ರೆಂಡ್ಸ್‌ನಲ್ಲಿ ವಿಶೇಷ ಕೊಡುಗೆ ಆರಂಭ

ಮುಂಬೈ (ಪಿಟಿಐ): 'ಬ್ಲ್ಯಾಕ್ ಫ್ರೈಡೇ' ಆಚರಣೆ ಅಂಗವಾಗಿ ರಿಲಯನ್ಸ್‌ನ ಟ್ರೆಂಡ್ಸ್, ತನ್ನ ಮಳಿಗೆಗಳಲ್ಲಿ ಉಡುಪು ಖರೀದಿಸುವ ಗ್ರಾಹಕರಿಗೆ ವಿಶೇಷ ಕೊಡುಗೆಗಳನ್ನು ಪ್ರಕಟಿಸಿದೆ.

₹3,499 ಮೌಲ್ಯದ ಉಡುಪುಗಳನ್ನು ಖರೀದಿಸಿದವರಿಗೆ ₹2 ಸಾವಿರ ಮೌಲ್ಯದ ಉತ್ಪನ್ನಗಳನ್ನು ಉಚಿತವಾಗಿ ನೀಡಲಿದೆ. ಈ ವಿಶೇಷ ಕೊಡುಗೆಯು ನವೆಂಬರ್ 28ರಿಂದ ಡಿಸೆಂಬರ್ 1ರವರೆಗೆ ಇರಲಿದೆ ಎಂದು ಕಂಪನಿ ತಿಳಿಸಿದೆ.

ಗ್ರಾಹಕರು ಹತ್ತಿರದ ಟ್ರೆಂಡ್ಸ್ ಮಳಿಗೆಗಳಿಗೆ ಭೇಟಿ ನೀಡಿ ಈ ಕೊಡುಗೆಯ ಪ್ರಯೋಜನ ಪಡೆಯಬಹುದು ಎಂದು ತಿಳಿಸಿದೆ.

ಏನಿದು ಬ್ಲ್ಯಾಕ್ ಫ್ರೈಡೇ?: ಬ್ಲ್ಯಾಕ್ ಫ್ರೈಡೇ ಎಂಬುದು ರಜಾ ದಿನಗಳ ಆರಂಭದ ಸೂಚಕವಾಗಿದೆ. ಸಾಮಾನ್ಯವಾಗಿ ಅಮೆರಿಕದಲ್ಲಿ ಥ್ಯಾಂಕ್ಸ್ ಗೀವಿಂಗ್ ಡೇ ಆದ ಮಾರನೇ ದಿನ ಅಂದರೆ ನವೆಂಬರ್ ತಿಂಗಳ ನಾಲ್ಕನೇ ಗುರುವಾರ ನಡೆಯುತ್ತದೆ. ಬ್ಲ್ಯಾಕ್ ಫ್ರೈಡೇ ಎಂಬುದು ಆರಂಭವಾಗಿದ್ದು ಅಮೆರಿಕದಲ್ಲಿ. ಆ ನಂತರ ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆಯಿತು.

ಟಿಕೆಟ್ ರಹಿತ ಪ್ರಯಾಣ: 8,891 ಮಂದಿಗೆ ದಂಡ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಮೂರು ತಿಂಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸಿದ 8,891 ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ.

ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ 57,219 ಟ್ರಿಪ್‌ಗಳನ್ನು ತಪಾಸಣೆ ನಡೆಸಲಾಗಿತ್ತು. ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 8,891 ಮಂದಿಯಿಂದ ₹17.96 ಲಕ್ಷ ದಂಡ ವಸೂಲಿ ಮಾಡಲಾಗಿದೆ. ಕರ್ತವ್ಯಲೋಪ ಎಸಗಿದ ಕಾರಣಕ್ಕಾಗಿ ಸಂಸ್ಥೆಯ 5,268 ನಿರ್ವಾಹಕರ ವಿರುದ್ಧ ಪ್ರಕರಣಗಳು ದಾಖಲಾಗಿವೆ.

ಮಹಿಳಾ ಪ್ರಯಾಣಿಕರಿಗೆಂದೇ ಮೀಸಲಾಗಿರುವ ಆಸನಗಳಲ್ಲಿ ಕುಳಿತು ಪ್ರಯಾಣಿಸಿದ 1,178 ಪುರುಷರಿಗೆ ₹1,17,800 ದಂಡ ವಿಧಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಡೆಕ್ಕನ್ ಹೆರಾಲ್ಡ್ ಇನ್ ಎಜುಕೇಶನ್ (ಡಿ.ಎಚ್‌.ಐ.ಇ) ಸರ್ಕಾರಿ ನೌಕರರ ಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಸ್ಪೆಲ್ ಬೀ' ಅಂತರಶಾಲಾ ಸ್ಪರ್ಧೆಯಲ್ಲಿ ವಿಜೇತರಾದ (ನಿಂತವರು ಎಡದಿಂದ–ಹಿರಿಯರ ವಿಭಾಗ) ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲೆಯ ಸಿದ್ದಾರ್ಥ ಮುತ್ತಪ್ಪ (ಪ್ರಥಮ), ಎನ್‌ಪಿಎಸ್ ಕೋರಮಂಗಲದ ಸುಯಶ್ ಮಂಚಾಲಿ (ದ್ವಿತೀಯ), ವೇದಾರ್ಥ ದೀಪಕ್ ಸಾವಂತ್ (ತೃತೀಯ), (ಕುಳಿತವರು ಎಡದಿಂದ–ಕಿರಿಯರ ವಿಭಾಗ) ಯಶವಂತಪುರದ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಧೃತಿ ಮಧುಕರ್, (ಪ್ರಥಮ), ಅರ್ಹಮ್ ಸಿದ್ದಿಕಿ (ದ್ವಿತೀಯ ಸ್ಥಾನ), ಸೇಂಟ್ ಜೋಸೆಫ್ಸ್ ಬಾಲಕರ ಪ್ರೌಢಶಾಲೆಯ ಇವಾನ್ ಝೇವಿಯರ್ (ತೃತೀಯ ಸ್ಥಾನ) ಅವರಿಗೆ ಪ್ರಮಾಣಪತ್ರ ವಿತರಿಸಲಾಯಿತು. ಕ್ವಿಜ್ ಮಾಸ್ಟರ್ ಪ್ರೊ. ಅರುಲ್ ಮಣಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಬ್ಯಾಟರಾಯನಪುರ: ಸಾಮೂಹಿಕ ಸೀಮಂತ ಕಾರ್ಯಕ್ರಮ

60 ಗರ್ಭಿಣಿಯರಿಗೆ ಸೀಮಂತ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಮಾರೇನಹಳ್ಳಿ ಗ್ರಾಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಮಾರೇನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ 60 ಗರ್ಭಿಣಿಯರಿಗೆ ಸಾಮೂಹಿಕ ಸೀಮಂತ ಮಾಡಲಾಯಿತು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಕೃಷ್ಣ ಬೈರೇಗೌಡ ಮಾತನಾಡಿ, 'ಪ್ರತಿ ಹೆಣ್ಣಿನ ಬಾಳಿನಲ್ಲಿ ತಾಯ್ತನ ಮಹತ್ತರ ಘಟ್ಟವಾಗಿದ್ದು, ಸಮಾಜ ಆಕೆಯನ್ನು ಪ್ರೀತಿ ಆದರದಿಂದ ಕಾಣಬೇಕು. ಎಷ್ಟೋ ಕುಟುಂಬಗಳಲ್ಲಿ ಗರ್ಭಿಣಿಯರಿಗೆ ಸೀಮಂತಕಾರ್ಯ ನೆರವೇರಿಸಲು ಕಷ್ಟ ಇರುತ್ತದೆ. ಸಾಮೂಹಿಕವಾಗಿ ಸೀಮಂತಕಾರ್ಯ ನೆರವೇರಿಸುವ ಮೂಲಕ ಅವರ ಬಾಳಿನಲ್ಲಿ ಸಂತಸ ಮೂಡುವಂತೆ ಮಾಡಲಾಗಿದೆ' ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಹುಲ್ ಪಿ. ಮಾತನಾಡಿ, 'ಮಹಿಳಾ ಸಬಲೀಕರಣ ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಪಂಚಾಯಿತಿ ವ್ಯಾಪ್ತಿಯಲ್ಲಿರುವ 10 ಗ್ರಾಮಗಳ 60ಕ್ಕೂ ಹೆಚ್ಚು ಗರ್ಭಿಣಿಯರಿಗೆ ಸೀಮಂತ ನೆರವೇರಿಸಲಾಗಿದೆ. 50 ಮಹಿಳೆಯರಿಗೆ ಉಚಿತವಾಗಿ ಹೊಲಿಗೆಯಂತ್ರ ವಿತರಿಸಲಾಗಿದೆ' ಎಂದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಕುಂತಲಾ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ನಾಗರಾಜ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ವಿ.ನಂಜೇಗೌಡ, ಬಿ.ಎ.ಪ್ರೇಮಾ, ರತ್ನಮ್ಮ, ಸುಮಿತ್ರಮ್ಮ, ಶ್ರುತಿ, ಸದಸ್ಯೆ ಗೀತಾ ಆನಂದ್‌ಕುಮಾರ್, ಪಿಡಿಒ ಸುಮ ಟಿ.ಪಿ., ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಚೊಕ್ಕನಹಳ್ಳಿ ಮುನಿರಾಜು, ಸ್ಥಳೀಯ ಮುಖಂಡ ಚಿಕ್ಕಪ್ಪಯ್ಯ ಚಾಗಲೆಟ್ಟಿ ಉಪಸ್ಥಿತರಿದ್ದರು.

ಬ್ಯಾಟರಾಯನಪುರ ಕ್ಷೇತ್ರದ ಮಾರೇನಹಳ್ಳಿಯಲ್ಲಿ ಸಾಮೂಹಿಕ ಸೀಮಂತ ಕಾರ್ಯಕ್ರಮ ನಡೆಯಿತು

ಮಹಿಳೆಯರು ವಾಹನ ಚಲಾಯಿಸಿದರೆ ನಿಯಮ ಪಾಲನೆ– ಡಿಸಿಪಿ ಅನಿತಾ

ವಾಣಿಜ್ಯ ವಾಹನ: ಮಹಿಳೆಯರಿಗೆ ಡಿಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಮಕ್ಕಳು ವಾಣಿಜ್ಯ ವಾಹನಗಳ ಚಾಲಕರಾದರೆ ಮದ್ಯಪಾನ ಮಾಡಿ ಚಾಲನೆ ಮಾಡುವ ಪ್ರಕರಣ, ಅತಿವೇಗದ ಚಾಲನೆ ಪ್ರಕರಣಗಳೆಲ್ಲ ಕಡಿಮೆಯಾಗಲಿವೆ ಎಂದು ಬೆಂಗಳೂರು ಪಶ್ಚಿಮ ವಲಯ ಸಂಚಾರ ಪೊಲೀಸ್ ವಿಭಾಗದ ಡಿಸಿಪಿ ಅನಿತಾ ಬಿ. ಹದ್ದಣ್ಣವರ್ ತಿಳಿಸಿದರು.

ವಾಣಿಜ್ಯ ವಾಹನಗಳ ಚಾಲನಾ ತರಬೇತಿ ಪಡೆದ ಮಹಿಳೆಯರಿಗೆ ರಾಜ್ಯ ಮಹಿಳಾ ಉದ್ಯಮಿಗಳ ಸಂಸ್ಥೆ (ಅವೇಕ್) ಇದರ 41ನೇ ಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಗುರುವಾರ ಚಾಲನಾ ರಹದಾರಿ (ಡಿಎಲ್) ವಿತರಿಸಿ ಅವರು ಮಾತನಾಡಿದರು.

'ಅಂಗನವಾಡಿ ಎಂದರೆ ಅಲ್ಲಿ ಮಹಿಳೆಯರೇ ಇರಬೇಕು, ಚಾಲಕರು ಅಂದರೆ ಪುರುಷರೇ ಇರಬೇಕು ಎಂಬ ಅಲಿಖಿತ ನಿಯಮ ನಮ್ಮ ತಲೆಯೊಳಗೆ ಕುಳಿತುಬಿಟ್ಟಿದೆ. ಇದನ್ನು ಮೀರಲು 'ಅವೇಕ್' ಚಾಲನೆ ಸಂಸ್ಥೆ ಮತ್ತು ಸಾರಿಗೆ ಇಲಾಖೆಗಳ ಸಹಯೋಗದಲ್ಲಿ 80 ಮಹಿಳೆಯರಿಗೆ ವಾಣಿಜ್ಯ ವಾಹನ ಚಾಲನಾ ತರಬೇತಿ ಕೊಡಿಸುವ ಮೂಲಕ ಉತ್ತಮ ಕಾರ್ಯ ಮಾಡಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಚಾಲಕರಾದಾಗ ನಿಮ್ಮ ಮೇಲೆ ಹಲವು ಜವಾಬ್ದಾರಿಗಳು ಬಂದುಬಿಡುತ್ತವೆ. ಮೊದಲು ನಿಮ್ಮನ್ನು ನೀವು ರಕ್ಷಿಸಿಕೊಳ್ಳುವುದನ್ನು ಕಲಿಯಬೇಕು. ನಿಮ್ಮನ್ನು ನಂಬಿರುವ ನಿಮ್ಮ ಕುಟುಂಬದ ಜವಾಬ್ದಾರಿಯೂ ನಿಮ್ಮ ಮೇಲಿದೆ. ನಿಮ್ಮ ವಾಹನದಲ್ಲಿ ಬರುವ ಪ್ರಯಾಣಿಕರನ್ನು ಸುರಕ್ಷಿತವಾಗಿ ತಲುಪಿಸುವ ಜವಾಬ್ದಾರಿಯೂ ನಿಮ್ಮ ಮೇಲಿದೆ' ಎಂದು ತಿಳಿಸಿದರು.

'ಆರ್ಥಿಕ ಭದ್ರತೆಯನ್ನು ಕಾಪಾಡಿಕೊಳ್ಳಬೇಕು. ನಷ್ಟ ಮಾಡಿಕೊಳ್ಳಲು ಹೋಗಬಾರದು. 20 ದಿನಗಳ ತರಬೇತಿ ಪಡೆದ ಕೂಡಲೇ ಉತ್ತಮ ಚಾಲಕರಾಗುವುದಿಲ್ಲ. ನಿತ್ಯ ಕಲಿಯುವುದಿರುತ್ತದೆ. ನಿರಂತರವಾಗಿ ವಾಹನ ಚಾಲನೆಯಲ್ಲಿ ತೊಡಗಿಕೊಂಡಿರಬೇಕು. ನನ್ನಿಂದ ಸಾಧ್ಯ ಎಂಬ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು. ಕುಟುಂಬದವರು ಕೂಡ ಪ್ರೋತ್ಸಾಹ ನೀಡಬೇಕು' ಎಂದು ಸಲಹೆ ನೀಡಿದರು.

ಎಲ್ಲ ಪ್ರಯಾಣಿಕರು ಒಳ್ಳೆಯವರು ಇರುತ್ತಾರೆ ಎಂದು ಅಂದುಕೊಳ್ಳಬೇಕಿಲ್ಲ. ಕೆಲವರು ಕೆಟ್ಟವರೂ ಇರುತ್ತಾರೆ. ಯಾವುದೇ ತೊಂದರೆ ಎದುರಾದರೆ 'ಸೇಫ್ಟಿ ಸಿಟಿ' ಆ್ಯಪ್ ಬಳಸಿ. ಆಗ ನೀವು ಪೊಲೀಸರ ಕಣ್ಗಾವಲಲ್ಲಿ ಇರುತ್ತೀರಿ. ಜೊತೆಗೆ 112ಗೆ ಕರೆ ಮಾಡಿ. ಬೆಂಗಳೂರು ನಗರ ವ್ಯಾಪ್ತಿಯಲ್ಲಿದ್ದರೆ ಕರೆ ಮಾಡಿದ ಆರೇಳು ನಿಮಿಷಗಳ ಒಳಗೆ ಪೊಲೀಸರು ನಿಮ್ಮ ರಕ್ಷಣೆಗೆ ಧಾವಿಸಲಿದ್ದಾರೆ ಎಂದರು.

'ಸಿಡ್ಬಿ' ವ್ಯವಸ್ಥಾಪಕಿ ಸ್ವಾತಿ, ಮಾಂಡೋವಿ ಮೋಟರ್ಸ್ ಕಾರ್ಪೊರೇಟ್ ಮ್ಯಾನೇಜರ್ ಕಿರಣ್, ಕಾಸಿಯಾ ಪ್ರಧಾನ ಕಾರ್ಯದರ್ಶಿ ಸುರೇಶ್ ಸಾಗರ್, ಕರ್ನಾಟಕ ರಾಜ್ಯ ಟ್ರಾವೆಲ್ ಆಪರೇಟರ್ಸ್ ಅಸೋಸಿಯೇಷನ್ ಅಧ್ಯಕ್ಷ ರಾಧಾಕೃಷ್ಣ ಹೊಳ್ಳ, 'ಅವೇಕ್' ಅಧ್ಯಕ್ಷೆ ಆಶಾ ಎನ್. ಆರ್., ನಿಕಟಪೂರ್ವ ಅಧ್ಯಕ್ಷೆ ರಾಜೇಶ್ವರಿ ಆರ್., ಉಪಾಧ್ಯಕ್ಷೆ ಭುವನೇಶ್ವರಿ ಸಿ., ಕಾರ್ಯದರ್ಶಿ ಜಗದೀಶ್ವರಿ, ಖಜಾಂಚಿ ಸುಜಾತಾ ವಿ., ಜಂಟಿ ಕಾರ್ಯದರ್ಶಿ ರೇಣುಕಾ ಮನೋಜ್ ಭಾಗವಹಿಸಿದ್ದರು.

ವಾಣಿಜ್ಯ ವಾಹನಗಳ ಚಾಲನಾ ತರಬೇತಿ ಪಡೆದ ಮಹಿಳೆಯರಿಗೆ ಗುರುವಾರ ನಡೆದ ಅಸೋಸಿಯೇಶನ್ ಆಫ್ ವುಮೆನ್ ಎಂಟರ್‌ಪ್ರಿನರ್‌ಶಿಪ್ ಆಫ್ ಕರ್ನಾಟಕ (ಅವೇಕ್) ಇದರ 41ನೇ ಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಚಾಲನಾ ರಹದಾರಿ(ಡಿಎಲ್) ವಿತರಿಸಲಾಯಿತು. ಪ್ರಜಾವಾಣಿ ಚಿತ್ರ

ಕಲಾಸಿಪಾಳ್ಯ ಠಾಣೆ ಪೊಲೀಸರ ಕಾರ್ಯಾಚರಣೆ: ಐವರ ಬಂಧನ

ಮಾರಕಾಸ್ತ್ರ ತೋರಿಸಿ ದರೋಡೆ

ಪ್ರಜಾವಾಣಿ ವಾರ್ತೆ

ಮೊಹಮ್ಮದ್ ಮುಯಿಜ್

ಶೋಯೆಬ್ ಪಾಷಾ

ಉಮರ್ ಅಹ್ಮದ್

ಯಾಸಿನ್

ಶಹಜಾದ್ ಪಾಷಾ

ಬೆಂಗಳೂರು: ವಾಹನ ಬಿಡಿ ಭಾಗಗಳ ಅಂಗಡಿಯ ನೌಕರ ವಾಸವಿದ್ದ ಕೊಠಡಿಗೆ ನುಗ್ಗಿ ಮಾರಾಕಾಸ್ತ್ರಗಳನ್ನು ತೋರಿಸಿ ಬೆದರಿಸಿ, ಹಣ, ಮೊಬೈಲ್ ದೋಚಿ ಪರಾರಿಯಾಗಿದ್ದ ಐವರು ಆರೋಪಿಗಳನ್ನು ಕಲಾಸಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದೊಡ್ಡ ಮಾವಳ್ಳಿ ನಿವಾಸಿಗಳಾದ ಉಮರ್ ಅಹ್ಮದ್, ಮೊಹಮ್ಮದ್ ಮುಯಿಜ್, ಆರ್.ಟಿ.ನಗರದ ಶಹಜಾದ್ ಪಾಷಾ, ಮೊಹಮ್ಮದ್ ಶೋಯೆಬ್ ಪಾಷಾ ಹಾಗೂ ಕಲಾಸಿಪಾಳ್ಯದ ಯಾಸಿನ್ ಅಹಮದ್ ಶರೀಫ್ ಅವರನ್ನು ಬಂಧಿಸಿ, ₹11.30 ಲಕ್ಷ ನಗದು, ₹6 ಲಕ್ಷ ಬೆಲೆಯ ಏಳು ಮೊಬೈಲ್, ಕೃತ್ಯಕ್ಕೆ ಬಳಸಿದ್ದ ಕಾರು, ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

ಸಿದ್ದಯ್ಯ ರಸ್ತೆಯಲ್ಲಿನ ಸಿಟಿ ಯೂನಿಯನ್ ಬ್ಯಾಂಕ್ ಕಟ್ಟಡದ ನಾಲ್ಕನೇ ಮಹಡಿಯ ಕೊಠಡಿಯೊಂದರಲ್ಲಿ ರಾಮ್ ಪ್ರಸಾದ್ ಪಂಡಿತ್ ಎಂಬುವರು ವಾಸವಿದ್ದರು. ವಾಹನದ ಬಿಡಿ ಭಾಗಗಳ ಅಂಗಡಿಯ ಮಾಲೀಕರು ₹15 ಲಕ್ಷ ಹಣವನ್ನು ಬ್ಯಾಂಕ್‌ಗೆ ಜಮಾ ಮಾಡಲು ನೀಡಿದ್ದರು. ಆ ಹಣವನ್ನು ತಮ್ಮ ಕೊಠಡಿಯಲ್ಲಿ ಇಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ನ.19ರಂದು ಬೆಳಗಿನ ಜಾವ 4 ಗಂಟೆಗೆ ದರೋಡೆಕೋರರು ಇವರ ಕೊಠಡಿಗೆ ನುಗ್ಗಿ ಮಾರಕಾಸ್ತ್ರಗಳಿಂದ ಬೆದರಿಸಿ, ₹15 ಲಕ್ಷ ನಗದು ಹಾಗೂ ಎರಡು ಮೊಬೈಲ್‌ಗಳನ್ನು ದೋಚಿ ಪರಾರಿಯಾಗಿದ್ದರು. ಈ ಬಗ್ಗೆ ರಾಮ್‌ಪ್ರಸಾದ್ ಪಂಡಿತ್ ಅವರು ಕಲಾಸಿಪಾಳ್ಯ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ವಿವಿಧ ಆಯಾಮಗಳಲ್ಲಿ ಮಾಹಿತಿ ಕಲೆ ಹಾಕಿ ಆರೋಪಿಗಳನ್ನು ಬಂಧಿಸಿದ್ದಾರೆ.

ಚಲಿಸುತ್ತಿದ್ದ ಕಾರಿನ ಮೇಲೆ ಬಿದ್ದ ಮೆಟ್ರೊ ಪಿಲ್ಲರ್ ಇಟ್ಟಿಗೆ ಚೂರು

ಅಪರಾಧ ಸುದ್ದಿ

ಬೆಂಗಳೂರು: ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯ ಮೈಸೂರು ರಸ್ತೆಯ ಮೆಟ್ರೊ ಪಿಲ್ಲರ್ 393ರ ಬಳಿ ಚಲಿಸುತ್ತಿದ್ದ ಕಾರಿನ ಮೇಲೆ ಮೆಟ್ರೊ ಪಿಲ್ಲರ್‌ನ ಇಟ್ಟಿಗೆ ಚೂರು ಬಿದ್ದು, ಕಾರಿಗೆ ಹಾನಿಯಾಗಿದೆ.

ಈ ಸಂಬಂಧ ಬಾಗಲೂರು ನಿವಾಸಿ ನವೀನ್ ರಾಜ್ ಎಂಬವರು ಬ್ಯಾಟರಾಯನಪುರ ಠಾಣೆಗೆ ಬಿಎಂಆರ್‌ಸಿಎಲ್ ಅಧಿಕಾರಿಗಳ ವಿರುದ್ಧ ಮಂಗಳವಾರ ದೂರು ನೀಡಿದ್ದಾರೆ.

ನವೀನ್ ರಾಜ್ ಮಂಗಳವಾರ ಮಧ್ಯಾಹ್ನ ಕುಟುಂಬ ಸದಸ್ಯರ ಜತೆಗೆ ತಮ್ಮ ಕಾರಿನಲ್ಲಿ ಕೆಂಗೇರಿ ಕಡೆಗೆ ಕಾರ್ಯಕ್ರಮಕ್ಕೆ ತೆರಳುತ್ತಿದ್ದರು. ಮೆಟ್ರೊ ಪಿಲ್ಲರ್ 393ರ ಬಳಿ ಸಿಮೆಂಟ್ ಇಟ್ಟಿಗೆಯ ಚೂರು ಕಾರಿನ ಮೇಲೆ ಬಿದ್ದಿವೆ. ಕಾರಿನ ಗಾಜಿನ ಮೇಲೆ ಏಕಾಏಕಿ ಇಟ್ಟಿಗೆಯ ಚೂರುಗಳು ಬಿದ್ದಿದ್ದರಿಂದ ಒಳಗಿದ್ದವರು ಗಾಬರಿಗೊಂಡಿದ್ದರು. ಕಾರಿನ ಸನ್ ರೂಫ್ ಮತ್ತು ಮುಂಭಾಗದ ಗಾಜು ಜಖಂಗೊಂಡಿದೆ. ಮೆಟ್ರೊ ರೈಲು ಚಲಿಸುವಾಗ ಉಂಟಾದ ಕಂಪನದಿಂದ ಇಟ್ಟಿಗೆ ಬಿದ್ದಿದೆ ಎಂದು ಮೂಲಗಳು ತಿಳಿಸಿವೆ.

‘ಬಿಎಂಆರ್‌ಸಿಎಲ್‌ನ ಅಧಿಕಾರಿಗಳನ್ನು ಸಂಪರ್ಕಿಸಲು ಯತ್ನಿಸಿದರೂ ಯಾವುದೇ ಪ್ರಯೋಜನ ಆಗಿಲ್ಲ’ ಎಂದು ದೂರುದಾರ ನವೀನ್ ರಾಜ್ ಅವರು ಹೇಳಿದ್ದಾರೆ.

‘ಬಿಎಂಆರ್‌ಸಿಎಲ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು, ಪರಿಹಾರ ಕೊಡಿಸುವಂತೆ ದೂರು ನೀಡಿದ್ದಾರೆ. ವಿಚಾರಣೆ ನಡೆಸಬೇಕಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಈ ಸಂಬಂಧ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೇಣು ಹಾಕಿಕೊಂಡು ಯುವಕ ಆತ್ಮಹತ್ಯೆ

ನೆಲಮಂಗಲ: ಛಾಯಾಚಿತ್ರ ಹಾಗೂ ವಿಡಿಯೊಗ್ರಫಿ ಮಾಡಿಕೊಂಡಿದ್ದ ಕೆ.ಆರ್. ಪೇಟೆ ಮೂಲದ ಕಿರಣ್(39) ಎಂಬಾತ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹಲವು ವರ್ಷಗಳಿಂದ ಬೆಂಗಳೂರು ಉತ್ತರ ತಾಲ್ಲೂಕು ಕಡಬಗೆರೆ ಕ್ರಾಸ್ ಬಳಿ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ನಾಲ್ಕು ವರ್ಷಗಳ ಹಿಂದೆ ಚಿಕ್ಕಮಗಳೂರಿನ ನಿಶ್ಚಿತಾ ಎಂಬುವವರನ್ನು ಪ್ರೀತಿಸಿ ಮದುವೆಯಾಗಿದ್ದರು. ಮೃತ ಯುವಕ ಹಿಂದೆ ಕೆಲವು ಸುದ್ದಿ ವಾಹಿನಿಗಳಲ್ಲಿ ಕ್ಯಾಮೆರಾ ಮನ್ ಆಗಿ ಕಾರ್ಯನಿರ್ವಹಿಸಿದ್ದರು.

ಮಾದನಾಯಕನಹಳ್ಳಿ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದು, ಯಾವ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವುವುದು ತಿಳಿದುಬಂದಿಲ್ಲ ಎಂದು ಇನ್‌ಸ್ಪೆಕ್ಟರ್ ಮುರಳೀಧರ್ ತಿಳಿಸಿದ್ದಾರೆ.

ಜೀವಾ ಆತ್ಮಹತ್ಯೆ: ಸಿಸಿಬಿ ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೋವಿ ಅಭಿವೃದ್ಧಿ ನಿಗಮದಲ್ಲಿನ ಅಕ್ರಮದ ಕುರಿತು ಸಿಐಡಿ ತನಿಖೆ ಎದುರಿಸಿದ್ದ ವಕೀಲೆ ಎಸ್ . ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆಯ ವಿವರಗಳನ್ನು ಒದಗಿಸುವಂತೆ ಹೈಕೋರ್ಟ್ ಸೂಚಿಸಿದ ಬೆನ್ನಲ್ಲೇ ಸಿಸಿಬಿ ಪೊಲೀಸರು ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ಜೀವಾ ಆತ್ಮಹತ್ಯೆಯ ಕುರಿತು ಅವರ ಕುಟುಂಬದವರ ಹೇಳಿಕೆ ಪಡೆಯಲು ಸಿದ್ಧತೆ ಮಾಡಿಕೊಂಡಿದ್ದು, ಆತ್ಮಹತ್ಯೆಗೂ ಮುನ್ನ ಬರೆದ ಪತ್ರದ ನೈಜತೆ ಪರಿಶೀಲಿಸಲು ಎಫ್‌ಎಸ್‌ಎಲ್‌ಗೆ ರವಾನಿಸಲಾಗಿದೆ. ನಂತರ ಸಿಐಡಿ ಅಧಿಕಾರಿಗಳಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗುವುದು ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಘಟನೆ ಸಂಬಂಧ ಸಾಕ್ಷ್ಯಗಳನ್ನು ಕಲೆಹಾಕಲಾಗುತ್ತಿದೆ. ಜೀವಾ ಅವರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಆಗಿದೆಯೇ? ಎಷ್ಟು ಬಾರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಚಾರಣೆ ಎದುರಿಸಿದ್ದಾರೆ? ಎಂಬುದು ಸೇರಿದಂತೆ ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ.

ಪ್ರಕರಣದ ಹಿನ್ನೆಲೆ: ಭೋವಿ ಅಭಿವೃದ್ಧಿ ನಿಗಮದ ಫಲಾನುಭವಿಗಳಿಗೆ ಸಾಮಗ್ರಿ ಪೂರೈಸುತ್ತಿದ್ದ ಎಸ್ . ಜೀವಾ ಅವರು ಬನಶಂಕರಿ ಠಾಣೆ ವ್ಯಾಪ್ತಿಯ ರಾಘವೇಂದ್ರ ಲೇಔಟ್‌ನಲ್ಲಿರುವ ಮನೆಯಲ್ಲಿ ಮರಣಪತ್ರ ಬರೆದಿಟ್ಟು ನ. 22ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು.

ಪ್ರಕರಣದ ವಿಚಾರಣೆಗೆ ಹಾಜರಾಗಿದ್ದ ಜೀವಾಗೆ ಸಿಐಡಿಯ ಡಿವೈಎಸ್‌ಪಿ ಕನಕಲಕ್ಷ್ಮಿ ಮಾನಸಿಕ ಕಿರುಕುಳ ನೀಡಿದ್ದಾರೆ ಹಾಗೂ ₹25 ಲಕ್ಷ ಲಂಚಕ್ಕೆ ಬೇಡಿಕೆಯಿಟ್ಟಿದ್ದಾರೆ ಎಂದು ಮೃತಳ ಸಹೋದರಿ ಸಂಗೀತಾ ಆರೋಪಿಸಿದ್ದರು.

‘ಜೀವಾ ಆತ್ಮಹತ್ಯೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಮತ್ತು ಆತ್ಮಹತ್ಯೆಗೆ ಪ್ರಚೋದನೆ ನೀಡಿದ ರೆನ್ನಲಾದ ಡಿವೈಎಸ್‌ಪಿ ಕನಕಲಕ್ಷ್ಮೀ ಅವರನ್ನು ಬಂಧಿಸಬೇಕು’ ಎಂದು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಆಗ್ರಹಿಸಿದ್ದಾರೆ.

‘ಆತ್ಮಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಹೈಕೋರ್ಟ್‌ನಲ್ಲಿ ಅರ್ಜಿ ಹಾಕಿದ ಕೂಡಲೇ ನಗರ ಪೊಲೀಸ್ ಕಮಿಷನರ್ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಿದ್ದಾರೆ. ಸಿಸಿಬಿಯವರು ಯಾವುದೇ ತನಿಖೆ ಮಾಡದೇ ಸುಮ್ಮನಿದ್ದಾರೆ. ಉನ್ನತ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಹೆದರುತ್ತಿದ್ದಾರೆ. ಡಿವೈಎಸ್‌ಪಿ ಕನಕಲಕ್ಷ್ಮೀ ಬಂಧನವಾಗಬೇಕು’ ಎಂದು ಒತ್ತಾಯಿಸಿದ್ದಾರೆ.

ಕಿರುತೆರೆ ನಟಿ ದೀಪಿಕಾ ದಾಸ್ ತಾಯಿಗೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಶವಂತ ಎಂಬಾತ ಮಧ್ಯರಾತ್ರಿ ಕರೆ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ, ಬೆದರಿಕೆ ಹಾಕಿದ್ದಾನೆ’ ಎಂದು ಕಿರುತೆರೆ ನಟಿ ದೀಪಿಕಾ ದಾಸ್ ತಾಯಿ ಪದ್ಮಲತಾ ಅವರು ಮಾದನಾಯಕನಹಳ್ಳಿ ಪೊಲೀಸರಿಗೆ ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗೆ ಹುಡುಕಾಟ ನಡೆಸಿದ್ದಾರೆ.

‘ಚಲನಚಿತ್ರ ನಟಿಯಾಗಿರುವ ನನ್ನ ಮಗಳು ದೀಪಿಕಾ ದಾಸ್, ಎಂಟು ತಿಂಗಳ ಹಿಂದೆ ದೀಪಕ್ ಕುಮಾರ್ ಎನ್ನುವವರ ಜೊತೆ ವಿವಾಹವಾಗಿದ್ದಾಳೆ. ಮಗಳು ಮತ್ತು ಅಳಿಯ ಒಂದು ತಿಂಗಳ ಹಿಂದೆ ಇಂಗ್ಲೆಂಡ್ ಪ್ರವಾಸಕ್ಕೆ ಹೋಗಿದ್ದರು. ಈಗ ಅಪರಿಚಿತ ವ್ಯಕ್ತಿಯೊಬ್ಬ ನನಗೆ ಫೋನ್ ಮಾಡಿ ನಿಮ್ಮ ಮಗಳಿಗೆ ಯಾಕೆ ಮದುವೆ ಮಾಡಿದ್ದೀರಿ? ಅಳಿಯ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿ ಜನರಿಗೆ ಮೋಸ ಮಾಡಿದ್ದಾರೆ ಎಂದು ಹೇಳಿದ್ದ. ಹಾಗೇನಾದರೂ ಇದ್ದರೆ ಕಾನೂನು ಪ್ರಕಾರ ದೂರು ನೀಡುವಂತೆ ನಾನು ಹೇಳಿದ್ದೆ’ ಎಂದು ಪದ್ಮಾಲತಾ ದೂರಿನಲ್ಲಿ ತಿಳಿಸಿದ್ದಾರೆ.

‘ಕೆಲ ದಿನಗಳ ನಂತರ ದೀಪಿಕಾಗೆ ಕರೆ ಮಾಡಿದ್ದ ವ್ಯಕ್ತಿ, ನಿಮ್ಮ ಯಾಜಮಾನರು ಮೋಸ ಮಾಡಿದ್ದು ತಿಳಿದಿಲ್ಲವೆ? ಪುನೀತ್ ರಾಜ್ ಕುಮಾರ್ ಸಮಾಧಿ ಬಳಿ ಆಣೆ ಮಾಡಬೇಕು ಎಂದು ಕೇಳಿದ್ದ. ಕಾನೂನು ರೀತಿ ದೂರು ನೀಡುವಂತೆ ಮಗಳೂ ಹೇಳಿದ್ದಳು. ನನಗೆ ಹಣ ನೀಡದೆ ಇದ್ದರೆ ನಿಮ್ಮ ಹೆಸರು ಬರೆದು ಅತ್ಮಹತ್ಯೆ ಮಾಡಿಕೊಳ್ಳೋದಾಗಿ ಬೆದರಿಸಿದ್ದ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ನನ್ನ ಮಗಳು ಮತ್ತು ಅಳಿಯನ ಘನತೆಗೆ ಧಕ್ಕೆ ತರುವ ಪ್ರಯತ್ನ ಮಾಡಿದ್ದಾನೆ. ಪದೇ ಪದೇ ಫೋನ್ ಮಾಡಿ ಹಣಕ್ಕೆ ಬೇಡಿಕೆ ಇಟ್ಟು, ಸಾಯುವುದಾಗಿ ಬೆದರಿಕೆ ಇಟ್ಟಿದ್ದಾನೆ. ಬೆದರಿಕೆ ಹಾಕುತ್ತಿರುವ ಯಶವಂತ ಎಂಬಾತನ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ದೆಹಲಿ ಯುವತಿ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಸೋನಿಯಾ

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯ ಮನೆಯಲ್ಲಿ ದೆಹಲಿ ಯುವತಿಯ ಮೃತದೇಹ ಪತ್ತೆಯಾಗಿದ್ದು, ಪೊಲೀಸರು ಆತ್ಮಹತ್ಯೆ ಶಂಕೆ ವ್ಯಕ್ತಪಡಿಸಿದ್ದಾರೆ.

ದೆಹಲಿಯ ಸೋನಿಯಾ (24) ಮೃತ ಯುವತಿ. ‘ಠಾಣಾ ವ್ಯಾಪ್ತಿಯ 8ನೇ ಮೈಲಿಯಲ್ಲಿರುವ ಸ್ಪಾ ಒಂದರಲ್ಲಿ ಒಂದೂವರೆ ತಿಂಗಳ ಹಿಂದಷ್ಟೆ ಸೋನಿಯಾ ಕೆಲಸಕ್ಕೆ ಸೇರಿದ್ದರು. ಕೆಲಸಕ್ಕೆ ಬರಲಿಲ್ಲವೆಂದು ಸ್ಪಾ ಮಾಲೀಕ ಕರೆ ಮಾಡಿದಾಗ ಸ್ವೀಕರಿಸಿರಲಿಲ್ಲ. ಅನುಮಾನಗೊಂಡ ಸ್ಪಾ ಮಾಲೀಕ ಮನೆ ಬಳಿ ಬಂದು ನೋಡಿದಾಗ ಆಕೆ ಬಾಗಿಲು ತೆರೆದಿರಲಿಲ್ಲ. ಪೊಲೀಸರು ಸ್ಥಳಕ್ಕೆ ಬಂದು ನೋಡಿದಾಗ, ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಸೋನಿಯಾಳ ಮೃತದೇಹ ಪತ್ತೆಯಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸೋನಿಯಾ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದೆ. ಆದರೆ ನಿಖರ ಕಾರಣ ತಿಳಿದುಬಂದಿಲ್ಲ. ಸೋಮವಾರ ರಾತ್ರಿ ಕೊನೆಯದಾಗಿ ತನ್ನ ತಾಯಿಯೊಂದಿಗೆ ಮಾತನಾಡಿರುವುದು ತಿಳಿದುಬಂದಿದೆ.

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು ರೇಸ್

ಡಿ ವಿಲಿಯರ್ಸ್ ಗೆಲ್ಲುವ ನಿರೀಕ್ಷೆ

ಹೈದರಾಬಾದ್ ಸಿಲ್ವರ್ ವೇಸ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡಿ ವಿಲಿಯರ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಈಸ್ಟ್ರನ್ ಗೋಲ್ಡ್ 5, ವಿಂಡ್ ಕ್ಲೀವರ್ 3, ಆಂಜ್ಯಾಕ್ ಪೆರೇಡ್ 4
2ನೇ ರೇಸ್: ರಿಯಲ್ ಹ್ಯಾಪಿನೆಸ್ 4, ಕ್ಯಾಸ್ಕ್ಯಾಯ್ಸ್ 7, ಲೇಡಿ ಲಯನ್ 8
3ನೇ ರೇಸ್: ಡಿ ವಿಲಿಯರ್ಸ್ 4, ಚಾಂಪಿಯನ್ಸ್ ವೇ 3, ವೆಸ್ಟ್ ಬ್ರೂಕ್ 2
4ನೇ ರೇಸ್: ಮಿಸ್ಟಿಕೋಸ್ 5, ಐರನ್ ಕಿಂಗ್ 7, ಕೊರಿನ್ ಥಿಯನ್ 9
5ನೇ ರೇಸ್: ರಿಕ್ರಿಯೇಟರ್ 6, ಅಕಾಸಿ 5, ಸೇಕ್ರೆಡ್ ಕ್ರಿಯೇಟರ್ 3
6ನೇ ರೇಸ್: ಬ್ರೀಝ್ ಬ್ಲಸ್ಟರ್ 3, ಕೇಪ್ರಿ ಗರ್ಲ್ 7, ಬಾಲ್ಟಿಮೋರ್ 9

ಉತ್ತಮ ಬೆಟ್: ಈಸ್ಟ್ರನ್ ಗೋಲ್ಡ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಪ್ರಜಾವಾಣಿ QUIZ CHAMPIONSHIP

Co-powered by PILOT Writing Is Emotion

ಸ್ಪರ್ಧಿಸಿ ಹಾಗೂ ಅಮೋಘ ಬಹುಮಾನಗಳನ್ನು ಗೆಲ್ಲಿ!

ಬೆಂಗಳೂರು ಹಾಗೂ ಇತರೆಡೆಯ ಮಕ್ಕಳಿಗೆ ಮಿನುಗಲು ಸದವಕಾಶ!

ಚಾಂಪಿಯನ್ ಆಗುವ ಸಾಮರ್ಥ್ಯ ನಿಮ್ಮಲ್ಲಿವೆಯೇ? ಹಾಗಾದರೆ, ನೀವು ಮಿನುಗಲು ಪ್ರಜಾವಾಣಿ ಕ್ವಿಜ್ ಅತ್ಯುತ್ತಮ ವೇದಿಕೆ!

7ರಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ಅವಕಾಶ.

ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಿ. ನಿಮ್ಮ ಜ್ಞಾನ ಹಾಗೂ ಸ್ಪರ್ಧಾ ಸಾಮರ್ಥ್ಯವನ್ನು ಒರೆಗೆ ಹಚ್ಚಿ. ಆಕರ್ಷಕ ಬಹುಮಾನಗಳನ್ನು ಗೆಲ್ಲಿ ಹಾಗೂ ಚಾಂಪಿಯನ್‌ಗಳು ಅಪೂರ್ವ ಅವಕಾಶಗಳನ್ನು ಅನಾವರಣಗೊಳಿಸುವ ವಿಶೇಷ ಅನ್ವೇಷಣಾ ಕಾರ್ಯಾಗಾರಕ್ಕೆ ಆಹ್ವಾನಿತರಾಗಿ.

ದಿನಾಂಕ	ದಿನ	ಸ್ಥಳ
ಡಿಸೆಂಬರ್ 15, ಬೆಳಿಗ್ಗೆ 9 ಕ್ಕೆ	ಭಾನುವಾರ	ವಿವೇಕ ಸಭಾಂಗಣ, ಯುವಪಥ, #4, 31ನೇ ಕ್ರಾಸ್ ರಸ್ತೆ, 4ನೇ ಟಿ ಬ್ಲಾಕ್ ಈಸ್ಟ್, 4ನೇ ಬ್ಲಾಕ್, ಜಯನಗರ, ಬೆಂಗಳೂರು, ಕರ್ನಾಟಕ 560011.

ರಾಜ್ಯಮಟ್ಟದ ಹಣಾಹಣಿಗೆ ತಲುಪಲು ವಿಜಯದ ಮೆಟ್ಟಿಲು ಏರುವಿರಾ?

ನೋಂದಾಯಿಸಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.prajavani.net/pvquiz-2024 ಗೆ ಭೇಟಿ ನೀಡಿ | ಸಂಪರ್ಕಿಸಿ: 73380 18541

ಈಗಲೇ ನೋಂದಾಯಿಸಿ ಉಚಿತ ಪ್ರವೇಶ!!!

Associate sponsors: WONDERLA PARKS AND RESORTS | ಪೂರ್ವಿಕಾ | VIBGYOR GROUP OF SCHOOLS | SIR MV GROUP OF INSTITUTIONS DAVANGERE, SHIMOGA, BALLARI | HAL

TV partner: Knowledge partner: QURIOSITY

ಸಿನಿಮಾ ಪುರವಣಿ

ಪ್ರಮೋದ್ ಶೆಟ್ಟಿ

'ಇಷ್ಟವಾದರೆ ಯಾವ ಪಾತ್ರವಾದರೂ ಸೈ'

'ಲಾಫಿಂಗ್ ಬುದ್ಧ' ಸಿನಿಮಾ ಮೂಲಕ ನಾಯಕ ನಟನಾಗಿ ತೆರೆ ಮೇಲೆ ಬಂದಿದ್ದ ನಟ ಪ್ರಮೋದ್ ಶೆಟ್ಟಿ ಸದ್ಯ 'ಕಾಂತಾರ' ಪ್ರೀಕ್ವೆಲ್ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಇದೇ ಹೊತ್ತಿನಲ್ಲಿ ಅವರು ನಟಿಸಿರುವ 'ಜಲಂಧರ' ಬಿಡುಗಡೆಯಾಗುತ್ತಿದೆ. ಇಲ್ಲಿಯವರೆಗಿನ ಸಿನಿಪಯಣದ ಕುರಿತು ಅವರು 'ಸಿನಿಮಾ ಪುರವಣಿ' ಜೊತೆ ಮಾತನಾಡಿದ್ದಾರೆ.

ಅಭಿಲಾಷ್ ಪಿ.ಎಸ್.

• 'ಉಳಿದವರು ಕಂಡಂತೆ'ಯಿಂದ ಇಲ್ಲಿಯವರೆಗಿನ ಸಿನಿಪಯಣ ನಿಮ್ಮಲ್ಲಿ ತಂದ ಬದಲಾವಣೆ ಏನು?

ರಂಗಭೂಮಿಯ ಒಲವೇ ನನಗೆ ಹೆಚ್ಚಿತ್ತು. ಸಿನಿಮಾ ಬಗ್ಗೆ ಯೋಚಿಸಿಯೇ ಇರಲಿಲ್ಲ. ಅಂಥ ಯೋಚನೆಯೇ ಇಲ್ಲದವನಿಗೆ ಒತ್ತಡ ಹಾಕಿ ರಿಷಬ್ ಹಾಗೂ ರಕ್ಷಿತ್ 'ಉಳಿದವರು ಕಂಡಂತೆ' ಸಿನಿಮಾಗೆ ಕರೆತಂದರು. ಈ ಸಿನಿಮಾ ಬಳಿಕವೇ ನನಗೆ ಸಿನಿಮಾ ಮೇಲೆ ಪ್ರೀತಿ, ಆಸಕ್ತಿ ಹುಟ್ಟಿದ್ದು. ಅಲ್ಲಿಂದ ಇಲ್ಲಿಯವರೆಗೆ ಮಾಡಿದಂತಹ ಯಾವ ಪಾತ್ರಗಳೂ ನನಗೆ ನಿರಾಶೆ ಮಾಡಿಲ್ಲ. ಸಿಕ್ಕಿದಂತಹ ಎಲ್ಲ ಪಾತ್ರಗಳಲ್ಲೂ ಹೊಸತನ ಹುಡುಕಿಕೊಂಡಿದ್ದೇನೆ. ನನ್ನ ಜೀವನದ ದೊಡ್ಡ ಬದಲಾವಣೆ ಎಂದರೆ ಪೋಷಕ ಪಾತ್ರದ ಮೂಲಕ ಬಂದವನು ಇಂದು ಹೀರೊ ಆಗಿ ನಿಂತಿದ್ದೇನೆ. ಜನ ನನ್ನನ್ನು, ನನ್ನ ಪಾತ್ರಗಳನ್ನು ಪ್ರೀತಿಸಿದ್ದೇ ಇದಕ್ಕೆ ಕಾರಣ ಎಂದುಕೊಂಡಿದ್ದೇನೆ. ಹೊಸ ಉದ್ಯಮಕ್ಕೆ ಬಂದಾಗ ನಾವು ಹೊಂದಿಕೊಂಡು ಹೋಗಬೇಕು ಎನ್ನುವುದನ್ನು ಕಲಿತೆ. ರಂಗಭೂಮಿಯಲ್ಲಿರುವ ವೇದಿಕೆ ಸ್ವಾತಂತ್ರ್ಯ ಸಿನಿಮಾದಲ್ಲಿ ಇಲ್ಲ. ಇದು ಹಿಂಸೆ ಎನಿಸಿದರೂ ಇದಕ್ಕೂ ಒಗ್ಗಿಕೊಂಡೆ. ಹೀಗಾಗಿ ಬೆಳವಣಿಗೆ ಸಾಧ್ಯವಾಯಿತು. ಇವತ್ತಿಗೂ ಪೋಷಕ ಪಾತ್ರದ ಅವಕಾಶ ಬಂದರೆ ಬಿಡುವುದಿಲ್ಲ. ಒಮ್ಮೆ ಹೀರೊ ಆದ ಮೇಲೆ ಬೇರೆ ಪಾತ್ರಗಳನ್ನು ಮಾಡುವುದಿಲ್ಲ ಎನ್ನುವ ಧೋರಣೆ, ಮನಃಸ್ಥಿತಿ ನನ್ನಲ್ಲಿ ಇಲ್ಲ. ನಾನು ಕೇವಲ ಪಾತ್ರವನ್ನು ನೋಡುತ್ತೇನೆ. ಜನಕ್ಕೆ ಇಷ್ಟವಾದರೆ ಯಾವ ಪಾತ್ರದಲ್ಲಾದರೂ ನಮ್ಮನ್ನು ನೋಡುತ್ತಾರೆ.

• ಕನ್ನಡದಲ್ಲಿ ಹಾಸ್ಯಪ್ರಧಾನ ಸಿನಿಮಾಗಳಿಗೆ ಹೀರೊ ಕೊರತೆ ಇದೆಯೇ?

ಹೌದು. ಒಂದು ಇಂಡಸ್ಟ್ರಿಗೆ ಎಲ್ಲ ರೀತಿಯ ನಾಯಕರ ಅವಶ್ಯಕತೆ ಇದೆ. ಕಮರ್ಷಿಯಲ್ ಸಿನಿಮಾ ನೋಡುವವರ ಸಂಖ್ಯೆ ಎಷ್ಟಿದೆಯೋ ಅಷ್ಟೇ ಕ್ಲಾಸ್ ಸಿನಿಮಾ ನೋಡವವರ ಸಂಖ್ಯೆಯೂ ಇದೆ. ನಮ್ಮಲ್ಲಿ ಸಿನಿಮಾವನ್ನು ಏಕಪರದೆಗೆ, ಮಲ್ಟಿಪ್ಲೆಕ್ಸ್‌ಗೆ ಎಂದು ವಿಭಾಗ ಮಾಡುತ್ತಾರೆ. ಏಕಪರದೆ ಚಿತ್ರಮಂದಿರಗಳಿಗೆ ಮಾಸ್ ಸಿನಿಮಾ ಬೇಕು. ನೋಡಲು ಅಷ್ಟೇನು ಚೆನ್ನಾಗಿ ಇಲ್ಲದೇ ಇದ್ದರೂ ಕೆಲವರು ನಟನೆಯಿಂದಲೇ ಮಾಸ್ ಹೀರೊ ಆಗುವ ಸಾಮರ್ಥ್ಯ ಹೊಂದಿದ್ದಾರೆ. ಮತ್ತೊಂದೆಡೆ ನೋಡಲು ಚೆಂದವಾಗಿರುವವರೂ ಮಾಸ್ ಹೀರೊ ಆಗುತ್ತಾರೆ. ಕನ್ನಡ ಚಿತ್ರರಂಗದಲ್ಲಿ ವಿಜಯ್ ಸೇತುಪತಿ, ಜೋಜು ಜಾರ್ಜ್ ಮಾದರಿಯ ನಟರ ಕೊರತೆ ಇದೆ ಎಂದು ಹಲವರು ಹೇಳುತ್ತಾರೆ. ಗಂಭೀರವಾದ ಪಾತ್ರವನ್ನೂ, ಹಾಸ್ಯಪ್ರಧಾನ ಸಿನಿಮಾಗಳನ್ನೂ ಇವರು ಮಾಡುತ್ತಾರೆ. ನನ್ನಲ್ಲಿ ಈ ರೀತಿ ಸಾಮರ್ಥ್ಯವಿದೆ ಎಂದು ನನಗೆ ಕಥೆ ಹೇಳಲು ಬರುವವರು, ಸ್ನೇಹಿತರು ಹೇಳುತ್ತಾರೆ. ಪ್ರಸ್ತುತ ಮಾಸ್ ಹೀರೊ ಮತ್ತು ಕ್ಲಾಸ್ ಹೀರೊಗಳ ಸಿನಿಮಾಗಳ ಸಮತೋಲನದ ಅಗತ್ಯವಿದೆ.

• 'ಲಾಫಿಂಗ್ ಬುದ್ಧ' ಸಿನಿಮಾ ನೀಡಿದ ಅನುಭವ...

ಈ ಸಿನಿಮಾಗಾಗಿ ನಾನು ದೈಹಿಕವಾಗಿ ಬಹಳಷ್ಟು ಬದಲಾವಣೆ ತಂದುಕೊಂಡಿದ್ದೆ. ತೂಕ ಹೆಚ್ಚಿಸಿಕೊಂಡು ಪಾತ್ರದೊಳಗೆ ಪ್ರವೇಶಿಸಿದ್ದೆ. ಒಂದು ಹಾಸ್ಯಪ್ರಧಾನ ಕೌಟುಂಬಿಕ ಸಿನಿಮಾ ಮಾಡುವುದು ಪ್ರಸ್ತುತ ಸಮಯದ ಅಗತ್ಯವಾಗಿದೆ. ಈ ಸಿನಿಮಾಗೂ ಮೊದಲು ಬಿಡುಗಡೆಗೊಂಡ 'ಭೀಮ' ಹಾಗೂ 'ಕೃಷ್ಣಂ ಪ್ರಣಯ ಸಖಿ' ಪ್ರೇಕ್ಷಕರನ್ನು ಸೆಳೆದಿದ್ದು 'ಲಾಫಿಂಗ್ ಬುದ್ಧ'ಕ್ಕೂ ಸಹಕಾರಿಯಾಯಿತು. ನನ್ನ ಈ ಸಿನಿಮಾ ಜನರಿಗೆ ಚಿತ್ರಮಂದಿರದಲ್ಲಿ ಸಿನಿಮಾ ನೋಡುವ ರುಚಿಯನ್ನು ಮತ್ತೊಮ್ಮೆ ಹತ್ತಿಸಿತು ಎನ್ನುವುದು ಖುಷಿಯ ವಿಷಯ. 'ಲಾಫಿಂಗ್ ಬುದ್ಧ'ದಲ್ಲಿ ನನ್ನ ಪಾತ್ರಕ್ಕೆ ಹಾಸ್ಯದ ಸ್ಪರ್ಶವಿತ್ತು. ಇದಕ್ಕೆ ತದ್ವಿರುದ್ಧವಾದ ಗುಣವುಳ್ಳ ಪೊಲೀಸ್ ಪಾತ್ರ 'ಜಲಂಧರ' ಸಿನಿಮಾದಲ್ಲಿದೆ. ಜನರು ಇದನ್ನು ಹೇಗೆ ಸ್ವೀಕರಿಸುತ್ತಾರೆ ಎನ್ನುವುದನ್ನು ಕಾಯುತ್ತಿದ್ದೇನೆ.

• ಏನಿದು ಜಲಂಧರ?

'ಜಲಂಧರ' ಒಬ್ಬ ರಾಕ್ಷಸನ ಹೆಸರು. ನೀರಿನೊಳಗೆ ಇರುವ ರಾಕ್ಷಸನನ್ನು ಕಂಡುಹಿಡಿಯುವ ಕೆಲಸ ನನ್ನ ಈ ಪಾತ್ರದ್ದು. ನೀರು ಕಂಡ ತಕ್ಷಣ ಎಲ್ಲರೂ ಒಮ್ಮೆ ಹುಚ್ಚುಕಟ್ಟಿ ಹಾರುತ್ತಾರೆ. ಅದರೊಳಗೆ ಅಡಗಿರುವ ರಾಕ್ಷಸನ ಅರಿವು ಅವರಿಗೆ ಇರುವುದಿಲ್ಲ. 'ನೀರಿನೊಳಗೆ ಮುಳುಗಿ ಹಲವರು ಪ್ರಾಣ ಕಳೆದುಕೊಳ್ಳುತ್ತಾರೆ' ಎಂದು ಕಥೆಯನ್ನು ಲೋಕಿ ಬಂದು ಹೇಳಿದಾಗ ಇದರಲ್ಲಿ ಹೊಸದೇನಿದೆ ಎಂದುಕೊಳ್ಳುತ್ತಿದೆ. ಆದರೆ ಇದಕ್ಕೆ ಭಿನ್ನ ತಿರುವೊಂದನ್ನು ಅವರು ನೀಡಿದ್ದರು. ಇದು ನನ್ನನ್ನು ಸೆಳೆಯಿತು. ಈ ಮಾದರಿಯ ಸಿನಿಮಾವನ್ನು ನಾನು ಎಲ್ಲೂ ನೋಡಿಲ್ಲ. ಘಟನೆಗಳು ಆಕಸ್ಮಿಕವೇ ಅಥವಾ ದುಷ್ಕೃತ್ಯವೇ ಎನ್ನುವುದು ಇಡೀ ಸಿನಿಮಾದ ಎಳೆ. ಒಂದು ಪ್ರಕರಣವನ್ನು ನನ್ನ ಪಾತ್ರ ಭೇದಿಸಿದಾಗ ಇಡೀ ಸಿನಿಮಾ ತೆರೆದುಕೊಳ್ಳುತ್ತದೆ.

• ಯಾವ ಸಿನಿಮಾಗಳು ಬಿಡುಗಡೆಗೆ ಸಿದ್ಧವಿವೆ?

'ಮ್ಯಾಕ್ಸ್', 'ಚೀತಾ' ಹಾಗೂ ತಮಿಳಿನಲ್ಲಿ ಯೋಗಿಬಾಬು ಅವರ ಜೊತೆಗಿನ 'ಸನ್ನಿಧಾನಂ ಪಿ.ಒ.' ಸಿನಿಮಾ ಬಿಡುಗಡೆಗೆ ಸಿದ್ಧವಿದೆ. 'ಕಾಂತಾರ'ದ ಕೆಲಸಗಳಲ್ಲಿ ತೊಡಗಿಸಿಕೊಂಡಿರುವುದರಿಂದ ಹೊಸ ಸಿನಿಮಾಗಳನ್ನು ಒಪ್ಪಿಕೊಂಡಿಲ್ಲ. ಕಥೆಗಳಿದ್ದರೆ ಹೇಳಿ ಸಿನಿಮಾ ಮಾಡುತ್ತೇವೆ ಎಂದು ಮೂರ್ನಾಲ್ಕು ಜನ ನಿರ್ಮಾಪಕರು ಬಂದಿದ್ದಾರೆ. ನಿರ್ದೇಶಕರೂ ಬಂದಿದ್ದರು. ಆದರೆ ಕಥೆಗಳು ಅದ್ಭುತ ಎನಿಸಲಿಲ್ಲ. 'ರಿಚರ್ಡ್ ಆ್ಯಂಟನಿ' ಕಥೆ ಪೂರ್ಣಗೊಳ್ಳುತ್ತಿದೆ. ಚಿತ್ರೀಕರಣದ ಸ್ಥಳಗಳ ಹುಡುಕಾಟ ನಡೆಯುತ್ತಿದೆ. ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ಈ ಸಿನಿಮಾದ ಚಿತ್ರೀಕರಣ ಆರಂಭವಾಗಲಿದೆ. ಈ ಸಿನಿಮಾದ ಪಾತ್ರಕ್ಕಾಗಿ 'ಲಾಫಿಂಗ್ ಬುದ್ಧ'ದ ಬಳಿಕ 27 ಕೆ.ಜಿ. ತೂಕ ಇಳಿಸಿಕೊಂಡಿದ್ದೆ. 'ಲಾಫಿಂಗ್ ಬುದ್ಧ' ಸಿನಿಮಾದ ಸಂಭ್ರಮದಿಂದ ನಾಲ್ಕೈದು ಕೆ.ಜಿ. ತೂಕ ಏರಿಕೆಯಾಗಿದೆ. ಡಿಸೆಂಬರ್‌ನಿಂದ ಮತ್ತೆ ತೂಕ ಇಳಿಕೆಯತ್ತ ಗಮನಹರಿಸಿಬೇಕು.

• ನಿರ್ದೇಶನದ ಕನಸು ಇದೆಯೇ?

ಖಂಡಿತಾ ಇದೆ. ರಂಗಭೂಮಿಯಿಂದ ಬಂದವನು ನಾನು. ಆದರೆ ಸದ್ಯ ನಟನಾಗಿ ಕೈತುಂಬಾ ಕೆಲಸ ಇದೆ. ಹೀಗಾಗಿ ರಿಸ್ಕ್ ತೆಗೆದುಕೊಳ್ಳುವುದಿಲ್ಲ. ನಿರ್ದೇಶನ ಎಂದರೆ ಕನಿಷ್ಠ ಒಂದು ವರ್ಷ ಅದಕ್ಕೇ ಮೀಸಲಿಡಬೇಕು. ಬರೆದಿರುವ ಕಥೆಗಳನ್ನು ಬದಿಗೆ ಇಟ್ಟಿದ್ದೇನೆ. ಅದು ಯಾವ ಕಾಲಘಟ್ಟಕ್ಕಾದರೂ ಮಾಡಬಹುದಾದ ಸಿನಿಮಾ.

ಸುಮುಖ, ರಂಗಾಯಣ ರಘು, ಅಂಜಲಿ

ವರ್ಷಾಂತ್ಯಕ್ಕೆ ಮನದ ಕಡಲು

ಸುಮಾರು 18 ವರ್ಷದ ಬಳಿಕ 'ಮುಂಗಾರು ಮಳೆ' ಚಿತ್ರದ ನಿರ್ದೇಶಕ ಯೋಗರಾಜ್ ಭಟ್ ಹಾಗೂ ನಿರ್ಮಾಪಕ ಇ.ಕೃಷ್ಣಪ್ಪ ಸೇರಿ ಹೊಸ ಸಿನಿಮಾ ತೆರೆಗೆ ತರುತ್ತಿದ್ದಾರೆ. ಯೋಗರಾಜ್ ಭಟ್ ಅವರ ಹದಿನಾರನೇ ಸಿನಿಮಾ 'ಮನದ ಕಡಲು' ಚಿತ್ರೀಕರಣ ಅಂತಿಮ ಹಂತ ತಲುಪಿದ್ದು, ವರ್ಷಾಂತ್ಯಕ್ಕೆ ಸಿನಿಮಾ ತೆರೆ ಕಾಣುವ ಸಾಧ್ಯತೆ ಇದೆ.

ಬುಧವಾರ (ನ.27) ಚಿತ್ರದ ಶೀರ್ಷಿಕೆ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಯೋಗರಾಜ್ ಭಟ್, 'ಇ.ಕೃಷ್ಣಪ್ಪ ಅವರ ಜೊತೆ ಮತ್ತೊಂದು ಸಿನಿಮಾ ಮಾಡಬೇಕು ಎನ್ನುವುದು ಮೊದಲೇ ನಿರ್ಧಾರವಾಗಿತ್ತು. ಅವರು ರಾಜಕಾರಣದಲ್ಲಿ ತಲ್ಲೀನರಾದರೆ, ನಾನು ಸಾಲು ಸಾಲು ಸಿನಿಮಾಗಳಲ್ಲಿ ತೊಡಗಿಸಿಕೊಂಡೆ. 'ಮುಂಗಾರು ಮಳೆ' ಆಗಿ 18 ವರ್ಷ ಆಯಿತು ಎನ್ನುವುದನ್ನು ನಂಬಲು ಸಾಧ್ಯವಾಗುತ್ತಿಲ್ಲ. ಕೋವಿಡ್ ಬಳಿಕ ಸಿಕ್ಕಾಗ, ಮತ್ತೊಂದು ಸಿನಿಮಾ ಮಾಡುವುದಕ್ಕೆ ಸಿದ್ಧವಾದೆವು. 'ನಾನು ಹೊಸ ಕುದುರೆಯನ್ನೇ ಇಷ್ಟಪಡುವುದು' ಎಂದು ಕೃಷ್ಣಪ್ಪ ಅವರು ಸುಳಿವು ನೀಡಿದರು. ಹೀಗೆ ಹೊಸಬರ ಹುಡುಕಾಟ ಆರಂಭವಾಯಿತು. ಹೊಸಬರನ್ನು ಹುಡುಕುವುದು ಬಹಳ ಸವಾಲಿನ ವಿಷಯ. ಈ ಪಯಣದಲ್ಲಿ ನಾಯಕನಾಗಿ ಸುಮುಖ ಆಯ್ಕೆಯಾದರು. ನಾಯಕಿಯರಾಗಿ ರಾಶಿಕಾ ಶೆಟ್ಟಿ ಹಾಗೂ ಅಂಜಲಿ ಅನೀಶ್ ತಂಡ ಸೇರಿಕೊಂಡರು. ಚಿತ್ರರಂಗಕ್ಕೆ ಹೊಸಬರ ಅವಶ್ಯಕತೆ ಬಹಳಷ್ಟಿದೆ' ಎಂದರು.

'ಮನದ ಕಡಲು' ಚಿತ್ರದ ಆರಂಭ, ಮಧ್ಯಂತರ ಹಾಗೂ ಅಂತ್ಯ ಕಡಲಿನ ಮೇಲೆ ಇದೆ. ಆದಿವಾಸಿಗಳ ನಾಯಕನ ಪಾತ್ರದಲ್ಲಿ ರಂಗಾಯಣ ರಘು ನಟಿಸಿದ್ದಾರೆ. ಇವರ ಭಾಷೆಯನ್ನು ನಾನು ಹೊಸದಾಗಿ ಸೃಷ್ಟಿಸಿದ್ದೇನೆ. ಕರ್ನಾಟಕ, ಮಹಾರಾಷ್ಟ್ರದ ಹದಿಮೂರು ಜಿಲ್ಲೆಗಳಲ್ಲಿ ಚಿತ್ರದ ಚಿತ್ರೀಕರಣ ನಡೆದಿದೆ. ಮಹಾರಾಷ್ಟ್ರದ ಮುರುಡ್ ಜಂಜೀರ ಎಂಬ ಸಮುದ್ರದ ಮಧ್ಯದಲ್ಲಿರುವ ಕೋಟೆಯಲ್ಲಿ ಶೂಟಿಂಗ್ ಮಾಡಿದ್ದೇವೆ. ವರ್ಷಾಂತ್ಯಕ್ಕೆ ಎಂದರೆ 'ಮುಂಗಾರು ಮಳೆ' ಬಿಡುಗಡೆಯಾದ ದಿನಾಂಕದಂದೇ ಈ ಸಿನಿಮಾ ರಿಲೀಸ್‌ಗೆ ಯೋಜನೆ ಹಾಕಿಕೊಂಡಿದ್ದೇವೆ. ಒಂದೆರಡು ವಾರ ಆಚೀಚೆ ಆಗಬಹುದು. ಶೇ 95ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ' ಎಂದರು ಯೋಗರಾಜ್ ಭಟ್.

ಚಿತ್ರದ ತಾರಾಬಳಗದಲ್ಲಿ ರಂಗಾಯಣ ರಘು, ದತ್ತಣ್ಣ, ಶಿವಧ್ವಜ್ ಮತ್ತಿತರರು ಇದ್ದಾರೆ. ಚಿತ್ರಕ್ಕೆ ವಿ.ಹರಿಕೃಷ್ಣ ಸಂಗೀತ, ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣವಿದೆ. ಜಯಂತ ಕಾಯ್ಕಿಣಿ ಎರಡು ಹಾಡುಗಳನ್ನು ಬರೆದಿದ್ದಾರೆ.

ಡಿ.25ಕ್ಕೆ 'ಮ್ಯಾಕ್ಸ್' ರಿಲೀಸ್

ನಟ ಸುದೀಪ್ ಅಭಿನಯದ 46ನೇ ಸಿನಿಮಾ 'ಮ್ಯಾಕ್ಸ್'ನ ಬಿಡುಗಡೆ ದಿನಾಂಕವನ್ನು ಚಿತ್ರತಂಡ ಘೋಷಿಸಿದೆ. ಡಿ.25ರಂದು ಸಿನಿಮಾ ವಿಶ್ವದಾದ್ಯಂತ ಬಿಡುಗಡೆಯಾಗಲಿದೆ. ಈ ಮೂಲಕ ಎರಡು ವರ್ಷದ ಬಳಿಕ ಸುದೀಪ್ ಸಿನಿಮಾವೊಂದು ತೆರೆಕಾಣಲಿದೆ.

2022ರ ಜುಲೈನಲ್ಲಿ 'ವಿಕ್ರಾಂತ್ ರೋಣ' ಬಿಡುಗಡೆಯಾಗಿತ್ತು. 2023ರಲ್ಲಿ 'ಮ್ಯಾಕ್ಸ್' ಸಿನಿಮಾ ಸೆಟ್ಟೇರಿತ್ತು. ಎಲ್ಲ ಭಾಷೆಗಳಲ್ಲಿ ಏಕಕಾಲದಲ್ಲಿ ಸಿನಿಮಾ ಬಿಡುಗಡೆಗೆ ಚಿತ್ರತಂಡ ಇದೀಗ ನಿರ್ಧರಿಸಿದೆ. ವಿಜಯ್ ಕಾರ್ತಿಕೇಯ ಈ ಚಿತ್ರದ ನಿರ್ದೇಶಕರು. ಚಿತ್ರದ ಸ್ಯಾಟಲೈಟ್ ಹಕ್ಕುಗಳನ್ನು 'ಜೀ ಕನ್ನಡ' ಖರೀದಿಸಿದೆ.

ಸುದೀಪ್

ಯುವ ರಾಜ್‌ಕುಮಾರ್

ಎಕ್ಕ ಶೂಟಿಂಗ್ ಆರಂಭ

'ರತ್ನನ್‌ಪ್ರಪಂಚ' ಖ್ಯಾತಿಯ ರೋಹಿತ್ ಪದಕಿ ನಿರ್ದೇಶನದ, ಯುವ ರಾಜ್‌ಕುಮಾರ್ ನಟನೆಯ 'ಎಕ್ಕ' ಸಿನಿಮಾದ ಚಿತ್ರೀಕರಣ ಗುರುವಾರದಿಂದ (ನ.28) ಆರಂಭವಾಗಿದೆ. ಸಿನಿಮಾ 2025ರ ಜೂನ್ 6ರಂದು ತೆರೆಕಾಣಲಿದೆ.

ನ.1ರಂದು ಚಿತ್ರದ ಶೀರ್ಷಿಕೆ ಘೋಷಣೆಯಾಗಿತ್ತು. ಕಾರಣಾಂತರಗಳಿಂದ 'ಉತ್ತರಕಾಂಡ' ಸಿನಿಮಾವನ್ನು ಅರ್ಧಕ್ಕೆ ನಿಲ್ಲಿಸಿರುವ ರೋಹಿತ್ ಪದಕಿ ಈ ಸಿನಿಮಾ ಕೈಗೆತ್ತಿಕೊಂಡಿದ್ದಾರೆ. ಇದು ಯುವ ರಾಜ್‌ಕುಮಾರ್ ಎರಡನೇ ಸಿನಿಮಾವಾಗಿದ್ದು, ಭೂಗತ ಜಗತ್ತಿನ ಕಥೆಯನ್ನು ಹೊಂದಿದೆ. ಯುವಗೆ ಜೋಡಿಯಾಗಿ ಸಂಪದ ನಟಿಸಿದ್ದಾರೆ. ಬಹುಭಾಷಾ ನಟ ಅತುಲ್ ಕುಲಕರ್ಣಿ ಚಿತ್ರದ ತಾರಾಬಳಗದಲ್ಲಿದ್ದಾರೆ.

'ಮೂರು ಪ್ರೊಡಕ್ಷನ್ ಹೌಸ್‌ಗಳು ಸೇರಿ ಈ ಸಿನಿಮಾ ಮಾಡುತ್ತಿವೆ. ಈ ನಡೆ ಹೊಸ ಭಾಷ್ಯ ಬರೆಯಲಿ. ಈ ಸಿನಿಮಾದ ಪಾತ್ರ ಸವಾಲಿನಿಂದ ಕೂಡಿದೆ. 'ಎಕ್ಕ' ಪಕ್ಕಾ ಮಾಸ್ ಸಿನಿಮಾ. ಭಾವನೆಗಳೂ ಅಷ್ಟೇ ಗಾಢವಾಗಿದೆ. ಪರಿಸ್ಥಿತಿ ಒಬ್ಬ ಮನುಷ್ಯನನ್ನು ಹೇಗೆ ಬದಲಾಯಿಸುತ್ತದೆ ಎನ್ನುವುದೇ ಕಥೆ' ಎಂದರು ಯುವ. 'ಪುನೀತ್ ರಾಜ್‌ಕುಮಾರ್ ಅವರ 'ಜಾಕಿ' ಸಿನಿಮಾದ ಆರಂಭಿಕ ಶೀರ್ಷಿಕೆ 'ಎಕ್ಕ' ಎಂದಿತ್ತು. ಅದನ್ನೇ ನಾವು ಮುಂದುವರಿಸಿದ್ದೇವೆ. ಒಂದು ಕಮರ್ಷಿಯಲ್ ವಸ್ತುವನ್ನಿಟ್ಟುಕೊಂಡು ಜನಕ್ಕೆ ತಲುಪುವ ಸಿನಿಮಾ ಮಾಡುತ್ತಿದ್ದೇನೆ. ಇದು ಪೂರ್ಣ ಪ್ರಮಾಣದ ಡ್ರಾಮಾ ಸಿನಿಮಾ' ಎನ್ನುತ್ತಾರೆ ರೋಹಿತ್ ಪದಕಿ.

ಚಿತ್ರದ ಕಥೆಯನ್ನು ರೋಹಿತ್ ಪದಕಿ ಹಾಗೂ ವಿಕ್ರಂ ಹತ್ವಾರ್ ಬರೆದಿದ್ದಾರೆ. ಚಿತ್ರಕ್ಕೆ ಚರಣ್ ರಾಜ್ ಸಂಗೀತ ಸಂಯೋಜನೆ ಮಾಡಲಿದ್ದು, ಮಾಸ್ತಿ ಸಂಭಾಷಣೆ ಹಾಗೂ ಸತ್ಯ ಹೆಗಡೆ ಛಾಯಾಚಿತ್ರಗ್ರಹಣವಿದೆ. ದೀಪು ಎಸ್. ಕುಮಾರ್ ಸಂಕಲನ ಮತ್ತು ವಿಶ್ವಾಸ್ ಕಶ್ಯಪ್ ನಿರ್ಮಾಣ ವಿನ್ಯಾಸ ಚಿತ್ರಕ್ಕಿದೆ. ಕಾಶ್ಮೀರ, ಬೆಂಗಳೂರು, ಮೈಸೂರು, ಮುಂಬೈ, ಕೋಲ್ಕತ್ತ ಹಾಗೂ ದೆಹಲಿಯಲ್ಲಿ ಚಿತ್ರದ ಚಿತ್ರೀಕರಣ ನಡೆಯಲಿದೆ. ಚಿತ್ರವನ್ನು ಪಿ.ಆರ್.ಕೆ.ಪ್ರೊಡಕ್ಷನ್ಸ್, ಜಯಣ್ಣ ಕಂಬೈನ್ಸ್ ಹಾಗೂ ಕೆ.ಆರ್.ಜಿ. ಸ್ಟೂಡಿಯೊಸ್ ಬ್ಯಾನರ್ ಅಡಿಯಲ್ಲಿ ಜಂಟಿಯಾಗಿ ನಿರ್ಮಿಸಲಾಗುತ್ತಿದೆ.

ಐದು ಸಿನಿಮಾಗಳು ತೆರೆಗೆ

ಚಂದನವನದ ತೆರೆಗಳಲ್ಲಿ ಇಂದು(ನ.29) ಐದು ಸಿನಿಮಾಗಳು ತೆರೆಕಾಣುತ್ತಿವೆ.

'ಜಲಂಧರ' ಸಿನಿಮಾದ ದೃಶ್ಯ

ಜಲಂಧರ:

ಪ್ರಮೋದ್ ಶೆಟ್ಟಿ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಈ ಚಿತ್ರಕ್ಕೆ ವಿಷ್ಣು ವಿ.ಪ್ರಸನ್ನ ನಿರ್ದೇಶನವಿದೆ. ಸ್ಟೆಪ್ ಅಪ್ ಪಿಕ್ಚರ್ಸ್ ಲಾಂಛನದಲ್ಲಿ ಮದನ್ ಎಸ್. ನಿರ್ಮಿಸಿರುವ ಈ ಚಿತ್ರದಲ್ಲಿ ರುಶಿಕಾ ರಾಜ್, ಆರೋಹಿತ ಗೌಡ, ಬಲ ರಾಜವಾಡಿ, ನವೀನ್ ಸಾಗರ್, ಪ್ರತಾಪ್ ನನಸು, ಆದಿ ಕೇಶವರೆಡ್ಡಿ, ಭೀಷ್ಮಾ ರಾಮಯ್ಯ, ವಿಜಯರಾಜ್ ಮುಂತಾದವರು ನಟಿಸಿದ್ದಾರೆ. ಪ್ರಮೋದ್ ಈ ಸಿನಿಮಾದಲ್ಲಿ ಪೊಲೀಸ್ ಅಧಿಕಾರಿ ಪಾತ್ರ ನಿರ್ವಹಿಸಿದ್ದಾರೆ. ಚಿತ್ರದ ಕಥೆಯನ್ನು ನಿರ್ಮಾಪಕ ಲೋಕಿ ಅವರು ಬರೆದಿದ್ದು, ಚಿತ್ರಕಥೆ ವಿಷ್ಣು ವಿ. ಪ್ರಸನ್ನ ಹಾಗೂ ಅಕ್ಷಯ್ ಕುಮಾರ್ ಅವರದ್ದು. ಶ್ಯಾಮ್ ಸುಂದರ್ ಸಂಭಾಷಣೆ, ಸರಿನ್ ರವೀಂದ್ರನ್ ಹಾಗೂ ವಿದ್ಯಾಶಂಕರ್ ಪಿ.ಎಸ್. ಅವರ ಛಾಯಾಚಿತ್ರಗ್ರಹಣ, ಜಿ.ಜತಿನ್ ದರ್ಶನ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಅನಾಥ

ಗೋನೇಂದ್ರ ಫಿಲಂ ಸಂಸ್ಥೆ ನಿರ್ಮಾಣ ಮಾಡಿರುವ ಈ ಚಿತ್ರದಲ್ಲಿ ಇಂದ್ರ ನಾಯಕನಾಗಿ ಅಭಿನಯಿಸಿದ್ದಾರೆ. ಇಂದ್ರ ಅವರೇ ಈ ಚಿತ್ರದ ನಿರ್ಮಾಪಕ, ಸಂಗೀತ ನಿರ್ದೇಶಕನಾಗಿಯೂ ಕೆಲಸ ಮಾಡಿದ್ದಾರೆ. ಚಿತ್ರಕ್ಕೆ ವಿಜಯಪುರದ ಅಣ್ಣಾ ಶೇಟ್ ಕೆ. ಎ. ಆ್ಯಕ್ಷನ್ ಕಟ್ ಹೇಳಿದ್ದಾರೆ.

ತಮಟೆ

ವಂದನ ಎಂ. ನಿರ್ಮಾಣದ, ಮದನ್ ಪಟೇಲ್ ಕಥೆ, ಚಿತ್ರಕಥೆ ಬರೆದು ಸಂಗೀತ ನೀಡಿ, ಅಭಿನಯಿಸಿರುವ ಸಿನಿಮಾವಿದು. ಚಿತ್ರಕ್ಕೆ ಮಯೂರ್ ಪಟೇಲ್ ನಿರ್ದೇಶನವಿದೆ.

ಅಂಬಾಲಿ ಭಾರತಿ

ನಾ ನಿನ್ನ ಬಿಡಲಾರೆ

ನಾಲ್ಕು ದಶಕಗಳ ಹಿಂದೆ ಬಿಡುಗಡೆಯಾಗಿದ್ದ ಅನಂತನಾಗ್ ನಟನೆಯ ಸಿನಿಮಾದ ಶೀರ್ಷಿಕೆಯನ್ನೇ ಹೊತ್ತ ಹೊಸ ಸಿನಿಮಾವಿದು. ಕಮಲ ಉಮಾ ಭಾರತಿ ಪ್ರೊಡಕ್ಷನ್ಸ್ ಬ್ಯಾನರ್‌ನಡಿಯಲ್ಲಿ, ಅಂಬಾಲಿ ಭಾರತಿ ನಾಯಕಿಯಾಗಿ ನಟಿಸಿ ನಿರ್ಮಿಸಿರುವ ಈ ಚಿತ್ರವನ್ನು ನವೀನ್ ಜಿ.ಎಸ್ ನಿರ್ದೇಶಿಸಿದ್ದಾರೆ. ಇದೂ ಸಸ್ಪೆನ್ಸ್ ಥ್ರಿಲ್ಲರ್ ಹಾರರ್ ಸಿನಿಮಾ ಎಂದಿದೆ ಚಿತ್ರತಂಡ. ಅಂಬಾಲಿ ಭಾರತಿಗೆ ಜೊತೆಯಾಗಿ ಪಂಚಿ, ಸೀರುಂಡೆ ರಘು, ಕೆ.ಎಸ್.ಶ್ರೀಧರ್, ಮಹಂತೇಶ್, ಶ್ರೀನಿವಾಸ್ ಪ್ರಭು, ಹರಿಣಿ, ಲಕ್ಷ್ಮೀ ಸಿದ್ದಯ್ಯ, ಮಂಜುಳಾ ರೆಡ್ಡಿ ಮುಖ್ಯಭೂಮಿಕೆಯಲ್ಲಿದ್ದಾರೆ. ವೀರೇಶ್ ಎಸ್. ಛಾಯಾಚಿತ್ರಗ್ರಹಣ, ಎಂ.ಎಸ್. ತ್ಯಾಗರಾಜು ಸಂಗೀತ ನಿರ್ದೇಶನದ ಈ ಚಿತ್ರಕ್ಕೆ ದೀಪಕ್ ಜಿ.ಎಸ್ ಸಂಕಲನವಿದೆ.

ಮೇಘ

'ರಾನಿ' ಬಳಿಕ ಕಿರಣ್‌ರಾಜ್ ನಟಿಸಿರುವ ಚಿತ್ರವಿದು. ಚರಣ್ ನಿರ್ದೇಶನದ ಈ ಚಿತ್ರದಲ್ಲಿ ಕಿರಣ್‌ರಾಜ್‌ಗೆ ಕಾಜಲ್ ಕುಂದರ್ ಜೋಡಿಯಾಗಿದ್ದಾರೆ. 'ಮನರಂಜನೆಯೊಂದಿಗೆ ಕೂಡಿದ ಕೌಟುಂಬಿಕ ಚಿತ್ರವಿದು. ಪರಿಶುದ್ಧ ಪ್ರೇಮ ಕಥೆ ಹೊಂದಿರುವ ಈ ಚಿತ್ರದ ವಿಶೇಷವೆಂದರೆ ನಾಯಕ ಹಾಗೂ ನಾಯಕಿಯ ಹೆಸರು 'ಮೇಘ'. ಇಬ್ಬರ ಹೆಸರೂ 'ಮೇಘ'ವೇಕಿದೆ ಎನ್ನುವುದು ಸಿನಿಮಾ ನೋಡಿದರೆ ತಿಳಿಯುವುದು. ನನ್ನ ಸ್ನೇಹಿತನ ಜೀವನದಲ್ಲಿ ನಡೆದ ಘಟನೆ ಈ ಕಥೆಗೆ ಸ್ಫೂರ್ತಿ' ಎಂದಿದ್ದಾರೆ ಚರಣ್. 'ಮೇಘ' ಕೃಷಿ ಪ್ರೊಡಕ್ಷನ್ಸ್ ಬ್ಯಾನರ್‌ನ ಚೊಚ್ಚಲ ಚಿತ್ರವಾಗಿದ್ದು, ನಾಯಕನ ತಂದೆಯಾಗಿ ರಾಜೇಶ್ ನಟರಂಗ ನಟಿಸಿದ್ದಾರೆ. ಶೋಭರಾಜ್, ಸಂಗೀತಾ, ಸುಂದರ್ ವೀಣಾ, ಹನುಮಂತೇಗೌಡ, ತರಂಗ ವಿಶ್ವ ಮತ್ತು ಗಿರೀಶ್ ಶಿವಣ್ಣ ಮುಂತಾದ ಕಲಾವಿದರು ತಾರಾಬಳಗದಲ್ಲಿದ್ದಾರೆ.

ಕಾಜಲ್ ಕುಂದರ್

ಪೆನ್ ಡ್ರೈವ್ ಹಂಚಿಕೆ: ಅರ್ಜಿ ಹಿಂಪಡೆದ ಪ್ರೀತಂ ಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ಹಗರಣದ ಸಂಬಂಧ ಪೆನ್‌ಡ್ರೈವ್ ಹಂಚಿಕೆ ಆರೋಪ ಕುರಿತು ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಮಾಜಿ ಶಾಸಕ ಪ್ರೀತಂಗೌಡ ಹಿಂಪಡೆದಿದ್ದಾರೆ.

ಪ್ರೀತಂ ಗೌಡ ಪರ ಹೈಕೋರ್ಟ್ ವಕೀಲ ಸಂದೀಪ್ ಎಸ್.ಪಾಟೀಲ್ ಗುರುವಾರ, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠಕ್ಕೆ ಅರ್ಜಿ ವಾಪಸಾತಿ ಕುರಿತ ಮೆಮೊ ಸಲ್ಲಿಸಿದರು.

'ಅರ್ಜಿದಾರರು ತನಿಖೆಗೆ ಸಹಕರಿಸುತ್ತಿದ್ದಾರೆ. ತನಿಖಾಧಿಕಾರಿ ಕರೆದಾಗ ವಿಚಾರಣೆಗೆ ಹೋಗಿ ಬಂದಿದ್ದಾರೆ. ತನಿಖೆ ಮುಕ್ತಾಯಗೊಂಡರೆ ಆರೋಪಮುಕ್ತರಾಗಿ ಹೊರಬರುವ ವಿಶ್ವಾಸ ಇದೆ. ಹಾಗಾಗಿ, ಈ ಅರ್ಜಿ ಹಿಂಪಡೆಯಲು ಇಚ್ಛಿಸಿರುವ ಪ್ರೀತಂ ಗೌಡ ಅವರ ಮನವಿಯನ್ನು ಮಾನ್ಯ ಮಾಡಬೇಕು' ಎಂಬ ಮೆಮೊದ ಒಕ್ಕಣಿಕೆಯ ತಾತ್ಪರ್ಯವನ್ನು ಸಂದೀಪ್ ಪಾಟೀಲ ನ್ಯಾಯಪೀಠಕ್ಕೆ ವಿವರಿಸಿದರು.

ಇದನ್ನು ಪರಿಗಣಿಸಿದ ನ್ಯಾಯಮೂರ್ತಿಯವರು, 'ಒಂದು ವೇಳೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧ ಆರೋಪ ಹೊರಿಸಿ ತನಿಖಾಧಿಕಾರಿಗಳು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದರೆ, ಅರ್ಜಿದಾರರು ಅದನ್ನು ಪ್ರಶ್ನಿಸುವ ಸ್ವಾತಂತ್ರ್ಯವನ್ನು ಮುಕ್ತವಾಗಿ ಇರಿಸಲಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ವಿಲೇವಾರಿ ಮಾಡಿ ಆದೇಶಿಸಿದರು.

ಪ್ರಕರಣವೇನು?: ಹಾಸನದ ಮಹಿಳೆಯೊಬ್ಬರು ನೀಡಿದ ದೂರಿನ ಅನ್ವಯ ಹಾಸನ ವಿಧಾನಸಭಾ ಕ್ಷೇತ್ರದ ಬಿಜೆಪಿ ಮಾಜಿ ಶಾಸಕ ಪ್ರೀತಂ ಗೌಡ ಸೇರಿದಂತೆ ಇತರರ ವಿರುದ್ಧ ಬೆಂಗಳೂರಿನ ಸೈಬರ್ ಅಪರಾಧ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ-1860ರ ಕಲಂ 354ಎ, 354ಡಿ, 354ಬಿ ಮತ್ತು 506ರ ಅಡಿ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ-2000ರ ಕಲಂಗಳಾದ 67, 66ಇ ಅಡಿ ಪ್ರಕರಣ ದಾಖಲಿಸಲಾಗಿದೆ. ಇದರ ತನಿಖೆಯನ್ನು ಎಸ್‌ಐಟಿಗೆ ವಹಿಸಲಾಗಿದೆ.

ಐವರಿಗೆ 'ಅನುಪಮಾ ದತ್ತಿ ಪ್ರಶಸ್ತಿ'

ಲತಾ ಗುತ್ತಿ

ಸಬಿಹಾ ಭೂಮಿಗೌಡ

ವಿಜಯಾ ಸುಬ್ಬರಾಜ್

ಕೆ.ಆರ್.ಸಂಧ್ಯಾ ರೆಡ್ಡಿ

ಡಾ. ವಸುಂಧರಾ ಭೂಪತಿ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು 2020ರಿಂದ 2024ರವರೆಗಿನ ಅನುಪಮಾ ದತ್ತಿ ಪ್ರಶಸ್ತಿ ಪ್ರಕಟಿಸಿದ್ದು, ಐವರು ಲೇಖಕಿಯರು ಆಯ್ಕೆಯಾಗಿದ್ದಾರೆ.

ವಿಜಯಾ ಸುಬ್ಬರಾಜ್ (2020), ಡಾ. ವಸುಂಧರಾ ಭೂಪತಿ (2021), ಸಬಿಹಾ ಭೂಮಿಗೌಡ (2022), ಕೆ.ಆರ್. ಸಂಧ್ಯಾ ರೆಡ್ಡಿ (2023) ಹಾಗೂ ಲತಾ ಗುತ್ತಿ (2024) ಅವರನ್ನು ಆಯ್ಕೆ ಮಾಡಲಾಗಿದೆ.

ಲೇಖಕಿ ಡಾ. ಅನುಪಮಾ ನಿರಂಜನ ಅವರ ಹೆಸರಿನ ದತ್ತಿ ಪ್ರಶಸ್ತಿ ಇದಾಗಿದ್ದು, ಸಾಹಿತ್ಯ ಕ್ಷೇತ್ರದಲ್ಲಿನ ಲೇಖಕಿಯರ ಒಟ್ಟು ಕೊಡುಗೆಯನ್ನು ಪರಿಗಣಿಸಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪ್ರಶಸ್ತಿಯು ತಲಾ ₹10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಡಿ. 8ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ತಿಳಿಸಿದ್ದಾರೆ.

ಸ್ಮಾರ್ಟ್ ಸಿಟಿ: 26 ಕಾಮಗಾರಿ ಅಪೂರ್ಣ

ನವದೆಹಲಿ: ಕರ್ನಾಟಕದ ಏಳು ನಗರಗಳ ₹13,381 ಕೋಟಿ ಮೊತ್ತದ 882 ಕಾಮಗಾರಿಗಳು ಪೂರ್ಣಗೊಂಡಿವೆ. ₹441 ಕೋಟಿ ಮೊತ್ತದ 26 ಕಾಮಗಾರಿಗಳು ಇನ್ನೂ ಮುಗಿದಿಲ್ಲ ಎಂದು ಕೇಂದ್ರ ವಸತಿ ಹಾಗೂ ನಗರ ವ್ಯವಹಾರ ರಾಜ್ಯ ಸಚಿವ ಟಿ.ಸಾಹು ತಿಳಿಸಿದ್ದಾರೆ. ಲೋಕಸಭೆಯಲ್ಲಿ ದಕ್ಷಿಣ ಕನ್ನಡ ಸಂಸದ ಬ್ರಿಜೇಶ್ ಚೌಟ ಗುರುವಾರ ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ್ದಾರೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79, ಫ್ಯಾಕ್ಸ್: 080-22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕವಿನಿಆ/ಎಫ್-61/ವಾ-29(1)/965 ದಿನಾಂಕ: 20.11.2024

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ರಾಜ್ಯದೊಳಗಿನ ಮಾರ್ಗಾಂತರಣ ಇತ್ಯರ್ಥಗೊಳಿಸುವ ವ್ಯವಸ್ಥೆ ಹಾಗೂ ಸಂಬಂಧಿತ ವಿಷಯಗಳು) ವಿನಿಯಮಗಳು, 2024 ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಕರಡು ವಿನಿಯಮಗಳು ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ಯಲ್ಲಿ ಲಭ್ಯವಿರುತ್ತದೆ.

ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ದಿನಾಂಕ: 09.12.2024 ಬೆಳಿಗ್ಗೆ 11.00 ಗಂಟೆಗೆ ಸೋಮವಾರ ರಂದು, ಆಯೋಗದ ಕೋರ್ಟ್ ಹಾಲ್‌ನ, ಒಂದನೆಯ ಮಹಡಿ, ನಂ. 16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052 ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು** ನಿಗದಿಪಡಿಸಿದೆ.

ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ/ಅಭಿಪ್ರಾಯ/ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
DIPR/CP/3479/2024-25

ಕರ್ನಾಟಕ ಸರಕಾರ
ಆಯುಕ್ತರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಭೂಸ್ವಾಧೀನ, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ ಬಾಗಲಕೋಟರವರ ಕಾರ್ಯಾಲಯ - 587103

ದೂರವಾಣಿ : 08354-235925 Email : gmlaqukp1@gmail.com

ಕ್ರಸಂ:ಸಿಓಎಂ/ಇಎಸ್‌ಟಿ/ವಿಅನೇ/18-19/ವಿನಿವ-55ಎ/23-24/1588 ದಿನಾಂಕ:22-11-2024

-: ನಿವೃತ್ತ ನ್ಯಾಯಾಧೀಶರವರಿಂದ ಅರ್ಜಿ ಆಹ್ವಾನ :-

ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ವಿಶೇಷ ಅಧಿಕಾರಿಗಳು, ಕಾನೂನು ಕೋಶ ಮತ್ತು ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿಗಳು, ಕಾನೂನು ಇಲಾಖೆ, ಕೃಷ್ಣಾ ಮೇಲ್ದಂಡೆ ಯೋಜನೆ ಬಾಗಲಕೋಟೆ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು 65 ವರ್ಷದೊಳಗಿನ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅಥವಾ ನಿವೃತ್ತ ಹಿರಿಯ ಸಿವ್ಹಿಲ್ ನ್ಯಾಯಾಧೀಶರವರಿಂದ ಅರ್ಜಿ ಆಹ್ವಾನಿಸಲಾಗಿದೆ. ಹುದ್ದೆಗೆ ಆಯ್ಕೆ ಆದವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು-1958ರ ನಿಯಮ-313(ಬಿ) ಪ್ರಕಾರ ಮಾಸಿಕ ಸಂಚಿತ ವೇತನ ನಿಗಧಿಗೊಳಿಸಲಾಗುವುದು. ನೇಮಕಾತಿ ಅವಧಿ ಒಂದು ವರ್ಷ ಇರುತ್ತದೆ.

ಇಚ್ಛೆಯುಳ್ಳ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅಥವಾ ನಿವೃತ್ತ ಹಿರಿಯ ಸಿವ್ಹಿಲ್ ನ್ಯಾಯಾಧೀಶರು, ಪತ್ರಿಕಾ ಪ್ರಕಟಣೆ ಆದ 21 ದಿನಗಳ ಒಳಗಾಗಿ ನೇರವಾಗಿ ಆಯುಕ್ತರು, ಪುಪು/ಭೂಸ್ವಾಧೀನ, ಕೃ.ಮೇ.ಯೋ., ನವನಗರ, ಬಾಗಲಕೋಟೆ/E-mail ID:gmlaqukp1@gmail.com ವಿಳಾಸಕ್ಕೆ ತಮ್ಮ ಸ್ವ-ವಿವರ ಹಾಗೂ ದೃಢೀಕೃತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಸಹಿ/-ಮಹಾ ವ್ಯವಸ್ಥಾಪಕರು
ಪು ಮತ್ತು ಪು/ಭೂಸ್ವಾಧೀನ, ಕೃ.ಮೇ.ಯೋ., ಬಾಗಲಕೋಟೆ
DIPR/BGK/RO-NO-355/KSMCA/2024-25

TAMILNADU NEWSPRINT AND PAPERS LIMITED

TNPL
Kagithapuram - 639 136. Karur Dist. Tamil Nadu.
Ph.: 04324 - 277001 (10 Lines). Email: purchase.wood@tnpl.co.in

NOTICE INVITING TENDER

Tender No.	Description of work	Due date
242513 004737	Supply of Debarked Eucalyptus pulpwood from open market sources of Karnataka to TNPL Unit - I, Kagithapuram.	09.12.2024

Corrigendum if any will be issued in TNPL Website only. Detailed requirements, Period, Terms & conditions, Tender fee, EMD, etc., are available in the tender document which can be downloaded from website : **www.tnpl.com**

DIPR/5195/Tender/2024 *TNPL - Maker of bagasse based eco-friendly Paper*

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂವಿ(ಯೋ&ಸ)/ಅಇಂ(ಕಾ)/ಕೆಸಿಓ-118/64184/2024-25/15926-34 ದಿನಾಂಕ:28.11.2024

ನೇರ ಸಂದರ್ಶನ ಪ್ರಕಟಣೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ರಾಜ್ಯಾದ್ಯಂತ ಉಪ-ಕೇಂದ್ರಗಳು ಮತ್ತು ಇತರ ಕೆಲಸಗಳಿಗೆ ಸಂಬಂಧಿಸಿದ JE/AE/AEE ಗಳ ಮಟ್ಟದಲ್ಲಿ ಸಿವಿಲ್ ಇಂಜಿನಿಯರಿಂಗ್ ಕೆಲಸಗಳ ಮೇಲ್ವಿಚಾರಣೆ / ಪರಿಶೀಲನೆಗಾಗಿ ಸರ್ಕಾರಿ ಇಲಾಖೆಗಳು / PSU ಗಳಿಂದ ಗುತ್ತಿಗೆ ಆಧಾರದ ಮೇಲೆ ನಿವೃತ್ತ ಸಿವಿಲ್ ಇಂಜಿನಿಯರ್‌ಗಳನ್ನು ತೊಡಗಿಸಿಕೊಳ್ಳಲು ಉದ್ದೇಶಿಸಿದೆ.

ಆಸಕ್ತ ವ್ಯಕ್ತಿಗಳು (i) ಆಧಾರ್ ಕಾರ್ಡ್ (ವಯಸ್ಸಿನ ಪುರಾವೆ), (ii) ನಿವೃತ್ತಿ ಪ್ರಮಾಣಪತ್ರ.ದೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಲು ವಿನಂತಿಸಲಾಗಿದೆ.

ದಿನಾಂಕ	ಸ್ಥಳ	ಸಮಯ
09.12.2024	ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು - 09	ಬೆಳಿಗ್ಗೆ 10.00 ರಿಂದ ಅಪರಾಹ್ನ 3.00ರವರೆಗೆ

ಸಹಿ/-
ಮುಖ್ಯ ಇಂಜಿನಿಯರ್ (ವಿದ್ಯುತ್)
ಯೋಜನೆ & ಸಮನ್ವಯ, ಕವಿಪ್ರನಿನಿ
ಕಾವೇರಿ ಭವನ, ಬೆಂಗಳೂರು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು-560001, ಕರ್ನಾಟಕ, ಭಾರತ.
ಫೋನ್ : 25581383, 25589112, 25586520 ಫ್ಯಾಕ್ಸ್ : 080-25586321.
ಇ-ಮೇಲ್ : ho@kspcb.gov.in ವೆಬ್‌ಸೈಟ್ : https://kspcb.karnataka.gov.in

No. PCB/30/BLD/2023/2024-25/3533 Dated:22/11/2024

ಟೆಂಡರ್‌ಗೆ ಆಹ್ವಾನ (ಅಲ್ಪಾವಧಿ)-1ನೇ ಕರೆ

(ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್ಮೆಂಟ್ ವೇದಿಕೆ http://kppp.karnataka.gov.in ಮೂಲಕ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) ಈ ಕೆಳಕಂಡ ಕಾಮಗಾರಿಗಳಿಗೆ CEO-2 ರವರಿಂದ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ http://kppp.karnataka.gov.in ಮುಖಾಂತರ ಆಹ್ವಾನಿಸುತ್ತದೆ.

ಕಾಮಗಾರಿಯ ಹೆಸರು: ಬಳ್ಳಾರಿಯಲ್ಲಿರುವ ಕೆಎಸ್‌ಪಿಸಿಬಿ ಪ್ರಾದೇಶಿಕ ಕಚೇರಿ ಮತ್ತು ಪ್ರಯೋಗಾಲಯ ಕಟ್ಟಡದ ಫ್ಲೋರಿಂಗ್ ನವೀಕರಣ ಮತ್ತು ಪೇಂಟಿಂಗ್ ಕಾಮಗಾರಿ. ಕಾಮಗಾರಿಗಿಟ್ಟ ಅಂದಾಜು ಮೊತ್ತ : ರೂ. 40.27 ಲಕ್ಷಗಳು. ಟೆಂಡರ್ ವೆಚ್ಚ, ಇಎಮ್‌ಡಿ ಮುಂತಾದ ಎಲ್ಲಾ ಪಾವತಿಗಳನ್ನು ಇ-ಪಾವತಿ ವಿಧಾನದಲ್ಲಿ ಮಾತ್ರ ಪಾವತಿಸಬೇಕು.

ಹೆಚ್ಚಿನ ವಿವರಗಳಿಗೆ , ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ http://kppp.karnataka.gov.in ಗೆ ಭೇಟಿ ನೀಡಿ.

ಸಹಿ/-
ಮುಖ್ಯ ಪರಿಸರ ಅಧಿಕಾರಿ-2
DIPR/CP/3481/Zen/2024-25

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ; ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು-570006.

ಸಂ.ಕಾಅ/ಗ್ರಾಕುನೀ&ವಿ/ಮೈ/24-25/15 ದಿನಾಂಕ: 22.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ - ಕೆಪಿಪಿ ಪೋರ್ಟಲ್

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 3ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ KW1, KW2, KW-3 & KW-4 ರೀತ್ಯಾ (ದ್ವಿ ಲಕೋಟೆ ಪದ್ಧತಿಯಂತೆ) **ಹೆ.ಚ್.ಡಿ.ಕೋಟೆ, ಪಿರಿಯಾಪಟ್ಟಣ, ನರಸಿಪುರ ನಂಜನಗೂಡು ತಾಲ್ಲೂಕಿನ O & M 07** ಕಾಮಗಾರಿಗಳಿಗೆ ಅಂದಾಜು ಮೊತ್ತ **ರೂ. (76.33 ರಿಂದ 172.87 ಲಕ್ಷಗಳು)** ಕೆಪಿಪಿ ಪೋರ್ಟಲ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ **ದಿನಾಂಕ: 25.11.2024 ರಿಂದ 02.12.2024 ರವರೆಗೆ,** ಟೆಂಡರ್ ತೆರೆಯುವ **ದಿನಾಂಕ: 03.12.2024ರ ಸಂಜೆ 5.30 ಘಂಟೆಯ ನಂತರ.**

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (ಕೆಪಿಪಿ ಪೋರ್ಟಲ್) ವೆಬ್‌ಸೈಟ್‌ನಲ್ಲಿ ಪಡೆಯಬಹುದು. **https://kppp.karnataka.gov.in** ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ **ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಫೋನ್ ನಂ. 0821-2460495)** ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು.
DIPR/MYS/RO.865/AAPL/2024-25

ಪೊಲೀಸ್ ಇಲಾಖೆ

ಡೈರೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಛೇರಿ, ಅಂತರಿಕ ಭದ್ರತಾ ವಿಭಾಗ, ನಂ.60, ರಿಚ್‌ಮಂಡ್ ರಸ್ತೆ, ಬೆಂಗಳೂರು-560025.

ಸಂ: 09/ಸಿಎಸ್‌ಪಿ/ಐಎಸ್‌ಡಿ/2023-24 ದಿನಾಂಕ: 28.11.2024

ಇ-ಟೆಂಡರ್ ನೋಟೀಸ್

ಕರಾವಳಿ ಕಾವಲು ಪೊಲೀಸ್ (ಸಿಎಸ್‌ಪಿ), ಉಡುಪಿ ಘಟಕದ 02 ಸಂಖ್ಯೆಯ 12 ಟನ್ ಇಂಟರ್‌ಸೆಪ್ಟರ್ ಬೋಟುಗಳಿಗೆ ಮಿಡ್‌ಲೈಫ್ ಅಪ್‌ಗ್ರೇಡೇಷನ್ ಸರ್ವೀಸ್ ಅನ್ನು ಕೆ.ಟಿ.ಪಿ.ಪಿ ಕಾಯಿದೆ ಪ್ರಕಾರ ಕರ್ನಾಟಕ ಸರ್ಕಾರದ https://kppp.karnataka.gov.in ಇ-ಟೆಂಡರ್ ಪ್ರಕ್ರಿಯೆ ಮೂಲಕ ನೀಡಲು ಅರ್ಜಿಯನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್‌ನ ಸಂಕ್ಷಿಪ್ತ ವಿವರ
1	KSP/ 2024-25/ SE0038/ Call-2	Providing Midlife Upgradation for 02 Nos. 12 TON Interceptor Boats of Coastal Security Police, Karnataka.

ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ: 27.12.2024 ಸಂಜೆ 17:00 ಗಂಟೆಯವರೆಗೆ.

ಸದರಿ ಸರ್ವೀಸ್ ಅನ್ನು ನೀಡಲು ಇಚ್ಛಿಸುವವರು ಇ-ಖರೀದಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಇ-ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ-ಖರೀದಿ ಪ್ಲಾಟ್‌ಫಾರಂನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಸಹಾಯವಾಣಿ: +91-8046010000/+91-8068948777 ಗೆ ಸಂಪರ್ಕಿಸತಕ್ಕದ್ದು.

ಸಹಿ/-
ಡೈರೆಕ್ಟರ್ ಜನರಲ್ ಆಫ್ ಪೊಲೀಸ್
ಅಂತರಿಕ ಭದ್ರತಾ ವಿಭಾಗ ರವರ ಪರವಾಗಿ
DIPR/CP/3482/Maa/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ-1/ಟೆಂಡರ-13/2024-25/3032 ದಿನಾಂಕ: 27-11-2024

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ-4) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 16-12-2024 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 17-12-2024 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 18-12-2024 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 20-12-2024 17.00 ಗಂಟೆವರೆಗೆ

ಕಾಮಗಾರಿಯ ಹೆಸರು: ಲೆಕ್ಕ ಶೀರ್ಷಿಕೆ: During 2024-25 ವರ್ಷ ಇನಡೆಂಟ್: PWD/2024-25/BD/WORK_INDENT11908

(ಕೆಡಬ್ಲೂ-4) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ
DIPR/ADK/KSMCA/565/24-25 dt.28.11.2024

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ

ವಿಟಿಪಿಸಿ ಕರ್ನಾಟಕ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ಕಸ್ತೂರಬಾ ರಸ್ತೆ, ಬೆಂಗಳೂರು-560001, ದೂರವಾಣಿ: 080-22860644/9483534444
ಇ-ಮೇಲ್: vtpckarnataka@gmail.com ವೆಬ್‌ಸೈಟ್: https://vtpc.karnataka.gov.in
ಸಂಖ್ಯೆ: ವಿಟಿಪಿಸಿ/ಸನಿ/ರಫ್ತು ಪ್ರಶಸ್ತಿಗಳು/2024-25 ದಿನಾಂಕ: 20.11.2024

2020-21, 2021-22, 2022-23 ಮತ್ತು 2023-24ನೇ ಸಾಲುಗಳ 'ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿ' ಗಳಿಗಾಗಿ ಅರ್ಜಿಗಳ ಆಹ್ವಾನ

ರಾಜ್ಯದ ರಫ್ತನ್ನು ಉತ್ತೇಜಿಸಲು ಹಾಗೂ ರಫ್ತು ಕ್ಷೇತ್ರದಲ್ಲಿ ಗಣನೀಯ ಸಾಧನೆಯನ್ನು ಮಾಡಿರುವ ರಾಜ್ಯದ ರಫ್ತುದಾರರನ್ನು ಪ್ರೋತ್ಸಾಹಿಸಲು ಸರ್ಕಾರವು **'ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿ'** ಗಳನ್ನು ಸತತವಾಗಿ 1992-93ನೇ ಸಾಲಿನಿಂದ ನೀಡುತ್ತಾ ಬಂದಿದೆ. ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರ (ವಿಟಿಪಿಸಿ) ಸಂಸ್ಥೆಯು ಉತ್ತಮ ಸಾಧನೆಗೈದ ರಫ್ತುದಾರರನ್ನು ಆಯ್ಕೆಮಾಡುವ ಹಾಗೂ ಪ್ರಶಸ್ತಿಗಳನ್ನು ಪ್ರದಾನ ಮಾಡುವ ರಾಜ್ಯದ ನೋಡಲ್ ಸಂಸ್ಥೆಯಾಗಿರುತ್ತದೆ. 2020-21, 2021-22, 2022-23 ಮತ್ತು 2023-24ನೇ ಸಾಲುಗಳ **'ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿ'** ಗಳಿಗಾಗಿ ಕರ್ನಾಟಕದ ರಫ್ತುದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

(1) **ಅರ್ಹತೆ:** ಕರ್ನಾಟಕದಲ್ಲಿರುವ ಎಂ.ಎಸ್.ಎಂ.ಇ. ಘಟಕಗಳು, ಬೃಹತ್ ಮತ್ತು ಮೆಗಾ ಘಟಕಗಳು, 100% ರಫ್ತು ಆಧಾರಿತ ಘಟಕಗಳು, ಮರ್ಚೆಂಟ್ ರಫ್ತುದಾರರು, ಕೇಂದ್ರ ಮತ್ತು ರಾಜ್ಯ ಸರ್ಕಾರದ ರಫ್ತು ಆಧಾರಿತ ಕೈಗಾರಿಕೆಗಳು/ಘಟಕಗಳು, ಜಿಲ್ಲಾ ರಫ್ತುದಾರರು, ಮಹಿಳಾ ರಫ್ತುದಾರರು, ಪರಿಶಿಷ್ಟ ಜಾತಿ/ಪಂಗಡದ ಉದ್ಯಮಿಗಳು ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿಗಳಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಪಡೆದಿವೆ.

(2) ಆಸಕ್ತ ರಫ್ತುದಾರರು ನಿಗದಿತ ಅರ್ಜಿ ನಮೂನೆಯನ್ನು ಪೂರ್ಣವಾಗಿ ಹಾಗೂ ನಿಖರವಾಗಿ ಭರ್ತಿ ಮಾಡಿ ವಿ.ಟಿ.ಪಿ.ಸಿ ಕಛೇರಿಗೆ ಸಲ್ಲಿಸಬೇಕು.

(3) ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಂಸ್ಥೆಯ ವೆಬ್‌ಸೈಟ್ **www.vtpc.karnataka.gov.in** ನಲ್ಲಿ ನೀಡಲಾಗಿದೆ.

(4) ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿಗಳಿಗಾಗಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ 31.12.2024.**

ಸಹಿ/- ನಿರ್ದೇಶಕರು(ರಫ್ತು) ಹಾಗೂ ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/5054/2024-25/2701
ದಿನಾಂಕ: 27.11.2024

ಗುತ್ತಿಗೆ ಅವಧಿ ವಿಸ್ತರಣೆ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಉಲ್ಲೇಖ 1): ಐ.ಎಫ್.ಟಿ. (ಟೆಂಡರ್) ಸಂ. ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/5054&4059/2024-25/2276 ದಿನಾಂಕ: 21-10-2024
ಉಲ್ಲೇಖ 2): ಈ ಕಚೇರಿ ಐ.ಎಫ್.ಟಿ. (ಟೆಂಡರ್) ಸಂ. ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/ 5054&4059/2024-25/2671 ದಿನಾಂಕ: 21-11-2024

ಉಲ್ಲೇಖಿತ ಪ್ರಕಟಣೆಯಲ್ಲಿ ಆಹ್ವಾನಿಸಲಾದ ಟೆಂಡರ ಕಾಮಗಾರಿಗಳು (ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ) ಕ್ರ ಸಂ 1,2,3,4,5,6,7,10,11,12,13,14,15,16 ಕಾಮಗಾರಿಗಳನ್ನು ಕಾರಣಾಂತರಗಳಿಂದ ಮುಂದೂಡಿ, ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

1)ಗುತ್ತಿಗೆ ಪೂರ್ವ ಭಾವಿ ಸಭೆ ದಿನಾಂಕ: 04.12.2024ರ ಮುಂಜಾನೆ 11.00 ಗಂಟೆಗೆ,
2)ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:-17.12.2024 ರ ಸಂಜೆ 4.30 ಗಂಟೆಯವರೆಗೆ
3)ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ ದಿನಾಂಕ: 18.12.2024 ರ ಸಂಜೆ 4.31 ಘಂಟೆಯ ನಂತರ ಮತ್ತು.
4)ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 19.12.2024 ರ ಸಂಜೆ 4.31 ಘಂಟೆಯ ನಂತರ (ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ).

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.inರಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/458/ಕೆಎಸ್‌ಎಂಸಿಎ/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಚಾಮರಾಜಪೇಟೆ ವಿಭಾಗ, ಬೃಬೆಂಮಪಾ ಅಂಗನವಾಡಿ ಕೇಂದ್ರ, 2ನೇ ಮೇನ್, ಟಿ.ಆರ್.ಮಿಲ್ ರಸ್ತೆ, ಬೆಂಗಳೂರು-18.

ಸಂ: ಕಾಪಾಅ/ಚಾ.ಪೇಟೆ/ಟೆಂಡರ್/ಇ-ಪ್ರೊಕ್/10/2024-25 ದಿನಾಂಕ: 27.11.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿಲಕೋಟೆ ಪದ್ಧತಿ) (ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬೃಬೆಂಮಪಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ ಕೆಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರದ ಯಾವುದೇ ಸಂಸ್ಥೆಯಲ್ಲಿ ತತ್ಸಮಾನ ನೋಂದಾಯಿತ ಅರ್ಹ 1ನೇ ದರ್ಜೆ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗೆ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳು, ಚರಂಡಿ, ಬೀದಿ ನಾಮಫಲಕಗಳು ಹಾಗೂ ಸಾರ್ವಜನಿಕ ಸೌಕರ್ಯದ ಸಮಗ್ರ ಮೂಲಭೂತ ಸೌಕರ್ಯ ಅಭಿವೃದ್ಧಿ. **ಮೊತ್ತ:** ರೂ. 2500.00 ಲಕ್ಷಗಳು. **ಇಎಂಡಿ:** 25.00 ಲಕ್ಷಗಳು. (ರೂ. 1 ಲಕ್ಷ ಆನ್‌ಲೈನ್ ಮೂಲಕ ಉಳಿಕೆ ಹಣ ಬಿಜಿ/ಎಫ್‌ಡಿಆರ್ ಮೂಲಕ) **ಟೆಂಡರ್ ವೆಚ್ಚ:** ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ. ದರ್ಜೆ-1 ಮೇಲ್ಪಟ್ಟು ಸಿವಿಲ್ ಗುತ್ತಿಗೆದಾರರು. **ಪೂರ್ಣಗೊಳಿಸುವ ಕಾಲಾವಧಿ:** 12 ತಿಂಗಳು.

ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ದಿನಾಂಕ **02-12-2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಮುಖ್ಯ ಇಂಜಿನಿಯರ್‌ರವರ ಕಚೇರಿ (ಪಶ್ಚಿಮ), ಭಾಷ್ಯಂ ಉದ್ಯಾನವನ, ಶೇಷಾದ್ರಿಪುರಂ, ಬೆಂಗಳೂರು, ಇಲ್ಲಿ ಪೂರ್ವಭಾವಿ ಸಭೆ ದಿನಾಂಕ: **12-12-2024 ಬೆಳಿಗ್ಗೆ 11.00 ಗಂಟೆಗೆ.** (3) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **18-12-2024ರ ಬೆಳಿಗ್ಗೆ 11.00 ಗಂಟೆಯವರೆಗೆ.** (4) ಕೆಪಿಪಿ ಪೋರ್ಟಲ್ ಮೂಲಕ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **19-12-2024 ರ ಬೆಳಿಗ್ಗೆ 11.30 ಗಂಟೆಗೆ.** (5) ತಾಂತ್ರಿಕ ಬಿಡ್ ಅನುಮೋದನೆಯ ನಂತರ ಆರ್ಥಿಕ ಬಿಡ್ ತೆರೆಯುವಿಕೆಯನ್ನು ಅನುಸರಿಸಲಾಗುತ್ತದೆ.

ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿಯ ವೇಳೆಯಲ್ಲಿ ಎಲ್ಲಾ ಕೆಲಸದ ದಿನದಂದು ಅಥವಾ ಕೆಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರು, ಚಾಮರಾಜಪೇಟೆ ವಿಭಾಗ, ಬೃಬೆಂಮಪಾ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ-ರಸ್ತೆ ಮೂಲಸೌಕರ್ಯ, ದಕ್ಷಿಣ ವಿಭಾಗ, ವಲಯ ಆಯುಕ್ತರ ಕಚೇರಿ, 1ನೇ ಮಹಡಿ, 9ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು.

ಸಂಖ್ಯೆ: ಕಾಪಾಅ/ರಮೂ ದಕ್ಷಿಣ/ಟೆಂಡರ್/01/2024-25 ದಿನಾಂಕ: 28.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ (ಐಎಫ್‌ಟಿ) (ದ್ವಿ ಲಕೋಟೆ ಪದ್ಧತಿ)
(ಜಿಒಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ, ದಕ್ಷಿಣ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಬಿಬಿಎಂಪಿ ಅಥವಾ ಸಿಪಿಡಬ್ಲ್ಯುಡಿ/ಕೆಪಿಡಬ್ಲ್ಯುಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1	ರಸ್ತೆ ಮೂಲಸೌಕರ್ಯ-ದಕ್ಷಿಣ ವಿಭಾಗದ ಜಯನಗರ ಮತ್ತು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಫುಟ್‌ಪಾತ್‌ಗಳ ಸುಧಾರಣೆ ಹಾಗೂ ಆಯ್ದ ಅಪಧಮನಿ ಮತ್ತು ಅದರ ಉಪ-ರಸ್ತೆಗಳು ಹಾಗೂ ಇತರೆ ಪ್ರಮುಖ ರಸ್ತೆಗಳ ಮೈಕ್ರೋ ಸರ್ಫೇಸಿಂಗ್ ಕಾಮಗಾರಿ (ಪ್ಯಾಕೇಜ್ ನಂ. ಎಸ್-1).	1569.37
	ಇಎಂಡಿ ಮೊತ್ತ : ರೂ. 15.70 ಲಕ್ಷಗಳು. (ರೂ. 1.00 ಲಕ್ಷವನ್ನು ಕೆಪಿಪಿ ಪೋರ್ಟಲ್ ಮೂಲಕ ಹಾಗೂ ಉಳಿಕೆ ರೂ. 14.70 ಲಕ್ಷಗಳನ್ನು ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸಬೇಕು.	
2	ರಸ್ತೆ ಮೂಲಸೌಕರ್ಯ-ದಕ್ಷಿಣ ವಿಭಾಗದ ಬಸವನಗುಡಿ ಮತ್ತು ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಫುಟ್‌ಪಾತ್‌ಗಳ ಸುಧಾರಣೆ ಹಾಗೂ ಆಯ್ದ ಅಪಧಮನಿ ಮತ್ತು ಅದರ ಉಪ-ರಸ್ತೆಗಳು ಹಾಗೂ ಇತರೆ ಪ್ರಮುಖ ರಸ್ತೆಗಳ ಮೈಕ್ರೋ ಸರ್ಫೇಸಿಂಗ್ ಕಾಮಗಾರಿ (ಪ್ಯಾಕೇಜ್ ನಂ. ಎಸ್-2).	1569.37
	ಇಎಂಡಿ ಮೊತ್ತ : ರೂ. 15.70 ಲಕ್ಷಗಳು. (ರೂ. 1.00 ಲಕ್ಷವನ್ನು ಕೆಪಿಪಿ ಪೋರ್ಟಲ್ ಮೂಲಕ ಹಾಗೂ ಉಳಿಕೆ ರೂ. 14.70 ಲಕ್ಷಗಳನ್ನು ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸಬೇಕು.	
3	ರಸ್ತೆ ಮೂಲಸೌಕರ್ಯ-ದಕ್ಷಿಣ ವಿಭಾಗದ ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಫುಟ್‌ಪಾತ್‌ಗಳ ಸುಧಾರಣೆ ಮತ್ತು ಮಿಲ್ಲಿಂಗ್ ಹೋಲ್ ಸರ್ಫೇಸ್‌ನೊಂದಿಗೆ ಡಾಂಬರೀಕರಣ ಹಾಗೂ ಆಯ್ದ ಅಪಧಮನಿ ಮತ್ತು ಅದರ ಉಪ-ರಸ್ತೆಗಳು ಹಾಗೂ ಇತರೆ ಪ್ರಮುಖ ರಸ್ತೆಗಳ ಮೈಕ್ರೋ ಸರ್ಫೇಸಿಂಗ್ ಕಾಮಗಾರಿ (ಪ್ಯಾಕೇಜ್ ನಂ. ಎಸ್-3).	1569.37
	ಇಎಂಡಿ ಮೊತ್ತ : ರೂ. 15.70 ಲಕ್ಷಗಳು. (ರೂ. 1.00 ಲಕ್ಷವನ್ನು ಕೆಪಿಪಿ ಪೋರ್ಟಲ್ ಮೂಲಕ ಹಾಗೂ ಉಳಿಕೆ ರೂ. 14.70 ಲಕ್ಷಗಳನ್ನು ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸಬೇಕು.	

ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ: **ಮಳೆಗಾಲ ಅವಧಿ ಸೇರಿ 6 ತಿಂಗಳುಗಳು (ಪ್ರತಿ ಕಾಮಗಾರಿಗೆ)**

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in**ನಿಂದ **ದಿನಾಂಕ: 03.12.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಆಕ್ಷೇಪಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **12.12.2024ರ ಮಧ್ಯಾಹ್ನ 3.00 ಗಂಟೆವರೆಗೆ.** (3) ಪೂರ್ವ-ಬಿಡ್ ಸಭೆಯ ದಿನಾಂಕ: **12.12.2024ರಂದು ಸಂಜೆ 4.00 ಗಂಟೆಗೆ - ಮುಖ್ಯ ಅಭಿಯಂತರರು, ರಸ್ತೆ ಮೂಲಸೌಕರ್ಯ, ಬಿಬಿಎಂಪಿ ಇವರ ಕಚೇರಿಯಲ್ಲಿ.** (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **20.12.2024ರ ಸಂಜೆ 4.00 ಗಂಟೆಗೆ.** (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **21.12.2024ರಂದು ಸಂಜೆ 4.30 ಗಂಟೆಗೆ.** (6) ಆರ್ಥಿಕ ಬಿಡ್ ತೆರೆಯುವ ದಿನಾಂಕ: **ತಾಂತ್ರಿಕ ಮೌಲ್ಯೀಕರಣದ ಅನುಮೋದನೆಯ ನಂತರ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ರಸ್ತೆ ಮೂಲಸೌಕರ್ಯ - ದಕ್ಷಿಣ ವಿಭಾಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ, ರಾರಾ ನಗರ ವಿಭಾಗ, ಬೆಂಗಳೂರು - 560 098
ಸಂಖ್ಯೆ:ಕಾಪಾಅ(ರಮೂ-ರಾರಾನ)/ಟೆಂಡರ್/05/2024-25 ದಿನಾಂಕ:28.11.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ದತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಮೂಸೌಕರ್ಯ-ರಾಜರಾಜೇಶ್ವರಿನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು
1	ರಮೂಸೌ-ರಾರಾನಗರ ವಿಭಾಗದ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿಮಾರ್ಗಗಳ ಸುಧಾರಣೆ ಹಾಗೂ ಮಿಲ್ಲಿಂಗ್ ಸಂಪೂರ್ಣ ಸರ್ಫೇಸ್ ಒಳಗೊಂಡಂತೆ ಆಯ್ದ ಪ್ರಧಾನ ಮತ್ತು ಉಪಪ್ರಧಾನ ಹಾಗೂ ಇತರೆ ಪ್ರಮುಖ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು (ಪ್ಯಾಕೇಜ್ ಸಂ.ರಾರಾನ-1). **ಟೆಂಡರಿಗಿಟ್ಟ ಅಂದಾಜು ಮೊತ್ತ ₹.1569.37 ಲಕ್ಷಗಳು, ಇಎಂಡಿ: (ರೂ.1 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ, ಉಳಿದ ರೂ.14.69 ಲಕ್ಷಗಳು ಬ್ಯಾಂಕ್ ಗ್ಯಾರಂಟಿ ಪ್ರಕಾರ)**
2	ರಮೂಸೌ-ರಾರಾನಗರ ವಿಭಾಗದ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿಮಾರ್ಗಗಳ ಸುಧಾರಣೆ ಹಾಗೂ ಮಿಲ್ಲಿಂಗ್ ಸಂಪೂರ್ಣ ಸರ್ಫೇಸ್ ಒಳಗೊಂಡಂತೆ ಆಯ್ದ ಪ್ರಧಾನ ಮತ್ತು ಉಪಪ್ರಧಾನ ಹಾಗೂ ಇತರೆ ಪ್ರಮುಖ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು ಹಾಗೂ ಪಂಚಮುಖಿ ಗಣಪತಿ ದೇವಸ್ಥಾನದಿಂದ ರೈನ್‌ಬೋ ಸೇತುವೆವರೆಗೆ ವೈಟ್ ಟಾಪಿಂಗ್ /ಕಾಂಕ್ರೀಟ್ ರಸ್ತೆ ಒದಗಿಸುವುದು (ಪ್ಯಾಕೇಜ್ ಸಂ.ರಾರಾನ-2). **ಟೆಂಡರಿಗಿಟ್ಟ ಅಂದಾಜು ಮೊತ್ತ ₹.5885.12 ಲಕ್ಷಗಳು, ಇಎಂಡಿ: (ರೂ.1 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ, ಉಳಿದ ರೂ.57.85 ಲಕ್ಷಗಳು ಬ್ಯಾಂಕ್ ಗ್ಯಾರಂಟಿ ಪ್ರಕಾರ)**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳ ಲಭ್ಯತೆ ದಿನಾಂಕ **03.12.2024** ರಿಂದ (2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ **12.12.2024**ರ ಸಂಜೆ **4:00** ಗಂಟೆಗೆ. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **20.12.2024**ರ ಸಂಜೆ **4:00** ಗಂಟೆಯವರೆಗೆ (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **21.12.2024**ರ ಸಂಜೆ **4:30** ಗಂಟೆಗೆ. (5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು)

ಸಹಿ/- ಕಾರ್ಯಪಾಲಕ ಅಭಿಯಂತರರು,
ರಮೂಸೌ-ರಾಜರಾಜೇಶ್ವರಿನಗರ ವಿಭಾಗ

ಸಮಾಜ ಕಲ್ಯಾಣ ಆಯುಕ್ತರ ಕಛೇರಿ,
5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಸಂ: ಸಕನಿ/ಸಿಬ್ಬಂದಿ-10/ಸಿಆರ್-26/2016-17 (ಭಾಗ-1) ದಿನಾಂಕ: 14-11-2024

ತಿಳುವಳಿಕೆ ಪತ್ರ

ಡಾ॥ ಬಿ.ಕೆ.ನಾಗರಾಜಪ್ಪ, ಮೂಲತ: ಸಹಾಯಕ ನಿರ್ದೇಶಕರು (ಗ್ರೇಡ್-1) ಆದ ನೀವು ಈ ಹಿಂದೆ ಸ್ವಂತ ವೇತನ ಶ್ರೇಣಿ ಮೇಲೆ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೋಲಾರ ಜಿಲ್ಲೆ ಆದ ತಮಗೆ ತಿಳಿಯಪಡಿಸುವುದೇನೆಂದರೆ, ನೀವು ಈ ಕೆಳಕಂಡಂತೆ ಲೋಪವೆಸಗಿರುವುದು ಕಂಡುಬಂದಿರುತ್ತದೆ.

ಪ್ರಕರಣ-1: ನೀವು ಈ ಹಿಂದೆ ಸ್ವಂತ ವೇತನ ಶ್ರೇಣಿ ಮೇಲೆ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೋಲಾರ ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿನ ಆರೋಪಗಳಿಗೆ ಸಂಬಂಧಿಸಿದಂತೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ಇಲಾಖಾ ವಿಚಾರಣೆ ಕೈಗೊಂಡಿದ್ದು, ವಿಚಾರಣೆಯಲ್ಲಿ ಆರೋಪ ಸಾಬೀತಾಗಿರುವ ಹಿನ್ನೆಲೆಯಲ್ಲಿ ಶಿಸ್ತು ಕ್ರಮದ ಅಂತಿಮ ಆದೇಶ ಹೊರಡಿಸುವ ಮುನ್ನ ಸಿ ಸಿ ಎ ನಿಯಮ 11 ರಡಿ ದಿನಾಂಕ: 07.11.2023ರ 2ನೇ ತಿಳುವಳಿಕೆ ಪತ್ರವನ್ನು ಜಾರಿಗೊಳಿಸಲು ಸರ್ಕಾರದಿಂದ ನಿರ್ದೇಶನವಿರುತ್ತದೆ.

ಅದರಂತೆ ಈ ಕಛೇರಿಯಿಂದ ದಿನಾಂಕ: 06.08.2024ರ ತಿಳುವಳಿಕೆ ಪತ್ರವನ್ನು ನಿಮ್ಮ 02 ಮನೆ ವಿಳಾಸಕ್ಕೆ ಕಳುಹಿಸಲಾಗಿರುತ್ತದೆ. ಆದರೆ ಸದರಿ ಮನೆ ವಿಳಾಸದಲ್ಲಿ ಯಾರೂ ಇರದ ಕಾರಣ ತಿಳುವಳಿಕೆ ಪತ್ರಗಳು ಅಂಚೆ ಮೂಲಕ ಹಿಂದಿರುಗಿರುತ್ತವೆ.

ಪ್ರಕರಣ-2: ಸರ್ಕಾರದ ಅಧಿಸೂಚನೆ ದಿನಾಂಕ: 08.03.2023ರ ಮೇರೆಗೆ ನೀವು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ, ಬೆಂಗಳೂರು ಇಲ್ಲಿನ ಸಹಾಯಕ ನಿರ್ದೇಶಕರು ಹುದ್ದೆಗೆ ದಿನಾಂಕ: 01.09.2023 ರಂದು ಕರ್ತವ್ಯ ವರದಿ ಮಾಡಿಕೊಂಡಿರುತ್ತೀರಿ. ನಂತರದಲ್ಲಿ ನೀವು ಕರ್ತವ್ಯಕ್ಕೆ ಹಾಜರಾಗಿ ಕಾರ್ಯ ನಿರ್ವಹಿಸದೇ ದಿನಾಂಕ: 27.11.2023 ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿ, ದಿನಾಂಕ: 01.09.2023 ರಿಂದ ವೇತನ ಪಾವತಿಸುವಂತೆ ಕೋರಿರುತ್ತೀರಿ.

ಸರ್ಕಾರದ ಪತ್ರ ದಿನಾಂಕ: 13.06.2024 ರಲ್ಲಿ ನಿಮ್ಮ ವೇತನ ಪಾವತಿ ಸಂಬಂಧ ಆಯೋಗದಿಂದ ಪಡೆಯಲಾಗಿರುವ ವರದಿ ಆಧಾರ ಸೂಕ್ತ ವಿವರಣೆ ನೀಡುವಂತೆ ನಿಮಗೆ ವಿಳಾಸಿಸಿದ ಪತ್ರವನ್ನು ಈ ಕಛೇರಿಯಿಂದ ಜಾರಿಗೊಳಿಸಲು ಸರ್ಕಾರದಿಂದ ನಿರ್ದೇಶನವಿರುತ್ತದೆ.

ಅದರಂತೆ ಈ ಕಛೇರಿಯಿಂದ ದಿನಾಂಕ: 08.08.2024 ರ ತಿಳುವಳಿಕೆ ಪತ್ರವನ್ನು ನಿಮ್ಮ 02 ಮನೆ ವಿಳಾಸಕ್ಕೆ ಕಳುಹಿಸಲಾಗಿರುತ್ತದೆ. ಆದರೆ ಸದರಿ ಮನೆ ವಿಳಾಸದಲ್ಲಿ ಯಾರೂ ಇರದ ಕಾರಣ "Unclaimed returned to sender on date 22.08.2024 ಮತ್ತು left without instruction RTS date 16.08.2024" ಎಂದು ಹಿಂದಿರುಗಿ ಬಂದಿರುತ್ತದೆ.

ಮುಂದುವರೆದು ಸರ್ಕಾರದ ನಿರ್ದೇಶನದಂತೆ ನೀವು ಆಯೋಗದಲ್ಲಿ ಕರ್ತವ್ಯ ವರದಿ ಮಾಡಿಕೊಂಡ ದಿನಾಂಕ: 01.09.2023ರಿಂದ ಇಲ್ಲಿಯವರೆಗೂ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುವ ಹಿನ್ನೆಲೆಯಲ್ಲಿ ಸೂಕ್ತ ವಿವರಣೆ ನೀಡುವಂತೆ ಈ ಕಛೇರಿಯಿಂದ ದಿನಾಂಕ: 14.10.2024 ರನ್ವಯ ಕಾರಣ ಕೇಳುವ ನೋಟೀಸನ್ನು ಸದರಿಯವರ 02 ಮನೆ ವಿಳಾಸಕ್ಕೆ ಕಳುಹಿಸಲಾಗಿರುತ್ತದೆ. ಸದರಿ ನೋಟೀಸುಗಳು ಅಂಚೆ ಮೂಲಕ ಹಿಂದಿರುಗಿರುತ್ತವೆ

ಆದುದರಿಂದ ಪ್ರಕರಣ-1 ಹಾಗೂ 2ಕ್ಕೆ ಸಂಬಂಧಿಸಿದಂತೆ ನಿಮ್ಮಿಂದ ಇದುವರೆವಿಗೂ ಸಮಜಾಯಿಷಿ ಸ್ವೀಕೃತಗೊಳ್ಳದ ಕಾರಣ, ನಿಮ್ಮ ಮೇಲಿನ ಪ್ರಕರಣ ಇತ್ಯರ್ಥಪಡಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಈ ತಿಳುವಳಿಕೆ ಪತ್ರ ಪ್ರಕಟಿಸಿದ 7 ದಿವಸದೊಳಗೆ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಹಾಗೂ ಈ ಕಛೇರಿಗೆ ಅಗತ್ಯ ದಾಖಲೆಗಳೊಂದಿಗೆ ಸಮಜಾಯಿಷಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಪ್ರತಿಕ್ರಿಯೆ ಏನೂ ಇಲ್ಲವೆಂದು ಭಾವಿಸಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸುವ ಸಲುವಾಗಿ ಸರ್ಕಾರಕ್ಕೆ ವರದಿಸಲಾಗುವುದು ಎಂಬ ವಿಷಯವನ್ನು ನಿಮ್ಮ ಗಮನಕ್ಕೆ ತರಲಾಗಿದೆ.

ಸಹಿ/-
ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
ವಾಸಾಸಂಇ/ವಾಪ್ರ/3459/ಎಂಎಎ/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ರಸ್ತೆ ಮೂಲಸೌಕರ್ಯ-ಬೊಮ್ಮನಹಳ್ಳಿ ವಿಭಾಗ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ಕಾರ್ ಪಾರ್ಕ್ ಹಿಂಭಾಗ, ಆರ್‌ಟಿಒ ಕಚೇರಿ ಎದುರು, ಬಿಟಿಎಂ ಲೇಔಟ್, 4ನೇ ಹಂತ, 2ನೇ ಬ್ಲಾಕ್, ದೇವರಚಿಕ್ಕನಹಳ್ಳಿ, ಬೆಂಗಳೂರು-560098.
ಇಮೇಲ್: bommanahalli.roadinfra@gmail.com

No.EE/RI-Bom/TEND/02/2024-25 Date: 28.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
ಟೆಂಡರ್ ಗೆ ಆಹ್ವಾನ (ಐಎಫ್‌ಟಿ)
(ಜಿಒಕೆ ಕರ್ನಾಟಕ ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ) (ಎರಡು ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ರ ಮೂ- ಬೊಮ್ಮನಹಳ್ಳಿ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಥವಾ ಕೆಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಪೋರ್ಟಲ್ ಮೂಲಕ ಸಲ್ಲಿಸಬಹುದು. ಕಾಮಗಾರಿಗೆ ಅರ್ಹತೆ ಪಡೆಯಲು ಟೆಂಡರ್ ಸೂಚನೆಗಳಲ್ಲಿ ಷರತ್ತು 3ರಲ್ಲಿ ನಿರ್ದಿಷ್ಟ ಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಟೆಂಡರ್‌ದಾರರಿಗೆ ಸೂಚಿಸಲಾಗುತ್ತದೆ. (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಮತ್ತು ಕೆಟಿಪಿಪಿ ಕಾಯ್ದೆಯನ್ನು ಅನುಸರಿಸಬೇಕು). 2. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಿಂದ 03.12.2024 ರಿಂದ ಡೌನ್‌ಲೋಡ್ ಮಾಡಬಹುದು. 3. ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಗಳ ವಿವರ/ಟೆಂಡರ್‌ಗಿಟ್ಟ ಮೊತ್ತ(ರೂ. ಲಕ್ಷಗಳಲ್ಲಿ)/ಇಎಂಡಿ (ರೂ. ಗಳಲ್ಲಿ)
1	ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ (ಪ್ಯಾಕೇಜ್ ನಂ. ಬಿ -1) ರಸ್ತೆ ಮೂಲಸೌಕರ್ಯ - ಬೊಮ್ಮನಹಳ್ಳಿ ವಿಭಾಗದಲ್ಲಿ ಬರುವ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮತ್ತು ಡಾಂಬರೀಕರಣ ಹಾಗೂ ಆಯ್ದ ಆರ್ಟರಿಯಲ್, ಸಬ್ -ಆರ್ಟರಿಯಲ್ ಮತ್ತು ಇತರ ಪ್ರಮುಖ ರಸ್ತೆಗಳ ಸಂಪೂರ್ಣ ಮೇಲ್ಮೈ ಮಿಲ್ಲಿಂಗ್ ಸೇರಿದಂತೆ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 1765.54, ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ): 17.66 (ಕೆಪಿಪಿ ಪೋರ್ಟಲ್ ಮೂಲಕ ರೂ. 1 ಲಕ್ಷ, ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ರೂ. 16.66 ಲಕ್ಷ)
2	ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ (ಪ್ಯಾಕೇಜ್ ನಂ. ಬಿ -2) ರಸ್ತೆ ಮೂಲಸೌಕರ್ಯ - ಬೊಮ್ಮನಹಳ್ಳಿ ವಿಭಾಗದಲ್ಲಿ ಬರುವ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳಿಗೆ ಸುಧಾರಣೆ ಮತ್ತು ಡಾಂಬರೀಕರಣ ಹಾಗೂ ಆಯ್ದ ಆರ್ಟರಿಯಲ್, ಸಬ್ -ಆರ್ಟರಿಯಲ್ ಮತ್ತು ಇತರ ಪ್ರಮುಖ ರಸ್ತೆಗಳ ಸಂಪೂರ್ಣ ಮೇಲ್ಮೈ ಮಿಲ್ಲಿಂಗ್ ಸೇರಿದಂತೆ ಕಾಮಗಾರಿ. ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 1765.54, ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ): 17.66 (ಕೆಪಿಪಿ ಪೋರ್ಟಲ್ ಮೂಲಕ ರೂ. 1 ಲಕ್ಷ, ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ರೂ. 16.66 ಲಕ್ಷ)

ವೇಳಾಪಟ್ಟಿ: 1) ಟೆಂಡರ್ ದಸ್ತಾವೇಜುಗಳು ಲಭ್ಯವಿರುವ ದಿನಾಂಕ : 03.12.2024 ರಿಂದ, 2) ಪ್ರೀ ಬಿಡ್ ಮೀಟಿಂಗ್ : 12.12.2024 ಸಂಜೆ 4.00 ಗಂಟೆಗೆ. 3) ಟೆಂಡರ್ ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : 20.12.2024 ಸಂಜೆ 4.00 ಗಂಟೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 21.12.2024 ಸಂಜೆ 4.30 ಗಂಟೆಗೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : ತಾಂತ್ರಿಕವಾಗಿ ಅರ್ಹವಾದ ಬಿಡ್ಡರ್‌ಗಳಿಗೆ ತಿಳಿಸಲಾಗುವುದು.

ಸಹಿ/-ಕಾರ್ಯಪಾಲಕ ಅಭಿಯಂತರರು, ರಮೂ- ಬೊಮ್ಮನಹಳ್ಳಿ ವಿಭಾಗ), ಬಿಬಿಎಂಪಿ

❦ ಸುಭಾಷಿತ ❦
ನಾವು ನೆರವು ನೀಡಬೇಕಾಗಿರುವುದು ಅರ್ಹರಿಗೇ ವಿನಾ ಅಗತ್ಯ ಇರುವವರಿಗಲ್ಲ.
-ಜಿಮ್ ರೌನ್

ಸಂವಿಧಾನಕ್ಕೆ ಅಗೌರವ ತೋರುವ ಮಾತು ಸ್ವಾಮೀಜಿಗಳಿಗೆ ಶೋಭೆ ತರದು

‘ಸಂವಿಧಾನ ದಿನ’ ಆಚರಣೆಯ ಆಸುಪಾಸಿನಲ್ಲಿ ಇಬ್ಬರು ಸ್ವಾಮೀಜಿಗಳು ಆಡಿರುವ ಮಾತುಗಳು ಸಂವಿಧಾನದ ಆಶಯಗಳನ್ನು ಪ್ರಶ್ನಿಸುವಂತಿವೆ. ಸ್ವಾತಂತ್ರ್ಯಪೂರ್ವದಲ್ಲಿ ಹಿಂದೂರಾಷ್ಟ್ರವಾಗಿದ್ದ ಭಾರತ, ಸ್ವಾತಂತ್ರ್ಯಾನಂತರ ಜಾತ್ಯತೀತ ರಾಷ್ಟ್ರವಾಯಿತು ಎಂದು ಅಭಿಪ್ರಾಯಪಟ್ಟಿರುವ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ‘ನಮ್ಮನ್ನು ಗೌರವಿಸುವ ಸಂವಿಧಾನ ಬರಬೇಕು’ ಎಂದು ಅಭಿಪ್ರಾಯಪಟ್ಟಿದ್ದಾರೆ. ‘ಮುಸ್ಲಿಮರಿಗೆ ಮತದಾನದ ಹಕ್ಕು ಇಲ್ಲದಂತೆ ಮಾಡುವ ಕಾನೂನು ಜಾರಿಗೆ ತರಬೇಕು’ ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಹೇಳಿದ್ದಾರೆ. ಈಗಿರುವ ಸಂವಿಧಾನ ನಮ್ಮನ್ನು ಅಗೌರವಿಸುವಂತಹದ್ದು ಎನ್ನುವ ಅರ್ಥದ ಮಾತು ಹಾಗೂ ಈ ದೇಶದ ಅವಿಭಾಜ್ಯ ಭಾಗವೇ ಆದ ಸಮುದಾಯವೊಂದನ್ನು ಮತದಾನದ ಹಕ್ಕಿನಿಂದ ದೂರವಿಡಬೇಕು ಎನ್ನುವ ಅಭಿಪ್ರಾಯ ಸಂವಿಧಾನದ ಆಶಯಗಳನ್ನು ಅಗೌರವಿಸುವ ನಡೆಯಷ್ಟೇ ಅಲ್ಲ, ಸಮಾಜದಲ್ಲಿ ಬಿರುಕು ಉಂಟುಮಾಡುವ ಪ್ರಯತ್ನವೂ ಹೌದು. ದೇಶವನ್ನು ಕಬಳಿಸುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ ಹಾಗೂ ಹಿಂದೂಗಳು ಅಸುರಕ್ಷಿತರಾಗಿದ್ದಾರೆ ಎನ್ನುವ ಪೇಜಾವರ ಸ್ವಾಮೀಜಿ ಮಾತು ರಾಷ್ಟ್ರೀಯ ಭದ್ರತೆಗೆ ಗಂಡಾಂತರ ಒದಗಿದೆ ಎನ್ನುವ ಅರ್ಥವನ್ನು ನೀಡುವಂತಿದೆ. ಸ್ವಾಮೀಜಿ ಮೆಚ್ಚುವ ಸಿದ್ಧಾಂತವನ್ನು ಅನುಸರಿಸುವ ಪಕ್ಷವೇ ಕೇಂದ್ರದಲ್ಲಿ ಅಧಿಕಾರದಲ್ಲಿರುವಾಗಲೂ ದೇಶ ಸುರಕ್ಷಿತವಾಗಿಲ್ಲ ಎನ್ನುವುದಾದರೆ, ಸ್ವಾಮೀಜಿ ಬಯಸುತ್ತಿರುವುದಾದರೂ ಏನನ್ನು? ಹಿಂದೂ ಮತ್ತು ಹಿಂದೂ ಧರ್ಮವನ್ನು ರಕ್ಷಿಸುವ ಪಕ್ಷವನ್ನು ಅಧಿಕಾರಕ್ಕೆ ತರಲಿಕ್ಕಾಗಿ ಚುನಾವಣೆ ಸಂದರ್ಭದಲ್ಲಿ ಜನ ಬೀದಿಗೆ ಇಳಿಯಬೇಕೆನ್ನುವ ಅವರ ಕರೆ, ರಾಜಕಾರಣಿಯೊಬ್ಬರ ಒಡಕು ಮಾತಿನಂತಿದೆ. ಮುಸ್ಲಿಮರಿಗೆ ಮತದಾನದ ಹಕ್ಕು ಇಲ್ಲದಂತೆ ಮಾಡುವ ಮೂಲಕ ಅವರನ್ನು ಅವರ ಪಾಡಿಗೆ ಇರುವಂತೆ ಮಾಡಬಹುದೆನ್ನುವ ಚಂದ್ರಶೇಖರನಾಥ ಸ್ವಾಮೀಜಿ ಅವರ ಮಾತು ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನೇ ಅಣಕಿಸುವಂತಿದೆ. ರಾಜಕಾರಣಿಗಳು ಮತಕ್ಕಾಗಿ ಕೆಲವು ಸಮುದಾಯದವರನ್ನು ಓಲೈಸುತ್ತಿರುವುದನ್ನು ವಿರೋಧಿಸಿರುವ ಸ್ವಾಮೀಜಿ, ವಕ್ಫ್ ಮಂಡಳಿಯನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದ್ದಾರೆ. ಸ್ವಾಮೀಜಿ ವಾದವನ್ನು ಒಪ್ಪುವುದಾದರೆ, ವಕ್ಫ್ ಮಂಡಳಿಯ ಜೊತೆಗೆ ಓಲೈಕೆ ರಾಜಕಾರಣದಲ್ಲಿ ತೊಡಗಿರುವ ಧಾರ್ಮಿಕ ಸಂಸ್ಥೆಗಳನ್ನು ಏನು ಮಾಡಬೇಕು? ಸಮುದಾಯಗಳ ಓಲೈಕೆಯನ್ನು ವಿರೋಧಿಸುವ ಸ್ವಾಮೀಜಿಗಳ ಮಾತುಗಳೂ ಮತ್ತೊಂದು ಸಮುದಾಯದ ಅಥವಾ ರಾಜಕೀಯ ಪಕ್ಷದ ಓಲೈಕೆಯಂತೆ ಕಾಣಿಸುತ್ತಿಲ್ಲವೆ?

ಸ್ವಾಮೀಜಿಗಳು ಸಮುದಾಯಗಳ ನಡುವೆ ಬಿರುಕು ಮೂಡಿಸುವಂತಹ ಮಾತುಗಳನ್ನು ಆಡುವುದು ಸರಿಯಲ್ಲ

ಅಸಾಂವಿಧಾನಿಕ ಮಾತುಗಳನ್ನಾಡಿರುವ ಇಬ್ಬರು ಸ್ವಾಮಿಗಳು ತಾವು ಬದುಕುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎನ್ನುವುದನ್ನು ಮರೆತು, ಸಂವಿಧಾನವು ತಮ್ಮ ಮೂಗಿನ ನೇರಕ್ಕೆ ಇರಬೇಕು ಎಂದು ಬಯಸುತ್ತಿರುವಂತಿದೆ. ಅಸಾಂವಿಧಾನಿಕ ಮಾತುಗಳಿಗೆ ಎದುರಾದ ವಿರೋಧದಿಂದ, ಚಂದ್ರಶೇಖರನಾಥ ಸ್ವಾಮೀಜಿ ‘ಬಾಯಿ ತಪ್ಪಿ ನೀಡಿದ ಹೇಳಿಕೆ’ಯ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಮಾತು ಮತ್ತು ದೇಹದ ಮೇಲೆ ನಿಗ್ರಹ ಸಾಧಿಸಬೇಕಾದ ಸ್ವಾಮೀಜಿಗಳೇ ಬಾಯಿ ತಪ್ಪಿ ಮಾತನಾಡಬಹುದಾದರೆ, ಜನಸಾಮಾನ್ಯರ ಪಾಡೇನು? ತಮ್ಮ ಮಾತು ಉಂಟು ಮಾಡಬಹುದಾದ ಪರಿಣಾಮಗಳ ಬಗ್ಗೆ ಎಚ್ಚರವಿಲ್ಲದೆ ಮಾತನಾಡುವ ಸ್ಥಿತಿಗೆ ಸ್ವಾಮೀಜಿಗಳು ತಲುಪಬಾರದು. ಸಂವಿಧಾನ ಬದಲಾವಣೆಯ ಪ್ರತಿಪಾದನೆ ಹಾಗೂ ಸಮುದಾಯವೊಂದಕ್ಕೆ ಮತದಾನ ನಿರಾಕರಿಸಬೇಕೆನ್ನುವ ಅಭಿಪ್ರಾಯದ ಮಾತುಗಳು ಯಾವ ಸ್ವಾಮೀಜಿಗೂ ಗೌರವ ತರುವಂತಹವುಗಳಲ್ಲ. ಅನಗತ್ಯ ಚರ್ಚೆಗಳಿಗೆ ಎಡೆ ಮಾಡಿಕೊಡುವಂತಹ ಭಾವಾವೇಶದ ಮಾತುಗಳು, ಜನಸಾಮಾನ್ಯರನ್ನು ದಿಕ್ಕು ತಪ್ಪಿಸುವಂತಹವೂ ಹೌದು. ಯಾವುದೇ ಧರ್ಮಕ್ಕೆ ಅಪಾಯ ಎದುರಾದಾಗ, ಸಮಸ್ಯೆಯನ್ನು ಪರಿಹರಿಸಲು ಚುನಾಯಿತ ಸರ್ಕಾರವಿದೆ ಹಾಗೂ ಆ ಸರ್ಕಾರಕ್ಕೆ ಸಂವಿಧಾನದ ಮಾರ್ಗಸೂಚಿಗಳಿವೆ. ಸರ್ಕಾರ ಮಾಡಬೇಕಾದ ಕೆಲಸವನ್ನು ಸ್ವಾಮೀಜಿಗಳು ಮಾಡಹೊರಡುವುದು ಹಾಗೂ ಬೀದಿಗಿಳಿಯುವಂತೆ ಜನರಿಗೆ ಕರೆ ನೀಡುವುದು ಧರ್ಮಕ್ಕೆ ಹಾಗೂ ಧರ್ಮಪೀಠಗಳಿಗೆ ಗೌರವ ತರುವ ನಡವಳಿಕೆಗಳಲ್ಲ. ಸಮಾಜದ ನೈತಿಕತೆಯ ಮಟ್ಟವನ್ನು ಉನ್ನತೀಕರಿಸಲು ಶ್ರಮಿಸಬೇಕಾದ ಸ್ವಾಮೀಜಿಗಳು, ಸಮುದಾಯಗಳ ನಡುವೆ ಬಿರುಕು ಉಂಟು ಮಾಡುವಂತಹ ಮಾತುಗಳನ್ನಾಡುವುದು ಸರಿಯಲ್ಲ. ‘ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದವು ಎಂದು ಸಂಭ್ರಮಿಸುತ್ತಿದ್ದೇವೆ. ಆದರೆ ನಿಜಕ್ಕೂ ನಾವು ಸ್ವತಂತ್ರವಾಗಿ ಇದ್ದೇವೆಯೇ’ ಎಂದು ಸ್ವಾಮೀಜಿ ಪ್ರಶ್ನಿಸಿದ್ದಾರೆ. ಸ್ವತಂತ್ರವಾಗಿ ಇರುವ ಕಾರಣದಿಂದಲೇ ಸಂವಿಧಾನವನ್ನು ಧರ್ಮದ ಅಗತ್ಯಕ್ಕೆ ತಕ್ಕಂತೆ ಬದಲಿಸುವ ಮಾತುಗಳನ್ನಾಡುವುದು ಅವರಿಗೆ ಸಾಧ್ಯವಾಗಿದೆ. ಯಾವುದೋ ಒಂದು ಪಕ್ಷದ ಸೋಲು ಅಥವಾ ಮತ್ತೊಂದು ಪಕ್ಷದ ಗೆಲುವು ಸ್ವಾಮೀಜಿಗಳ ಸಂತಸಕ್ಕೆ ಅಥವಾ ಬೇಸರಕ್ಕೆ ಕಾರಣವಾಗಬಾರದು. ಅವರನ್ನು ನಿಜಕ್ಕೂ ತಲ್ಲಣಗೊಳಿಸಬೇಕಾಗಿರುವುದು, ಧರ್ಮ ಮತ್ತು ರಾಜಕಾರಣದ ನಡುವಿನ ಗೆರೆ ಅಳಿಸಿಹೋಗುತ್ತಿರುವ ವಿದ್ಯಮಾನ. ಚುನಾಯಿತ ಸರ್ಕಾರವೊಂದು ತಾನು ಎಲ್ಲ ಸಮುದಾಯಗಳ ಪ್ರತಿನಿಧಿ ಎನ್ನುವುದನ್ನು ಮರೆತು, ನಿರ್ದಿಷ್ಟ ಧರ್ಮದ ಪರವಾಗಿ ಒಲವು ವ್ಯಕ್ತಪಡಿಸುವ ನಿರ್ಲಜ್ಜೆಯನ್ನು ಪ್ರದರ್ಶಿಸಿದಾಗ, ಸರ್ಕಾರಕ್ಕೆ ಧರ್ಮವಿವೇಕವನ್ನು ತಿಳಿಸಿ ಎಚ್ಚರಿಸುವ ಕೆಲಸವನ್ನು ಸ್ವಾಮೀಜಿಗಳು ಮಾಡಬೇಕು. ಇದರ ಬದಲಾಗಿ, ಸ್ವಾಮೀಜಿಗಳೇ ಮನಸೋ ಇಚ್ಛೆ ಮಾತನಾಡುವ ರಾಜಕಾರಣಿಗಳ ರೀತಿಯಲ್ಲಿ ವರ್ತಿಸುವುದನ್ನು ಇಲ್ಲವೇ ನಿರ್ದಿಷ್ಟ ಧರ್ಮದ ಪರವಾಗಿ ಸರ್ಕಾರ ಇರಬೇಕೆಂದು ಬಯಸುವುದನ್ನು ಈ ದೇಶದ ಧರ್ಮವೂ ಒಪ್ಪುವುದಿಲ್ಲ, ಸಂವಿಧಾನವೂ ಒಪ್ಪುವುದಿಲ್ಲ.

ದಿನದ ಟ್ವೀಟ್

ಚಲಾವಣೆಗೆ ಬಂದದ್ದು ಹೇಗೆ?!

₹ 500 ಮುಖಬೆಲೆಯ 4.3 ಲಕ್ಷ ಕೋಟಿ ಮೌಲ್ಯದ ಖೋಟಾ ನೋಟುಗಳು ಚಲಾವಣೆಯಲ್ಲಿವೆ! ಅದು, ನರೇಗಾ ಬಜೆಟ್‌ನ 5 ಪಟ್ಟು ಅಥವಾ ಕೇಂದ್ರದ ಶಿಕ್ಷಣ + ಆರೋಗ್ಯ ಬಜೆಟ್ ಗಾತ್ರದ ಎರಡು ಪಟ್ಟು ಅಥವಾ 5 ಸಣ್ಣ ರಾಜ್ಯಗಳ ಒಟ್ಟು ಬಜೆಟ್‌ನಷ್ಟು.

ಜವಾಹರ್ ಸರ್ಕಾರ್, ನಿವೃತ್ತ ಐಎಎಸ್ ಅಧಿಕಾರಿ

ಕಿಡಿನುಡಿ



ಬಾಂಗ್ಲಾದೇಶವು ಮತ್ತೊಂದು ಪಾಕಿಸ್ತಾನ ಆಗುತ್ತಿದೆ. ಹಿಂದೂಗಳ ಮೇಲೆ ಇತ್ತೀಚೆಗೆ ನಡೆದ ಮತ್ತು ನಡೆಯುತ್ತಿರುವ ದಾಳಿಗಳು ತೀವ್ರ ಖಂಡನೀಯ. ಇಸ್ಕಾನ್ ಮೇಲೆ ನಿಷೇಧ ಹೇರಬೇಕು ಎಂಬ ಪ್ರಸ್ತಾವ ಅಸಂಬದ್ಧವಾದುದು. ಬಾಂಗ್ಲಾದೇಶ ಈಗ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು. ಅವರೀಗ ಹಿಂಸಾಚಾರ ಮತ್ತು ದ್ವೇಷವನ್ನು ನಿಲ್ಲಿಸಿ ಆರ್ಥಿಕ ಬೆಳವಣಿಗೆಯತ್ತ ಗಮನಹರಿಸಬೇಕು ಅಥವಾ ದಿವಾಳಿಯಾಗಿರುವ ಮತ್ತು ವಿಫಲ ರಾಷ್ಟ್ರವಾಗಿರುವ ಪಾಕಿಸ್ತಾನದಂತೆಯೇ ಆಗಬೇಕು.

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಸೋಮವಾರ, 29-11-1999

● ಆಲಮಟ್ಟಿ: ನಿಷ್ಪಕ್ಷಪಾತ ನೋಟಕ್ಕೆ ಪ್ರಧಾನಿ ಭರವಸೆ

ನವದೆಹಲಿ, ನ. 28– ಆಲಮಟ್ಟಿ ಅಣೆಕಟ್ಟು ವಿವಾದ ಕುರಿತಂತೆ ಕರ್ನಾಟಕದ ಮನವಿಯನ್ನು ಪರಿಶೀಲಿಸುವುದಾಗಿ ಹೇಳಿದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು, ಕೇಂದ್ರ ಸರ್ಕಾರವು ಈ ವಿಷಯದಲ್ಲಿ ನಿಷ್ಪಕ್ಷಪಾತದಿಂದ ಕಾರ್ಯನಿರ್ವಹಿಸುವ ಭರವಸೆ ನೀಡಿದ್ದಾರೆ.

ತಮ್ಮನ್ನು ಇಂದು ಸಂಜೆ ಭೇಟಿಯಾದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ನೇತೃತ್ವದ ಕರ್ನಾಟಕದ ನಿಯೋಗದ ಮನವಿಯನ್ನು ಸ್ವೀಕರಿಸಿ ಸುಮಾರು ಒಂದು ಗಂಟೆ ಅಹವಾಲುಗಳನ್ನು ಕೇಳಿದರು.

● ರಾಜ್ ಜತೆ ಅನುಚಿತ ವರ್ತನೆ ಮೂವರ ಅಮಾನತು

ಬೆಂಗಳೂರು, ನ. 28– ಖ್ಯಾತ ಚಿತ್ರನಟ ಡಾ. ರಾಜ್‌ಕುಮಾರ್ ಹಾಗೂ ಅವರ ತಂಡದ ಸದಸ್ಯರು ಕಳೆದ ವಾರ ದೆಹಲಿಗೆ ಹೊರಟಿದ್ದ ಸಂದರ್ಭದಲ್ಲಿ ವಿಮಾನ ನಿಲ್ದಾಣದಲ್ಲಿ ಅವರ ಜತೆ ಆ ದಿನ ಕರ್ತವ್ಯದಲ್ಲಿದ್ದು ಅನುಚಿತವಾಗಿ ವರ್ತಿಸಿದರೆನ್ನಲಾದ ಮೂವರು ನೌಕರರನ್ನು ವಿಮಾನ ನಿಲ್ದಾಣ ಪ್ರಾಧಿಕಾರದ ನಿರ್ದೇಶಕರು ಅಮಾನತುಗೊಳಿಸಿದ್ದಾರೆ.

ಇವರಲ್ಲಿ ಒಬ್ಬರು ಸೂಪರ್‌ವೈಸರ್. ಘಟನೆಯ ಬಗ್ಗೆ ವಿಚಾರಣೆಗೆ ಆದೇಶಿಸಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 29-11-1974

● ಕಬಿನಿ: ಪ್ರಧಾನಿ ಮಧ್ಯಸ್ಥಿಕೆ ಕೋರಿದ ಕರುಣಾನಿಧಿ

ನವದೆಹಲಿ, ನ. 28– ಕರ್ನಾಟಕವು ಹೊಸ ಕಬಿನಿ ಜಲಾಶಯದಲ್ಲಿ ಶೇಖರಿಸಿ ಇಟ್ಟಿರುವ ಕಾವೇರಿ ನೀರನ್ನು ರಾಜ್ಯಕ್ಕೆ ಬಿಡುವ ಸಂಬಂಧ, ಪ್ರಧಾನಿ ಇಂದಿರಾ ಗಾಂಧಿ ಅವರು ಮಧ್ಯಸ್ಥಿಕೆ ವಹಿಸಬೇಕು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕರುಣಾನಿಧಿ ಇಂದು ಕೋರಿದ್ದಾರೆ.

ತಮಿಳುನಾಡಿನ ತಂಜಾವೂರು ಜಿಲ್ಲೆಯಲ್ಲಿನ ‘ಸಾಂಬಾ’ ಭತ್ತದ ಬೆಳೆಯನ್ನು ಉಳಿಸಲು ಈ ನೀರು ಅಗತ್ಯ ಎಂದು ಅವರು ಹೇಳಿದ್ದಾರೆ.

ತಮಿಳುನಾಡು ಪ್ರಸ್ತುತ ಸಂಕಷ್ಟದಿಂದ ಪಾರಾಗಲು ಅನುವಾಗುವಂತೆ ‘ಸದ್ಭಾವನೆ’ಯಿಂದ ನೀರು ಬಿಡಲು ನಿರ್ಧರಿಸಿರುವುದಾಗಿ ಕರ್ನಾಟಕದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಹೇಳಿದ ನಂತರವೂ ಕರುಣಾನಿಧಿ ಅವರು ಪ್ರಧಾನಿ ಅವರ ಮೊರೆ ಹೋಗಿದ್ದಾರೆ.

ರಸ್ತೆ ಸಂಚಾರ ವ್ಯವಸ್ಥೆ ನಿರ್ವಹಣೆಗೆ ಬೇಕಾಗಿದೆ ಸುಸ್ಥಿರ ಕಾರ್ಯತಂತ್ರ

ರಸ್ತೆ ಸಂಚಾರ: ಆಗದಿರಲಿ ಭಾರ

ವಿಶ್ಲೇಷಣೆ

ಎಂ.ಎ.ಸಲೀಂ

ಬೆಂಗಳೂರಿನಲ್ಲಿ ವಾಹನಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿರುವುದು ಸಂಚಾರ ದಟ್ಟಣೆಗೆ ಕಾರಣವಾಗಿದೆ. ಇದು, ವಾಯುಮಾಲಿನ್ಯ ಹಾಗೂ ಶಬ್ದಮಾಲಿನ್ಯ ಹೆಚ್ಚಿಸಿರುವುದರ ಜೊತೆಗೆ ಜನ ಹೆಚ್ಚು ಸಮಯ ರಸ್ತೆಯಲ್ಲೇ ಕಳೆಯಬೇಕಾದ ಸ್ಥಿತಿಗೆ ದೂಡಿದೆ. ಅಪಘಾತಗಳ ಸಂಖ್ಯೆಯಲ್ಲೂ ಏರಿಕೆ ಉಂಟಾಗಿದೆ.

ಖರೀದಿ ಸಾಮರ್ಥ್ಯ ಹೆಚ್ಚಳ ಮತ್ತು ವಾಹನಗಳ ಸುಲಭ ಲಭ್ಯತೆಯು ವಾಹನಗಳ ಸಂಖ್ಯೆ ಹೆಚ್ಚಳಕ್ಕೆ ಕಾರಣ. ಆದರೆ, ಅದಕ್ಕೆ ಅನುಗುಣವಾಗಿ ರಸ್ತೆ ಸಂಪರ್ಕ ಹಾಗೂ ರಸ್ತೆ ಮೂಲಸೌಕರ್ಯದಲ್ಲಿ ಬೆಳವಣಿಗೆ ಆಗಿಲ್ಲ. ಅದರ ಪರಿಣಾಮವಾಗಿ, ನಗರದ ಬಹುತೇಕ ರಸ್ತೆಗಳಲ್ಲಿ ಧಾರಣಾ ಸಾಮರ್ಥ್ಯಕ್ಕಿಂತ ಹೆಚ್ಚಿನ ವಾಹನಗಳು ಸಂಚರಿಸುತ್ತಿವೆ. ವಾಹನಗಳ ಸಂಖ್ಯೆ ಕ್ಷಿಪ್ರಗತಿಯಲ್ಲಿ ವಿಪರೀತ ಏರಿಕೆ ಆಗಿರುವುದಕ್ಕೆ ಕಾರಣವಾಗಿರುವ ಮತ್ತೊಂದು ಅಂಶವೆಂದರೆ, ನಮ್ಮ ಸಮಾಜದ ಮನೋಭಾವ. ವಾಹನ ಖರೀದಿಯನ್ನು ಜನ ತಮ್ಮ ಅಗತ್ಯಕ್ಕಿಂತ ಹೆಚ್ಚಾಗಿ, ಒಂದು ಆಕಾಂಕ್ಷೆ ಮತ್ತು ಪ್ರತಿಷ್ಠೆಯ ವಿಷಯವೆಂಬಂತೆ ನೋಡುತ್ತಾರೆ.

ನಗರದಲ್ಲಿ ಪ್ರತಿವರ್ಷವೂ ರಸ್ತೆಗಿಳಿಯುವ ಹೊಸ ವಾಹನಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಅಂಕಿ–ಅಂಶಗಳ ಪ್ರಕಾರ, 1976ರಲ್ಲಿ ಬೆಂಗಳೂರಿನಲ್ಲಿದ್ದ ವಾಹನಗಳ ಸಂಖ್ಯೆ 1.08 ಲಕ್ಷ. ಆದರೆ ಈ ವರ್ಷದ ಜೂನ್ ವೇಳೆಗೆ ಇಲ್ಲಿರುವ ವಾಹನಗಳ ಸಂಖ್ಯೆ 1.19 ಕೋಟಿ. 2030ರ ಅಂತ್ಯಕ್ಕೆ ಇದು 1.50 ಕೋಟಿಗೆ ಏರುವ ಸಾಧ್ಯತೆ ಇದೆ.

ಬೆಂಗಳೂರಿನ ಸಂಚಾರ ದಟ್ಟಣೆಗೆ ಕಾರಣವಾದ ಕೆಲವು ಪ್ರಮುಖ ಅಂಶಗಳು: ಜನಸಂಖ್ಯೆ ಮತ್ತು ವಿವಿಧ ಬಗೆಯ ಚಟುವಟಿಕೆಗಳ ಹೆಚ್ಚಳದಿಂದ ದಿನನಿತ್ಯ ಪ್ರಯಾಣಿಸುವವರ ಸಂಖ್ಯೆಯಲ್ಲಿ ಆಗಿರುವ ಏರಿಕೆ, ಕೆಲವು ಪ್ರದೇಶಗಳನ್ನು ಕೇಂದ್ರೀಕರಿಸಿ ಕೇಂದ್ರ ವಾಣಿಜ್ಯ ಪ್ರದೇಶ (ಸಿಬಿಡಿ) ಮತ್ತು ಕಚೇರಿಗಳು ತಲೆ ಎತ್ತಿರುವುದು, ನಗರದ ರಸ್ತೆಗಳಲ್ಲಿ ಎಲ್ಲ ರೀತಿಯ ವಾಹನಗಳ ಸಂಚಾರಕ್ಕೆ ಅವಕಾಶ ಇರುವುದು, ವಿಶಾಲ ರಸ್ತೆಗಳು ಇಲ್ಲದಿರುವುದು, ಕಿರಿದಾದ ಪಾದಚಾರಿ ಮಾರ್ಗಗಳನ್ನು ವ್ಯಾಪಾರಿಗಳು ಅತಿಕ್ರಮಿಸಿರುವುದು, ವಾಹನ ನಿಲುಗಡೆಯ ಬೇಡಿಕೆಗೆ ತಕ್ಕಂತೆ ಸೌಲಭ್ಯ ಇಲ್ಲದಿರುವುದು, ರಸ್ತೆ ನಿಯಮ ಪಾಲಿಸದ ಅಶಿಸ್ತಿನ ಚಾಲಕರು, ಸಂಚಾರ ನಿಯಂತ್ರಣ ವ್ಯವಸ್ಥೆ ಪರಿಣಾಮಕಾರಿಯಾಗಿ ಇಲ್ಲದಿರುವುದು, ಸಂಚಾರ ನಿರ್ವಹಣೆಗೆ ಹಲವು ಏಜೆನ್ಸಿಗಳು ಇರುವುದು...

ಸಮರ್ಪಕ ರಸ್ತೆ ಮೂಲಸೌಕರ್ಯ ಮತ್ತು ಸಾರಿಗೆ ಜಾಲದ ಅಭಿವೃದ್ಧಿಗೆ ದೊಡ್ಡ ಪ್ರಮಾಣದ ಹೂಡಿಕೆಯ ಅಗತ್ಯವಿದೆ. ಮಾತ್ರವಲ್ಲ, ಅವುಗಳ ಜಾರಿಗೆ ಹೆಚ್ಚಿನ ಸಮಯವೂ ಬೇಕಾಗುತ್ತದೆ. ಆದ್ದರಿಂದ, ಸಂಚಾರ ದಟ್ಟಣೆಯ ನಿರ್ವಹಣೆ ಹಾಗೂ ಪ್ರಯಾಣದ ಸಮಯ ಕಡಿಮೆ ಮಾಡುವ ದಿಸೆಯಲ್ಲಿ, ಈಗ ಲಭ್ಯವಿರುವ ಮೂಲಸೌಕರ್ಯವನ್ನು ಅತ್ಯುತ್ತಮ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ.

ಸಂಚಾರ ದಟ್ಟಣೆ ನಿರ್ವಹಣೆಗೆ ಕೆಲವು ಪರಿಹಾರ ಸೂತ್ರಗಳು ಇಲ್ಲಿವೆ: ಸಾರ್ವಜನಿಕ ಸಾರಿಗೆ ವ್ಯವಸ್ಥೆಯು ಸಾಮಾನ್ಯವಾಗಿ ರಸ್ತೆಯಲ್ಲಿ ಹೆಚ್ಚಿನ ಜಾಗವನ್ನು ಬಳಸದೇ ಅಧಿಕ ಮಂದಿಯ ಸಂಚಾರಕ್ಕೆ ನೆರವಾಗುತ್ತದೆ. ಪ್ರಯಾಣಿಕರ ರೈಲು, ಮೆಟ್ರೊ, ಮಾನೊ ರೈಲು ಮತ್ತು ಬಸ್ಸುಗಳು ಉತ್ತಮವಾದ ಹಾಗೂ ಜನರ ಕೈಗೆಟಕುವ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳಾಗಿವೆ. ಇವು ಖಾಸಗಿ ವಾಹನಗಳ ಬಳಕೆಯನ್ನು ಕಡಿಮೆ ಮಾಡಿ, ಸಂಚಾರ ದಟ್ಟಣೆ ಮತ್ತು ಮಾಲಿನ್ಯದ ಮಟ್ಟವನ್ನು ತಗ್ಗಿಸುತ್ತವೆ. ಹೀಗಾಗಿ, ಇಂತಹ ಸಾರಿಗೆ ವ್ಯವಸ್ಥೆಗೆ ಹೆಚ್ಚು ಹೂಡಿಕೆ ಮಾಡುವತ್ತ ಗಮನ ಹರಿಸಬೇಕು. ಬಸ್ ಹಾಗೂ ಮೆಟ್ರೊ ಟಿಕೆಟ್‌ಗೆ ಕಡಿಮೆ ಪ್ರಯಾಣ ದರ ನಿಗದಿಪಡಿಸಬೇಕು.

ಮೋಟರುರಹಿತ ಸಾರಿಗೆ ಬಳಕೆಗೆ ಪ್ರೋತ್ಸಾಹ– ನಗರವು ವಿಸ್ತರಣೆಯಾಗುತ್ತಿದ್ದಂತೆ ಮತ್ತು ಜನರ ಆದಾಯದ ಮಟ್ಟ ಏರಿಕೆಯಾಗುತ್ತಿದ್ದಂತೆ ಮೋಟರುರಹಿತ ಸಾರಿಗೆ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿದೆ. ‘ಪರಿಸರ ಸ್ನೇಹಿ’ಯಾದ ಈ ಸಾರಿಗೆಯನ್ನು ಉತ್ತೇಜಿಸಿ, ನಗರದ ಸಾರಿಗೆ ವ್ಯವಸ್ಥೆಯಲ್ಲಿ ಅದಕ್ಕೆ ಅವಕಾಶ ಕಲ್ಪಿಸಬೇಕು.

ಪಾದಚಾರಿಗಳಿಗೆ ಸೌಲಭ್ಯ ಕಲ್ಪಿಸುವುದು– ರಸ್ತೆಯಲ್ಲಿ ಸಂಚರಿಸುವವರಲ್ಲಿ ದೊಡ್ಡ ಪ್ರಮಾಣದಲ್ಲಿ ಪಾದಚಾರಿಗಳು (ಸುಮಾರು ಶೇ 25ರಿಂದ ಶೇ 30ರಷ್ಟು) ಇರುತ್ತಾರೆ. ಆದರೆ ಅವರಿಗೆ ಒದಗಿಸಲಾದ ಸೌಲಭ್ಯಗಳನ್ನು ಬೀದಿಬದಿ ವ್ಯಾಪಾರಿಗಳು ಅತಿಕ್ರಮಿಸಿಕೊಂಡಿರುತ್ತಾರೆ ಅಥವಾ ರಸ್ತೆ ವಿಸ್ತರಣೆಗಾಗಿ ಪಾದಚಾರಿ ಮಾರ್ಗಗಳನ್ನು ಬಳಸಿಕೊಳ್ಳಲಾಗಿರುತ್ತದೆ. ಇದರಿಂದ ಪಾದಚಾರಿಗಳು ರಸ್ತೆಯಲ್ಲೇ ನಡೆದಾಡುವಂತಾಗಿದೆ. ಇದು, ಅಪಘಾತಗಳಿಗೂ ಕಾರಣವಾಗುತ್ತಿದೆ. ಪಾದಚಾರಿ ಮಾರ್ಗ ಉತ್ತಮವಾಗಿದ್ದರೆ, ಜನ ತಮ್ಮ ವಾಹನಗಳನ್ನು ಮನೆಯಲ್ಲೇ ಬಿಟ್ಟು, ಹೆಚ್ಚು ದೂರವನ್ನು ಸಹ ಕಾಲ್ನಡಿಗೆಯಲ್ಲೇ ಕ್ರಮಿಸಲು ಮುಂದಾಗುತ್ತಾರೆ.

ಶಾಲೆ, ಕಚೇರಿಗಳ ಸಮಯದಲ್ಲಿ ಬದಲಾವಣೆ– ಕಚೇರಿಗಳು ಹಾಗೂ ಶಿಕ್ಷಣ ಸಂಸ್ಥೆಗಳ ಕೆಲಸದ ಸಮಯದಲ್ಲಿ ಬದಲಾವಣೆ ತರುವುದರಿಂದ ‘ಪೀಕ್ ಅವರ್’ನಲ್ಲಿ ದಟ್ಟಣೆಯನ್ನು ತಪ್ಪಿಸಬಹುದು. ಪ್ರಸ್ತುತ, ‘ಪೀಕ್ ಅವರ್’ ಬೆಳಿಗ್ಗೆ ಸುಮಾರು 9ಕ್ಕೆ ಪ್ರಾರಂಭವಾಗಿ, 11ಕ್ಕೆ ಕೊನೆಗೊಳ್ಳುತ್ತದೆ. ಸಂಜೆ 5ಕ್ಕೆ ಪ್ರಾರಂಭವಾಗಿ, 7.30ರವರೆಗೆ ಇರುತ್ತದೆ. ಬೆಂಗಳೂರು ಸಂಚಾರ ಪೊಲೀಸರು ಆರಂಭಿಸಿರುವ ‘ಶಾಲೆಗೆ ಸುರಕ್ಷಿತ ಮಾರ್ಗ’ (ಸೇಫ್ ರೂಟ್ ಟು ಸ್ಕೂಲ್) ಯೋಜನೆಯಿಂದ, ಶಾಲೆಗಳು 9ಕ್ಕೆ ಮುನ್ನವೇ ಶುರುವಾಗುತ್ತಿದ್ದು, ಇದು ಸಂಚಾರ ದಟ್ಟಣೆ ಕಡಿಮೆ ಮಾಡುವಲ್ಲಿ ನೆರವಾಗಿದೆ. ಇದೇ ರೀತಿ ಅನೇಕ ಐ.ಟಿ ಕಂಪನಿಗಳು ಕೂಡ ಸಿಬ್ಬಂದಿಯ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ತಮ್ಮ ಕೆಲಸದ ವೇಳಾಪಟ್ಟಿಯನ್ನು ಬದಲಿಸಿವೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಚೇರಿಗಳಿಗೆ ಸಂಬಂಧಿಸಿದಂತೆ ಕೂಡ ಇದೇ ರೀತಿ ಬದಲಾವಣೆ ತಂದರೆ, ಬೆಳಿಗ್ಗೆ ಮತ್ತು ಸಂಜೆಯ ‘ಪೀಕ್ ಅವರ್’ನಲ್ಲಿ ಉಂಟಾಗುವ ಸಂಚಾರ ದಟ್ಟಣೆ ಕಡಿಮೆಯಾಗಬಹುದು.

ವಾಹನ ನಿಲುಗಡೆ ಮೂಲ ಸೌಲಭ್ಯ ಅಭಿವೃದ್ಧಿ– ಸಾರ್ವಜನಿಕ ಸಾರಿಗೆಗೆ ಬಳಸುವ ವಾಹನಗಳು ಮತ್ತು ಮೋಟರುರಹಿತ ಸಾರಿಗೆ ಬಳಕೆದಾರರಿಗೆ ಆದ್ಯತೆ ನೀಡಬೇಕು. ಇಂತಹ ವಾಹನ ನಿಲುಗಡೆ ತಾಣದಿಂದ ಜನ ತಮ್ಮ ಕೆಲಸದ ಸ್ಥಳಕ್ಕೆ ಸುಲಭವಾಗಿ ತಲುಪುವ ಮತ್ತು ಅಲ್ಲಿಂದ ವಾಪಸಾಗುವ ಸೌಲಭ್ಯ ಒದಗಿಸಿಕೊಡಬೇಕು. ಎಲ್ಲ ಪ್ರಮುಖ ವಾಣಿಜ್ಯ ಪ್ರದೇಶಗಳಲ್ಲಿ ಬಹುಹಂತದ ಕಾರು ನಿಲುಗಡೆ ಸೌಲಭ್ಯವನ್ನು ಅಭಿವೃದ್ಧಿಪಡಿಸಬೇಕು.

ಕಾರ್ ಪೂಲಿಂಗ್ ವ್ಯವಸ್ಥೆ ಅಳವಡಿಕೆ– ಪಾಶ್ಚಿಮಾತ್ಯ ದೇಶಗಳಲ್ಲಿ ಕೆಲಸದ ಸ್ಥಳಕ್ಕೆ ಹೋಗಲು ಕಾರ್‌ಪೂಲಿಂಗ್ (ಒಂದು ಸ್ಥಳದಿಂದ ಇನ್ನೊಂದೆಡೆಗೆ ಸ್ವಂತ ಕಾರಿನಲ್ಲಿ ಹೋಗುವವರು ಅದೇ ಮಾರ್ಗದಲ್ಲಿ ಹೋಗುವ ವ್ಯಕ್ತಿಗಳನ್ನು ತಮ್ಮ ವಾಹನದಲ್ಲಿ ಕರೆದೊಯ್ಯುವುದು) ಸಾಮಾನ್ಯವಾಗಿದೆ. ಹೆಚ್ಚಿನ ಕಚೇರಿಗಳು ಒಂದೇ ಕಡೆ ಇರುವ, ಅದರಲ್ಲೂ ಮುಖ್ಯವಾಗಿ ಐ.ಟಿ ಕಂಪನಿಗಳು ಇರುವ ಕಡೆಗಳಲ್ಲಿ ಕಾರ್‌ಪೂಲಿಂಗ್ ವ್ಯವಸ್ಥೆ ಅಳವಡಿಸುವುದು ಅತ್ಯಂತ ಅವಶ್ಯ.

ಸಂಚಾರ ನಿಯಂತ್ರಣಕ್ಕೆ ತಂತ್ರಜ್ಞಾನದ ಬಳಕೆ– ಬೆಂಗಳೂರಿನ ಸಂಚಾರ ಪೊಲೀಸರು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವ ವಿಚಾರದಲ್ಲಿ ಮುಂದಿದ್ದಾರೆ. ಆದರೂ ಸಂಚಾರ ಪೊಲೀಸರ ಕೆಲಸವನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು ಕೃತಕ ಬುದ್ಧಿಮತ್ತೆ ಹಾಗೂ ಡಿಜಿಟಲ್ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸಬೇಕು. ನಗರದಲ್ಲಿ ಸಂಚಾರ ನಿರ್ವಹಣೆಯಲ್ಲಿ ಮಾನವ ಶ್ರಮವನ್ನು ಕಡಿಮೆಗೊಳಿಸಿ ಪಾರದರ್ಶಕತೆ ಖಾತರಿಗೊಳಿಸಲು ಅತ್ಯಾಧುನಿಕ ತಂತ್ರಜ್ಞಾನದ ಚತುರ ಸಂಚಾರ ಸಿಗ್ನಲ್‌ಗಳು, ಸ್ವಯಂಚಾಲಿತ ಸಂಚಾರ ನಿರ್ದೇಶನ ವ್ಯವಸ್ಥೆ, ಡ್ರೋನ್ ಮತ್ತು ವೈಮಾನಿಕ ನಿಗಾ, ತುರ್ತು ವಾಹನ ನಿಯಂತ್ರಣ ವ್ಯವಸ್ಥೆ, ಸಂಚಾರ ಅವಘಡ ಪತ್ತೆ ವ್ಯವಸ್ಥೆಯಂತಹವನ್ನು ಅಳವಡಿಸಬಹುದು.

ಅರಿವು ಮೂಡಿಸಲು ಒತ್ತು– ವಾಹನ ಚಾಲಕರು, ಪ್ರಯಾಣಿಕರು, ಪಾದಚಾರಿಗಳು ಒಳಗೊಂಡಂತೆ ರಸ್ತೆ ಬಳಕೆದಾರರಿಗೆ ಸಂಚಾರ ನಿಯಮಗಳ ಬಗ್ಗೆ ಅರಿವು ಮೂಡಿಸಲು ಒತ್ತು ನೀಡಬೇಕು. ಇದಕ್ಕಾಗಿ ಪತ್ರಿಕೆಗಳು, ಭಿತ್ತಿಪತ್ರ, ಕರಪತ್ರ, ಚಿತ್ರಮಂದಿರಗಳಲ್ಲಿನ ಸ್ಲೈಡ್‌ಗಳಂತಹ ವಿವಿಧ ಮಾಧ್ಯಮಗಳನ್ನು ಬಳಸಿಕೊಳ್ಳಬಹುದು. ಜಾಗೃತಿ ಶಿಬಿರಗಳನ್ನು ಏರ್ಪಡಿಸಬಹುದು.

ಈ ಮೇಲಿನ ಕೆಲವು ಶಿಫಾರಸುಗಳನ್ನು ಅಲ್ಪಾವಧಿಯಲ್ಲಿ ಜಾರಿಗೊಳಿಸಲು ಸಾಧ್ಯವಿದ್ದರೆ, ಇನ್ನು ಕೆಲವು ಶಿಫಾರಸುಗಳ ಜಾರಿಗೆ ದೀರ್ಘಾವಧಿ ಬೇಕಾಗುತ್ತದೆ. ಸಂಬಂಧಪಟ್ಟವರು ಈ ಕಾರ್ಯತಂತ್ರಗಳನ್ನು ವ್ಯವಸ್ಥಿತವಾಗಿ ಕಾರ್ಯಗತಗೊಳಿಸಿದ್ದೇ ಆದರೆ, ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆ ಸಮಸ್ಯೆಯನ್ನು ಗಣನೀಯವಾಗಿ ತಗ್ಗಿಸಲು ಸಾಧ್ಯ.

ಲೇಖಕ: ಪೊಲೀಸ್ ಮಹಾನಿರ್ದೇಶಕ
ಸಿಐಡಿ ಮತ್ತು ಆರ್ಥಿಕ ಅಪರಾಧಗಳು

ಚುರುಮುರಿ

ಗೂಗಲ್ ಕಥೆ!

● ಬಿ.ಎನ್.ಮಲ್ಲೇಶ್

ಗೂಗಲ್ ಮ್ಯಾಪ್ ನೋಡ್ಕಂಡು ಕಾರೊಂದು ಸೇತುವೆಯಿಂದ ಬಿದ್ದ ಸುದ್ದಿ ಓದಿ ನನಗೆ ಸಿಟ್ಟು ಬಂತು. ಈ ಗೂಗಲ್ ಯಾಕೆ ಪದೇ ಪದೇ ದಿಕ್ಕು ತಪ್ಪಾ ಐತೆ? ಒಂದು ಚಾಟಿ ಬೀಸೋಣ ಅಂತ ಚಾಟಿಂಗ್ ಶುರು ಮಾಡಿದೆ.

‘ಹಲೋ ಗೂಗಲ್, ಯಾಕೆ ಪದೇ ಪದೇ ದಿಕ್ಕು ತಪ್ತಾ ಇದೀಯ?’

‘ದಿಕ್ಕುಗಳೇ ಸರಿಯಿಲ್ಲ, ನಾನೇನ್ ಮಾಡ್ಲಿ?’ ಗೂಗಲ್ ಉತ್ತರಿಸಿತು.

‘ಅಲ್ಲ, ನೀನು ಸರಿಯಾಗಿ ದಾರಿ ತೋರಿಸ್ತೀಯ, ಕೇಳಿದ್ದಕ್ಕೆಲ್ಲ ಕರೆಕ್ಟ್ ಉತ್ತರ ಕೊಡ್ತೀಯ ಅನ್ಕಂಡಿದ್ದೆ...’

‘ಹೌದು, ಕೊಡ್ತೀನಿ, ಎನಿ ಡೌಟ್?’

‘ಇದು ಸೋಪಿನ ಪುಡಿ ಜಾಹೀರಾತಲ್ಲ, ಈಗ ಚನ್ನಪಟ್ಣ ಎಲ್ಲೈತೆ ಹೇಳು?’

‘ಅದೀಗ ಯೋಗೀಶ್ವರ್ ಹತ್ರ ಐತೆ’.

‘ಥೋ ಹಂಗಲ್ಲ, ಹೋಗ್ಲಿ ನಿಖಿಲ್ ಗೊತ್ತಾ?’

‘ಗೊತ್ತು, ‘ಎಲ್ಲಿದ್ದೀಯಪ್ಪಾ’ ತಾನೆ?’

‘ಕರೆಕ್ಟ್, ಆಮೇಲೆ ಜಿಟಿಡಿ ಗೊತ್ತಾ?’

‘ನಂಗೆ ಟಿಟಿಡಿ ಗೊತ್ತು, ಅಂದ್ರೆ ತಿರುಮಲ ತಿರುಪತಿ ದೇವಸ್ಥಾನ, ಇದ್ಯಾರು ಜಿಟಿಡಿ?’

‘ಜಿ.ಟಿ.ದೇವೇಗೌಡ ಕಣಯ್ಯ, ಅವರ ಮುಂದಿನ ದಾರಿ ಏನು?’

‘ತೆನೆ ಇಳಿಸಿ ‘ಕೈ’ ದಾರಿ ಹಿಡೀಬಹುದು’.

‘ಓಕೆ, ಈ ಬಿಜೆಪಿ ಕತೆ ಹೆಂಗೆ?’

‘ಅದೀಗ ಮನೆಯೊಂದು, ನಾಲ್ಕು ಬಾಗಿಲು. ಮೂರು ಶಿಕಾರಿಪುರ, ಒಂದು ವಿಜಯಪುರ...’

‘ಈ ಬಿರುಕು ಮುಚ್ಚೋದೆಂಗೆ?’

‘ನಮೋ ಸಿಮೆಂಟ್ ಬಳಸಿ’.

‘ಅಯ್ತಪ್ಪ, ಈ ಮುಡಾ ಕತೆ ಏನಾಗಬಹುದು?’

‘ಮುಡಾ... ಅದು ನಿಗೂಢ!’ ಗೂಗಲ್ ನಕ್ಕಿತು.

‘ನಿನ್ತೆಲಿ, ಹೋಗ್ಲಿ ನಿಂಗೆ ಈ ವರ್ಲ್ಡ್ ಫೇಮಸ್ ಬಿ.ಎನ್.ಮಲ್ಲೇಶ್ ಗೊತ್ತಾ?’

‘ಗೊತ್ತಿಲ್ಲ, ಇಲ್ಲಿ ಅದೇನೋ ತೆಪರೇಸಿ ಅಂತ ತೋರಿಸ್ತಿದೆ’.

ನಾನು ಪಿಟಿಕ್ಕನ್ನದೆ ಚಾಟಿಂಗ್ ಕ್ಲೋಸ್ ಮಾಡಿ ಮೇಲಕ್ಕೆದ್ದೆ.

ಸಂಗತ

ಮಗು ಮಗುವಾಗಿಯೇ ಬೆಳೆಯಲಿ

ಮಕ್ಕಳು ಅದ್ಭುತ ಪ್ರತಿಭಾವಂತರು ಎಂದು ಲೋಕಕ್ಕೆ ಪರಿಚಯಿಸುವ ಆತುರದಲ್ಲಿ, ಅವರು ಅಪಾಯಕ್ಕೆ ಸಿಲುಕದಂತೆ ನೋಡಿಕೊಳ್ಳಬೇಕಾದುದು ಪೋಷಕರ ಹೊಣೆ

● ಪ.ರಾಮಕೃಷ್ಣ ಶಾಸ್ತ್ರಿ

‘ನನ್ನ ಮೊಮ್ಮಗ ಅದ್ಭುತ ಪ್ರತಿಭಾವಂತ. ವಾಹನ ಚಾಲನೆ ಕಲಿಯಲು ನನಗೆ ತುಂಬ ದಿವಸ ಬೇಕಾಯಿತು. ಇವನು ಹಾಗಲ್ಲ, ನನ್ನ ಪಕ್ಕ ಕುಳಿತು ಚಾಲನೆಯ ವಿಧಾನ ನೋಡಿಯೇ ಕಲಿತುಕೊಂಡಿದ್ದಾನೆ. ಅವನ ಕೈಯಲ್ಲಿ ಸ್ಟಿಯರಿಂಗ್ ಕೊಟ್ಟು ನಿಶ್ಚಿಂತವಾಗಿ ಮಲಗಿಕೊಳ್ಳಬಹುದು’ ಎಂದು ಅಜ್ಜ ತಮ್ಮ ಮೊಮ್ಮಗನ ಕೌಶಲದ ಬಗೆಗೆ ಹೇಳಿದ್ದರು. ಎಂಟು ವರ್ಷದ ಹುಡುಗ ಹೆದ್ದಾರಿಯಲ್ಲಿ ಅವರ ಕಾರನ್ನು ಚಾಲನೆ ಮಾಡಿದ್ದೂ ಹೌದು. ಆದರೆ ಎದುರಿನಿಂದ ಬಂದ ವಾಹನವನ್ನು ತಪ್ಪಿಸಿಕೊಳ್ಳಲಾಗದೆ ನಡೆದ ದುರಂತದಲ್ಲಿ ಮೊಮ್ಮಗ ಸ್ಥಳದಲ್ಲಿಯೇ ಅಸುನೀಗಿದ, ಅಜ್ಜ ಆಮೇಲೂ ಬಹುಕಾಲ ಬದುಕಿದ್ದರು.

ಪ್ರತಿ ಮಗುವೂ ಪ್ರತಿಭಾಶಾಲಿಯಾಗಿರುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಪ್ರೋತ್ಸಾಹದ ಕೊರತೆಯಿಂದ ಎಷ್ಟೋ ಪ್ರತಿಭೆಗಳು ಬೆಳಕಿಗೆ ಬರದೆ ಕಮರಿಹೋಗುತ್ತವೆ. ಎಳೆಯ ವಯಸ್ಸಿನಲ್ಲಿಯೇ ಮಕ್ಕಳು ಮೊಬೈಲ್ ಫೋನ್ ಬಳಕೆ ಮತ್ತು ವಾಹನ ಚಾಲನೆಯತ್ತ ಬಲು ಬೇಗ ಆಕರ್ಷಿತರಾಗುವುದು ಸಹಜ. ಅದರಲ್ಲಿ ಶೀಘ್ರಗತಿಯಲ್ಲಿ ನೈಪುಣ್ಯವನ್ನೂ ಹೊಂದುತ್ತಾರೆ. ಆದರೆ ಮಕ್ಕಳಿಗೆ ಪ್ರತಿಕೂಲ ಪರಿಸ್ಥಿತಿಯ ಅರಿವು ಇರುವುದಿಲ್ಲ. ಈ ಕಾರಣದಿಂದ ಸಂಭವಿಸಬಹುದಾದ ಅಪಾಯಗಳ ಕುರಿತು ಮಕ್ಕಳಿಗಿಂತ ಹಿರಿಯರಿಗೆ ಹೆಚ್ಚಿನ ಮುಂಜಾಗರೂಕತೆ ಇದ್ದರೆ ಸಂಭಾವ್ಯ ತೊಂದರೆಗಳನ್ನು ತಪ್ಪಿಸಬಹುದು. ಇಲ್ಲದಿದ್ದರೆ, ಮಕ್ಕಳು ಅದ್ಭುತ ಪ್ರತಿಭಾವಂತರು ಎಂಬುದನ್ನು ಲೋಕಕ್ಕೆ ಪರಿಚಯಿಸುವ ಆತುರದಲ್ಲಿ ತುಂಬಲಾಗದ ನಷ್ಟಕ್ಕೆ ಭಾಜನರಾಗಬೇಕಾಗುತ್ತದೆ.

ಮೀಸೆ ಮೂಡದ ವಯಸ್ಸಿನಲ್ಲೂ ತಮ್ಮ ಮಕ್ಕಳು ಬೈಕ್ ಚಾಲನೆ ಮಾಡುವುದು ಹಿರಿಯರಿಗೆ ವಿಶೇಷ ಪ್ರತಿಭೆಯ ಪ್ರದರ್ಶನವೆಂದು ಅನ್ನಿಸಬಹುದು. ಆದರೆ ಚಾಲನಾ ಪರವಾನಗಿ ಕೂಡ ಸಿಗದ ವಯೋಮಾನದ ಹುಡುಗ ವಿಪರೀತ ವೇಗದಲ್ಲಿ ಸಾಗುವುದು, ಒಂದೇ ಚಕ್ರದಲ್ಲಿ ಚಲಿಸುತ್ತ ರೀಲ್ಸ್ ಮಾಡುವುದು, ಮುಂದಿರುವ ವಾಹನವನ್ನು ಹಿಂದಿಕ್ಕುವ ಭರಾಟೆಯಲ್ಲಿ ತೊಡಗುವುದು ಬಹುತೇಕ ಸಂದರ್ಭಗಳಲ್ಲಿ ಆತಂಕಕ್ಕೆ ಗುರಿ ಮಾಡುತ್ತದೆ. ಇಂತಹ ಅತಿರೇಕದ ಸಾಹಸ ತೋರಿಸುವ ಮಕ್ಕಳ ಬಗೆಗೆ ಅಭಿಮಾನಪಡುವುದು, ಹತ್ತು ಮಂದಿಯ ಮುಂದೆ ಹೊಗಳುವುದು, ಬೆನ್ನು ತಟ್ಟಿ ಪ್ರೋತ್ಸಾಹಿಸುವುದು ಹಿರಿಯರು ಎಸಗುವ ತಪ್ಪುಗಳಲ್ಲಿ ಒಂದೆನಿಸಬಹುದು.

ಕಲಿಕೆಯ ಕಾತರ ಇರುವ ವಯಸ್ಸು. ಕಲಿಯುವುದು ತಪ್ಪಲ್ಲ. ಆದರೆ ಸೂಕ್ತ ವಯಸ್ಸಿನವರೆಗೂ ಕಾಯಲೇಬೇಕು. ಹಿರಿಯರು ಜೊತೆಗಿರುವಾಗ ಮಾತ್ರ ನಿರಪಾಯಕರ ಜಾಗಗಳಲ್ಲಿ ಚಾಲನೆಯ ತಂತ್ರಗಳನ್ನು ಅರಿಯಬಹುದೇ ವಿನಾ ಸ್ವತಂತ್ರ ಬಲ ಪ್ರದರ್ಶನಕ್ಕೆ ಇಳಿಯಲು ಹಿರಿಯರು ಅವಕಾಶ ನೀಡಬಾರದು. ಮಾಡಬಾರದು ಎಂದು ಒತ್ತಡ ಹೇರಿದಾಗ, ಅತಿ ಮುದ್ದಿನಿಂದ ಬೆಳೆದ ಮಕ್ಕಳ ಮನಸ್ಸಿಗೆ ಬಹು ದೊಡ್ಡ ಆಘಾತವಾಗಿ ಅವರು ಅತಿರೇಕದ ನಿರ್ಧಾರಗಳನ್ನು ಕೈಗೊಂಡ ಪ್ರಸಂಗಗಳೂ ಸಂಭವಿಸಿವೆ. ಮುದ್ದಿನ ಪರಮಾವಧಿ ಎಂಬಂತೆ, ಅಪಾಯಕರ ಕೌಶಲಗಳನ್ನು ಕಲಿಯಲು ಮಕ್ಕಳಿಗೆ ಅತಿರೇಕದ ಬೆಂಬಲ ನೀಡುವ ಮೊದಲೇ ಸಾವಧಾನದ ಪಾಠವನ್ನು ಮನವರಿಕೆ ಮಾಡುವುದು ಅವರ ಕ್ಷೇಮದ ದೃಷ್ಟಿಯಿಂದ ಅಗತ್ಯವಾಗುತ್ತದೆ.

ಮಕ್ಕಳು ಹಾದಿ ತಪ್ಪುವ ಪ್ರಸಂಗಗಳು ಹಿರಿಯರ ಬೇಜವಾಬ್ದಾರಿಯಿಂದಲೇ ಸಂಭವಿಸುವುದು ಹೆಚ್ಚು. ಮಕ್ಕಳು ಈಜಲು ಹೋಗಿ ಪ್ರಾಣಾಪಾಯ ತಂದುಕೊಳ್ಳುವ ಪ್ರಸಂಗಗಳು ವರದಿಯಾಗುತ್ತಿರುತ್ತವೆ. ಸಾಹಸ, ಕಸರತ್ತುಗಳ ಪ್ರದರ್ಶನಕ್ಕಿಳಿದು ಹಿರಿಯರಿಂದ ಶಹಭಾಸ್ ಎನಿಸಿಕೊಂಡ ಮಕ್ಕಳು, ಸ್ವಂತ ಬಲ ತೋರಲು ಮುಂದಾಗುವುದುಂಟು. ಹೊಸದೊಂದು ಶೋಧನೆಯ ಹಿಂದೆ ಉತ್ಸಾಹದ ಮನಸ್ಸು ಹೆಚ್ಚು ಕೆಲಸ ಮಾಡುತ್ತದೆ ಎಂದು ಥಾಮಸ್ ಆಲ್ವ ಎಡಿಸನ್ ಹೇಳಿದ್ದಾರೆ. ಇಂದಿನ ಮಕ್ಕಳು ಜನೋಪಕಾರಿಯಾದ ಹೊಸ ಸಂಶೋಧನೆಗೆ ಕೊಡುಗೆ ನೀಡುವುದಕ್ಕಾಗಿ ಅಪಾಯ ತಂದುಕೊಳ್ಳುತ್ತಿಲ್ಲ. ಮುಂಬರುವ ಅಪಾಯದ ಅರಿವಿನ ಕೊರತೆಯಿಂದ ಶಾಶ್ವತ ಅಂಗವೈಕಲ್ಯವನ್ನೋ ಪ್ರಾಣಾಪಾಯವನ್ನೋ ಬಳಿಗೆ ಎಳೆದುಕೊಳ್ಳುತ್ತಿದ್ದಾರೆ ಅನ್ನಿಸುತ್ತದೆ.



ಈ ಆಧುನಿಕ ಪ್ರಪಂಚದ ಆಗುಹೋಗುಗಳಲ್ಲಿ ಪ್ರತಿ ಮಗುವೂ ಪರಿಣತಿಯನ್ನು ಪಡೆಯುವುದು ಸ್ವಾಗತಾರ್ಹ. ಆದರೆ ಕಲಿಕೆಯ ವಯಸ್ಸು ಮಾನಸಿಕವಾಗಿ ಪ್ರಬುದ್ಧವಾಗದಿರುವಾಗ ಅಪಾಯ ತರಬಲ್ಲ ಕಲಿಕೆಗೆ ಹಿರಿಯರು ಪ್ರೋತ್ಸಾಹ ನೀಡಬಾರದು. ಬದಲಿಗೆ ಎಚ್ಚರಿಸಬೇಕು. ಅಪಾಯದ ಅರಿವು ಮೂಡಿಸಬೇಕು. ಸ್ವಾತಂತ್ರ್ಯ ನೀಡುವ ಮೊದಲು ಕಡಿವಾಣವನ್ನೂ ಹಾಕಬೇಕು. ಮಕ್ಕಳು ಮೈ ಮರೆಯುವುದು ಅಸಹಜವಲ್ಲ. ಹಿರಿಯರು ಮತಿ ಮರೆತರೆ ಬಾಳಿ ಬದುಕಬೇಕಾದ ಕಿರಿಯ ಜೀವ ಅಪಾಯಕ್ಕೆ ಸಿಲುಕುವುದಕ್ಕೆ ಪರೋಕ್ಷ ಕಾರಣ ಅವರೇ ಆಗಬಹುದು.

ಮಕ್ಕಳು ಬೆಳೆಯುತ್ತಿರುವಾಗಲೇ ಅವರನ್ನು ಸಮಾಧಾನಪಡಿಸಲು ಕೈಗೆ ಮೊಬೈಲ್ ಫೋನ್ ಕೊಡುವುದರಿಂದಲೇ ಅವರ ಸ್ವಚ್ಛಂದ ಪ್ರವೃತ್ತಿಗೆ ಹಿರಿಯರು ನೀರೆರೆಯಲು ಆರಂಭಿಸುತ್ತಾರೆ. ಸ್ವಂತ ವಾಹನ ಬೇಕು ಎಂದಾಗ ವಿವೇಚನೆ ಮಾಡುವುದಿಲ್ಲ. ಜಾಗೃತಿ ಎಂಬ ಪದವನ್ನೇ ಬಳಸುವುದಿಲ್ಲ. ಮಗುವನ್ನು ಮಗುವಾಗಿಯೇ ಬೆಳೆಸಬೇಕು. ಯಾವುದೇ ವಿಷಯದಲ್ಲಿ ವಯಸ್ಸಿಗೆ ಮೀರಿದ ಪರಿಣತಿಯನ್ನು ನಿರೀಕ್ಷಿಸುವ ಮುನ್ನ ಅದರ ವಯಸ್ಸಿನ ಬಾಲಿಶತನವು ಪೋಷಕರಿಗೆ ಮತ್ತೆ ಮತ್ತೆ ನೆನಪಾಗಬೇಕು.

ವಾಚಕರ ವಾಣಿ

ಈ ಸ್ವಾಮೀಜಿಗಳಿಗೆ ಏನಾಗಿದೆ?

ಇತ್ತೀಚೆಗೆ ಮಠದಯ್ಯಗಳ ಉದ್ಧಟತನದ ಹೇಳಿಕೆಗಳು ಸಮಾಜದಲ್ಲಿ ಅಶಾಂತಿಯನ್ನು ಉಂಟುಮಾಡುವಂತಿವೆ. ಒಬ್ಬ ಸ್ವಾಮೀಜಿ ತನ್ನ ಸಂಘ ಪರಿವಾರನಿಷ್ಠ ಸ್ವಾಮಿಗಳೊಂದಿಗೆ ರಾಜ್ಯಪಾಲರನ್ನು ಕಂಡು, ‘ನಮ್ಮನ್ನು ಗೌರವಿಸುವ ಸಂವಿಧಾನ ಬರಬೇಕು’ ಎಂದು ಮನವಿ ಮಾಡಿಕೊಳ್ಳುತ್ತಾರೆ. ಸಂವಿಧಾನವು ಸರ್ವರನ್ನೂ ಗೌರವಿಸುತ್ತದೆ ಎಂಬ ಅರಿವು ಇವರಿಗೆ ಇದ್ದಂತಿಲ್ಲ. ಸಂವಿಧಾನದ ಒಂದು ವಿಧಿಯು ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂದು ಪ್ರತಿಪಾದಿಸುತ್ತದೆ. ಇನ್ನೊಂದು ವಿಧಿಯು ವೈಜ್ಞಾನಿಕ ಮನೋಭಾವ, ಮಾನವೀಯತೆ ಹಾಗೂ ಸುಧಾರಣಾ ಪ್ರವೃತ್ತಿಗೆ ಹೆಚ್ಚು ಮಹತ್ವ ನೀಡಲು ಸೂಚಿಸುತ್ತದೆ. ಹಾಗಾದರೆ, ತಮಗೆ ಎಂತಹ ಸಂವಿಧಾನ ಬೇಕೆಂಬುದನ್ನಾದರೂ ಸೂಚಿಸಬೇಕಲ್ಲವೇ ಇವರು. ಇದು, ಸಂವಿಧಾನದ ಬಗ್ಗೆ ಇವರಿಗಿರುವ ಅಸಹನೆಯ ಪ್ರತೀಕವಷ್ಟೆ.

ಇನ್ನೊಬ್ಬ ಸ್ವಾಮೀಜಿ, ಮುಸ್ಲಿಮರಿಗೆ ಮತದಾನದ ಹಕ್ಕು ರದ್ದುಪಡಿಸಿ ಎಂದು ಹುಕುಂ ಮಾಡುತ್ತಾರೆ (ನಂತರ, ಬಾಯಿ ತಪ್ಪಿ ಹಾಗೆ ಹೇಳಿದ್ದೆ ಎಂದು ಸ್ಪಷ್ಟನೆ ನೀಡುತ್ತಾರೆ). ಮುಸಲ್ಮಾನರೂ ಈ ದೇಶದ ಸ್ವಾತಂತ್ರ್ಯಕ್ಕಾಗಿ ನಮ್ಮೊಂದಿಗೆ ಸೇರಿ ಹೋರಾಡಿದ್ದಾರೆ, ಈ ದೇಶ ಅವರದ್ದು ಸಹ ಎಂಬುದನ್ನು ಮರೆತುಬಿಡುತ್ತಾರೆ. ಹಿಂದುಳಿದ ಸಮುದಾಯಗಳ ಕೆಲ ಸ್ವಾಮಿಗಳು ಸೇರಿ, ಸರ್ಕಾರವನ್ನೇ ಉರುಳಿಸುತ್ತೇವೆಂದು ಗುಡುಗಿದ್ದೂ ಉಂಟು. ಮತ್ತೊಬ್ಬ ಸ್ವಾಮೀಜಿ, ಮೀಸಲಾತಿ ಕೊಡದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತೇವೆ ಅನ್ನುತ್ತಾರೆ. ಇನ್ನೊಬ್ಬರು, ಮುಸಲ್ಮಾನ ವ್ಯಾಪಾರಿಗಳಲ್ಲಿ ಏನನ್ನೂ ಕೊಳ್ಳದಿರಿ ಎಂದು ಫರ್ಮಾನು ಹೊರಡಿಸುತ್ತಾರೆ! ಈ ಸ್ವಾಮೀಜಿಗಳಿಗೆ ಏನಾಗಿದೆ?! ತಮ್ಮ ಮಠಕ್ಕೆ ಬರುವ ಭಕ್ತಾದಿಗಳನ್ನು ಸಮಾನವಾಗಿ ಕಾಣದೆ ಮೇಲಂಗಿ ಬಿಚ್ಚಿಸಿ ಅಗೌರವ ತೋರುವ, ಪಂಕ್ತಿಭೇದ ಮಾಡುವ ಅವರು ತಮಗೆ ಗೌರವ ನೀಡಬೇಕು ಎನ್ನುತ್ತಾರೆ. ಅದು ಕಾಡಿಬೇಡಿ ಪಡೆಯುವುದಲ್ಲ ಸ್ವಾಮಿ, ತಮ್ಮ ವ್ಯಕ್ತಿತ್ವದಿಂದ ಗಳಿಸುವುದು.

ಬಿ.ಎಲ್.ವೇಣು, ಚಿತ್ರದುರ್ಗ

ಸಂವೇದನೆ ಇಲ್ಲದವರು ರಾಜ್ಯ ಆಳಬೇಕೇಕೆ?

ರಾಜ್ಯದಲ್ಲಿ ಬಿಜೆಪಿಯ ವ್ಯವಸ್ಥಿತ ಪ್ರಚಾರ ತಂತ್ರದ ಮರ್ಮವನ್ನು ಕಾಂಗ್ರೆಸ್ ಪಕ್ಷ ಅರಿಯದಿರುವ ಕುರಿತು ರವೀಂದ್ರ ಭಟ್ಟ ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ನ. 28) ಎಳೆಎಳೆಯಾಗಿ, ಬಿಡಿಸಿ ಬಿಡಿಸಿ ಬರೆದಿದ್ದಾರೆ. ಕಾಂಗ್ರೆಸ್ಸಿಗರ ದಾರಿದ್ರ್ಯದ ಮುಸುಡಿಗೆ ಸರಿಯಾಗಿ ಮಂಗಳಾರತಿ ಮಾಡಿದ್ದಾರೆ. ಅಷ್ಟೂ ಸಂವೇದನೆ ಇಲ್ಲದ ಈ ಕಾಂಗ್ರೆಸ್ಸಿಗರು ಯಾಕೆ ರಾಜ್ಯವನ್ನು ಆಳಬೇಕು?! ಪಾಪ, ಸಿದ್ದರಾಮಯ್ಯ ಅವರೊಬ್ಬರೇ ಇವರೆಲ್ಲರ ಹೆಣಭಾರವನ್ನು ಹೊತ್ತುಕೊಂಡು ಇರಬೇಕಾಗಿದೆಯಲ್ಲಾ!

ಹಿ.ಶಿ.ರಾಮಚಂದ್ರ ಗೌಡ, ಮೈಸೂರು

ಹಸಿದವರು ಅಸಹಾಯಕರು

‘ಕನ್ನಡಿಗರೆಂದೂ ಬ್ರಿಟಿಷರ ಸೇವೆ ಮಾಡಲಿಲ್ಲ. ದಕ್ಷಿಣ ಭಾರತದಲ್ಲಿ ಬ್ರಿಟಿಷರ ಸೇವೆ ಮಾಡಿದವರು ತಮಿಳರು’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಂ.ಐ.ಅರುಣ್ ಅವರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ನ. 27). ಇದು ನಿಜವೇ ಆಗಿದೆ. ಆದರೆ, ಅದಕ್ಕೆ ಬೇರೆಯದೇ ಆದ ಐತಿಹಾಸಿಕ ಕಾರಣವಿದೆ. ದಕ್ಷಿಣ ಭಾರತದಲ್ಲಿ ತಮಿಳುನಾಡು– ಅಂದಿನ ಮದ್ರಾಸ್ ಪ್ರಾಂತ್ಯ– ಮಾತ್ರ ನೇರವಾಗಿ ಬ್ರಿಟಿಷರ ಆಡಳಿತದಲ್ಲಿತ್ತು. ಆದ್ದರಿಂದ ಸಹಜವಾಗಿಯೇ ತಮಿಳರು ತಮ್ಮ ಮಾಲೀಕರಾಗಿದ್ದ ಬ್ರಿಟಿಷರಿಗೆ ಗುಲಾಮರಾಗಿ ಸೇವೆ ಸಲ್ಲಿಸಬೇಕಿತ್ತು. ಆದರೆ, ನಮ್ಮ ರಾಜ್ಯವು ಹಲವು ಭಾಗಗಳಾಗಿ, ಮೈಸೂರು ಮಹಾರಾಜರು, ಕೊಲ್ಹಾಪುರ ಮಹಾರಾಜರು ಮತ್ತು ಹೈದರಾಬಾದ್ ನಿಜಾಮರ ಆಡಳಿತಕ್ಕೆ ಒಳಪಟ್ಟಿತ್ತು. ಇದೇ ರೀತಿ ಕೇರಳದ ಕೆಲವು ಭಾಗಗಳು ಟ್ರಾವಂಕೂರ್ ಮಹಾರಾಜರ ಆಳ್ವಿಕೆಯಲ್ಲಿದ್ದವು (ನಮ್ಮ ರಾಜ್ಯದ ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳೂ ಅಂದಿನ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದು, ಬ್ರಿಟಿಷರ ನೇರ ಆಳ್ವಿಕೆಯಲ್ಲಿದ್ದವು). ಈ ರಾಜರು ಬ್ರಿಟಿಷ್ ಸಾಮ್ರಾಜ್ಯದ ಅಧೀನದಲ್ಲೇ ಆಳ್ವಿಕೆ ನಡೆಸುತ್ತಿದ್ದರೂ ಕೆಲವು ರೀತಿಯ ಆಡಳಿತಾತ್ಮಕ ಸ್ವಾತಂತ್ರ್ಯ ಹೊಂದಿದ್ದರು. ಆದ್ದರಿಂದ ಸಹಜವಾಗಿಯೇ ನಾವು ನೇರವಾಗಿ ಬ್ರಿಟಿಷರ ಗುಲಾಮರಾಗಿ ಸೇವೆ ಸಲ್ಲಿಸಲಿಲ್ಲ.

ಇಂದು ಬೆಂಗಳೂರಿನ ಕಂಟೋನ್ಮೆಂಟ್ ಪ್ರದೇಶದಲ್ಲಿ ತಮಿಳರು ಹೆಚ್ಚಾಗಿರಲು ಕಾರಣವೇನೆಂದರೆ, 1956ಕ್ಕೆ ಮೊದಲು ಈ ಪ್ರದೇಶವು (ಕೋಲಾರ ಜಿಲ್ಲೆಯ ಕೆಲವು ಭಾಗಗಳೂ ಸೇರಿ) ಮದ್ರಾಸ್ ಪ್ರಾಂತ್ಯಕ್ಕೆ ಒಳಪಟ್ಟಿತ್ತು. ಅಂದು, ಗಣಿಯ ಒಳಗೆ ಇಳಿದು ಚಿನ್ನವನ್ನು ತರುವ ಕೆಲಸ ಅತ್ಯಂತ ಅಪಾಯಕಾರಿಯಾಗಿದ್ದರಿಂದ, ಹೆಚ್ಚಿನ ಕೂಲಿ ಕೊಡುವೆನೆಂದರೂ ಇತರ ಜನರಾರೂ ಮುಂದೆ ಬರಲಿಲ್ಲ. ಆದರೆ, ಕಡುಬಡತನದಲ್ಲಿದ್ದ ಅನಕ್ಷರಸ್ಥ ತಮಿಳರು (ಬಹುಪಾಲು ದಲಿತರು) ಈ ಕೆಲಸ ಮಾಡಲು ಹಿಂಜರಿಯದೆ ಮುಂದೆ ಬಂದರು. ಇದೇ ತಮಿಳರೇ ನಮ್ಮ ರಾಜ್ಯದಲ್ಲಿರುವ ಅನೇಕ ಅಣೆಕಟ್ಟುಗಳನ್ನು ಕಟ್ಟಲು ತಮ್ಮ ಊರು, ಹೆತ್ತವರು ಮತ್ತು ಬಂಧುಗಳನ್ನು ಬಿಟ್ಟು ಇಲ್ಲಿಗೆ ಬಂದರು. ಈ ಅಣೆಕಟ್ಟುಗಳನ್ನು ನಿರ್ಮಿಸಲು 15-20 ವರ್ಷಗಳೇ ಆಗುತ್ತಿದ್ದುದರಿಂದ, ಅವರು ಅಲ್ಲಿಯೇ ಶಾಶ್ವತವಾಗಿ ನೆಲೆಯೂರಿದರು. ಇಂದಿಗೂ ಈ ಅಣೆಕಟ್ಟುಗಳಿರುವಲ್ಲಿ ತಮಿಳರು ಮಾತ್ರ ನೆಲಸಿರುವ ಪ್ರದೇಶಗಳನ್ನು ನೋಡಬಹುದು.

ಕರ್ನಾಟಕ, ಕೇರಳ, ತಮಿಳುನಾಡಿನಲ್ಲಿರುವ ಕಾಫಿ ಮತ್ತು ಟೀ ತೋಟಗಳಲ್ಲಿ 100-150 ವರ್ಷಗಳಿಂದ ಇದೇ ತಮಿಳರು ಕನಿಷ್ಠ ಸೌಲಭ್ಯಗಳಿಲ್ಲದೆ ಇಂದಿಗೂ ದುಡಿಯುತ್ತಿದ್ದಾರೆ. ಅಂದಿನ ಬ್ರಿಟಿಷರು ಹೋಗಿ, ಭಾರತೀಯರೇ ಇಂದು ಮಾಲೀಕರಾಗಿದ್ದರೂ ಅವರ ಪರಿಸ್ಥಿತಿಯಲ್ಲಿ ಮಾತ್ರ ಯಾವುದೇ ಬದಲಾವಣೆ ಆಗಿಲ್ಲ. ಇದೇ ಕಾರಣದಿಂದಾಗಿಯೇ, ಮೂಲ ಆಂಧ್ರಪ್ರದೇಶದವರಾದ ತೆಲುಗು ದಲಿತರು ಬೆಂಗಳೂರಿನಲ್ಲಿ ಪೌರಕಾರ್ಮಿಕರಾಗಿ ಇಂದಿಗೂ ಸೇವೆ ಸಲ್ಲಿಸುತ್ತಿದ್ದಾರೆ. ಇಂತಹ ಅಸಹಾಯಕ ಜನರನ್ನು ಗುಲಾಮರೆಂದು ಯಾರಾದರೂ ಹೀಯಾಳಿಸಿದರೆ ಅದು ತಪ್ಪಾಗುತ್ತದೆ. ಸ್ವಾವಲಂಬನೆ ಇದ್ದಲ್ಲಿ ಮಾತ್ರ ಸ್ವಾತಂತ್ರ್ಯ ಮತ್ತು ಸ್ವಾಭಿಮಾನ ಇರಲು ಸಾಧ್ಯ. ಹಸಿವು, ಬಡತನದ ಮುಂದೆ ಇದಾವುದೂ ಉಳಿಯುವುದಿಲ್ಲ. ಹಸಿದವರ ಕಷ್ಟ ಹಸಿದವರಷ್ಟೇ ಬಲ್ಲರು.

ಎಂ.ಗೋಪಿನಾಥ್, ಬೆಂಗಳೂರು

ಗಮನಾರ್ಹ ಹೇಳಿಕೆ: ನ್ಯಾಯಾಂಗ ಪರಾಮರ್ಶಿಸಲಿ

ಭ್ರಷ್ಟಾಚಾರಿಗಳು ಕಠಿಣ ಶಿಕ್ಷೆಗೆ ಅರ್ಹರು ಎಂಬ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ ಹೆಗ್ಡೆ ಅವರ ಅಭಿಪ್ರಾಯ (ಪ್ರ.ವಾ., ನ. 28) ಹಾಗೂ ಅತ್ಯಾಚಾರ ಪ್ರಕರಣಗಳ ವಿಚಾರಣೆಯಲ್ಲಿ ವಿಳಂಬ ಸರಿಯಲ್ಲ ಎಂಬ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಈ ಮೊದಲಿನ ಹೇಳಿಕೆ ಎರಡೂ ಗಮನಾರ್ಹ. ದಂಡಂ ದಶಗುಣಂ! ಕತ್ತೆಗೆ ಲತ್ತೆ ಪೆಟ್ಟು ಯೋಗ್ಯ ಎಂಬುದನ್ನು ಸಾರಿ ಹೇಳುತ್ತವೆ. ನ್ಯಾಯಾಂಗವು ಈ ಕುರಿತು ಗಂಭೀರವಾಗಿ ಪರಾಮರ್ಶಿಸಲಿ.

ಅನಿಲಕುಮಾರ ಮುಗಳಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಇಮ್ರಾನ್ ಕರೆಗೆ ಬೀದಿಗಿಳಿದ ಬೆಂಬಲಿಗರು

ಮತ್ತೆ ಅಂತಃಕಲಹದ ಹೊಸ್ತಿಲಲ್ಲಿ ಪಾಕ್?



10,000 ಪ್ರತಿಭಟನೆಯಲ್ಲಿ ಪಾಲ್ಗೊಂಡವರು

700ಕ್ಕೂ ಹೆಚ್ಚು ಪ್ರತಿಭಟನಕಾರರನ್ನು ನಿಯಂತ್ರಿಸಲು ಸರ್ಕಾರ ಬಳಸಿದ ಕಂಟೇನರ್‌ಗಳು

19,000* ಕೋಟಿ ರೂಪಾಯಿ ಪ್ರತಿಭಟನೆ ಮತ್ತು ಹಿಂಸಾಚಾರದಿಂದ ಪ್ರತಿ ದಿನ ಆದ ನಷ್ಟ

*ಪಾಕಿಸ್ತಾನ ರೂಪಾಯಿ

ಪಾಕಿಸ್ತಾನದಲ್ಲಿ ಮತ್ತೆ ಕ್ಷೋಭೆ ಉಂಟಾಗಿದೆ. ಜೈಲಿನಲ್ಲಿರುವ ಮಾಜಿ ಪ್ರಧಾನಿ ಇಮ್ರಾನ್ ಖಾನ್, ಶೆಹಬಾಜ್ ಶರೀಫ್ ಸರ್ಕಾರದ ನಿದ್ದೆ ಕೆಡಿಸಿದ್ದಾರೆ. ಸರ್ಕಾರಕ್ಕಿಂತಲೂ ಹೆಚ್ಚಾಗಿ ಅಲ್ಲಿನ ಸೇನೆ ಬೆಚ್ಚಿಬಿದ್ದಿದೆ. ಇಮ್ರಾನ್ ಮಾತಿಗೆ ದೇಶದ ಜನ ಎಷ್ಟರ ಮಟ್ಟಿಗೆ ಗೌರವ ಕೊಡುತ್ತಾರೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಸರಳುಗಳ ಹಿಂದೆ ಇದ್ದರೂ ಇಮ್ರಾನ್ ಪಾಕಿಸ್ತಾನದ ಅತ್ಯಂತ ಪ್ರಬಲ ನಾಯಕರಾಗಿದ್ದಾರೆ ಎನ್ನುವುದನ್ನು ಈಗಿನ ಬೆಳವಣಿಗೆಗಳು ತೋರುತ್ತಿವೆ. ಸದ್ಯಕ್ಕೆ ಭಾರಿ ಹಿಂಸಾಚಾರ ತಪ್ಪಿದ್ದರೂ ಈಗಿನ ವಿದ್ಯಮಾನಗಳು ಸರ್ಕಾರಕ್ಕೆ ಮತ್ತು ಸೇನೆಗೆ ಎಚ್ಚರಿಕೆಯ ಸಂದೇಶ ರವಾನಿಸಿವೆ

1992ರ ವಿಶ್ವಕಪ್ ಕ್ರಿಕೆಟ್‌ನ ಹೀರೋ, ಪಾಕಿಸ್ತಾನ್ ತೆಹ್ರೀಕ್-ಎ-ಇನ್ಸಾಫ್ (ಪಿಟಿಐ) ಪಕ್ಷದ ಮುಖಂಡ ಇಮ್ರಾನ್ ಖಾನ್ ಅವರನ್ನು ಪಾಕಿಸ್ತಾನದ ಜನ ಅಷ್ಟು ಸುಲಭಕ್ಕೆ ಬಿಟ್ಟುಕೊಡುವಂತೆ ಕಾಣುತ್ತಿಲ್ಲ. ಪ್ರಧಾನಿ ಹುದ್ದೆಯಿಂದ ಅವರನ್ನು ಕೆಳಗಿಳಿಸಿ ಎರಡು ವರ್ಷವಾಗಿದೆ. ವಿವಿಧ ಆರೋಪಗಳ ಅಡಿ ಇಮ್ರಾನ್ ಜೈಲು ಸೇರಿ ವರ್ಷದ ಮೇಲಾಗಿದೆ. ಆದರೂ ಜನ ಅವರ ಮೇಲಿನ ವಿಶ್ವಾಸ ಕಳೆದುಕೊಂಡಿಲ್ಲ. ಸದ್ಯ ಪಾಕ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಇಮ್ರಾನ್ ಜನಪ್ರಿಯತೆಗೆ ಸಾಕ್ಷಿಯಾಗಿವೆ. ಹಾಗೆಯೇ ದೇಶದಲ್ಲಿ ಮತ್ತೊಂದು ಅಂತರ್ಯುದ್ಧದ ಅಪಾಯವನ್ನೂ ತೋರುತ್ತಿವೆ.

ಪಾಕಿಸ್ತಾನದ ಪ್ರಧಾನಿ ಆಗಿದ್ದ 72 ವರ್ಷದ ಇಮ್ರಾನ್ ಖಾನ್ ಅವರನ್ನು 2022ರಲ್ಲಿ ಅವಿಶ್ವಾಸ ಮಂಡಿಸಿ ಪದವಿಯಿಂದ ಕೆಳಗಿಳಿಸಲಾಗಿತ್ತು. ನಂತರ 2023ರ ಮೇ 9ರಂದು ಮೊದಲ ಬಾರಿಗೆ ಇಮ್ರಾನ್ ಅವರನ್ನು ಬಂಧಿಸಿ ಜೈಲಿಗೆ ಕಳಿಸಲಾಗಿತ್ತು. ಅಷ್ಟಕ್ಕೇ ನಿಲ್ಲದೇ ಅವರ ಪಕ್ಷದ ಚಿಹ್ನೆಯನ್ನೇ ರದ್ದುಪಡಿಸಲಾಯಿತು. ಸಾರ್ವತ್ರಿಕ ಚುನಾವಣೆಯಲ್ಲಿ ಪಿಟಿಐ ಅಧಿಕಾರಕ್ಕೇರುವುದನ್ನು ತಡೆಯುವುದಕ್ಕಾಗಿಯೇ ಇಮ್ರಾನ್ ವಿರುದ್ಧ ವಿರೋಧ ಪಕ್ಷಗಳು ಮತ್ತು ಸೇನೆ ಪಿತೂರಿ ನಡೆಸಿವೆ ಎನ್ನುವ ಮಾತುಗಳು ಕೇಳಿಬಂದಿದ್ದವು. ಆದರೂ ಜನ ಇಮ್ರಾನ್ ಅವರ ಕೈಬಿಡಲಿಲ್ಲ. ಪಕ್ಷೇತರರಾಗಿ ಸ್ಪರ್ಧಿಸಿದ್ದ ಅವರ ಬೆಂಬಲಿಗರೇ ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿತರಾಗಿದ್ದರು. ಇಮ್ರಾನ್ ಪ್ರಧಾನಿ ಆಗುವುದು ತೆರೆಯ ಹಿಂದಿನ ಸೂತ್ರಧಾರನಾದ ಸೇನೆಗೆ ಇಷ್ಟವಿರಲಿಲ್ಲ. ಸೇನೆಯ ಇಚ್ಛೆಗೆ ವಿರುದ್ಧವಾಗಿ ಅಲ್ಲಿ ಸರ್ಕಾರ ಸ್ಥಾಪನೆ ಮಾಡುವುದು ಅಸಾಧ್ಯ. ಹೀಗಾಗಿಯೇ ಸೇನೆಯ ಬೆಂಬಲದೊಂದಿಗೆ ಪ್ರಧಾನಿ ಆಗಿ ಪಾಕಿಸ್ತಾನ್ ಮುಸ್ಲಿಂ ಲೀಗ್ ನವಾಜ್ (ಪಿಎಂಎಲ್-ಎನ್) ಮುಖಂಡ ಶೆಹಬಾಜ್ ಶರೀಫ್ ಅಧಿಕಾರ ಹಿಡಿದರು.

ಒಂದೆಡೆ, ಕೈತಪ್ಪಿದ ಅಧಿಕಾರ. ಇನ್ನೊಂದೆಡೆ, ಒಂದಾದ ಮೇಲೊಂದರಂತೆ ದಾಖಲಾಗುತ್ತಿದ್ದ ಪ್ರಕರಣಗಳು. ಕೆಲವೇ ತಿಂಗಳಲ್ಲಿ ಇಮ್ರಾನ್ ವಿರುದ್ಧ ನೂರಕ್ಕೂ ಹೆಚ್ಚು ಪ್ರಕರಣಗಳು ದಾಖಲಾದವು. ಬುಶ್ರಾ ಬೀಬಿ ಅವರೊಂದಿಗಿನ ಇಮ್ರಾನ್ ಮದುವೆಯನ್ನೂ ಕಾನೂನುಬಾಹಿರ ಎನ್ನಲಾಯಿತು. ಇಮ್ರಾನ್ ಜತೆಗೆ ಅವರ ಪತ್ನಿ ಬುಶ್ರಾ ಬೀಬಿ ಅವರನ್ನೂ ಜೈಲಿಗೆ ಹಾಕಲಾಯಿತು. ಅಲ್ಲಿಗೆ ಇಮ್ರಾನ್ ಕಥೆ ಮುಗಿಯಿತು ಎಂದೇ ಹೆಚ್ಚಿನವರು ಭಾವಿಸಿದ್ದರು. ಆದರೆ, 'ನಾನು ಮಣಿಯುವುದಿಲ್ಲ, ತಲೆ ಬಾಗುವುದಿಲ್ಲ' ಎಂದು ಸರಳುಗಳ ಹಿಂದಿನಿಂದಲೇ ಘೋಷಿಸಿದರು ಇಮ್ರಾನ್. ಅವರ ಘೋಷಣೆ ಕೇವಲ ಹೇಳಿಕೆ ಆಗಿರಲಿಲ್ಲ; ಒಂದು ರಾಜಕೀಯ ತಂತ್ರವಾಗಿತ್ತು.

ಜಗತ್ತಿನ ಅತ್ಯುತ್ತಮ ಕ್ರಿಕೆಟ್ ಆಟಗಾರರಲ್ಲಿ ಒಬ್ಬರಾಗಿದ್ದ ಇಮ್ರಾನ್ ಆಟದ ಒತ್ತಡ, ಗೆಲುವಿನ ಸಂಭ್ರಮ, ಸೋಲಿನ ಅವಮಾನ, ಸೋಲಿನ ಸ್ಥಿತಿಯಿಂದ ಪುಟಿದೇಳುವ ರೀತಿ ಎಲ್ಲವನ್ನೂ ಅನುಭವಿಸಿದ್ದವರು. 1992ರ ವಿಶ್ವಕಪ್ ಗೆದ್ದ ನಂತರ ಇಮ್ರಾನ್ ಜನಪ್ರಿಯತೆ ಉತ್ತುಂಗಕ್ಕೇರಿತ್ತು. ಇಷ್ಟಾದರೂ ಪಾಕಿಸ್ತಾನದ ಪ್ರಧಾನಿ ಪಟ್ಟದವರೆಗಿನ ಅವರ ನಡಿಗೆ ಸುಲಭದ್ದೇನೂ ಆಗಿರಲಿಲ್ಲ. 1996ರಲ್ಲಿ ಪಿಟಿಐ ಪಕ್ಷ ಸ್ಥಾಪಿಸಿದರೂ ಅವರು ಅಧಿಕಾರದ ಗದ್ದುಗೆ ಏರಲು ನಿರಂತರ 12 ವರ್ಷ ಶ್ರಮಿಸಬೇಕಾಯಿತು. 2018ರಲ್ಲಿ ಪ್ರಧಾನಿ ಆದರೂ ಅವಧಿ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ (ಪಾಕಿಸ್ತಾನ ರಚನೆ ಆದಾಗಿನಿಂದಲೂ ಯಾವ ಪ್ರಧಾನಿಯೂ ತಮ್ಮ ಅವಧಿ ಪೂರ್ಣಗೊಳಿಸಿಲ್ಲ).

ಅಧಿಕಾರದಿಂದ ಕೆಳಗಿಳಿದಿದ್ದರೂ ನೂರಾರು ಪ್ರಕರಣಗಳನ್ನು ಎದುರಿಸುತ್ತಿದ್ದರೂ ಪಾಕಿಸ್ತಾನದ ಜನರ ನಡುವೆ ಇಮ್ರಾನ್ ಜನಪ್ರಿಯತೆ ಕಡಿಮೆ ಆಗಿರಲಿಲ್ಲ. ಇದರ ಜತೆಗೆ, ಸಾಮಾಜಿಕ ಜಾಲತಾಣಗಳಲ್ಲಿ ಇಮ್ರಾನ್ ಅವರ ಜೈಲು ಸುದ್ದಿ, ಕೋರ್ಟ್ ವಿಚಾರಣೆ ಇತ್ಯಾದಿ ಮಾಹಿತಿಯನ್ನು ಪಿಟಿಐ ಪಕ್ಷವು ಅತ್ಯಂತ ಯಶಸ್ವಿಯಾಗಿ ಜನರಿಗೆ ಮುಟ್ಟಿಸುತ್ತಿತ್ತು. ಅವರನ್ನು ಶೆಹಬಾಜ್ ಶರೀಫ್ ಸರ್ಕಾರ ನಡೆಸಿಕೊಳ್ಳುತ್ತಿರುವ ರೀತಿಯ ಬಗ್ಗೆ ಜನರಲ್ಲಿ ಅಸಮಾಧಾನ ಇತ್ತು. 2023ರಲ್ಲಿ ಅವರನ್ನು ಮೊದಲ ಬಾರಿ ಬಂಧಿಸಿದಾಗ ದೇಶದ ಹಲವು ಭಾಗಗಳಲ್ಲಿ ಜನ ಬೀದಿಗಿಳಿದು ಪ್ರತಿಭಟಿಸಿದ್ದರು. ಸೇನೆಯ ಕಚೇರಿಗಳ ಮೇಲೆ, ಕಟ್ಟಡಗಳ ಮೇಲೆ ದಾಳಿಯನ್ನೂ ನಡೆಸಿದ್ದರು. ನಂತರ ಆಗಿಂದಾಗ್ಗೆ ಇಮ್ರಾನ್ ಬೆಂಬಲಿಗರು ಮತ್ತು ಸರ್ಕಾರದ ನಡುವೆ ಘರ್ಷಣೆ ನಡೆಯುತ್ತಲೇ ಇತ್ತು. ಪಾಕಿಸ್ತಾನದ ಸಂಸತ್ ಭವನದ ಸನಿಹದಲ್ಲೇ ಪಿಟಿಐ ಪಕ್ಷದ ಸಂಸದರನ್ನು ಬಂಧಿಸಲಾಯಿತು. ಪ್ರತಿಭಟನಕಾರರನ್ನು ಗಮನದಲ್ಲಿಟ್ಟುಕೊಂಡೇ ಜನ ಗುಂಪು ಸೇರುವುದನ್ನು ನಿಷೇಧಿಸಿ ಹೊಸ ಕಾಯ್ದೆ ಜಾರಿಗೆ ತರಲಾಯಿತು. ಆದರೂ ಪ್ರತಿಭಟನೆಗಳು ನಿಲ್ಲಲಿಲ್ಲ. ಈಗ ನಡೆಯುತ್ತಿರುವ ಪ್ರತಿಭಟನೆ, ಹಿಂಸಾಚಾರವೂ ಅದರ ಮುಂದುವರಿದ ಭಾಗವೇ ಆಗಿವೆ.

'ಅಕ್ರಮ ಕಾಯ್ದೆ ರದ್ದಾಗಬೇಕು. ಚುನಾವಣೆಯಲ್ಲಿ ಆದ ಅನ್ಯಾಯಕ್ಕೆ ನ್ಯಾಯ ಸಿಗಬೇಕು, ನನ್ನನ್ನು ಜೈಲಿನಿಂದ ಬಿಡುಗಡೆ ಮಾಡಬೇಕು. ಅದಕ್ಕಾಗಿ ಪಾಕಿಸ್ತಾನದ ಜನ ನ.24ರಂದು ದೇಶದಾದ್ಯಂತ ಪ್ರತಿಭಟನೆ ಮಾಡಬೇಕು' ಎಂದು ಇಮ್ರಾನ್ ಖಾನ್ ನ.13ರಂದು ಕರೆ ನೀಡಿದರು. ಜನ ದೊಡ್ಡ ಸಂಖ್ಯೆಯಲ್ಲಿ ಬೀದಿಗಿಳಿದರು. ರಾಷ್ಟ್ರ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಸಂಸತ್ ಭವನ ಸೇರಿದಂತೆ ಸರ್ಕಾರದ ಪ್ರಮುಖ ಕಚೇರಿಗಳಿರುವ, ಚಾರಿತ್ರಿಕವಾದ ರ‍್ಯಾಲಿಗಳು ನಡೆದ ಸ್ಥಳವಾಗಿರುವ ಡಿ ಚೌಕದತ್ತ ಸಾವಿರಾರು ಪ್ರತಿಭಟನಕಾರರು ಸಾಗತೊಡಗಿದರು. ಇಮ್ರಾನ್ ಅವರ ಪತ್ನಿ ಬುಶ್ರಾ ಬೀಬಿ ಹಾಗೂ ಖೈಬರ್ ಪಖ್ತುಂಖ್ವಾ ಮುಖ್ಯಮಂತ್ರಿ ಅಲಿ ಅಮೀನ್ ಗಂಡಾಪುರ್ ಇದರ ನೇತೃತ್ವ ವಹಿಸಿದರು. ಪ್ರತಿಭಟನಕಾರರನ್ನು ತಡೆಯಲು ಪೊಲೀಸರು ಕಂಟೇನರ್‌ಗಳನ್ನು ಅಡ್ಡ ನಿಲ್ಲಿಸಿದರೆ, ಜೆಸಿಪಿಗಳ ನೆರವಿನಿಂದ ಅವನ್ನು ದೂರ ಸರಿಸಿ, ಮುನ್ನುಗ್ಗತೊಡಗಿದರು. ಈ ಸಂಘರ್ಷದಲ್ಲಿ ಹಲವರು ಸಾವಿಗೀಡಾಗಿದ್ದಾರೆ.

ಕೊನೆಗೆ, ನ. 27ರ ರಾತ್ರಿ ಸೇನೆ ಮತ್ತು ಪೊಲೀಸರು ಬಲ ಪ್ರಯೋಗಿಸಿ ಇಸ್ಲಾಮಾಬಾದ್‌ನ 'ಕೆಂಪು ವಲಯ'ದಿಂದ ಪ್ರತಿಭಟನಕಾರರನ್ನು ಹೊರಹಾಕಿದ್ದಾರೆ. ಪೊಲೀಸ್ ದಾಳಿಗೆ ಬೆದರಿ ಬುಶ್ರಾ ಬೀಬಿ ಮತ್ತು ಅಲಿ ಅಮೀನ್ ಗುಂಡಾಪುರ್ ಕಾಲ್ಕಿತ್ತಿದ್ದಾರೆ ಎಂದು ಸರ್ಕಾರ ಹೇಳಿದೆ. ಫ್ಯಾಸಿಸ್ಟ್ ಸರ್ಕಾರವು ಕಾರ್ಯಕರ್ತರ 'ಹತ್ಯಾಕಾಂಡ' ನಡೆಸಿದೆ ಎಂದು ಪಿಟಿಐ ಆರೋಪಿಸಿದೆ. ಸಂಘರ್ಷ ತೀವ್ರವಾದ ನಂತರ ಪಿಟಿಐ ಡಿ ಚೌಕದಲ್ಲಿನ ಪ್ರತಿಭಟನೆ ಹಿಂಪಡೆದಿದೆ. ಸದ್ಯಕ್ಕೆ ಪರಿಸ್ಥಿತಿ ಶಾಂತವಾಗಿರುವಂತೆ ಕಂಡರೂ ಆಳದಲ್ಲಿ ಪ್ರಕ್ಷುಬ್ಧವಾಗಿಯೇ ಇದೆ. ಸರಳುಗಳ ಹಿಂದಿದ್ದರೂ ಇಮ್ರಾನ್ ಸೇನೆ ಮತ್ತು ಶೆಹಬಾಜ್ ಶರೀಫ್ ಸರ್ಕಾರಕ್ಕೆ ಸಿಂಹಸ್ವಪ್ನವಾಗಿದ್ದಾರೆ. ಪಾಕಿಸ್ತಾನ ಮತ್ತೊಂದು ಅಂತರ್ಯುದ್ಧದ ಹೊಸ್ತಿಲಲ್ಲಿರುವಂತೆ ಕಾಣುತ್ತಿದೆ.

ಆಧಾರ: ಪಿಟಿಐ, ಬಿಬಿಸಿ, ನ್ಯೂಯಾರ್ಕ್ ಟೈಮ್ಸ್, ಡಾನ್.ಕಾಂ, ರಾಯಿಟರ್ಸ್

ಕ್ರಿಕೆಟಿಗ, ಪ್ರಧಾನಿ, ಜೈಲುವಾಸಿ



ಕ್ರಿಕೆಟಿಗನಾಗಿ ಪಾಕಿಸ್ತಾನದ ಕ್ರಿಕೆಟ್ ಅನ್ನು ಉತ್ತುಂಗಕ್ಕೆ ಏರಿಸಿದ್ದ ಇಮ್ರಾನ್ ಖಾನ್, ರಾಜಕೀಯ ಪಕ್ಷ ಹುಟ್ಟುಹಾಕಿ ದೇಶದ ಜನಲ್ಲಿ 'ನಯಾ ಪಾಕಿಸ್ತಾನ'ದ ಕನಸು ಬಿತ್ತಿ ಪ್ರಧಾನಿ ಹುದ್ದೆಗೆ ಏರಿ ವೈಯಕ್ತಿಕ ಜೀವನದಲ್ಲೂ ಉತ್ತುಂಗಕ್ಕೆ ಏರಿದವರು. ಕೊಟ್ಟ ಭರವಸೆಯನ್ನು ಈಡೇರಿಸಲು ಸಾಧ್ಯವಾಗದೇ 2022ರಲ್ಲಿ ಅವಿಶ್ವಾಸ ನಿರ್ಣಯದ ಮೂಲಕ ಪದಚ್ಯುತಿಗೊಂಡ ಬಳಿಕ ಅವರು ಮುಖ ಮಾಡಿದ್ದು ಜೈಲಿನತ್ತ. ಒಂದು ವರ್ಷಕ್ಕೂ ಹೆಚ್ಚು ಸಮಯದಿಂದ ಕಾರಾಗೃಹದಲ್ಲಿರುವ ಅವರು ಜೈಲಿನಿಂದ ಹೊರಬರಲು ಬೆಂಬಲಿಗರ ಮೂಲಕ ಇನ್ನಿಲ್ಲದ ಪ್ರಯತ್ನ ಪಡುತ್ತಿದ್ದಾರೆ.

- **1952**ರ ಅಕ್ಟೋಬರ್ **5**: ಲಾಹೋರ್‌ನಲ್ಲಿ ಜನನ
- **1971**: ಇಂಗ್ಲೆಂಡ್ ವಿರುದ್ಧ ಎಜ್‌ಬಾಸ್ಟನ್‌ನಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ
- **1982**: ಪಾಕ್ ಕ್ರಿಕೆಟ್ ತಂಡದ ನಾಯಕನಾಗಿ ಆಯ್ಕೆ
- **1992**: ಪಾಕಿಸ್ತಾನಕ್ಕೆ ವಿಶ್ವಕಪ್ ತಂದುಕೊಟ್ಟ ಗೌರವ, ಫೈಸಲಾಬಾದ್‌ನಲ್ಲಿ ಶ್ರೀಲಂಕಾ ವಿರುದ್ಧ ಕೊನೆಯ ಟೆಸ್ಟ್. ಅದೇ ವರ್ಷ ಕ್ರಿಕೆಟ್‌ಗೆ ವಿದಾಯ
- **1996**, ಏ.**25**: ಪಾಕಿಸ್ತಾನ್ ತೆಹ್ರೀಕ್ ಎ-ಇನ್ಸಾಫ್ ರಾಜಕೀಯ ಪಕ್ಷ ಸ್ಥಾಪನೆ
- **1997**: ಮೊದಲ ಬಾರಿಗೆ ರಾಷ್ಟ್ರೀಯ ಚುನಾವಣೆಯಲ್ಲಿ ಕಣಕ್ಕೆ. ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆ. ಎರಡರಲ್ಲೂ ಸೋಲು
- **2002**, ಅಕ್ಟೋಬರ್: ಮಿಯಾನ್ವಾಲಿ ಕ್ಷೇತ್ರದಿಂದ ಸಂಸತ್ತಿಗೆ ಆಯ್ಕೆ
- **2011-2013**: ಲಾಹೋರ್ ಮತ್ತು ಕರಾಚಿಯಲ್ಲಿ ಬೃಹತ್ ರ‍್ಯಾಲಿ
- **2018**: ಸಾರ್ವತ್ರಿಕ ಚುನಾವಣೆಯಲ್ಲಿ 270 ಕ್ಷೇತ್ರಗಳ ಪೈಕಿ 116 ಕ್ಷೇತ್ರಗಳಲ್ಲಿ ಪಿಟಿಐಗೆ ಗೆಲುವು
- **2018**, ಆಗಸ್ಟ್ **18**: ಪಾಕಿಸ್ತಾನದ ಪ್ರಧಾನಿಯಾಗಿ ಪ್ರಮಾಣವಚನ.
- **2022**, ಏಪ್ರಿಲ್: ಅವಿಶ್ವಾಸ ಮೂಲಕ ಪ್ರಧಾನಿ ಹುದ್ದೆಯಿಂದ ಪದಚ್ಯುತಿ
- **2022**, ಆಗಸ್ಟ್: ಆಸ್ತಿ ಘೋಷಣೆ ಮಾಡುವಾಗ, ಪ್ರಧಾನಿ ಹುದ್ದೆಯಲ್ಲಿದ್ದ ಸಂದರ್ಭದಲ್ಲಿ ಸಿಕ್ಕಿದ ಉಡುಗೊರೆಗಳ ವಿವರಗಳನ್ನು ನೀಡದೇ ಇದ್ದುದಕ್ಕೆ ಪಾಕಿಸ್ತಾನ ಚುನಾವಣಾ ಆಯೋಗದಿಂದ ತೋಶಖಾನ ಪ್ರಕರಣ ದಾಖಲು
- **2022**, ಅಕ್ಟೋಬರ್: ಆಸ್ತಿ ವಿವರಗಳಲ್ಲಿ ತಪ್ಪು ಮಾಹಿತಿ ನೀಡಿದ್ದಕ್ಕಾಗಿ ಸಾರ್ವಜನಿಕ ಪದವಿಯಿಂದ ಅನರ್ಹ
- **2023**, ಮೇ **9**: ಭ್ರಷ್ಟಾಚಾರ ಆರೋಪಗಳ ಅಡಿಯಲ್ಲಿ ಬಂಧನ, ಇದರ ವಿರುದ್ಧ ಬೆಂಬಲಿಗರಿಂದ ದೇಶದಾದ್ಯಂತ ಹಿಂಸಾಚಾರ
- **2023**, ಮೇ: ಬಂಧನ ಕಾನೂನಿಗೆ ವಿರುದ್ಧ ಎಂದು ಹೇಳಿದ ಸುಪ್ರೀಂ ಕೋರ್ಟ್, ಬಿಡುಗಡೆಗೆ ಆದೇಶ
- **2023**, ಆಗಸ್ಟ್ **5**: ಪ್ರಧಾನಿಯಾಗಿದ್ದಾಗ ಸಿಕ್ಕಿದ ಉಡುಗೊರೆಗಳ ದುರ್ಬಳಕೆ ಮಾಡಿದ್ದಕ್ಕಾಗಿ ಮೂರು ವರ್ಷಗಳ ಜೈಲು ಶಿಕ್ಷೆ
- **2023**, ಆಗಸ್ಟ್ **29**: ಜಾಮೀನು ಸಿಕ್ಕಿದರೂ, ದೇಶದ ರಹಸ್ಯಗಳನ್ನು ಸೋರಿಕೆ ಮಾಡಿದ ಆರೋಪದಲ್ಲಿ ನ್ಯಾಯಾಂಗ ಬಂಧನದಲ್ಲಿ ಮುಂದುವರಿಕೆ
- **2024**, ಜನವರಿ: ಅಧಿಕೃತ ರಹಸ್ಯಗಳ ಕಾಯ್ದೆ ಉಲ್ಲಂಘಿಸಿದ್ದಕ್ಕೆ 10 ವರ್ಷಗಳ ಜೈಲು ಶಿಕ್ಷೆ
- **2024**, ಫೆ.**3**: ಬುಶ್ರಾ ಬೀಬಿ ಅವರ ಇದ್ದತ್ ಅವಧಿಯಲ್ಲಿ ಕಾನೂನು ಬಾಹಿರವಾಗಿ ಅವರನ್ನು ಮದುವೆಯಾಗಿದ್ದಕ್ಕಾಗಿ ಬುಶ್ರಾ ಅವರ ಜೊತೆಗೆ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿ ಕೋರ್ಟ್ ಆದೇಶ
- **2024**, ಜೂನ್ **3**: ರಹಸ್ಯ ಮಾಹಿತಿ ಸೋರಿಕೆ ಪ್ರಕರಣದಲ್ಲಿ ಶಿಕ್ಷೆ ವಿಧಿಸಿದ್ದನ್ನು ರದ್ದುಪಡಿಸಿದ ಇಸ್ಲಾಮಾಬಾದ್ ಹೈಕೋರ್ಟ್. ಆದರೆ, ಇತರ ಪ್ರಕರಣಗಳಲ್ಲಿ ಜೈಲು ಶಿಕ್ಷೆ ಮುಂದುವರಿಕೆ
- **2024**, ಜುಲೈ **13**: ಕಾನೂನುಬಾಹಿರ ಮದುವೆ ಪ್ರಕರಣದಲ್ಲಿ ನೀಡಿದ ಶಿಕ್ಷೆ ರದ್ದು. ಆದರೂ 2023ರ ಹಿಂಸಾಚಾರ ಪ್ರಕರಣದಲ್ಲಿ ಜೈಲಿನೊಳಗೆ ಬಂದಿ

ಇಮ್ರಾನ್ ಪತ್ನಿ ಬುಶ್ರಾ ಪ್ರತಿಭಟನೆಯ ಹೊಸ ಮುಖ

ರಾಜಧಾನಿ ಇಸ್ಲಾಮಾಬಾದ್ ಅನ್ನು ಅಕ್ಷರಶಃ ರಣಾಂಗಣವನ್ನಾಗಿ ಮಾಡಿದ್ದ ಪಿಟಿಐ ಬೆಂಬಲಿಗರ ಪ್ರತಿಭಟನೆಯ ನೇತೃತ್ವದ ವಹಿಸಿದ್ದು ಇಮ್ರಾನ್ ಖಾನ್ ಅವರ ಮೂರನೇ ಪತ್ನಿ ಬುಶ್ರಾ ಬೀಬಿ.

ಸರ್ಕಾರವು ಪ್ರತಿಭಟನೆಯನ್ನು ಹತ್ತಿಕ್ಕಲು ಆರಂಭಿಸುತ್ತಿದ್ದಂತೆಯೇ ಅವರು ಇಸ್ಲಾಮಾಬಾದ್‌ನ ಸೂಕ್ಷ್ಮ ಪ್ರದೇಶ ಡಿ-ಚೌಕದಿಂದ ತೆರಳಿದರು. ಬುಶ್ರಾ ಮತ್ತು ಪಕ್ಷದ ನಾಯಕರು ಅರ್ಧದಿಂದಲೇ ಪ್ರತಿಭಟನೆಯನ್ನು ತೊರೆದಿರುವುದಕ್ಕೆ ಪಕ್ಷದ ಕಾರ್ಯಕರ್ತರು ಅಸಮಾಧಾನಗೊಂಡಿದ್ದರೂ, ಇಮ್ರಾನ್ ಬಂಧನದ ಬಳಿಕ ನಾಯಕತ್ವದ ಕೊರತೆಯಿಂದ ಬಳಲುತ್ತಿದ್ದ ಪಕ್ಷಕ್ಕೆ ಬುಶ್ರಾ ಅವರು ಶಕ್ತಿ ತುಂಬಲಿದ್ದಾರೆಯೇ ಎಂಬ ಚರ್ಚೆಯೂ ಆರಂಭಗೊಂಡಿದೆ.

2018ರಲ್ಲಿ ಇಮ್ರಾನ್ ಖಾನ್ ಅವರನ್ನು ಮದುವೆಯಾಗಿದ್ದ ಬುಶ್ರಾ ಅವರು ರಾಜಕೀಯ, ಪಕ್ಷದ ಚಟುವಟಿಕೆಯಿಂದ ದೂರವೇ ಉಳಿದಿದ್ದರು. ಬಲು ಅಪರೂಪವಾಗಿ ಇಮ್ರಾನ್ ಖಾನ್ ಅವರೊಂದಿಗೆ ಕಾಣಿಸಿಕೊಳ್ಳುತ್ತಿದ್ದರು. ಆಗಲೂ ಅವರು ತಮ್ಮ ಮುಖವನ್ನು ತೋರಿಸುತ್ತಿರಲಿಲ್ಲ.

ಕಾನೂನುಬಾಹಿರ ಮದುವೆ ಪ್ರಕರಣದಲ್ಲಿ ಇಮ್ರಾನ್ ಅವರೊಂದಿಗೆ ಏಳು ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದ ಅವರು ಕಳೆದ ತಿಂಗಳಷ್ಟೇ ಜೈಲಿನಿಂದ ಬಿಡುಗಡೆಯಾಗಿದ್ದರು. ಆ ಬಳಿಕ ತಮ್ಮ ಪತಿಯ ಪರವಾಗಿ ಹೋರಾಟಕ್ಕೆ ಇಳಿದಿದ್ದಾರೆ. ಇಮ್ರಾನ್ ಅವರ ಬಿಡುಗಡೆಗಾಗಿ ಹೋರಾಟ ನಡೆಸುವಂತೆ ಬೆಂಬಲಿಗರಿಗೆ ಕರೆ ನೀಡುತ್ತಿದ್ದಾರೆ.

ಇಸ್ಲಾಮಾಬಾದ್‌ನಲ್ಲಿ ಸೋಮವಾರ ನಡೆದ ಪ್ರತಿಭಟನೆ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಕಾಣಿಸಿಕೊಂಡು ಪಕ್ಷದ ಬೆಂಬಲಿಗರನ್ನು ಅಚ್ಚರಿಗೆ ಕೆಡವಿದ್ದರು. ಮುಖಂಡರಿಂದ ತುಂಬಿದ್ದ ಟ್ರಕ್‌ನಲ್ಲಿದ್ದ ಕಂಟೇನರ್‌ನ ಮೇಲೆ ನಿಂತುಕೊಂಡು ಮಾತನಾಡಿದ್ದ ಅವರು, 'ಖಾನ್ ಅವರು ಇಲ್ಲಿಗೆ ಬರುವವರೆಗೆ, ಇಲ್ಲಿಂದ ನೀವು ಕದಲುವುದಿಲ್ಲ ಎಂದು ಭರವಸೆ ನೀಡಬೇಕು' ಎಂದು ಅಳುತ್ತಾ ಹೇಳಿದ್ದರು.

ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಬುಶ್ರಾ ಅವರನ್ನು ಭೇಟಿ ಮಾಡಿದ್ದ ಇಮ್ರಾನ್ ಖಾನ್, ತಮ್ಮ ರಾಜಕೀಯ ಜೀವನದ ಏಳಿಗೆಗೆ ಆಧ್ಯಾತ್ಮಿಕ ಮಾರ್ಗದರ್ಶನ ನೀಡುವಂತೆ ಕೋರಿದ್ದರು. ನಂತರ ಇಬ್ಬರೂ ಹತ್ತಿರವಾಗಿದ್ದರು. ಬುಶ್ರಾ, ತಮ್ಮ ಪತಿಗೆ ವಿಚ್ಛೇದನ ನೀಡಿ ಖಾನ್ ಅವರನ್ನು ವರಿಸಿದ್ದರು.

ಬುಶ್ರಾ ಅವರು ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲಿದ್ದಾರೆಯೇ ಎಂಬ ಬಗ್ಗೆ ಚರ್ಚೆ ನಡೆಯುತ್ತಿರುವಂತೆಯೇ ಖಾನ್ ಅವರು ಜೈಲಿನಿಂದಲೇ ಕಳುಹಿಸಿದ ಸಂದೇಶದಲ್ಲಿ ಇಂತಹ ಅಭಿಪ್ರಾಯವನ್ನು ತಳ್ಳಿ ಹಾಕಿದ್ದಾರೆ.

'ನನ್ನ ಪತ್ನಿಯಾಗಿ ನನ್ನ ಸಂದೇಶವನ್ನು ಆಕೆ ರವಾನಿಸಿದ್ದಾರೆ. ರಾಜಕಾರಣದೊಂದಿಗೆ ಆಕೆಗೆ ಸಂಬಂಧವಿಲ್ಲ' ಎಂದು ಖಾನ್ ಹೇಳಿದ್ದಾರೆ.

ಪಿಟಿಐನ ಮಾಧ್ಯಮ ಘಟಕವು ಕೂಡ, 'ಖಾನ್ ಪತ್ನಿಯಾಗಿ ಅವರು ಪ್ರತಿಭಟನೆ ಮುನ್ನಡೆಸಿದ್ದಾರೆಯೇ ವಿನಾ, ಪಕ್ಷದ ನಾಯಕಿಯಾಗಿ ಅಲ್ಲ' ಎಂದು ಹೇಳಿದೆ.

ಸಿನಿ ಬಿಟ್ಸ್

ನಿದ್ರಾದೇವಿ ನೆಕ್ಸ್ಟ್ ಡೋರ್ ಶೀಘ್ರದಲ್ಲೇ ತೆರೆಗೆ

ಶೈನ್ ಶೆಟ್ಟಿ, ರಿಷಿಕಾ ನಾಯಕ್, ಪ್ರವೀರ್ ಶೆಟ್ಟಿ

ಚಂದನವನದಲ್ಲೀಗ ಹೊಸಬರ ಭಿನ್ನ ಪ್ರಯತ್ನದ ಸಿನಿಮಾಗಳು ಸದ್ದು ಮಾಡುತ್ತಿವೆ. ಇದಕ್ಕೆ 'ನಿದ್ರಾದೇವಿ ನೆಕ್ಸ್ಟ್ ಡೋರ್' ಶೀಘ್ರದಲ್ಲೇ ಸೇರ್ಪಡೆಯಾಗಲಿದೆ.

ಚಿತ್ರದ ಟೀಸರ್ ಅನ್ನು ಇತ್ತೀಚೆಗೆ ನಟ ಶ್ರೀಮುರಳಿ ಬಿಡುಗಡೆ ಮಾಡಿದರು. ಸುರಾಮ್ ಮೂವೀಸ್‌ನಡಿ ಈ ಸಿನಿಮಾ ನಿರ್ಮಾಣವಾಗಿದ್ದು, ಸುರಾಗ್ ಸಾಗರ್ ನಿರ್ದೇಶನವಿದೆ. ಪ್ರವೀರ್ ಶೆಟ್ಟಿ, ರಿಷಿಕಾ ನಾಯಕ್ ಜೋಡಿಯಾಗಿ ನಟಿಸಿದ್ದಾರೆ. 'ಬಿಗ್‌ಬಾಸ್' ಖ್ಯಾತಿಯ ನಟ ಶೈನ್ ಶೆಟ್ಟಿ ತಾರಾಬಳಗದಲ್ಲಿದ್ದಾರೆ. 'ಈ ಸಿನಿಮಾ ಜೊತೆಗೆ ಎರಡು ವರ್ಷದ ಪಯಣವಿದೆ. ಈ ಕಥೆಯನ್ನಿಟ್ಟುಕೊಂಡು ಹಲವು ನಿರ್ಮಾಪಕರ ಬಳಿಗೆ ಹೋದೆವು. ಜಯರಾಮ್ ದೇವಸಮುದ್ರ ಅವರು ಕಥೆ ಒಪ್ಪಿಕೊಂಡು, ನಮ್ಮ ಮೇಲೆ ನಂಬಿಕೆ ಇಟ್ಟರು. ಸಿನಿಮಾ ಚೆನ್ನಾಗಿ ಮೂಡಿಬಂದಿದೆ' ಎಂದರು ಪ್ರವೀರ್ ಶೆಟ್ಟಿ.

'ಚಿತ್ರದಲ್ಲಿ ಪ್ರೇಮಕಥೆಯಿದೆ. ಜೊತೆಗೆ ನಿದ್ದೆ ಇಲ್ಲದ ವ್ಯಕ್ತಿಯ ಸುತ್ತ ಸಾಗುವ ಕಥೆಯಿದು' ಎಂದಿದೆ ಚಿತ್ರತಂಡ. ಶ್ರುತಿ ಹರಿಹರನ್, ಕೆ.ಎಸ್. ಶ್ರೀಧರ್, ಸುಧಾರಾಣಿ ಮುಂತಾದವರು ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಶ್ರೀವತ್ಸ, ಅನೂಪ್, ಐಶ್ವರ್ಯ ಗೌಡ, ಮಾಸ್ಟರ್ ಸುಜಯ್ ರಾಮ್, ಕಾರ್ತಿಕ್ ಪತ್ತಾರ್, ಅನುರಾಗ್ ಪಾಟೀಲ್ ಮತ್ತಿತರರು ತಾರಾಬಳಗದಲ್ಲಿದ್ದಾರೆ. ಸಿನಿಮಾಗೆ ನಕುಲ್ ಅಭ್ಯಂಕರ್ ಸಂಗೀತ, ಅಜಯ್ ಕುಲಕರ್ಣಿ ಛಾಯಾಚಿತ್ರಗ್ರಹಣವಿದೆ.

ಕೋಲ್ಕತ್ತ ಚಿತ್ರೋತ್ಸವಕ್ಕೆ 'ಪಿದಾಯಿ'

ಶರತ್ ಲೋಹಿತಾಶ್ವ

ಶರತ್ ಲೋಹಿತಾಶ್ವ ಮುಖ್ಯಭೂಮಿಕೆಯಲ್ಲಿರುವ, ಸಂತೋಷ್ ಮಾಡ ನಿರ್ದೇಶನದ ತುಳು ಸಿನಿಮಾ 'ಪಿದಾಯಿ' ಕೋಲ್ಕತ್ತ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ. ಡಿ.8 ಮತ್ತು 9ರಂದು ನಡೆಯುವ ಚಿತ್ರೋತ್ಸವದಲ್ಲಿ ಸಿನಿಮಾ ಪ್ರದರ್ಶನಗೊಳ್ಳಲಿದೆ.

'ನಮ್ಮ ಕನಸು' ಬ್ಯಾನರ್‌ನಡಿ ಕೆ. ಸುರೇಶ್ ಈ ಸಿನಿಮಾ ನಿರ್ಮಾಣ ಮಾಡಿದ್ದು, ರಮೇಶ್ ಶೆಟ್ಟಿಗಾರ್ ಈ ಸಿನಿಮಾ ಕಥೆ ಬರೆದಿದ್ದಾರೆ. ರೂಪ ವರ್ಕಾಡಿ, ಇಳಾ ವಿಟ್ಲ, ದೇವಿ ನಾಯರ್, ದೀಪಕ್ ರೈ ಪಾಣಾಜೆ, ಪುಷ್ಪರಾಜ್ ಬೋಳಾರ್, ಪ್ರೀತೇಶ್, ಅನಿಲ್ ರಾಜ್ ಉಪ್ಪಳ, ರವಿ ವರ್ಕಾಡಿ, ಮೋನಿಶ್, ತ್ರಿಷ, ಧ್ರುವ, ನಿಹಾ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಉಣ್ಣಿ ಮಾಡವೂರ್ ಛಾಯಾಚಿತ್ರಗ್ರಹಣ, ರಮೇಶ್ ಶೆಟ್ಟಿಗಾರ್ ಹಾಗೂ ಡಿ.ಬಿ. ಸಿ ಶೇಖರ್ ಸಂಭಾಷಣೆ ಚಿತ್ರಕ್ಕಿದ್ದು, ದಕ್ಷಿಣ ಕನ್ನಡದ ಮುಡಿಪು ಹಾಗೂ ಮಂಜೇಶ್ವರ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

ಕೈತಪ್ರಮ್ ದಾಮೋದರನ್ ನಂಬೂದಿರಿ, ಸುಧೀರ್ ಅತ್ತಾವರ, ಕುಶಾಲಾಕ್ಷಿ ಕಣ್ವತೀರ್ಥ ಅವರ ಸಾಹಿತ್ಯ ಚಿತ್ರಕ್ಕಿದ್ದು, ಅಜಯ್ ನಂಬೂದಿರಿ ಸಂಗೀತ ನೀಡಿದ್ದಾರೆ. ವಿದ್ಯಾಭೂಷಣ್ ಅವರು ಹಾಡುಗಳಿಗೆ ಧ್ವನಿಯಾಗಿದ್ದಾರೆ. ಸುರೇಶ್ ಅರಸ್ ಸಂಕಲನ, ರಾಜೇಶ್ ಬಂದ್ಯೋಡು ಕಲಾ ನಿರ್ದೇಶನ ಚಿತ್ರಕ್ಕಿದೆ. ತುಳುನಾಡಿನ ಕುಣಿತ ಭಜನೆಯನ್ನು ಮೊದಲ ಬಾರಿಗೆ ಈ ಸಿನಿಮಾದಲ್ಲಿ ಪ್ರಯೋಗಿಸಲಾಗಿದೆ ಎಂದಿದೆ ಚಿತ್ರತಂಡ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಹಿಂದಿನದ್ದು ನೆನೆಸಿಕೊಂಡು ಅಳೋದು ಸಂಸ್ಕಾರ ದುಃಖ

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

77

ಒಮ್ಮೆ ಅಕ್ಬರ ಮಹಾರಾಜ ಬೀರಬಲ್‌ನಿಗೆ, 'ನನ್ನ ಅಂಗೈಯಲ್ಲಿ ಕೂದಲು ಇಲ್ಲವಲ್ಲ ಯಾಕೆ?' ಅಂತ ಕೇಳಿದ. 'ತಾವು ಮಹಾರಾಜರು. ನನ್ನ ಬುದ್ಧಿಶಕ್ತಿಗೆ ಮೆಚ್ಚಿ ಬಹುಮಾನ ಕೊಟ್ಟು ಕೊಟ್ಟು ನಿಮ್ಮ ಕೈಯಲ್ಲಿರುವ ಕೂದಲು ಉದುರಿ ಹೋಗಿದಾವೆ' ಅಂದ ಬೀರಬಲ್. 'ನನ್ನ ಅಂಗೈಯಲ್ಲಿ ಮಾತ್ರ ಅಲ್ಲ. ನಿನ್ನ ಅಂಗೈಯಲ್ಲಿಯೂ ಕೂದಲು ಇಲ್ಲ ಯಾಕೆ?' ಎಂದು ಕೇಳಿದ ಅಕ್ಬರ್. 'ನೀವು ಕೊಟ್ಟ ಬಹುಮಾನ ತಗಂಡು ತಗಂಡು ನನ್ನ ಕೈಯಾಗಿನ ಕೂದಲು ಉದುರಿ ಹೋಗಿದಾವೆ' ಎಂದ ಬೀರಬಲ್. 'ಆತು, ಇಲ್ಲಿ ಇರೋ ಯಾರ ಅಂಗೈಯಲ್ಲಿಯೂ ಕೂದಲು ಇಲ್ಲವಲ್ಲ ಯಾಕೆ?' ಎಂದು ಕೇಳಿದ ಅಕ್ಬರ್. 'ಏನಿಲ್ಲ ಮಹಾರಾಜ, ನೀವು ಪಾರಿತೋಷಕ ಕೊಡೋದು, ನಾನು ತಗಳೋದು ಮಾಡೋದನ್ನು ನೋಡಿ ಅವರಲ್ಲಿ ಹೊಟ್ಟೆಕಿಚ್ಚು ಬಂದು ಕೈಕೈ ತಿಕ್ಕಿಕೊಂಡಿದ್ದರಿಂದ ಅವರ ಅಂಗೈಯಲ್ಲಿಯೂ ಕೂದಲು ಇಲ್ಲ' ಎಂದ.

ಇನ್ನೊಬ್ಬರ ಸುಖ ನೋಡಿ ತಡಕೊಳ್ಳೋಕೆ ಆಗೋದಿಲ್ಲ ನಮಗೆ. ಇನ್ನೊಬ್ಬರ ಬೆಳವಣಿಗೆಯನ್ನು ನೋಡಿ ಸಂತೋಷ ಪಡೋದನ್ನು ಕಲಿಯಬೇಕು. ತುಂಬಾ ಜನ ತಾಯಂದಿರು ತಮಗೆ ಮಕ್ಕಳಿಲ್ಲ ಅಂತ ದುಃಖ ಪಡ್ತಾರ. ಸಾಲುಮರದ ತಿಮ್ಮಕ್ಕಗೂ ಮಕ್ಕಳಿರಲಿಲ್ಲ. ಆದರೆ ಆಕೆ ಸಾವಿರ ಸಾವಿರ ಗಿಡಗಳನ್ನು ನೆಟ್ಟು ಅವುಗಳೇ ತನ್ನ ಮಕ್ಕಳೆಂದು ಬೆಳೆಸ್ಯಾಳ. ಮಹಾರಾಷ್ಟ್ರದಲ್ಲಿ ಸಿಂಧು ತಾಯಿ ಅಂತಾ ಒಬ್ಬಳಿದ್ದಳು. ಗಂಡ ಹೊಡೆದು ಆಕೆಯನ್ನು ಮನೆಯಿಂದ ಹೊರಕ್ಕೆ ಹಾಕಿದ್ದ. ಆಕೆ ಎರಡು ಸಾವಿರ ಅನಾಥ ಮಕ್ಕಳನ್ನು ಜೋಪಾನ ಮಾಡಿದಳು.

'ಮನೆಯಲ್ಲಿ ಇದ್ದರೆ ಎರಡು ಮಕ್ಕಳ ತಾಯಿ ಆಗುತಿದ್ದೆ. ದೇವರು ನನಗೆ ಎರಡು ಸಾವಿರ ಮಕ್ಕಳ ತಾಯಿ ಆಗುವ ಭಾಗ್ಯ ಕೊಟ್ಟಾನ' ಅಂತ ಹೇಳಿದಳು ಆಕೆ. ಎಲ್ಲ ಮಕ್ಕಳೂ ನಮ್ಮ ಮಕ್ಕಳು ಅನ್ನೋದನ್ನು ಕಲಿಯಬೇಕು. ಮಕ್ಕಳು ಹೊಟ್ಯಾಗ ಹುಟ್ಟೋದಿಲ್ಲ. ಮಕ್ಕಳು ಹೃದಯದಲ್ಲಿ ಹುಟ್ಟುತಾವ ಅನ್ನೋ ಸತ್ಯ ಅರಿತುಕೊಳ್ಳಬೇಕು.

ಪರಿಣಾಮ ದುಃಖ, ತಾಪ ದುಃಖ ಆದ ನಂತರ ಸಂಸ್ಕಾರ ದುಃಖ ಅಂತ ಒಂದೈತಿ. ಸಂಸ್ಕಾರ ದುಃಖ ಅಂದರ, ದೇವರು ಎಲ್ಲಾ ಕೊಟ್ಟಿರ್ತಾನ. ಆದರೂ ದುಃಖ ಪಡ್ತಾರ. ಊರು ಮುಂದೆ ಒಂದು ಫ್ಲಾಟ್ ಇರತೈತಿ. ಅದನ್ನು ಇವ ಎರಡು ಲಕ್ಷಕ್ಕೆ ಮಾರಿರ್ತಾನ. ಕೆಲವು ವರ್ಷದ ನಂತರ ಅದು ಒಂದು ಕೋಟಿ ರೂಪಾಯಿ ಬೆಲೆ ಬಾಳತೈತಿ. 'ಅಯ್ಯೋ ಇದೀಗ ಕೋಟ್ಯಂತರ ರೂಪಾಯಿ ಬೆಲೆ ಬಾಳತೈತಿ. ನಾನು ಬರೀ ಎರಡು ಲಕ್ಷಕ್ಕೆ ಮಾರಾಟ ಮಾಡಿದೆ' ಅಂತ ನೆನಪಿಸಿಕೊಂಡು ದುಃಖ ಮಾಡಿಕೊಳ್ಳುತ್ತಾನ. ಹಿಂದಿದ್ದು ನೆನಪಿಸಿಕೊಳ್ಳೋದು, ಇಂದು ಅಳೋದು. ಇದಕ್ಕೆ ಸಂಸ್ಕಾರ ದುಃಖ ಅಂತಾರ.

ಅದಕ್ಕೆ ಮನುಷ್ಯನಿಗೆ ಗೊತ್ತಿರಬೇಕು, ದುಃಖ ಬರ್ತಾವ ಹೋಗ್ತಾವ ಅಂತ. ಅದರ ನಡುವೆಯೇ ಹ್ಯಾಂಗ ಬದುಕಬೇಕೋ ಅನ್ನೋದು ತಿಳಕೊಂಡಿರಬೇಕು. ಜೀವನ ಅಂದ ಮೇಲೆ ಸೋಲು ಗೆಲುವು, ಮಾನ ಅಪಮಾನ ಎಲ್ಲ ಬರತೈತಿ. ಅದನ್ನು ಮೆಟ್ಟಿ ನಿಲ್ಲಬೇಕು. ತಕ್ಕಡಿ ಇದ್ದಂಗೆ ಇರಬೇಕು. ತಕ್ಕಡಿಯಲ್ಲಿ ನೀವು ಬಂಗಾರವನ್ನಾದರೂ ತೂಗಿ, ಕಲ್ಲನ್ನಾದರೂ ತೂಗಿ ಅದು ಸಮಾನವಾಗಿಯೇ ತೂಕ ತೋರಿಸ್ತೈತಿ. ಮನುಷ್ಯ ಕೂಡ ಹಾಂಗೇ ಇರಬೇಕು. ಅದೇ ರೀತಿ ಸುಖವೇ ಬರಲಿ, ದುಃಖವೇ ಬರಲಿ ಎಲ್ಲವನ್ನೂ ಸಮಾನವಾಗಿ ಸ್ವೀಕರಿಸಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ನವೆಂಬರ್ 29, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣತ್ರಯೋದಶಿ ಗಂ. 08-40 ನಕ್ಷತ್ರ: ಸ್ವಾತಿ ಗಂ. 10-18 ಯೋಗ: ಶೋಭನ ಗಂ. 16-33 ಕರಣ: ವಣಿಜ ಗಂ. 08-40, ವೃಶ್ಚಿಕ ಮಾಸದ 13 ನೇ ದಿನ, ಮಳೆನಕ್ಷತ್ರ: ಅನುರಾಧ 4.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-41 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 26 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 4, 2

ಮೇಷ: ಮನರಂಜನೆಗೆ ಸಮಯ ಮೀಸಲಿಟ್ಟು ಸಂತಸದಿಂದ ಇರುವಿರಿ. ಅತಿ ಅವಸರ ಮತ್ತು ಅತಿ ಉದ್ವೇಗ ತಲೆ ತಗ್ಗಿಸುವಂತೆ ಮಾಡುತ್ತದೆ. ಆಲಸ್ಯ ದೂರವಾಗಿ ಲವಲವಿಕೆಯಿಂದ ದಿನ ಕಳೆಯುತ್ತೀರಿ.

ವೃಷಭ: ಮೇಲಧಿಕಾರಿಗಳಿಂದ ಮುಚ್ಚಿಟ್ಟ ವಿಷಯವನ್ನು ಪ್ರಸ್ತಾಪಿಸಿ. ಮನೆಯಲ್ಲಿನ ಆಗು ಹೋಗುಗಳ ಬಗೆಗೆ ಗಮನ ನೀಡಬೇಕಾಗುವುದು. ಮನಸ್ಸನ್ನು ಪ್ರಶಾಂತವಾಗಿರಿಸಿಕೊಳ್ಳುವ ಪ್ರಯತ್ನ ಫಲಿಸಲಿದೆ.

ಮಿಥುನ: ನಯವಾದ ಮಾತುಗಳು ಎದುರಿನ ವ್ಯಕ್ತಿಯ ಮನವನ್ನು ಗೆಲ್ಲುವ ಮೂಲಕ ಕಾರ್ಯ ಸಾಧನೆ ಆಗುತ್ತದೆ. ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ಮೂಡಲಿದೆ. ಪ್ರಯಾಣದಲ್ಲಿ ಎಚ್ಚರಿಕೆಯಿಂದ ಇರಿ.

ಕರ್ಕಾಟಕ: ಪ್ರೀತಿಸುವವರ ಮಾರ್ಗದರ್ಶನ ಈ ದಿನ ದೊರೆಯಲಿದ್ದು ಹೊಸ ಚೈತನ್ಯ ತುಂಬಿಬರಲಿದೆ. ಹಣ ಕಳೆದುಕೊಳ್ಳುವಂತಾಗಬಹುದು ಎಚ್ಚರವಿರಲಿ. ಬೆನ್ನು ನೋವಿಗೆ ವೈದ್ಯರ ದರ್ಶನ ಅಗತ್ಯವೆನಿಸಲಿದೆ.

ಸಿಂಹ: ಆಹಾರ ಪದ್ಧತಿಯಲ್ಲಿ ನಿಯಮ ಪಾಲಿಸುವುದರಿಂದ ಆರೋಗ್ಯ ವೃದ್ಧಿ ಆಗುವುದು. ಕೈಗೆತ್ತಿಕೊಂಡಿರುವ ಕೆಲಸಗಳು ಹೆಚ್ಚಿನ ಖರ್ಚಿಗೆ ಕಾರಣವಾಗಲಿದೆ. ಅಧಿಕ ಸಮಯ ವೃತ್ತಿಯ ಕೆಲಸಕ್ಕೆ ಮೀಸಲಿಡಿ.

ಕನ್ಯಾ: ಆರಿಸಿಕೊಂಡ ಮಾರ್ಗದಲ್ಲಿ ಸರಿ ತಪ್ಪುಗಳ ಬಗ್ಗೆ ಯೋಚಿಸಿ ಏಕಾಗ್ರತೆಯಿಂದ ಮುನ್ನಡೆಯಿರಿ. ಉತ್ತಮ ಅವಕಾಶದ ಜತೆಯಲ್ಲಿ ಅದೃಷ್ಟವಿದೆ. ವಿನಾಕಾರಣ ಅಲೆದಾಟದಿಂದ ಬೇಸರ ಪಡುವ ಅವಶ್ಯಕತೆ ಇಲ್ಲ.

ತುಲಾ: ಧನಾಗಮನಕ್ಕೆ ಹಲವು ದಾರಿಗಳು ಕಂಡರೂ ಸರಿಯಾದ ದಾರಿಯನ್ನು ಆರಿಸಿಕೊಳ್ಳುವುದು ವಿವೇಚನೆಗೆ ಬಿಟ್ಟಂತಹ ವಿಚಾರ. ರಾಮಾಯಣ, ಮಹಾಭಾರತದಂತಹ ಧರ್ಮ ಗ್ರಂಥಗಳ ಓದಿನಲ್ಲಿ ಆಸಕ್ತಿ ಹುಟ್ಟಲಿದೆ.

ವೃಶ್ಚಿಕ: ಪ್ರಾಮಾಣಿಕತನ, ನೇರ ವ್ಯಕ್ತಿತ್ವದಿಂದಾಗಿ ಒಳ್ಳೆಯ ಸ್ಥಾನಮಾನ ಅಯಾಚಿತವಾಗಿ ಸಿಗಲಿದೆ. ಮನಸ್ಸಿನಲ್ಲಿ ಏಕಾಗ್ರತೆಯಿಂದ ಶಿವನ ನಾಮಸ್ಮರಣೆ ಮಾಡುವುದು ಒಳ್ಳೆಯದು.

ಧನು: ಹಿರಿಯ ನಾಗರಿಕರು ಕೌಟುಂಬಿಕವಾಗಿ ವಹಿಸಿಕೊಂಡ ಜವಾಬ್ದಾರಿಗಳನ್ನು ದಿನದಿಂದ ದಿನಕ್ಕೆ ಕಡಿಮೆ ಮಾಡುವ ಬಗ್ಗೆ ಗಮನಹರಿಸಿ. ಕೌಟುಂಬಿಕವಾಗಿ ಪ್ರಮುಖ ವಿಷಯವೊಂದು ತಿಳಿದು ಬರಲಿದೆ.

ಮಕರ: ಟ್ರಾವೆಲ್ ಏಜೆನ್ಸಿಯವರಿಗೆ ಆರ್ಥಿಕ ಮುನ್ನಡೆ ಇದ್ದು, ಹೆಚ್ಚಿನ ಅವಕಾಶಗಳನ್ನು ಕಾಣುವಿರಿ. ಮೇಧಾವಿಗಳೊಂದಿಗಿನ ಚರ್ಚೆಯಿಂದಾಗಿ ಅರಿವು ಹೆಚ್ಚಾಗಲಿದೆ. ಇತರರ ಭಾವನೆಗಳಿಗೆ ಆದ್ಯತೆಯನ್ನು ಕೊಡಿ.

ಕುಂಭ: ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಆತಂಕ ಪಡಬೇಕಾದ ಅವಶ್ಯಕತೆ ಇಲ್ಲ. ಕೌಟುಂಬಿಕವಾಗಿ ಇರುವ ಗೌರವವನ್ನು ಕಾಪಾಡಿಕೊಳ್ಳುವ ಬಗ್ಗೆ ಗಮನವಿರಲಿ. ಸ್ನೇಹಿತರಲ್ಲಿನ ತಪ್ಪು ಕಲ್ಪನೆ ಹೋಗಲಾಡಿಸಿಕೊಳ್ಳುವಿರಿ.

ಮೀನ: ದಿನಚರಿಯಲ್ಲಿ ನಡೆಯುತ್ತಿರುವ ತಪ್ಪುಗಳ ಬಗ್ಗೆ ಮನವರಿಕೆ ಆಗುವುದು. ವ್ಯವಹಾರಗಳ ಬಗ್ಗೆ ಗಮನ ಹರಿಸುವುದು ಮುಖ್ಯ. ಮಾತಿನಲ್ಲಿ ಸಹನೆ ಹಾಗೂ ಎಚ್ಚರವಿರಲಿ.

ಪದಬಂಧ 5876

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಯಸ್ಕಾಂತವನ್ನೂ ಹೀಗೂ ಹೇಳುತ್ತಾರೆ (5)
3.ಮರದ ಹತ್ತಿರ ಹಾರಾಡುತ್ತಿರುವ ದುಂಬಿ (3)
5.ಮುನಿದವರ ಹಿಗ್ಗು ಉಲ್ಟಾ ಆಗಿದೆ (2)
8.ಭಾರತದ ಖ್ಯಾತ ಗಣಿತಜ್ಞ (4)
10.ಕರುವಿನ ಪಚನಾಂಗ (3)
11.ಕೊನೆಗೆ ಬೆಲೆಯಿದ್ದರೆ ಕಣಿವೆ ಕಾಣುವುದೇ? (3)
12.ಅಂತಃಪುರ ಇಲ್ಲಿದೆ (4)
15.ತಮ್ಮ ಬರುವಾಗ ಆವರಿಸಿದ ಕತ್ತಲು (2)
17.ಸೂಕ್ಷ್ಮವಾದ ಪರಿಶೀಲನೆ (3)
18.ಬೆಲೆಯುಳ್ಳ ಮಣಿಗಳನ್ನು ಕುಂದಣಿಸಿದುದು (5)

ಮೇಲಿಂದ ಕೆಳಕ್ಕೆ
1.ಕಿವಿಯಲ್ಲಿ ನೇತಾಡುವಂತೆ ಧರಿಸುವ ಆಭರಣ (3)
2.ಕಲಾವಿದನ ಮನೆ ಬಾಗಿಲು! (2)
4.ನೆತ್ತರು ಪ್ರವಹಿಸುವಿಕೆ (5)
6.ಮುದುಕರ ಕೂಟದಲ್ಲಿ ಕಾಣಿಸಿದ ಕಿರೀಟ (3)
7.ಮಾಡಬೇಕಾದುದು ಅಥವಾ ಕರ್ತವ್ಯ (2)
8.ಆಕಳು ಹಿಡಿದುಕೊಂಡಿರುವ ಸೇವಕ (2)
9.ಕರಂಡಕ ಎಂಬ ಅರ್ಥವುಳ್ಳ ನಕ್ಷತ್ರ (3)
10.ಬಾಡ ಗ್ರಾಮದಲ್ಲಿ ಜನಿಸಿದ ಭಕ್ತಿ ಪಂಥದ ಮುಖ್ಯ ಹರಿದಾಸರು (5)
11.ಶ್ರೀಕೃಷ್ಣನ ಸೋದರಮಾವ (2)
12.ತರಕಾರಿಯೊಂದಿಗೆ ಮೊಸರು ಬೆರಸಿ ಮಾಡುವ ವ್ಯಂಜನ (3)
13.ಕಿಷ್ಕಿಂದೆಯ ರಾಜನಾಗಿದ್ದ ಈತ ಸುಗ್ರೀವನ ಅಣ್ಣ (2)
14.ಅಗಲವಾದ ಹರಿವಾಣ (3)
16.ಮಧುರ ಹಣ್ಣುಗಳನ್ನು ನೀಡುವ ವೃಕ್ಷ (2)



5875ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಪರೂಪ 3.ಕೂಗಳತೆ
5.ಮಾರ್ಮಿಕ 6.ಅವಗುಣ
8.ಷರಬತ್ತು 10.ಮತದಾನ
12.ತರಗತಿ 13.ವಕ್ತಾರ
16.ಸಮಂಜಸ 17.ಮಧುಚಂದ್ರ

ಮೇಲಿಂದ ಕೆಳಕ್ಕೆ:
1.ಅಗ್ಗ 2.ಪರಿಮಾಣ
3.ಕೂಲಂಕಷ 4.ತೆಪ್ಪ
7.ವರಾತ 9.ಬಳಗ
11.ನವಮಾಸ 12.ತರತಮ
14.ಕಂಸ 15.ಇಂದ್ರ

ಸುಡೊಕು 6261

5			4		3		6	
	9							5
			5		8	7		
		9		3				7
	3				6		5	
8		6		4		2		3
		5		2			3	4
3						5	9	
	8	2		5			7	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6260 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ಮುಷ್ಟಿಯುದ್ಧ: ಅಶಿಸ್ತಿಗೆ ಸುಸ್ತಾದ ಬಿಜೆಪಿ

• ವೈ.ಗ. ಜಗದೀಶ್

ಸುದ್ದಿ ವಿಶ್ಲೇಷಣೆ

ವಿಜಯೇಂದ್ರ ಪದಚ್ಯುತಿಗೆ ಯತ್ನಾಳ ಬಣದ ಪಣ: ಇಬ್ಬರು ಸಂತೋಷ್ ವಿರುದ್ಧ ಬಿಎಸ್‌ವೈ ಸೆಡವು

ಬೆಳಗಾವಿಯ ವಿಧಾನಮಂಡಲದ ಅಧಿವೇಶನಕ್ಕೆ ದಿನಗಣನೆ ಶುರುವಾಗಿರುವ ಹೊತ್ತಿಗೆ, ವಿರೋಧ ಪಕ್ಷ ಬಿಜೆಪಿಯೊಳಗಿನ ಮುಷ್ಟಿ ಯುದ್ಧವೂ ಬಿರುಸುಗೊಳ್ಳುತ್ತಿದೆ. ಒಂದು ವರ್ಷದಿಂದ ಈಚೆಗೆ ಆಡಳಿತಾರೂಢ ಕಾಂಗ್ರೆಸ್ ವಿರುದ್ಧ 'ಸಂಘಟಿತ' ಹೋರಾಟ ರೂಪಿಸಿ, ವಿರೋಧ ಪಕ್ಷ ಸಕ್ರಿಯವಾಗಿದೆ ಎಂದು ತೋರಿಸಿಕೊಂಡಿದ್ದ ಕಮಲ ಪಡೆಯ ಕಟ್ಟಾಳುಗಳು ಈಗ ಒಳಜಗಳದಿಂದ ಹೈರಾಣಾಗುವ ಸ್ಥಿತಿ ತಲುಪಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬಣ, 'ಪಕ್ಷ ನಿಷ್ಠ'ರ ಗುಂಪೆಂದು ಹೇಳಿಕೊಳ್ಳುತ್ತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಬಣ, ಎಲ್ಲವನ್ನೂ ನೋಡುತ್ತಾ ಅವಕಾಶಕ್ಕೆ ಕಾದು-ಕುಳಿತಂತಿರುವ ತಟಸ್ಥ ಬಣಗಳು, 'ಕಮಲ'ದ ಒಂದೊಂದೇ ದಳಗಳನ್ನು ಕಿತ್ತು ಬೀದಿಗೆ ಬಿಸಾಡುತ್ತಿವೆ. ಒಂದು ಕಾಲದೊಳಗೆ ತಮ್ಮದು ಶಿಸ್ತಿನ ಪಕ್ಷವೆಂದು ಬೀಗುತ್ತಾ, ಕಾಂಗ್ರೆಸ್–ಜೆಡಿಎಸ್‌ನ ಜಗಳವನ್ನು ಹಂಗಿಸುತ್ತಿದ್ದ ಬಿಜೆಪಿ ನಾಯಕರು ಈಗ ಬಾಯಿಗೆ ಬೀಗ ಹಾಕಿಕೊಳ್ಳುವ ದುರ್ದಿನಗಳಿಗೆ ತಲುಪಿದ್ದಾರೆ.

ಡಿಸೆಂಬರ್ ಅಂತ್ಯದೊಳಗೆ ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಇಳಿಸುವ ಏಕೈಕ ಕಾರ್ಯಸೂಚಿ ಮುಂದಿಟ್ಟುಕೊಂ-ಡಿರುವ ಯತ್ನಾಳ ಬಣ, ಪಕ್ಷದ ಪದಾಧಿಕಾರಿಗಳನ್ನು ಹೊರಗಿಟ್ಟು ವಕ್ಫ್ ಹೋರಾಟವನ್ನು ಮುನ್ನಡೆಸುತ್ತಿದೆ.

ಲೋಕಸಭೆ ಚುನಾವಣೆಯಲ್ಲಿ ಅತಿ ಹೆಚ್ಚು ಸ್ಥಾನ ಗೆಲ್ಲಬೇಕು ಎಂಬ ಒಂದೇ ಕಾರಣಕ್ಕೆ ವಿಜಯೇಂದ್ರ ಅವರನ್ನು ತಾತ್ಕಾಲಿಕವಾಗಿ ಅಧ್ಯಕ್ಷರಾಗಿ ನೇಮಕ ಮಾಡಲಾಯಿತು. ಆದರೆ, ಲಿಂಗಾಯತರ ಮತಗಳು ನಿರ್ಣಾಯಕವಾಗಿರುವ ಕಲ್ಯಾಣ ಕರ್ನಾಟಕ ಭಾಗದಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರಲು ಯಡಿಯೂರಪ್ಪ ಹಾಗೂ ವಿಜಯೇಂದ್ರ ಅವರಿಂದ ಸಾಧ್ಯವಾಗಲಿಲ್ಲ. ಧಾರವಾಡದಲ್ಲಿ ನಡೆದ ಹಿಂದೂ ಯುವತಿಯ ಕೊಲೆಯಿಂದಾಗಿ ಮೂರು ಕ್ಷೇತ್ರಗಳು ಪಕ್ಷಕ್ಕೆ ಹೆಚ್ಚುವರಿಯಾಗಿ ಲಭಿಸಿದವು. ತುಮಕೂರು, ಬೆಂಗಳೂರಿನಲ್ಲಿ ಗೆಲ್ಲಲು ಯಡಿಯೂರಪ್ಪ ಪ್ರಭಾವಳಿಯ ಪಾತ್ರವೇ ಇರಲಿಲ್ಲ. ಮೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಮೈತ್ರಿಕೂಟ ಮೂರರಲ್ಲೂ ಸೋತಿದೆ. ರಾಜ್ಯದಲ್ಲಿ ಯಡಿಯೂರಪ್ಪ ಪ್ರಭಾವ ಕ್ಷೀಣಿಸಿರುವುದು ವರಿಷ್ಠರಿಗೆ ಅರ್ಥವಾಗಿದ್ದು, ವಿಜಯೇಂದ್ರ ಅವರನ್ನು ಇಳಿಸಲು ವರಿಷ್ಠರು ತಯಾರಿ ನಡೆಸಿದ್ದಾರೆ. ಇದೇ ಕಾರಣಕ್ಕೆ, ವಕ್ಫ್ ಹೋರಾಟಕ್ಕೆ ಬೆಂಬಲ ನೀಡಿದ್ದು, ಶೋಭಾ ಕರಂದ್ಲಾಜೆಯವರನ್ನು ವಿಜಯಪುರದ ಧರಣಿಗೆ ಕಳುಹಿಸಿದ್ದರು. ವರಿಷ್ಠರು ತಮ್ಮ ಜತೆಗಿದ್ದಾರೆ ಎಂಬ ವಿಶ್ವಾಸದಲ್ಲಿದೆ ಯತ್ನಾಳ ಬಣ.

ವಿಜಯೇಂದ್ರ ಅವರು ಹಿರಿಯರಿಗೆ ಗೌರವ ನೀಡುತ್ತಿಲ್ಲ. ಬಿಜೆಪಿ ಹಾಗೂ ಪರಿವಾರ ನಿಷ್ಠರಿಗಿಂತ, ಹಿಂದೆ ಯಡಿಯೂರಪ್ಪ ಕಟ್ಟಿದ್ದ ಕೆಜೆಪಿಯಲ್ಲಿ ಸಕ್ರಿಯರಾದವರಿಗೆ ಆದ್ಯತೆ ನೀಡಿದ್ದಾರೆ ಎಂಬುದು ಈ ಬಣದವರ ವಾದ. ತಾವೆಲ್ಲ ಪಕ್ಷ ನಿಷ್ಠರು ಎಂದು ಈ ಬಣ ಹೇಳಿಕೊಳ್ಳುತ್ತದೆಯಾದರೂ ಅರವಿಂದ ಲಿಂಬಾವಳಿ, ಪ್ರತಾಪ ಸಿಂಹರಂತಹ ಕೆಲವರನ್ನು ಬಿಟ್ಟರೆ ನಾಯಕತ್ವ ವಹಿಸಿಕೊಂಡ ಬಹುತೇಕರು, ಹೊರಗೆ ಹೋಗಿ ವಾಪಸ್ ಬಂದವರು ಅಥವಾ ಹೊರಗಿನಿಂದ ಬಂದವರೇ ಆಗಿದ್ದಾರೆ.

ಬಿ.ಎಲ್. ಸಂತೋಷ್ ಸೂತ್ರ: ವಿಜಯೇಂದ್ರ ಅಧ್ಯಕ್ಷರಾದಾಗಿನಿಂದಲೂ ಯಡಿಯೂರಪ್ಪ ಕುಟುಂಬದ ಭ್ರಷ್ಟಾಚಾರ, ಹೊಂದಾಣಿಕೆ ರಾಜಕಾರಣದ ಬಗ್ಗೆ ಕಿಡಿ ಕಾರುತ್ತಿರುವ ಬಸನಗೌಡ ಪಾಟೀಲ ಯತ್ನಾಳರ ವಿರುದ್ಧ ವರಿಷ್ಠರು ಶಿಸ್ತುಕ್ರಮ ತೆಗೆದುಕೊಳ್ಳುವುದು ಹೋಗಲಿ, ನೋಟಿಸ್ ಕೂಡ ನೀಡಿಲ್ಲ. ಇವೆಲ್ಲ ಗಮನಿಸಿದರೆ, ರಾಷ್ಟ್ರ ಮಟ್ಟದಲ್ಲಿ ಪ್ರಭಾವ ಇರುವ ಕೆಲವರು ಅವರ ಹಿಂದಿರುವುದು ಸ್ಪಷ್ಟ.

'ಯತ್ನಾಳ ಬಣದ ಜತೆಗೆ ಗುರುತಿಸಿಕೊಂಡ ಬಹುತೇಕರು, ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ನಿಕಟವರ್ತಿಗಳಾಗಿದ್ದಾರೆ. ವಿಜಯೇಂದ್ರ ಹೀಗೆ ಮುಂದುವರಿಯಲು ಬಿಟ್ಟರೆ, ಮತ್ತೆ ಯಾವತ್ತೂ ಕರ್ನಾಟಕದ ಕಡೆ ಮುಖ ಹಾಕಲಾಗದು ಎಂಬ ಭಾವನೆ ಅವರಲ್ಲಿದೆ. ಹೀಗಾಗಿ, ವಿಜಯೇಂದ್ರ ಇಳಿಸಲು ಸಂತೋಷ್ ಚಿತಾವಣೆ ಮಾಡಿದ್ದಾರೆ. ಹೀಗಾಗಿ, ಯಡಿಯೂರಪ್ಪ ತಮ್ಮ ಹಿತೈಷಿಗಳನ್ನು ಮುಂದೆ ಬಿಟ್ಟು ಯತ್ನಾಳ ಬಣಕ್ಕೆ ತಿರುಗೇಟು ನೀಡಲು ಸೂಚಿಸಿದ್ದಾರೆ' ಎಂಬುದು ವಿಜಯೇಂದ್ರ ಬಣದ ವಾದ.

ವಿಜಯೇಂದ್ರ ಹಠಾವೋ ಹೋರಾಟಕ್ಕೆ ಜತೆಗೂಡಿರುವ ಯತ್ನಾಳ ಹಾಗೂ ರಮೇಶ ಜಾರಕಿಹೊಳಿ ಮಧ್ಯೆ ಸಂಘರ್ಷವಿತ್ತು. ಅವರಿಬ್ಬರನ್ನು ಒಂದೆಡೆ ಸೇರಿಸಿದ್ದು, ಜಿ.ಎಂ. ಸಿದ್ದೇಶ್ವರ, ಬಿ.ಪಿ. ಹರೀಶ್ ಮೊದಲಾದವರನ್ನು ಈ ಬಣಕ್ಕೆ ಕರೆತಂದಿದ್ದು ಯಡಿಯೂರಪ್ಪನವರ ರಾಜಕೀಯ ಕಾರ್ಯ-ದರ್ಶಿಯಾಗಿದ್ದ ಎನ್. ಆರ್. ಸಂತೋಷ್. ಯಡಿಯೂರಪ್ಪ ಸರ್ಕಾರ ತರಲು ಪ್ರಮುಖ ಪಾತ್ರ ವಹಿಸಿದ್ದ ಸಂತೋಷ್ ಅವರನ್ನು, ಪಕ್ಷ ಅಧಿಕಾರಕ್ಕೆ ಬರುತ್ತಿದ್ದಂತೆ ವಿಜಯೇಂದ್ರ ಹೊರಹಾಕಿದ್ದರು. ಈಗ ಇಬ್ಬರು ಸಂತೋಷ್ ಸೇರಿ, ವಿಜಯೇಂದ್ರ ಇಳಿಸುವ ತಯಾರಿ ನಡೆಸಿದ್ದಾರೆ. ಇದು ಗೊತ್ತಾಗಿಯೇ, ಒಂದು ಕೈ ನೋಡಿಯೇ ಬಿಡುವ ಹಟವನ್ನು ಯಡಿಯೂರಪ್ಪ ತೊಟ್ಟಿದ್ದಾರೆ.

ಹೀಗೆ, ಬಿಜೆಪಿಯ ಬಣ ಜಗಳ ದಿನದಿಂದ ದಿನಕ್ಕೆ ರಂಗೇರುತ್ತಿದ್ದು, ಪಕ್ಷ ವಿಭಜನೆಯ ಕಡೆಗೆ ಕೊಂಡೊಯ್ದರೂ ಅಚ್ಚರಿಯಿಲ್ಲ.

₹2,500 ಕೋಟಿ ವೆಚ್ಚದಲ್ಲಿ ಪರಿವರ್ತನೆಗೆ ಸಂಪುಟ ನಿರ್ಧಾರ • 39 ಕೆಎಸ್‌ಆರ್‌ಟಿಸಿ ನಿಲ್ದಾಣಗಳಲ್ಲಿ 'ನಮ್ಮ ಕ್ಲಿನಿಕ್'

500 ಶಾಲೆಗಳಿಗೆ ಕೆಪಿಎಸ್ ಭಾಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮಾರು ₹2,500 ಕೋಟಿ ವೆಚ್ಚದಲ್ಲಿ 500 ಸರ್ಕಾರಿ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ (ಕೆಪಿಎಸ್) ಪರಿವರ್ತಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಇದಕ್ಕೆ ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ₹2,000 ಕೋಟಿ ಮತ್ತು ರಾಜ್ಯ ಸರ್ಕಾರ ₹500 ಕೋಟಿ ಭರಿಸಲಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿ-ಯಲ್ಲಿ ತಿಳಿಸಿದರು.

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಶಾಲೆಗಳನ್ನು ಗುರುತಿಸಿ ಅವುಗಳನ್ನು ಕೆಪಿಎಸ್ ಶಾಲೆಗಳನ್ನಾಗಿ ಪರಿವರ್ತಿಸಲು ತೀರ್ಮಾನಿಸಲಾಗಿದೆ. 2025–2029 ರ ಅವಧಿಯಲ್ಲಿ 500 ಸರ್ಕಾರಿ ಶಾಲೆಗಳನ್ನು ಕೆಪಿಎಸ್ ಆಗಿ ಪರಿ-ವರ್ತಿಸಲಾಗುವುದು ಎಂದು ಹೇಳಿದರು.

39 ನಮ್ಮ ಕ್ಲಿನಿಕ್: ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಉದ್ಯಮ ಸಮಿತಿಯ ವರದಿಯ ಶಿಫಾರಸ್ಸಿನಂತೆ 39 ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳಲ್ಲಿ 'ನಮ್ಮ ಕ್ಲಿನಿಕ್' ಗಳನ್ನು ತೆರೆಯಲು ಒಪ್ಪಿಗೆ ನೀಡಲಾಗಿದೆ.



ಮುಖ್ಯಾಂಶಗಳು

- ಕೆಪಿಎಸ್ ಪರಿವರ್ತನೆಗೆ ಎಡಿಬಿಯ ₹2,000 ಕೋಟಿ ನೆರವು
- ಗ್ರಾಮೀಣ ಪ್ರದೇಶದ ಶಾಲೆಗಳನ್ನು ಗುರುತಿಸಿ ಅಭಿವೃದ್ಧಿ

ಸಾರ್ವಜನಿಕ ಉದ್ಯಮ ಸಮಿತಿಯು ದೊಡ್ಡ ದೊಡ್ಡ ಬಸ್ ನಿಲ್ದಾಣಗಳಲ್ಲಿ ಮತ್ತು ಟಿಟಿಎಂಸಿ (ಟ್ರಾಫಿಕ್ ಟ್ರಾನ್ಸಿಟ್ ಮ್ಯಾನೇಜ್‌ಮೆಂಟ್ ಸೆಂಟರ್) ಗಳಲ್ಲಿ ಒಟ್ಟು 254 ನಮ್ಮ ಕ್ಲಿನಿಕ್‌ಗಳನ್ನು ತೆರೆಯಲು ಶಿಫಾರಸು ಮಾಡಿತ್ತು. ಇದರ ಒಟ್ಟು ವೆಚ್ಚ ₹108.36 ಕೋಟಿ ಎಂದು ಪಾಟೀಲ ಹೇಳಿದರು.

13 ಎಪಿಎಂಸಿಗಳಿಗೆ ಡಿಜಿಟಲ್ ವೇಬ್ರಿಡ್ಜ್: ಕಬ್ಬು ಬೆಳೆಗಾರರ ಹಿತ ಕಾಯುವ ಉದ್ದೇಶದಿಂದ 13 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಗುರುತಿಸಿದ 15 ಸ್ಥಳಗಳಲ್ಲಿ ₹11.01 ಕೋಟಿ ಅಂದಾಜು ವೆಚ್ಚದಲ್ಲಿ ಡಿಜಿಟಲ್ ಮತ್ತು ಟ್ಯಾಂಪರಿಂಗ್ ಪ್ರೂಫ್ ವೇಬ್ರಿಡ್ಜ್ ಸ್ಥಾಪಿಸಲು ಒಪ್ಪಿಗೆ ನೀಡಿದೆ.

ಲಲಿತ ಮಹಲ್ ಹೋಟೆಲ್ ಖಾಸಗಿಗೆ

ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಅನ್ನು ಖಾಸಗಿಯವರಿಗೆ ಒಪ್ಪಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಲಲಿತ ಮಹಲ್ ಪಾರಂಪರಿಕ ಕಟ್ಟಡವನ್ನು ಸಂರಕ್ಷಿಸಿ, ಹೆರಿಟೇಜ್ ಮಾದರಿಯಲ್ಲಿ ಉಳಿಸಿಕೊಳ್ಳಲು ಐಷಾರಾಮಿ ಹೋಟೆಲ್‌ನ ಮಾನದಂಡಗಳ ಪ್ರಕಾರ ಕಾರ್ಯಾಚರಣೆ, ಮತ್ತು ನಿರ್ವಹಣೆಗೆ ಟೆಂಡರ್ ಮೂಲಕ ಹೋಟೆಲ್ ಆಪರೇಟರ್ ಅನ್ನು ಆಯ್ಕೆ ಮಾಡಲಾಗುವುದು ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಆಯ್ಕೆಯಾದ ಯಶಸ್ವಿ ಆಪರೇಟರ್‌ನೊಂದಿಗೆ ಪರವಾನಗಿ ಒಪ್ಪಂದ ಮಾಡಿಕೊಳ್ಳಲು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್‌ಗೆ ಜವಾಬ್ದಾರಿ ನೀಡಲು ತೀರ್ಮಾನಿಸಲಾಗಿದೆ ಎಂದರು.

ಪ್ರಮುಖ ನಿರ್ಣಯಗಳು

- ಕೆ.ಆರ್.ನಗರ ತಾಲ್ಲೂಕು ಕಪ್ಪಡಿ ಗ್ರಾಮದ ಬಳಿ ಕಾವೇರಿ ಅಡ್ಡಲಾಗಿ ₹25 ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಾಣ
- ರಾಜ್ಯದ 12 ಪ್ರವಾಸಿ ಸ್ಥಳಗಳಲ್ಲಿ ರೋಪ್ ವೇಗಳನ್ನು ನಿರ್ಮಿಸುವುದಕ್ಕಾಗಿ ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇ ಮಸೂದೆಗೆ ಒಪ್ಪಿಗೆ
- ವಿಧಾನಪರಿಷತ್ತಿಗೆ ರಾಜ್ಯಪಾಲರಿಂದ ಇಬ್ಬರು ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಮುಖ್ಯಮಂತ್ರಿಗೆ ಅಧಿಕಾರ
- ವಾಹನ ನೋಂದಣಿ ಪ್ರಮಾಣ ಪತ್ರ ಮತ್ತು ಡ್ರೈವಿಂಗ್ ಲೈಸೆನ್ಸ್ ನೀಡುವ ಹೊಸ ಸ್ಮಾರ್ಟ್ ಕಾರ್ಡ್ ಯೋಜನೆಗೆ ಸಾರ್ವಜನಿಕ- ಖಾಸಗಿ ಸಹಭಾಗಿತ್ವದ ಮಾದರಿ ಅವಕಾಶ ಕೈಬಿಟ್ಟು ಹೊರಡಿಸಿರುವ ಆದೇಶಕ್ಕೆ ಘಟನೋತ್ತರ ಮಂಜೂರಾತಿ
- ರಾಯಚೂರು ತಾಲ್ಲೂಕಿನ ಯರಮರಸ್ ಗ್ರಾಮದಲ್ಲಿ ಬಡ ವಿದ್ಯಾರ್ಥಿಗಳಿಗೆ ಉಚಿತ ವಸತಿ ನಿಲಯವನ್ನು ನಿರ್ಮಿಸಲು ಕರ್ನಾಟಕ ಪ್ರದೇಶ ಕುರುಬರ ಸಂಘಕ್ಕೆ 14 ಗುಂಟೆ ಗೋಮಾಳ ಜಮೀನು ಮಂಜೂರು ಮಾಡಲು ತೀರ್ಮಾನ
- ಬೆಳಗಾವಿ ಅಧಿವೇಶನದಲ್ಲಿ ಒಟ್ಟು 9 ಮಸೂದೆಗಳನ್ನು ಮಂಡಿಸಲು ಒಪ್ಪಿಗೆ
- ಚಿಕ್ಕಬಳ್ಳಾಪುರಕ್ಕೆ ಅನುಮೋದನೆಗೊಂಡಿದ್ದ ₹16 ಕೋಟಿ ವೆಚ್ಚದ 50 ಹಾಸಿಗೆಗಳ ತೀವ್ರ ನಿಗಾ ಆರೋಗ್ಯ ಘಟಕವನ್ನು ಚಿಂತಾಮಣಿ ತಾಲ್ಲೂಕಿಗೆ ಸ್ಥಳಾಂತರಿಸಿ, ನಿರ್ಮಿಸಲು ಅನುಮೋದನೆ

ಹಾವೇರಿ: ಬಿಜೆಪಿ ಒಳಜಗಳ ಬೀದಿಗೆ

ಹಾವೇರಿ: ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿಗೆ ಸೋಲಾದ ಕೂಡಲೇ ಎರಡು ಬಣಗಳ ನಡುವೆ ಜಳ ಜಗಳ ಶುರುವಾಗಿದೆ. ಎರಡೂ ಬಣಗಳ ಮುಖಂಡರು ಪ್ರತ್ಯೇಕ ಪತ್ರಿಕಾಗೋಷ್ಠಿಗಳಲ್ಲಿ ಆರೋಪ–ಪ್ರತ್ಯಾರೋಪ ಮಾಡಿದ್ದು, ಬಿಜೆಪಿಯಲ್ಲಿದ್ದ ಒಳ ಜಗಳ ಬೀದಿಗೆ ಬಂದಿದೆ.

'ಕ್ಷೇತ್ರದಲ್ಲಿದ್ದ ಕೆಲವರು ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದರಿಂದ ಬಿಜೆಪಿಗೆ ಸೋಲು ಆಗಿದೆ' ಎಂದು ಮುಖಂಡರಾದ ಶ್ರೀಕಾಂತ ದುಂಡಿಗೌಡ್ರ ಹಾಗೂ ಸಂಗಮೇಶ ಕಂಬಾಳಿಮಠ ಅವರನ್ನು ಬಿಜೆಪಿಯಿಂದ 6 ವರ್ಷ ಉಚ್ಚಾಟಿಸಲಾಗಿದೆ. ಇದರಿಂದ ಸಿಟ್ಟಾಗಿರುವ ಸಂಗಮೇಶ ಕಂಬಾಳಿಮಠ, 'ಬಿಜೆಪಿ ಸೋಲಿಗೆ ಬೊಮ್ಮಾಯಿ ಅವರ ಏಕಚಕ್ರಾಧಿಪತ್ಯ ಕಾರಣ. 2028ರ ಚುನಾವಣೆಯಲ್ಲಿ ನಮಗೆ ಟಿಕೆಟ್ ಸಿಗಬಾರದೆಂದು ಉಚ್ಚಾಟಿಸಲಾಗಿದೆ. ನನಗೆ ಪಕ್ಷ ಮುಖ್ಯ. ಪಕ್ಷದಲ್ಲೇ ಮುಂದುವರಿಯುವೆ. ನರೇಂದ್ರ ಮೋದಿ, ಅಮಿತ್ ಶಾ ಅವರನ್ನು ಭೇಟಿಯಾಗಿ ದೂರು ನೀಡುವೆ' ಎಂದಿದ್ದಾರೆ.

ಶಿಗ್ಗಾವಿ ತಾಲ್ಲೂಕು ಘಟಕದ ಅಧ್ಯಕ್ಷ ವಿಶ್ವನಾಥ ಹರವಿ, ಪಕ್ಷ ವಿರೋಧಿ ಚಟುವಟಿಕೆ ಕಾರಣಕ್ಕೆ ಇಬ್ಬರನ್ನೂ ಉಚ್ಚಾಟಿಸಲಾಗಿದೆ ಹೊರತು ಟಿಕೆಟ್ ತಪ್ಪಿಸಲು ಅಲ್ಲ' ಎಂದರು.

'ಜೈಲಿಗೆ ಹೋಗುವ ಕೆಲಸ ಮಾಡಿಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ನಾನು ಅಥವಾ ನನ್ನ ಮಗ ಜೈಲಿಗೆ ಹೋಗುವಂಥ ಸ್ಥಿತಿಯೇನೂ ಬಂದಿಲ್ಲ. ಅಂತಹ ಅಪರಾಧವನ್ನೇ-ನೂ ನಾವು ಮಾಡಿಲ್ಲ. ನಮ್ಮ ವಿರುದ್ಧ ಯಾವುದಾದರೂ ಪ್ರಕರಣವಿದ್ದರೆ ತಾನೇ ಬಂಧಿಸುವುದು?' ಎಂದು ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

'ಸಿದ್ದರಾಮಯ್ಯ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಜಿಟಿಡಿ ಹಾಗೂ ಅವರ ಪುತ್ರನನ್ನು ಬಂಧಿಸಲು ಸಿದ್ಧತೆಯಾಗಿತ್ತು. ಅದನ್ನು ಎಚ್.ಡಿ.ಕುಮಾರಸ್ವಾಮಿ ತಪ್ಪಿಸಿದ್ದರು. ಇಲ್ಲದಿದ್ದರೆ ಜಿಟಿಡಿ ಮಗನ ಜೊತೆ ಜೈಲಿ-ನಲ್ಲಿರಬೇಕಿತ್ತು' ಎಂಬ ಶಾಸಕ ಎಚ್.ಡಿ. ರೇವಣ್ಣ ಹೇಳಿಕೆಗೆ ಇಲ್ಲಿ ಗುರುವಾರ ಪ್ರತಿಕ್ರಿಯಿಸಿದರು.

'ನನ್ನನ್ನು ಅರ್ಥ ಮಾಡಿಕೊಳ್ಳಲು ನನ್ನ ಕುಟುಂಬಕ್ಕೇ ಆಗಿಲ್ಲ. ಹೀಗಿರುವಾಗ, ರೇವಣ್ಣಗೆ ಹೇಗೆ ಅರ್ಥವಾಗುತ್ತದೆ? ನನ್ನ ಜೀವನ ದೇವರಿಗೆ ಮಾತ್ರ ಗೊತ್ತು' ಎಂದರು.

ಸಾಹಿತ್ಯ ಸಮ್ಮೇಳನ: ಅಧಿವೇಶನ ಮೊಟಕು

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಧಾನ ಮಂಡಳ ಚಳಿಗಾಲದ ಅಧಿವೇಶನವನ್ನು, ಮಂಡ್ಯದಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕಾರಣಕ್ಕೆ ಒಂದು ದಿನ ಮೊಟಕುಗೊಳಿಸಲಾಗಿದೆ. ಡಿ. 9ರಿಂದ 19ರವರೆಗೆ ಅಧಿವೇಶನ ನಡೆಯಲಿದೆ ಎಂದು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಮೊದಲು ಡಿ. 9ರಿಂದ 20ರವರೆಗೆ ಅಧಿವೇಶನ ನಡೆಸಲು ನಿರ್ಧರಿಸಲಾಗಿತ್ತು. ಸಾಹಿತ್ಯ ಸಮ್ಮೇಳನ ಡಿ. 20ರಿಂದ ಆರಂಭವಾಗಲಿದೆ. ಮುಖ್ಯಮಂತ್ರಿ ಮತ್ತು ಸಚಿವರು ಅದರಲ್ಲಿ ಪಾಲ್ಗೊಳ್ಳಲು ಅನುವಾಗುವಂತೆ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಧಿವೇಶನದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದ ಸಮಸ್ಯೆ–ಅಭಿವೃದ್ಧಿ ಬಗ್ಗೆ ಚರ್ಚೆಯಾಗಬೇಕು. ಈ ವಿಷಯದಲ್ಲಿ ಸಫಲವಾದರೆ ನಾವು ಆ ಭಾಗದ ಜನರಿಗೆ ನೀಡುವ ಗೌರವ ವಾಗುತ್ತದೆ ಎಂದರು.

'ನಿಮ್ಮ ಏನೇ ರಾಜಕೀಯ ತಿಕ್ಕಾಟ ಇದ್ದರೂ ಡಿಸೆಂಬರ್ 9ರವರೆಗೆ ಅವಕಾಶ ಇದೆ. ಅಧಿವೇಶನ ಮುಗಿದ ನಂತರವೂ ಸಮಯ ಇದೆ. ಅಲ್ಲಿ ಹೋರಾಟ ಮಾಡಿಕೊಳ್ಳಿ. ರಾಜಕೀಯ ತಿಕ್ಕಾಟ ಅಧಿ-ವೇಶನದಲ್ಲಿ ಬೇಡ, ಸುಗಮ ಕಲಾಪಕ್ಕೆ ಅವಕಾಶ ನೀಡಬೇಕು' ಎಂದು ಪಕ್ಷಗಳಿಗೆ ಮನವಿ ಮಾಡಿದರು.

'ಮೋದಿ ಮೀರಿಸುವ ಆಸೆ...'

'ಈ ವರ್ಷ ಹತ್ತು ದೇಶಗಳ ಪ್ರವಾಸ ಮಾಡಿದ್ದೇನೆ. ವಿದೇಶ ಪ್ರವಾಸದಲ್ಲಿ ಇನ್ನೊಬ್ಬರ ನಂತರದ ಸ್ಥಾನ ಅಲ್ಲ, ಅವರಿಗಿಂತ ಜಾಸ್ತಿ ವಿದೇಶ ಪ್ರವಾಸ ಮಾಡಬೇಕು ಎಂಬುದು ನನ್ನ ಆಸೆ' ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಗುರುವಾರ ಹೇಳಿದರು. ಇಟಲಿಯ ರೋಮ್ ನಗರದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಶಾಂತಿ ಸಮ್ಮೇಳನಕ್ಕೆ ತೆರಳುವ ಮುನ್ನ ಸುದ್ದಿಗಾರರ ಜೊತೆಗೆ ಮಾತನಾಡಿ 'ಮೋದಿ ನಂತರ ಅತಿ ಹೆಚ್ಚು ವಿದೇಶ ಪ್ರವಾಸ ಮಾಡಿದವರು ನೀವೇ ಇರಬೇಕು' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಮಹಾಮೇಳಾವ್‌ಗೆ ಎಂಇಎಸ್ ಸಿದ್ಧತೆ

ಬೆಳಗಾವಿ: 'ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಆರಂಭವಾಗುವ ವಿಧಾನಮಂಡಲ ಚಳಿಗಾಲದ ಅಧಿವೇಶನದ ಮೊದಲ ದಿನವೇ (ಡಿ.9) ಮಹಾಮೇಳಾವ್ ನಡೆಸಲಾಗುವುದು' ಎಂದು ಎಂಇಎಸ್ ಮುಖಂಡರು ತಿಳಿಸಿದರು. ಇಲ್ಲಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರನ್ನು ಗುರುವಾರ ಭೇಟಿಯಾದ ಅವರು, 'ಅಧಿವೇಶನಕ್ಕೆ ಪರ್ಯಾಯವಾಗಿ ನಗರದಲ್ಲಿ ಮಹಾಮೇಳಾವ್ ಮಾಡುತ್ತೇವೆ. ಇದಕ್ಕೆ ವ್ಯವಸ್ಥೆ ಮಾಡಿಕೊಡಿ' ಎಂದು ಕೋರಿದರು. ಎಂಇಎಸ್ ಕಾರ್ಯಾಧ್ಯಕ್ಷ ಮನೋಹರ ಕಿಣೇಕರ ಮಾತನಾಡಿ, 'ಗಡಿಭಾಗದ ಮರಾಠಿ ಭಾಷಿಕರ ಮೇಲೆ ರಾಜ್ಯ ಸರ್ಕಾರದಿಂದ ಅನ್ಯಾಯ ನಡೆಯುತ್ತಿರುವುದನ್ನು ಖಂಡಿಸಿ ಮಹಾಮೇಳಾವ್ ಮಾಡುತ್ತೇವೆ' ಎಂದರು.

ದೀಪೋತ್ಸವ ಧಾರವಾಡದ ಕೆಲಗೇರಿ ರಸ್ತೆಯ ಸಾಯಿಬಾಬಾ ಮಂದಿರದಲ್ಲಿ ಕಾರ್ತಿಕ ದೀಪೋತ್ಸವದ ಪ್ರಯುಕ್ತ ಗುರುವಾರ ಮಹಿಳೆಯರು ದೀಪಗಳನ್ನು ಬೆಳಗಿಸಿದರು

ಪ್ರಜಾವಾಣಿ ಚಿತ್ರ: ಬಿ.ಎಂ.ಕೇದಾರನಾಥ

ಅನಂತಕುಮಾರ್ ಹೆಗಡೆ ಒಬ್ಬ ಹುಚ್ಚ: ರವಿಕುಮಾರ್

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಮಾಜಿ ಸಂಸದ ಅನಂತಕುಮಾರ್ ಹೆಗಡೆ ಒಬ್ಬ ಹುಚ್ಚ. ಸಂವಿಧಾನ ಬದಲಿಸುತ್ತೇವೆ ಎಂದಿದ್ದ ಆತನ ಹೇಳಿಕೆಗೆ ಅರ್ಥವಿಲ್ಲ. ಬಿಜೆಪಿಯು ಸಂವಿಧಾನವನ್ನು ದೇಶದ ಆಡಳಿತ ಗ್ರಂಥ ಎಂದೇ ಸ್ವೀಕರಿಸಿದೆ' ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಹೇಳಿದರು.

ಬಿಜೆಪಿ ವತಿಯಿಂದ ನಗರದ ಕ್ರೀಡಾ ಭವನದಲ್ಲಿ ಗುರುವಾರ ನಡೆದ 'ಸಂವಿಧಾನ ಸನ್ಮಾನ ಅಭಿಯಾನ'ದಲ್ಲಿ ಮಾತನಾಡಿದ ಅವರು 'ಸಂವಿಧಾನ ಬದಲಾವಣೆಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡಿಲ್ಲ. ಆರ್‌ಎಸ್‌ಎಸ್ ಮುಖಂಡರು ಮಾತನಾಡಿಲ್ಲ. ಮಾತಿನ ಭರದಲ್ಲಿ ಅನಂತಕುಮಾರ ಹೆಗಡೆ ಆಡಿತ ಮಾತುಗಳಿಗೆ ಮನ್ನಣೆ ಕೊಡಬೇಕಾಗಿಲ್ಲ' ಎಂದರು.

ಎನ್. ರವಿಕುಮಾರ್

'ದೇಶವೇ ಮೊದಲು ಎಂಬ ತತ್ವವನ್ನು ಬಿಜೆಪಿ ಮುಖಂಡರು ಪಾಲಿಸುತ್ತಿದ್ದಾರೆ. ಸಂವಿಧಾನವನ್ನು ದೇಶದ ಒಂದು ಮಹಾನ್ ಗ್ರಂಥ ಎಂದು ಸ್ವೀಕರಿಸಿದ್ದೇವೆ' ಎಂದ ಅವರು, ಕಾಂಗ್ರೆಸ್ ಪಕ್ಷದ ಮುಖಂಡರು ನೆಹರೂ ಕುಟುಂಬದ ಅಣತಿಯಂತೆ ನಡೆಯುತ್ತಿದ್ದಾರೆ' ಎಂದು ಟೀಕಿಸಿದರು.

'ಬಸವಣ್ಣನ ಬಗ್ಗೆ ಯತ್ನಾಳ ಹೇಳಿಕೆ ಅಕ್ಷಮ್ಯ'

ಪ್ರಜಾವಾಣಿ ವಾರ್ತೆ

ಹೊಸದುರ್ಗ: 'ಬಸವಣ್ಣನವರ ಕುರಿತು ವಿಜಯಪುರದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆಡಿರುವ ಮಾತು ಅಕ್ಷಮ್ಯ' ಎಂದು ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

'ಯತ್ನಾಳ ಅವರಿಗೆ ಬಸವ ಧರ್ಮದ ಪರಿಚಯವೇ ಇದ್ದಂತಿಲ್ಲ. ಬಸವಣ್ಣ-ನವರು ಹೊಳೆಗೆ ಹಾರಿ ಸಾಯುವ ಹೇಡಿಯಾಗಿರಲಿಲ್ಲ. ಬಸವಣ್ಣನ-ವರ ಇತಿಹಾಸ ಮತ್ತು ವಚನಗಳನ್ನು ಇನ್ನಾದರೂ ಓದುವ ಪ್ರಯತ್ನ ಮಾಡಲಿ. ಆ ಮೂಲಕ ಬಸವಣ್ಣ ಮತ್ತು ಲಿಂಗಾಯತ ಧರ್ಮದ ನೈಜ ಪರಿಚಯವಾಗಿ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳಬಹುದು' ಎಂದು ಸ್ವಾಮೀಜಿ ಪ್ರಕಟಣೆ ಮೂಲಕ ಹೇಳಿದ್ದಾರೆ.



ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

'ಯತ್ನಾಳ ಅವರಿಗೆ ತಾವು ಏನು ಮಾತನಾಡುತ್ತಿದ್ದೇವೆ ಎನ್ನುವ ಪ್ರಜ್ಞೆ ಇರುವಂತಿಲ್ಲ. ದೊಡ್ಡವರನ್ನು ಹೀಯಾಳಿಸಿ, ಬೈದು ಸಾರ್ವಜನಿಕ-ರಿಂದ ಚಪ್ಪಾಳೆ ತಟ್ಟಿಸಿಕೊಂಡರೆ ತಾವು ದೊಡ್ಡವರಾಗುತ್ತೇವೆ ಎನ್ನುವ ಭ್ರಮಾಲೋಕದಲ್ಲಿ ತೇಲಾಡುತ್ತಿರುವಂ-ತಿದೆ. ಈ ಹಿಂದೆ ಗಣಪತಿ ವಿಚಾರವಾಗಿ ನಾವಾಡಿದ ಮಾತುಗಳನ್ನು ಅರ್ಥ ಮಾಡಿಕೊಳ್ಳದೆ ನಮ್ಮನ್ನೇ ನಿಂದಿಸಿದ್ದರು. ಅಹಂಕಾರಕ್ಕೆ ಉದಾಸೀನವೇ ಮದ್ದು ಎಂದು ಆಗ ಪ್ರತಿಕ್ರಿಯೆ ನೀಡಿರಲಿಲ್ಲ. ಸಕಲ ಜೀವಾತ್ಮರ ಲೇಸನ್ನೇ ಬಯಸಿದ್ದ ಬಸವಣ್ಣನವರ ಬಗ್ಗೆ ಮಾತನಾಡಿರುವುದನ್ನು ಖಂಡಿಸುತ್ತೇನೆ' ಎಂದು ಹೇಳಿದ್ದಾರೆ.

ಸಚಿವ ಸ್ಥಾನದ ಅವಕಾಶಕ್ಕೆ ಕಾಯುತ್ತಿದ್ದೇನೆ: ತನ್ವೀರ್ ಸೇಠ್

ಪ್ರಜಾವಾಣಿ ವಾರ್ತೆ

ಮೈಸೂರು: 'ಕಾಂಗ್ರೆಸ್‌ನಲ್ಲಿ ಯಾವುದೇ ಬಣ ಇಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಆಯ್ಕೆಯಾದಾಗ, ಮೊದಲ ಹಂತದಲ್ಲಿ ಅವರು ಹಾಗೂ 2ನೇ ಹಂತದಲ್ಲಿ ಡಿ.ಕೆ.ಶಿವಕುಮಾರ್ ಅವರಿಗೆ ಅವಕಾಶ ಮಾಡಿಕೊಡಲಾಗುವುದು ಎಂದು ವರಿಷ್ಠರು ಹೇಳಿದ್ದರು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಶಾಸಕ ತನ್ವೀರ್ ಸೇಠ್ ತಿಳಿಸಿದರು.

ಇಲ್ಲಿ ಗುರುವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, 'ಸಿದ್ದರಾಮಯ್ಯ ಅವರ ಮೇಲೆ ಯಾವುದೋ ಆರೋಪ ಬಂದಿದ್ದರಿಂದ ಶೀಘ್ರದಲ್ಲೇ ರಾಜೀನಾಮೆ ಕೊಡುತ್ತಾರೆ ಎಂದೆಲ್ಲಾ ಮಾಧ್ಯಮದಲ್ಲಿ ವಿಶ್ಲೇಷಣೆ–ಚರ್ಚೆ ನಡೆದವು. ಯಾರಿಗೆ ಹೇಗೆ ಬೇಕೋ ಹಾಗೆ ವಿಶ್ಲೇಷಿಸುತ್ತಿದ್ದಾರೆ' ಎಂದರು.

'ನಾನೂ ಸಚಿವ ಸ್ಥಾನದ ಆಕಾಂಕ್ಷಿ. ಸಚಿವರ ಕಾರ್ಯ-ವೈಖರಿಯನ್ನು ಗುರುತಿಸಿ, 7ರಿಂದ 9 ಮಂದಿಯನ್ನು ಕೈಬಿಡಬೇಕೆಂಬ ಕೂಗು ಲೋಕಸಭೆ ಚುನಾವಣೆ ನಂತರ ಕೇಳಿಬಂದಿದೆ. ಬಿ.ನಾಗೇಂದ್ರ ರಾಜೀನಾಮೆಯಿಂದ ತೆರವಾದ ಸ್ಥಾನ ಬಿಟ್ಟರೆ ಬೇರಾವುದೂ ಖಾಲಿ ಇಲ್ಲ. ಸಚಿವ ಸಂಪುಟಕ್ಕೆ ಸರ್ಜರಿ ಆಗುತ್ತದೆ; ಹೊಸಬರಿಗೆ ಅವಕಾಶ ಆಗುತ್ತದೆ ಎಂದೆಲ್ಲಾ ವರದಿ ಆಗುತ್ತಿದೆ. ನಾನೂ ವರಿಷ್ಠರೊಂದಿಗೂ ಮಾತನಾಡಿದ್ದು, ಅವಕಾಶ ಸಿಗುವವರೆಗೂ ಕಾಯುತ್ತೇನೆ ಎಂದು ತಿಳಿಸಿದ್ದೇನೆ. ಕೆಲಸ ಮಾಡುವ ಅವಕಾಶ ಸಿಕ್ಕರೆ ನಿರ್ವಹಿಸಲು ತಯಾರಾಗಿದ್ದೇನೆ' ಎಂದು ಪ್ರತಿಕ್ರಿಯಿಸಿದರು.

ಬಿಎಸ್‌ವೈ ಬಂಧನ ಬೇಡ: ಆದೇಶ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ, 'ಪೊಲೀಸರು ಅವರನ್ನು ಬಂಧಿಸಬಾರದು ಮತ್ತು ವಿಚಾರಣೆಗಾಗಿ ಅವರ ಖುದ್ದು ಹಾಜರಾತಿಗೆ ವಿನಾಯಿತಿ ನೀಡಲಾಗಿದೆ' ಎಂಬ ತನ್ನ ಮಧ್ಯಂತರ ಆದೇಶವನ್ನು ಹೈಕೋರ್ಟ್ ಡಿಸೆಂಬರ್ 2ರವರೆಗೆ ಪುನಃ ವಿಸ್ತರಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಆದ ಹಿರಿಯ ವಕೀಲ ರವಿವರ್ಮ ಕುಮಾರ್, 'ವಿಶೇಷ ನ್ಯಾಯಾಲಯಕ್ಕೆ ಈಗಾಗಲೇ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಕಲಂ 35ರ ಪ್ರಕಾರ ಅಪರಾಧಕ್ಕೆ ಸಂಬಂಧಿಸಿದಂತೆ ಮಾಡಲಾಗಿರುವ ಆರೋಪವನ್ನು ಪರಿಗಣಿಸಿದ ನಂತರ ಒಂದು ತಿಂಗಳ ಅವಧಿಯಲ್ಲಿ ಸಾಕ್ಷಿ ಹಾಗೂ ಆರೋಪಿಯ ಹೇಳಿಕೆ ದಾಖಲಿಸಿಕೊಳ್ಳುವುದು ಕಡ್ಡಾಯ. ಆದರೆ, ಪ್ರಕರಣದಲ್ಲಿ ಆರೋಪ ಪರಿಗಣಿಸಿ ಈಗಾಗಲೇ ಆರು ತಿಂಗಳು ಕಳೆದಿದೆ' ಎಂದು ಆಕ್ಷೇಪಿಸಿದರು.

'ಈ ಹಿನ್ನೆಲೆಯಲ್ಲಿ ಅರ್ಜಿದಾರ ಆರೋಪಿಗೆ ಪೋಕ್ಸೊ ವಿಶೇಷ ನ್ಯಾಯಾಲಯಕ್ಕೆ ಖುದ್ದು ಹಾಜರಾಗುವುದಕ್ಕೆ ವಿನಾಯಿತಿ ನೀಡಿ ಹೈಕೋರ್ಟ್ ಈ ಹಿಂದೆ ಹೊರಡಿಸಿರುವ ಮಧ್ಯಂತರ ಆದೇಶವನ್ನು ತೆರವುಗೊಳಿಸಬೇಕು' ಎಂದು ಮನವಿ ಮಾಡಿದರು.

ಯಡಿಯೂರಪ್ಪ ಪರ ಹಾಜರಿದ್ದ ಹಿರಿಯ ವಕೀಲ ಸಿ.ವಿ.ನಾಗೇಶ್ ಅವರು, 'ಅರ್ಜಿಗೆ ಸಂಬಂಧಿಸಿದಂತೆ ನನ್ನ ವಾದ ಮಂಡನೆಯನ್ನು ಸೋಮವಾರ ಪೂರ್ಣಗೊಳಿಸುತ್ತೇನೆ' ಎಂದು ತಿಳಿಸಿದರು. ಅಂತೆಯೇ, ನ್ಯಾಯಪೀಠವು ರವಿವರ್ಮ ಕುಮಾರ್ ಅವರಿಗೆ, 'ನಿಮ್ಮ ಮನವಿಯನ್ನು ಅಂದೇ ತೀರ್ಮಾನಿಸಿ ವಿಚಾರಣೆಯನ್ನೇ ಪೂರೈಸಿಬಿಡೋಣ' ಎಂದು ತಿಳಿಸಿ ವಿಚಾರಣೆಯನ್ನು ಸೋಮವಾರ (ಡಿ.2) ಮಧ್ಯಾಹ್ನ 2.30ಕ್ಕೆ ನಿಗದಿಪಡಿಸಿತು. ಯಡಿಯೂರಪ್ಪ ಪರ ವಕಾಲತ್ತು ವಹಿಸಿರುವ ಸಂದೀಪ್ ಪಾಟೀಲ ಹಾಜರಿದ್ದರು.

ಭ್ರಷ್ಟರ ಕಿತ್ತೊಗೆದರೆ ಮೋದಿ ಮಾತಿಗೆ ಗೌರವ: ಯತ್ನಾಳ

ಒಂದನೇ ಪುಟದಿಂದ...

'ಕಾಂಗ್ರೆಸ್ ಜೊತೆ ನಾನು ಕೈಜೋಡಿಸಿದ್ದೇನೆ ಎಂದು ಆರೋಪಿಸುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರೇ, ಈ ಬಗ್ಗೆ ದಾಖಲೆಗಳಿದ್ದರೆ ಬಿಡುಗಡೆ ಮಾಡಿ. ನೀವು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಳಿ ಹೋಗಿ 20 ಪತ್ರಗಳಿಗೆ ಸಹಿ ಮಾಡಿಸಿಕೊಂಡು ಬಂದಿದ್ದೀರಿ. ಈ ಬಗ್ಗೆ ನನ್ನ ಬಳಿ ವಿಡಿಯೊ ಇದೆ' ಎಂದು ವಿಜಯೇಂದ್ರಗೆ ಸವಾಲು ಹಾಕಿದರು.

'ಡಿ.ವಿ. ಸದಾನಂದಗೌಡ, ಬಿ.ಸಿ. ಪಾಟೀಲ, ಎಂ.ಪಿ. ರೇಣುಕಾಚಾರ್ಯ ಅವರ ಬಗ್ಗೆ ನಾನು ಮಾತನಾಡಿಲ್ಲ. ಅವರು ನನ್ನ ಬಗ್ಗೆ ಮಾತನಾಡುವುದಿದ್ದರೆ ಸತ್ಯ ಮಾತನಾಡಲಿ, ಇಲ್ಲವೇ ಬಾಯಿ ಮುಚ್ಚಿಕೊಂಡು ಇರಲಿ. ಇಲ್ಲವಾದರೆ ಅವರ ಬಂಡವಾಳ ಬಯಲು ಮಾಡಬೇಕಾಗುತ್ತದೆ' ಎಂದು ಅವರು ಎಚ್ಚರಿಕೆ ನೀಡಿದರು.

'ವಂಶವಾದ, ಭ್ರಷ್ಟಚಾರದ ವಿರುದ್ಧ ಹೋರಾಟ ನನ್ನದು. ಯಡಿಯೂರಪ್ಪ ಅವರನ್ನು ಪಕ್ಷ ನಾಲ್ಕು ಬಾರಿ ಮುಖ್ಯಮಂತ್ರಿ ಮಾಡಿದೆ, ಪಕ್ಷದ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಇನ್ನೂ ನಾನು ಸೈಕಲ್‌ನಲ್ಲಿ ಓಡಾಡಿದ್ದೇನೆ, ಪಕ್ಷ ಕಟ್ಟಿದ್ದೇನೆ ಎಂದು ಹೇಳಿದರೆ ಹೇಗೆ? ನಾವೇನು ಅಂಬಾಸಿಡರ್ ಕಾರಿನಲ್ಲಿ ಓಡಾಡಿದ್ದೇವೆಯೇ? ನಾವು ಕೂಡ ಸೈಕಲ್‌ನಲ್ಲಿ ಓಡಾಡಿ ಪಕ್ಷ ಕಟ್ಟಿದ್ದೇವೆ' ಎಂದರು.

ಒಳ ಜಗಳ: ತರುಣ್ ಚುಗ್ ರಾಜ್ಯಕ್ಕೆ

ರಾಜ್ಯ ಬಿಜೆಪಿಯಲ್ಲಿ ವರ್ಷಗಳಿಂದಲೇ 'ಭಿನ್ನ'ಸ್ವರ ಮೂಡುತ್ತಾ ಬಂದಿದೆ. ಬಸನಗೌಡ ಪಾಟೀಲ ಯತ್ನಾಳ ಅವರು ಯಡಿಯೂರಪ್ಪ ಹಾಗೂ ವಿಜಯೇಂದ್ರ ವಿರುದ್ಧ ನಿರಂತರವಾಗಿ ಟೀಕಿಸಿದ್ದರೂ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದ ಪಕ್ಷದ ವರಿಷ್ಠರು ಕೊನೆಗೂ ರಂಗಪ್ರವೇಶ ಮಾಡಿದ್ದಾರೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಅವರನ್ನು ರಾಜ್ಯಕ್ಕೆ ಕಳುಹಿಸುತ್ತಿರುವ ಆ ಪಕ್ಷದ ವರಿಷ್ಠರು, ಡಿ. 2 ಮತ್ತು 3ರಂದು ಪಕ್ಷದ ಪ್ರಮುಖ ನಾಯಕರ ಸಭೆ ನಡೆಸಿ, ವರದಿ ಸಲ್ಲಿಸಲು ಸೂಚಿಸಿದ್ದಾರೆ ಎನ್ನಲಾಗಿದೆ.

ಮುಡಾ ಮಾಜಿ ಆಯುಕ್ತರ ವಿಚಾರಣೆ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಆಯುಕ್ತ ಕಾಂತರಾಜು ಅವರು ಗುರುವಾರ ಇಲ್ಲಿನ ಲೋಕಾಯುಕ್ತ ಕಚೇರಿಯಲ್ಲಿ ವಿಚಾರಣೆಗೆ ಹಾಜರಾದರು.

ಮುಡಾ ನಿವೇಶನಗಳ ಹಂಚಿಕೆ ಅಕ್ರಮ ಪ್ರಕರಣದ ತನಿಖೆ ನಡೆಸುತ್ತಿರುವ ತನಿಖಾಧಿಕಾರಿ ಟಿ.ಜೆ. ಉದೇಶ್ ನೇತೃತ್ವದ ತಂಡವು, ಕೆಲವು ತಾಸು ಕಾಲ ಅವರನ್ನು ವಿಚಾರಣೆಗೆ ಒಳಪಡಿಸಿತು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕಾಂತರಾಜು, '2017ರಲ್ಲಿ ನಾನು ಮುಡಾ ಆಯುಕ್ತನಾಗಿದ್ದಾಗ ಸಿದ್ದರಾಮಯ್ಯರ ಪತ್ನಿ ಬಿ.ಎಂ. ಪಾರ್ವತಿ ಅವರಿಂದ ಮುಡಾ ವಶಪಡಿಸಿಕೊಂಡ ಜಮೀನಿಗೆ ಬದಲಾಗಿ ಅಭಿವೃದ್ಧಿಪಡಿಸದ ಭೂಮಿ ಕೊಡಲು ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನ ಮಾಡಿದ್ದೆವು. ಈ ಬಗ್ಗೆ ಅಧಿಕಾರಿಗಳ ಪ್ರಶ್ನೆಗೆ ಉತ್ತರಿಸಿದ್ದೇನೆ' ಎಂದರು.

ನಕ್ಸಲ್ ನಾಯಕ ವಿಕ್ರಂ ಗೌಡ ಹತ್ಯೆ ಪ್ರಕರಣ

ಎನ್‌ಕೌಂಟರ್: ನ್ಯಾಯಾಂಗ ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕ್ಸಲ್ ನಾಯಕ ವಿಕ್ರಂ ಗೌಡ ಎನ್‌ಕೌಂಟರ್ ಪ್ರಕರಣವನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಮಾರ್ಗಸೂಚಿಯಂತೆ ನ್ಯಾಯಾಂಗ ತನಿಖೆಗೆ ವಹಿಸಬೇಕು ಎಂದು ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿ-ಯಲ್ಲಿ ಮಾತನಾಡಿದ ಸಮಿತಿಯ ಸದಸ್ಯರಾದ ಬಂಜಗೆರೆ ಜಯಪ್ರಕಾಶ್, ಪಾರ್ವತೀಶ ಬಿಳಿದಾಳೆ, ಕೆ.ಪಿ. ಶ್ರೀಪಾಲ್, 'ಪ್ರಜಾಪ್ರಭುತ್ವ ವ್ಯವಸ್ಥೆ-ಯಲ್ಲಿ ನ್ಯಾಯಾಂಗ ಪರಧಿಯಿಂದಾಚೆ ಪೊಲೀಸ್ ಪಡೆಗಳಿಂದ ನಡೆಯುವ ಎನ್‌ಕೌಂಟರ್‌ಗಳ ಕುರಿತು ಪಾರದರ್ಶಕ ತನಿಖೆ ನಡೆಸುವುದು ಸರ್ಕಾರದ ಹೊಣೆ. ಈ ಪ್ರಕರಣದ ಸಂಪೂರ್ಣ ತನಿಖೆ ನಡೆಸಿ ಸತ್ಯಾಂಶವನ್ನು ಸಾರ್ವಜನಿಕರಿಗೆ ತಿಳಿಸಬೇಕು' ಎಂದು ಒತ್ತಾಯಿಸಿದರು.

ಮುಖ್ಯಾಂಶಗಳು

- ಪಾರದರ್ಶಕ ತನಿಖೆ ನಡೆಸುವುದು ಸರ್ಕಾರದ ಹೊಣೆ
- ಆದಿವಾಸಿಗಳ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು
- ಶೀಘ್ರ ವಿಚಾರಣೆಗೆ ತ್ವರಿತಗತಿ ನ್ಯಾಯಾಲಯ ಸ್ಥಾಪಿಸಲಿ

'ಸಮಿತಿಯು ಈಗಾಗಲೇ ವಿಕ್ರಂಗೌಡ ಅವರ ಎನ್‌ಕೌಂಟರ್ ನಡೆದ ಸ್ಥಳ ಸೇರಿದಂತೆ ಹೆಬ್ರಿ ತಾಲ್ಲೂಕಿನ ಹಲವು ಸ್ಥಳಗಳಿಗೆ ಭೇಟಿ ನೀಡಿದೆ. ಅಲ್ಲಿರುವ ಆದಿವಾಸಿಗಳಿಗೆ ಮೂಲಸೌಕರ್ಯ ಒದಗಿಸುವಲ್ಲಿ ಸರ್ಕಾರ ವಿಫಲವಾಗಿದೆ. ಈ ಕೊರತೆಗಳ ಲಾಭ ಪಡೆದು ಕೆಲ ತೀವ್ರಗಾಮಿ ಸಂಘಟನೆಗಳು ಅಲ್ಲಲ್ಲಿ ಸಂಚರಿಸುತ್ತಿರಬಹುದು. ಸರ್ಕಾರ ಆದಿವಾಸಿಗಳ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು. ಸರ್ಕಾರದ ನಿರ್ಲಕ್ಷ್ಯ ಅಥವಾ ನಿಧಾನಗತಿಯ ಕ್ರಮಗಳು ಬೇರೆ ಸ್ವರೂಪ ಪಡೆದುಕೊಂಡು ಇಂತಹ ಹೋರಾಟಗಾರರಿಗೆ ಜನ್ಮಕೊಡುತ್ತವೆ. ಅರಣ್ಯ ಮತ್ತು ಪೊಲೀಸ್ ಇಲಾಖೆ ಸಿಬ್ಬಂದಿ ಕಿರುಕುಳ ನೀಡುತ್ತಿರುವ ಬಗ್ಗೆ ಆದಿವಾಸಿಗಳು ಆಪಾದಿಸಿದ್ದಾರೆ' ಎಂದರು.

'ರಾಜ್ಯದ ಜಾನ್ (ಜಯಣ್ಣ), ಮುಂಡಗಾರು ಲತಾ, ಸುಂದರಿ ಹಾಗೂ ವನಜಾಕ್ಷಿ ಸೇರಿದಂತೆ ನಾಲ್ಕೈದು ಮಂದಿ ಮಾತ್ರ ನಕ್ಸಲ್ ಚಳವಳಿಯಲ್ಲಿ ಸಕ್ರಿಯವಾಗಿದ್ದಾರೆ. ಇವರು ಮುಖ್ಯವಾಹಿನಿಗೆ ಬರುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರ ಹೋರಾಟ ಮುಂದುವರಿಸಬೇಕು. ಸರ್ಕಾರ ಘೋಷಿಸಿರುವ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ಇವರ ಮೇಲೆ ದಾಖಲಾಗಿರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ತ್ವರಿತಗತಿ ನ್ಯಾಯಾಲಯಗಳನ್ನು ರಚಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲಾಗುವುದು' ಎಂದು ಹೇಳಿದರು.

'ರಾಜ್ಯದ ಪಶ್ಚಿಮ ಘಟ್ಟ ಪ್ರದೇಶದಲ್ಲಿರುವ ನಿಷೇಧಿತ ಸಿಪಿಐಎಂಎಲ್ – ಮಾವೋವಾದಿ ಪಕ್ಷದ ಕಾರ್ಯಕರ್ತರ ಮನವೊಲಿಸಿ ಮುಖ್ಯವಾಹಿನಿಗೆ ಕರೆ ತರುವ ಪ್ರಯತ್ನವನ್ನು ಸಮಿತಿ ಮಾಡುತ್ತಿದೆ. ಜೀವಹಾನಿಯಾಗದಂತೆ ಈ ಸಮಸ್ಯೆಯನ್ನು ಬಗೆಹರಿಸಲು ನಾವು ಬದ್ಧವಾಗಿದ್ದೇವೆ. ಇಲ್ಲಿರುವ ಆದಿವಾಸಿಗಳು, ಕೃಷಿಕರ ಸಮಸ್ಯೆಗಳು ಮತ್ತು ಆತಂಕಗಳನ್ನು ನಿವಾರಿಸುವ ಮೂಲಕ ಮಾವೋವಾದಿ ನಕ್ಸಲರಿಗೆ ಹೋರಾಡಲು ವಿಷಯಗಳಿರದಂತೆ ಸರ್ಕಾರ ನೋಡಿಕೊಳ್ಳಬೇಕು' ಎಂದು ಒತ್ತಾಯಿಸಿದರು.

ರೇಣುಕಸ್ವಾಮಿ ಕೊಲೆ ಪ್ರಕರಣ: ಹೈಕೋರ್ಟ್‌ಗೆ ದರ್ಶನ್ ಪರ ವಕೀಲರಿಂದ ಮಾಹಿತಿ ಸಲ್ಲಿಕೆ

'ದರ್ಶನ್‌ಗೆ ರಕ್ತದೊತ್ತಡ ಏರುಪೇರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಅವರ ರಕ್ತದ ಒತ್ತಡದಲ್ಲಿ ಪದೇ ಪದೇ ಭಾರಿ ಏರುಪೇರು ಕಂಡುಬರುತ್ತಿದೆ' ಎಂದು ಅವರ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಆಗ್ರಹಿದರು.

ಪ್ರಕರಣದ ಮೊದಲ ಆರೋಪಿ ಪವಿತ್ರಾ ಗೌಡ, 2ನೇ ಆರೋಪಿ ದರ್ಶನ್, 6ನೇ ಆರೋಪಿ ಜಗದೀಶ್, 7ನೇ ಆರೋಪಿ ಅನುಕುಮಾರ್ ಅಲಿಯಾಸ್ ಅನು, 11ನೇ ಆರೋಪಿ ನಾಗರಾಜ್ ಮತ್ತು 12ನೇ ಆರೋಪಿ ಎಂ.ಲಕ್ಷ್ಮಣ್, ಪ್ರತ್ಯೇಕವಾಗಿ ಸಲ್ಲಿಸಿರುವ ನಿಯಮಿತ (ರೆಗ್ಯುಲರ್) ಜಾಮೀನು ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ದರ್ಶನ್ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ತಮ್ಮ ವಾದ ಮುಂದುವರಿಸಿ, 'ದರ್ಶನ್, ತಮ್ಮ ಬೆನ್ನುಹುರಿ ನೋವಿಗೆ ಶಸ್ತ್ರ-ಚಿಕಿತ್ಸೆ ಪಡೆಯಲು ಪದೇ ಪದೇ ಏರಿಳಿತದ ರಕ್ತದೊತ್ತಡ ಅಡ್ಡಿ ಮಾಡುತ್ತಿದೆ. ಆದಾಗ್ಯೂ, ವೈದ್ಯಕೀಯ ಕಾರಣಕ್ಕಾಗಿ ಮಧ್ಯಂತರ ಜಾಮೀನು ಪಡೆದು ಆಸ್ಪತ್ರೆಗೆ ದಾಖಲಾಗಿರುವ ಅವರು ಹೆಚ್ಚಿನ ವಿವರಗಳನ್ನು ಇನ್ನೂ ಹಂಚಿಕೊಂಡಿಲ್ಲ' ಎಂದು ನ್ಯಾಯಪೀಠದ ಪ್ರಶ್ನೆಯೊಂದಕ್ಕೆ ವಿವರಿಸಿದರು.

ಇದಕ್ಕೆ ನ್ಯಾಯಪೀಠವು, 'ದರ್ಶನ್‌ಗೆ ಶಸ್ತ್ರಚಿಕಿತ್ಸೆ ನಡೆಸಲು ಯಾವುದೇ ಸಮಸ್ಯೆಯಿಲ್ಲ ಎಂದು ವೈದ್ಯರೇ ನೀಡಿರುವ ಪ್ರಮಾಣ ಪತ್ರದಲ್ಲಿ ಇದೆಯಲ್ಲಾ' ಎಂದು ಪ್ರಶ್ನಿಸಿತು.

ಇದನ್ನು ನಿರಾಕರಿಸಿದ ನಾಗೇಶ್ ಅವರು, 'ದರ್ಶನ್‌ಗೆ ಎಂಆರ್‌ಐ ಮಾಡಿಸಲಾಗಿದೆ. ರಕ್ತದೊತ್ತಡದಲ್ಲಿ ಪದೇ ಪದೇ ಏರಿಳಿತ ಕಂಡು ಬರುತ್ತಿದೆ. ಆದ್ದರಿಂದ, ಶಸ್ತ್ರಚಿಕಿತ್ಸೆ ಮಾಡಿಲ್ಲ. ಯಾವಾಗ ಶಸ್ತ್ರಚಿಕಿತ್ಸೆ ಮಾಡಬೇಕು ಎಂಬುದನ್ನು ವೈದ್ಯರು ನಿರ್ಧರಿಸಬೇಕಿದೆ' ಎಂದು ಸಮರ್ಥಿಸಿಕೊಂಡರು.

'ದರ್ಶನ್ ಉತ್ತಮ ನಡತೆ ಹೊಂದಿದ ವ್ಯಕ್ತಿ'

ದರ್ಶನ್ ಉತ್ತಮ ನಡತೆ ಹೊಂದಿದ ವ್ಯಕ್ತಿ ಎಂಬುದನ್ನು ಮಂಡಿಸಿದ ನಾಗೇಶ್ ಅವರು, 'ಒಂದು ವೇಳೆ ದರ್ಶನ್‌ಗೆ ರೇಣುಕಸ್ವಾಮಿಯನ್ನು ಕೊಲೆ ಮಾಡುವ ಉದ್ದೇಶವಿದ್ದಿದ್ದರೆ; ರೇಣುಕಸ್ವಾಮಿಗೆ ನೀರು ಕೊಡಿ, ಊಟ ತಂದು ಕೊಡಿ, ಆತನ ಚಿತ್ರ ಸೆರೆ ಹಿಡಿಯಿರಿ, ವಿಡಿಯೊ ಮಾಡಿ, ಅವನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಬಿಡಿ ಎಂದೆಲ್ಲಾ ಹೇಳುತ್ತಿದ್ದರೇ' ಎಂದು ಪ್ರಶ್ನಿಸಿದರು.

'ಘಟನೆಯ ಕುರಿತಂತೆ ಪ್ರಾಸಿಕ್ಯೂಷನ್ ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆಯನ್ನು ತಡವಾಗಿ ದಾಖಲಿಸಿದೆ. ಅಲ್ಲದೇ, ಸಾಕ್ಷಿಗಳ ಹೇಳಿಕೆಗಳಲ್ಲಿ ಸಾಕಷ್ಟು ವಿರೋಧಾಭಾಸವಿದೆ. ಸುಳ್ಳು ಹೇಳುವುದಕ್ಕೂ ಒಂದು ಮಿತಿ ಇದೆ. ಆದರೆ, ಪ್ರಾಸಿಕ್ಯೂಷನ್ ಅರ್ಜಿದಾರರ ವಿರುದ್ಧ ಮಿತಿ ಮೀರಿದ ಸುಳ್ಳುಗಳನ್ನು ಒಳಗೊಂಡ ದೋಷಾರೋಪ ಪಟ್ಟಿ ಸಿದ್ಧಪಡಿಸಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಕರಣದ 11ನೇ ಆರೋಪಿ ದರ್ಶನ್ ಅವರ ವ್ಯವಸ್ಥಾಪಕ ಆರ್.ನಾಗರಾಜು ಪರ ಮತ್ತೊಬ್ಬ ಹಿರಿಯ ವಕೀಲ ಸಂದೇಶ್ ಚೌಟ ವಾದ ಮಂಡಿಸಿ, 'ಯಾವ ಕಾರಣಕ್ಕಾಗಿ ಆರೋಪಿಯನ್ನು ಬಂಧಿಸಲಾಗಿದೆ ಎಂಬ ವಿಚಾರವನ್ನು ತನಿಖಾಧಿಕಾರಿಗಳು ತಮ್ಮ ರಿಮ್ಯಾಂಡ್ ಅರ್ಜಿಯಲ್ಲಿ ಉಲ್ಲೇಖ ಮಾಡಿಲ್ಲ. ಈ ಲೋಪವನ್ನು ವಿಚಾರಣಾ ನ್ಯಾಯಾಲಯ ಪರಿಗಣಿಸಿಲ್ಲ' ಎಂದು ಆಕ್ಷೇಪಿಸಿದರು. ದಿನದ ಕಲಾಪ ಮುಗಿದಿದ್ದರಿಂದ ವಿಚಾರಣೆಯನ್ನು ಮುಂದೂಡಲಾಯಿತು.

ಶಿಲ್ಪಕಲಾ ಅಕಾಡೆಮಿ: 10 ಸಾಧಕರಿಗೆ 'ಗೌರವ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು 2022 ಹಾಗೂ 2023ನೇ ಸಾಲಿನ ವಾರ್ಷಿಕ 'ಗೌರವ ಪ್ರಶಸ್ತಿ'ಗೆ ಹತ್ತು ಮಂದಿ ಸಾಧಕರನ್ನು ಆಯ್ಕೆ ಮಾಡಿದೆ.

ಅಕಾಡೆಮಿ ಅಧ್ಯಕ್ಷ ಎಂ.ಸಿ.ರಮೇಶ್ ನೇತೃತ್ವದ ಕಾರ್ಯಕಾರಿ ಸಮಿತಿ ಪ್ರಶಸ್ತಿಗೆ ಕಲಾವಿದರನ್ನು ಆಯ್ಕೆ ಮಾಡಿದೆ ಎಂದು ಅಕಾಡೆಮಿ ರಿಜಿಸ್ಟ್ರಾರ್ ಆರ್. ಚಂದ್ರಶೇಖರ್ ಅವರು ಪ್ರಶಸ್ತಿ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದ್ದಾರೆ. 2022ನೇ ಸಾಲಿನ ಗೌರವ ಪ್ರಶಸ್ತಿಗೆ ಗದಗದ ವೀರಭದ್ರಪ್ಪ ಕಾಳಪ್ಪ ಕವಲೂರು (ಸಂಪ್ರದಾಯ ಶಿಲ್ಪ), ಚಿಕ್ಕಮಗಳೂರಿನ ಎಸ್.ಪಿ. ಫಣೀಂದ್ರಾಚಾರ್ (ಸಂಪ್ರದಾಯ ಶಿಲ್ಪ), ಯಾದಗಿರಿಯ ಬಸಪ್ಪ ಬಡಿಗೇರ (ಜಾನಪದ ಶಿಲ್ಪ), ಬೆಂಗಳೂರಿನ ಗೋಪಿನಾಥ್ ಎಸ್. (ಸಮಕಾಲೀನ ಶಿಲ್ಪ) ಹಾಗೂ ಶಿವಮೊಗ್ಗದ ಸಿ.ಪಿ. ರಾಮಕೃಷ್ಣ (ಸಿಮೆಂಟ್ ಶಿಲ್ಪ) ಆಯ್ಕೆಯಾಗಿದ್ದಾರೆ.

2023ನೇ ಸಾಲಿನ ಗೌರವ ಪ್ರಶಸ್ತಿಗೆ ಬಾಗಲಕೋಟೆಯ ಅಲ್ಲಿಸಾಬ್ ಗೈ ನದಾಫ್ (ಸಂಪ್ರದಾಯ ಶಿಲ್ಪ), ಹಾವೇರಿ ಯಮನಪ್ಪ ಪಟ್ಟಬ್ಬಪ್ಪ ಬಡಿಗೇರ (ಸಂಪ್ರದಾಯ ಶಿಲ್ಪ), ಕಲಬುರಗಿಯ ವೀರಣ್ಣ ಶಿಲ್ಪಿ (ಸಂಪ್ರದಾಯ ಶಿಲ್ಪ), ಬೆಂಗಳೂರಿನ ಶಾಂತಮಣಿ ಎಂ. (ಸಮಕಾಲೀನ ಶಿಲ್ಪ) ಹಾಗೂ ದಾವಣಗೆರೆಯ ಟಿ. ಶ್ರೀನಿವಾಸ್ (ಸಿಮೆಂಟ್ ಶಿಲ್ಪ) ಭಾಜನರಾಗಿದ್ದಾರೆ.

'ಗೌರವ ಪ್ರಶಸ್ತಿ'ಯು ತಲಾ ₹ 50 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

'ಶಿಲ್ಪಶ್ರೀ ಪ್ರಶಸ್ತಿ' ಪುರಸ್ಕೃತರು: 2023ನೇ ಸಾಲಿನ 'ಶಿಲ್ಪಶ್ರೀ ಪ್ರಶಸ್ತಿ'ಗೆ 10 ಶಿಲ್ಪಿಗಳು ಆಯ್ಕೆಯಾಗಿದ್ದಾರೆ. ವಿಜಯಪುರದ ಬಸವರಾಜ್ ಕೆ. ಮಾಯಾಚಾರಿ, ಶಿವಮೊಗ್ಗದ ಶ್ರೀಧರಮೂರ್ತಿ ಕೆ., ಕಲಬುರಗಿಯ ಮಹೇಶ್‌ಕುಮಾರ್ ಡಿ. ತಳವಾರ್, ಮಂಡ್ಯದ ಎಚ್.ಕೆ. ಅಣ್ಣಯ್ಯಚಾರ್, ಧಾರವಾಡದ ಸುರೇಶ್ ಎಸ್. ಕಮ್ಮಾರ, ಬೆಂಗಳೂರಿನ ಆರ್. ವೇಣುಗೋಪಾಲ್, ಚಿತ್ರದುರ್ಗದ ಬಾಬುರಾವ್ ಎಸ್.ಕೆ., ಬೆಂಗಳೂರು ಗ್ರಾಮಾಂತರದ ರಘು ಎಂ., ಹಾವೇರಿಯ ಮರಿಯಪ್ಪ ಡಿ. ಹೊಸ್ಮನೀಯವರ್ ಹಾಗೂ ಮೈಸೂರಿನ ವಿಜಾರ್ ವಿ.ಎಸ್. ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

18ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಬಂದಿರುವ ಕಲಾಕೃತಿಗಳಲ್ಲಿ ಆರು ಶಿಲ್ಪ ಕಲಾಕೃತಿಗಳನ್ನು ಅಕಾಡೆಮಿ ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ. ಮೈಸೂರಿನ ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಬಹುಮಾನಕ್ಕೆ ತುಮಕೂರಿನ ಮಂಜುನಾಥ್ ಆರ್. ಅವರ ಹೊಯ್ಸಳ ಶೈಲಿ ಗಣಪತಿ ಶಿಲ್ಪ ಕಲಾಕೃತಿ, ಮನೋಹರ ಕಾಶಪ್ಪ ಪತ್ತಾರ ವಿಜಯಪುರ ಅವರ ಬಹುಮಾನಕ್ಕೆ ಉಡುಪಿಯ ಪ್ರಕಾಶ ಆಚಾರ್ಯ ಅವರ ಧನ್ವಂತರಿ ಮರದ ಕಲಾಕೃತಿ ಆಯ್ಕೆಯಾಗಿದೆ. ಪ್ರಶಸ್ತಿ ವಿತರಣಾ ಸಮಾರಂಭ ಹಾಗೂ ಶಿಲ್ಪಕಲಾ ಪ್ರದರ್ಶನವನ್ನು ಡಿಸೆಂಬರ್ 3ರಿಂದ ಹಮ್ಮಿಕೊಳ್ಳಲಾಗುವುದು ಎಂದು ಅಕಾಡೆಮಿ ರಿಜಿಸ್ಟ್ರಾರ್ ತಿಳಿಸಿದ್ದಾರೆ.

ಶಿಲ್ಪಕಲಾ ಪ್ರದರ್ಶನ ಬಹುಮಾನಕ್ಕೆ ಆಯ್ಕೆಯಾದವರು

ಶಿಲ್ಪಿಗಳು	ಜಿಲ್ಲೆ	ಶೀರ್ಷಿಕೆ	ಮಾಧ್ಯಮ
ನಾರಾಯಣ	ಮೈಸೂರು	ಹಂಸವಾಹಿನಿ	ಕಲ್ಲು
ಶಶಿಧರ ಆಚಾರ್ಯ	ದಕ್ಷಿಣ ಕನ್ನಡ	ಕನ್ಯಾ ಪರಮೇಶ್ವರಿ	ಮರ
ಎನ್. ಮಹೇಶ್	ಮೈಸೂರು	ಬಾಲರಾಮ	ಮರ
ವಿನ್ಯಾಸ್ ಎಸ್. ರಾಚೇನಹಳ್ಳಿ	ಬೆಂಗಳೂರು	ನಮ್ಮ ಯಾತ್ರೆ	ಟೆರ್‍ರಾಕೋಟಾ
ಹರಿಹರ ಪತ್ತಾರ್ ಪ್ರಮೋದ್‌ಕುಮಾರ್	ವಿಜಯನಗರ	ಗೋಲ್ಡನ್ ನಂದಿ	ಕಂಚು
ಚೇತನ್‌ಕುಮಾರ್ ಹಳ್ಳಿಹೊಳೆ	ಉಡುಪಿ	ಮಧುರ	ಕಲ್ಲು, ರಬ್ಬರ್

ತಾಲ್ಲೂಕು ಕಚೇರಿ ಮುಂದೆ ಶವ ಸುಡಲು ಯತ್ನ

ಸ್ಮಶಾನಕ್ಕೆ ಹೋಗದಂತೆ ಪರಿಶಿಷ್ಟರಿಗೆ ಅಡ್ಡಿ: ಅಧಿಕಾರಿಗಳ ಮಧ್ಯಸ್ಥಿಕೆಯಿಂದ ಶವಸಂಸ್ಕಾರಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ದೇವರಹೊಸಹಳ್ಳಿಯಲ್ಲಿ ಗುರುವಾರ ಮೃತಪಟ್ಟ ಪರಿಶಿಷ್ಟ ಸಮುದಾಯದ ವ್ಯಕ್ತಿಯೊಬ್ಬರ ಅಂತ್ಯಕ್ರಿಯೆ ನಡೆಸದಂತೆ ತಡೆದ ಒಕ್ಕಲಿಗ ಸಮುದಾಯದವರು ಸ್ಮಶಾನ ಜಾಗ ತಮಗೆ ಸೇರಿದ್ದು ಎಂದು ಅಡ್ಡಿಪಡಿಸಿ ವಾಪಸ್ ಕಳಿಸಿದ್ದಾರೆ.

ಇದರಿಂದ ಕೆರಳಿದ ಗ್ರಾಮಸ್ಥರು ಹಾಗೂ ಪರಿಶಿಷ್ಟ ಸಮುದಾಯದವರು ಶವವನ್ನು ಚನ್ನಪಟ್ಟಣ ತಾಲ್ಲೂಕು ಕಚೇರಿ ಎದುರು ಕೊಂಡೊಯ್ದು ಸುಡಲು ಮುಂದಾದರು.

ಜಿಲ್ಲಾಧಿಕಾರಿ ಸ್ಥಳಕ್ಕೆ ಬಂದು ಬೇಡಿಕೆ ಆಲಿಸದಿದ್ದರೆ ಕಚೇರಿ ಎದುರೇ ಅಂತ್ಯಕ್ರಿಯೆ ನಡೆಸುತ್ತೇವೆ ಎಂದು ಪಟ್ಟು ಹಿಡಿದರು. ಸ್ಥಳಕ್ಕೆ ತಹಶೀಲ್ದಾರ್ ನರಸಿಂಹಮೂರ್ತಿ ಮತ್ತು ಪೊಲೀಸರು, ಪ್ರತಿಭಟನಾಕಾರರ ಸಮಸ್ಯೆ ಆಲಿಸಿದರು.

ನಂತರ ಗ್ರಾಮಕ್ಕೆ ಭೇಟಿ ನೀಡಿ ಒಕ್ಕಲಿಗ ಸಮುದಾಯದವರ ಜೊತೆ ಮಾತನಾಡಿ, ಅದೇ ಜಾಗದಲ್ಲಿ ಅಂತ್ಯಕ್ರಿಯೆ ನಡೆಸಲು ಅನುವು ಮಾಡಿಕೊಟ್ಟರು. ಬಳಿಕ ಗ್ರಾಮಸ್ಥರು ಪ್ರತಿಭಟನೆ ನಿಲ್ಲಿಸಿದರು.

'ಗ್ರಾಮದ ಗೋಮಾಳ ಜಾಗವನ್ನು ಹಿಂದಿನಿಂದಲೂ ಸ್ಮಶಾನವಾಗಿ ಬಳಸುತ್ತಿದ್ದರು. ಇತ್ತೀಚೆಗೆ ಅದರ ದುರಸ್ತಿಯಾಗಿ ಬೇರೆಯವರ ಹೆಸರಿನಲ್ಲಿ ಪಹಣಿ ಬಂದಿರುವುದು ಸಮಸ್ಯೆಗೆ ಕಾರಣವಾಗಿದೆ. ಗ್ರಾಮದಲ್ಲಿ ಬೇರೆ ಕಡೆ ಸ್ಮಶಾನಕ್ಕೆ ಜಾಗ ಗುರುತಿಸಿದ್ದರೂ ದಲಿತ ಸಮುದಾಯದವರು ಅದೇ ಜಾಗ ಬೇಕು ಎಂದು ಪಟ್ಟು ಹಿಡಿದಿದ್ದಾರೆ. ಸದ್ಯ ಎರಡೂ ಕಡೆಯವರ ಜೊತೆ ಮಾತನಾಡಿ ಶವದ ಅಂತ್ಯಕ್ರಿಯೆ ಮಾಡಿಸಲಾಗಿದೆ. ಸದರಿ ಜಾಗದ ಮೂಲ ದಾಖಲೆಗಳನ್ನು ಪರಿಶೀಲಿಸಿ ಸಮಸ್ಯೆಯನ್ನು ಬಗೆಹರಿಸಲಾಗುವುದು' ಎಂದು ತಹಶೀಲ್ದಾರ್ ನರಸಿಂಹಮೂರ್ತಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಚನ್ನಪಟ್ಟಣ ತಾಲ್ಲೂಕಿನ ದೇವರಹೊಸಹಳ್ಳಿಯ ಪರಿಶಿಷ್ಟ ಸಮುದಾಯದವರು ತಾಲ್ಲೂಕು ಕಚೇರಿ ಎದುರು ಶವದೊಂದಿಗೆ ಪ್ರತಿಭಟನೆ ನಡೆಸಿದರು

'ಅಧಿಕಾರಿಗಳ ಅವಾಂತರ'

'ಅಪಘಾತದಲ್ಲಿ ಮೃತಪಟ್ಟ ಗ್ರಾಮದ ರಾಜೇಶ ಅವರ ಶವವನ್ನು ಅಂತ್ಯಸಂಸ್ಕಾರಕ್ಕಾಗಿ ಸ್ಮಶಾನಕ್ಕೆ ತೆಗೆದುಕೊಂಡು ಹೋದಾಗ ಒಕ್ಕಲಿಗ ಸಮುದಾಯದ ಸಿದ್ದಲಿಂಗ, ಮಹೇಶ, ರವಿ ಎಂಬುವರು ಅಡ್ಡಿಪಡಿಸಿದರು. ಈ ಜಾಗ ನಮಗೆ ಸೇರಿದ್ದು ಬೇರೆ ಕಡೆ ಅಂತ್ಯಕ್ರಿಯೆ ನಡೆಸಿ ಎಂದು ವಾಪಸ್ ಕಳಿಸಿದರು' ಎಂದು ದಲಿತ ಮುಖಂಡ ಶೇಖರ್ ಹೇಳಿದರು.

'ಸರ್ವೆ ನಂ. 18ರಲ್ಲಿರುವ (ಹೊಸ ಸರ್ವೆ ನಂ. 115) ಒಂದು ಎಕರೆ 20 ಗುಂಟೆ ಸರ್ಕಾರಿ ಗೋಮಾಳ ಜಾಗದಲ್ಲಿ ಹಿಂದಿನಿಂದಲೂ ಪರಿಶಿಷ್ಟ ಜಾತಿಯವರು ಅಂತ್ಯಕ್ರಿಯೆ ನಡೆಸುತ್ತಾ ಬಂದಿದ್ದಾರೆ. ಇತ್ತೀಚೆಗೆ ಸ್ಮಶಾನ ಜಾಗದ ಪೋಡಿ ದುರಸ್ತಿ ಮಾಡಿದ ಅಧಿಕಾರಿಗಳು, ಲೋಕೇಶ್ ಎಂಬುವವರ ಹೆಸರಿನಲ್ಲಿ ಆ ಜಾಗದ ಪಹಣಿ ಮಾಡಿದ್ದಾರೆ. ಇದರಿಂದಾಗಿ ಸ್ಮಶಾನ ಸಮಸ್ಯೆ ಉದ್ಭವಿಸಿದ್ದು, ದಲಿತರಿಗೆ ಸ್ಮಶಾನ ಇಲ್ಲವಾಗಿದೆ' ಎಂದರು.

ಕೋಣನೂರಿನಲ್ಲಿ ಯುವತಿಯ ಪಾಲಕರಿಂದ ಕೃತ್ಯ

ಪ್ರೇಮ ವಿವಾಹ: ವ್ಯಕ್ತಿ ಕೊಲೆ

ಪ್ರಜಾವಾಣಿ ವಾರ್ತೆ

ಸಿರಿಗೆರೆ (ಚಿತ್ರದುರ್ಗ ಜಿಲ್ಲೆ): ಪತ್ನಿಯ ಆತ್ಮಹತ್ಯೆ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಒಳಗಾಗಿ, ಜಾಮೀನು ಮೇಲೆ ಹೊರಗಿದ್ದ ವ್ಯಕ್ತಿ ಮತ್ತೊಬ್ಬ ಯುವತಿಯೊಂದಿಗೆ ಪ್ರೇಮ ವಿವಾಹವಾದ ಕಾರಣ ಯುವತಿಯ ಪಾಲಕರು ಮತ್ತಿತರರು ಹೊಡೆದು ಕೊಂದ ಘಟನೆ ಇಲ್ಲಿನ ಕೋಣನೂರು ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದೆ.

ಮಂಜುನಾಥ್ (43) ಕೊಲೆಯಾದ ವ್ಯಕ್ತಿ. ಘಟನೆಯಲ್ಲಿ ಮಂಜುನಾಥ್ ಅವರ ಪತ್ನಿ ಚಂದ್ರಮ್ಮ, ತಾಯಿ ಅನುಸೂಯಮ್ಮ ಗಂಭೀರವಾಗಿ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಾಗಿದ್ದಾರೆ. ಘಟನೆ ಸಂಬಂಧ ಗ್ರಾಮದ 18 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, 6 ಜನರನ್ನು ಬಂಧಿಸಲಾಗಿದೆ.

ಮಂಜುನಾಥ್ 5 ವರ್ಷದ ಹಿಂದೆ ಶಿಲ್ಪಾ ಎಂಬುವವರನ್ನು ಮದುವೆಯಾಗಿದ್ದರು. ಜೀವನದಲ್ಲಿ ಜಿಗುಪ್ಸೆ ಹೊಂದಿ ಆತ್ಮಹತ್ಯೆ ಮಾಡಿಕೊಂಡಿದ್ದ ಶಿಲ್ಪಾ, ತನ್ನ ಸಾವಿಗೆ ಪತಿ ಮಂಜುನಾಥ್ ಕಾರಣ ಎಂದು ಪತ್ರ ಬರೆದಿಟ್ಟಿದ್ದರು. ಆ ಪತ್ರವನ್ನಾಧರಿಸಿ ದಾಖಲಿಸಿದ ಪ್ರಕರಣದಲ್ಲಿ ಮಂಜುನಾಥ್‌ಗೆ 6 ತಿಂಗಳು ಶಿಕ್ಷೆಯಾಗಿತ್ತು. ಅವರು ಜಾಮೀನು ಪಡೆದು ಗ್ರಾಮಕ್ಕೆ ಮರಳಿ ಬಂದಿದ್ದರು. ನಂತರ ಮಂಜುನಾಥ್ ಅದೇ ಗ್ರಾಮದ ಜಗದೀಶ್–ಚಂದ್ರಮ್ಮ ಅವರ ಪುತ್ರಿ ರಕ್ಷಿತಾ (19) ಜೊತೆ ಸಲುಗೆ ಬೆಳೆಸಿಕೊಂಡಿದ್ದರು. ಅದು ಪ್ರೀತಿಗೆ ತಿರುಗಿತ್ತು. ಇಬ್ಬರೂ ಅ.7ರಂದು ನಾಯಕನಹಟ್ಟಿ ಬಳಿಯ ಹೊಸಗುಡ್ಡದ ಈಶ್ವರ ದೇವಾಲಯದಲ್ಲಿ ವಿವಾಹ ಮಾಡಿಕೊಂಡಿದ್ದರು. ನಂತರ ದಂಪತಿಯು ಚಿತ್ರದುರ್ಗ ಸಮೀಪದ ಮಲ್ಲಾಪುರದಲ್ಲಿ ವಾಸವಾಗಿದ್ದರು. ಮಂಜುನಾಥ್ ವಿರುದ್ಧ ರಕ್ಷಿತಾ ಪಾಲಕರು ಭರಮಸಾಗರ ಠಾಣೆಯಲ್ಲಿ ಅಪಹರಣ ಪ್ರಕರಣ ದಾಖಲಿಸಿದ್ದರು.

ಎರಡೂ ಕುಟುಂಬಗಳ ನಡುವೆ ರಾಜಿ ಪಂಚಾಯಿತಿ ನಡೆಸಿದ್ದು, ಹಿರಿಯರ ಸಮ್ಮುಖದಲ್ಲಿ ಮದುವೆ ಮಾಡಿಕೊಡಲು ರಕ್ಷಿತಾ ಪಾಲಕರು ಒಪ್ಪಿದ್ದರು. ಅಲ್ಲಿಯವರೆಗೂ ಮಗಳನ್ನು ಆಕೆಯ ಪಾಲಕರ ಮನೆಯಲ್ಲೇ ಇರಿಸಿಕೊಳ್ಳುವುದಾಗಿ ಮಾತಾಗಿತ್ತು. ಮದುವೆ ಬಗ್ಗೆ ಮಾತನಾಡಲೆಂದು ಮಂಜುನಾಥ್ ಬುಧವಾರ ಕೋಣನೂರು ಗ್ರಾಮಕ್ಕೆ ತೆರಳಿದ್ದರು.

ಮಂಜುನಾಥ್ ವಿರುದ್ಧ ಆಕ್ರೋಶ ಹೊಂದಿದ್ದ ರಕ್ಷಿತಾ ಪಾಲಕರು ಏಕಾಏಕಿ ಆತನ ಮನೆ ಹಾರಿ, ಕಬ್ಬಿಣದ ರಾಡ್ ಮುಂತಾದ ಆಯುಧಗಳಿಂದ ಮಂಜುನಾಥ್ ಮೇಲೆ ಹಲ್ಲೆ ನಡೆಸಿದ್ದಾರೆ. ಇದನ್ನು ತಡೆಯಲು ಮುಂದಾದ ಪಾಲಕರ ಮೇಲೂ ಹಲ್ಲೆ ಮಾಡಿದ್ದಾರೆ. ತೀವ್ರ ಗಾಯಗೊಂಡಿದ್ದ ಮಂಜುನಾಥ್ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಭರಮಸಾಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವತಿ ದುಂಬಾಲು: ಜೈಲಿನಿಂದ ಹೊರಬಂದಿದ್ದ ಮಂಜುನಾಥ್‌ಗೆ ತನ್ನನ್ನು ಮದುವೆಯಾಗುವಂತೆ ಯುವತಿ ರಕ್ಷಿತಾ ದುಂಬಾಲು ಬಿದ್ದಿದ್ದಳು. 'ನನಗೆ ನೀನೇ ಬೇಕು ಮದುವೆಯಾಗು' ಎಂದು ಆಕೆ ಪಟ್ಟು ಹಿಡಿದಿದ್ದಳು ಎಂಬ ವಿಷಯ ಇಬ್ಬರ ನಡುವಿನ ಆಡಿಯೊ ಸಂಭಾಷಣೆ ಮೂಲಕ ಗೊತ್ತಾಗಿದೆ. 'ಯುವತಿಯ ಪಾಲಕರಾದ ಜಗದೀಶ್, ಚಂದ್ರಮ್ಮ, ಇತರ ಪ್ರಮುಖ ಆರೋಪಿಗಳು ತಲೆ ಮರೆಸಿಕೊಂಡಿದ್ದು, ಇತರ 6 ಆರೋಪಿಗಳನ್ನು ಬಂಧಿಸಲಾಗಿದೆ. ಉಳಿದವರಿಗೆ ಶೋಧ ನಡೆದಿದೆ' ಎಂದು ಎಸ್‌ಪಿ ರಂಜಿತ್ ಕುಮಾರ್ ಬಂಡಾರು ತಿಳಿಸಿದರು.

ತಲೆದಂಡದ ಪ್ರಶ್ನೆಯೇ ಇಲ್ಲ: ತಿಮ್ಮಾಪುರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ತಲೆದಂಡದ ಪ್ರಶ್ನೆಯೇ ಬರುವುದಿಲ್ಲ. ನಾನು ತಪ್ಪು ಮಾಡಿಲ್ಲ. ಏನಾದರೂ ಇದ್ದರೆ ಅದನ್ನು ಎದುರಿಸುತ್ತೇನೆ. ಹಿಂದೆಯೂ ಅಬಕಾರಿ ಮಂತ್ರಿ ಆಗಿದ್ದವರ ಮೇಲೆ ಇಂತಹ ಆರೋಪಗಳು ಬಂದಿದ್ದವು. ಎಲ್ಲ ಮಂತ್ರಿಗಳ ಮೇಲೆಯೂ ಆರೋಪ ಬಂದಿದೆ' ಎಂದು ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರ ಹೇಳಿದರು.

ಆರ್‌.ಬಿ. ತಿಮ್ಮಾಪುರ

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅಬಕಾರಿ ಇಲಾಖೆ ಮೇಲೆ ಇಂತಹ ಆರೋಪಗಳು ಆಗಾಗ ಕೇಳಿ ಬರುತ್ತವೆ. ಇಲಾಖೆಯಲ್ಲಿ ಕೆಲವು ವಿಚಾರಗಳನ್ನು ಸರಿ ಮಾಡಬೇಕು. ಅದನ್ನು ಮಾಡುತ್ತೇನೆ' ಎಂದರು.

'ಲಂಚಕ್ಕೆ ಬೇಡಿಕೆ ಇಟ್ಟ ಆರೋಪ ಎದುರಿಸುತ್ತಿರುವ ಇಲಾಖೆಯ ಅಧಿಕಾರಿಗಳನ್ನು ಅಮಾನತು ಮಾಡಿ, ಇಲಾಖಾ ತನಿಖೆಗೆ ಆದೇಶ ನೀಡಲಾಗುವುದು' ಎಂದು ಹೇಳಿದರು. 'ಇಲಾಖೆಯಲ್ಲಿ ಕೆಲವು ಬದಲಾವಣೆಗಳು ಆಗಬೇಕು. ವರ್ಗಾವಣೆಗೆ ಕೌನ್ಸೆಲಿಂಗ್ ವ್ಯವಸ್ಥೆ ತರಲು ಉದ್ದೇಶಿಸಲಾಗಿದೆ. ಮದ್ಯದಂಗಡಿಗಳಿಗೆ ಅನುಮತಿ ನೀಡುವ ವಿಚಾರದಲ್ಲಿಯೂ ಕೆಲವು ಗೊಂದಲಗಳಿವೆ. ಈ ಎಲ್ಲ ವಿಚಾರಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ' ಎಂದರು.

'ಲಂಚ ಕೇಳಿದ ಆಡಿಯೊ ಬಿಡುಗಡೆಯಾಗಿದೆ'

'ಅಬಕಾರಿ ಇಲಾಖೆಯಲ್ಲಿ ಪರವಾನಗಿಗೆ ಅರ್ಜಿ ಸಲ್ಲಿಸಿದಾಗ ಲಂಚ ಕೇಳಿದ ಆಡಿಯೊ ಈಗ ಬಿಡುಗಡೆ ಆಗಿದೆ. ಕಾಂಗ್ರೆಸ್ ಕಾರ್ಯಕರ್ತ ಆಗಿರುವುದರಿಂದ ಶೇ 50 ರಿಯಾಯಿತಿ ಎಂದು ಅಧಿಕಾರಿ ಹೇಳಿದ್ದಾರೆ. ಭ್ರಷ್ಟಾಚಾರದ ವಿರುದ್ಧವೂ ಬೆಳಗಾವಿ ಅಧಿವೇಶನದಲ್ಲಿ ಹೋರಾಟ ಮಾಡುತ್ತೇವೆ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಭ್ರಷ್ಟಾಚಾರ ನಡೆದಿರುವುದಕ್ಕೆ ಎಲ್ಲ ಸಾಕ್ಷ್ಯ ಇದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ತೆರೆದ ಪುಸ್ತಕ ಎಂದು ಹೇಳುತ್ತಿದ್ದಾರೆ. ದಾಖಲೆ ನೀಡಿದರೆ ರಾಜೀನಾಮೆ ನೀಡುತ್ತೇನೆ ಎಂದೂ ಅವರು ಹೇಳಿದ್ದರು. ಈಗ ಅವರು ರಾಜೀನಾಮೆ ನೀಡಲಿ' ಎಂದು ಆಗ್ರಹಿಸಿದರು.

ಮಂತ್ರಾಲಯ: ₹3.92 ಕೋಟಿ ಕಾಣಿಕೆ

ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದ ಹುಂಡಿಯಲ್ಲಿನ ಕಾಣಿಕೆ ಹಣವನ್ನು ಗುರುವಾರ ಎಣಿಕೆ ಮಾಡಲಾಗಿದ್ದು, ₹3.92 ಕೋಟಿ ಕಾಣಿಕೆ ಸಂಗ್ರಹವಾಗಿದೆ.

ಕಳೆದ 31 ದಿನಗಳಲ್ಲಿ ರಾಘವೇಂದ್ರ ಸ್ವಾಮಿಯ ಹುಂಡಿಯಲ್ಲಿ ಭಕ್ತರು ಹಾಕಿರುವ ಕಾಣಿಕೆ ಹಣವನ್ನು ಗುರುವಾರ ಬೆಳಿಗ್ಗೆಯಿಂದಲೇ ಎಣಿಕೆ ಮಾಡಲಾಯಿತು. ಶ್ರೀಮಠದ ಸಿಬ್ಬಂದಿ ಹಾಗೂ ಭಕ್ತರು, ಸೇವಾಕರ್ತರು ಎಣಿಕೆಯಲ್ಲಿ ಪಾಲ್ಗೊಂಡಿದ್ದರು.

₹3,83,93,760 ಮೊತ್ತದ ನೋಟುಗಳು, ₹8,65,180 ಮೊತ್ತದ ನಾಣ್ಯಗಳು ಸೇರಿ ಒಟ್ಟು ₹3,92,58,940 ಹುಂಡಿಯಲ್ಲಿ ಸಂಗ್ರಹವಾಗಿವೆ.

ಬಾರ್ ಲೈಸೆನ್ಸ್: ₹20 ಲಕ್ಷ ಲಂಚಕ್ಕೆ ಬೇಡಿಕೆ

ಒಂದನೇ ಪುಟದಿಂದ...

ಅಧಿಕಾರಿಗಳು ವಿನಾಕಾರಣ ವಿಳಂಬ ಮಾಡಿ, ನಂತರ ₹40 ಲಕ್ಷ ಲಂಚ ಕೇಳಿದ್ದರು. ಅದಕ್ಕೆ ಒಪ್ಪದಿದ್ದಾಗ, ಕನಿಷ್ಠ ₹20 ಲಕ್ಷ ಕೊಡಬೇಕೆಂದು ಕೇಳಿದ್ದರು' ಎಂದು ಆರೋಪಿಸಲಾಗಿದೆ.

'ಮೃಷ್ಟಾನ್ನ ಬೇಡ, ಗೃಹಲಕ್ಷ್ಮೀಯಾದರೂ ಕೊಡು. ಫಸ್ಟ್, ಸೆಕೆಂಡ್ ಪ್ಯಾಕೇಜ್ ಬೇಡ, ಮೂರನೇ ಹಂತದ ಪ್ಯಾಕೇಜ್ ಕೊಡು. ಅದರಲ್ಲಿ ಅಧೀನ ಅಧಿಕಾರಿಗಳು, ಸಿಬ್ಬಂದಿಗೂಕೊಡಬೇಕು' ಎಂದು ಅಬಕಾರಿ ಡಿ.ಸಿ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎನ್ನಲಾದ ಆಡಿಯೊವನ್ನು ಪುನೀತ್ ಅವರು ಲೋಕಾಯುಕ್ತ ಪೊಲೀಸರಿಗೆ ಸಲ್ಲಿಸಿದ್ದಾರೆ ಎನ್ನಲಾಗುತ್ತಿದೆ. ಅಬಕಾರಿ ಅಧಿಕಾರಿಗಳ ವಿಳಂಬ ಧೋರಣೆ ಮತ್ತು ಲಂಚಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕೆಂದು ಪುನೀತ್ ನಾಲ್ಕು ಪುಟಗಳ ದೂರನ್ನು ಲೋಕಾಯುಕ್ತ ಪೊಲೀಸರಿಗೆ ಸಲ್ಲಿಸಿದ್ದಾರೆ.

ಅಬಕಾರಿ ಡಿ.ಸಿ ರಜೆ?

ದೂರು ನೀಡಿದ ಬೆನ್ನಲ್ಲೇ, ಅಬಕಾರಿ ಡಿ.ಸಿ ರವಿಶಂಕರ್ ಡಿ.2ರವರೆಗೆ ರಜೆ ಪಡೆದಿದ್ದಾರೆ ಎಂದು ತಿಳಿದು ಬಂದಿದೆ. ಪ್ರತಿಕ್ರಿಯೆ ಪಡೆಯಲು ಅವರು ಲಭ್ಯರಾಗಿಲ್ಲ.

ಬಿಎಸ್‌ವೈ ವಿರುದ್ಧ ತನಿಖಾಸ್ತ್ರ

ಒಂದನೇ ಪುಟದಿಂದ....

ಈ ವಿಷಯದ ಕುರಿತು ಸಂಪುಟ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ಮಾಡಲಾಯಿತು. 2021 ಏ.23ರ ತೀರ್ಮಾನ ವಾಪಸ್ ಪಡೆದು, ದೂರನ್ನು ಪುನರ್ ಪರಿಶೀಲಿಸಿ ತನಿಖೆಗೆ ಪೂರ್ವಾನುಮತಿ ನೀಡಬೇಕೆಂದು ರಾಜ್ಯಪಾಲರಿಗೆ ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಲಾಯಿತು ಎಂದರು.

ಪ್ರಕರಣವೇನು?: ಬೆಂಗಳೂರಿನ ಬಿದರಹಳ್ಳಿ ಹೋಬಳಿಯ ಕೊಡಸಪುರ ಸರ್ವೆ ನಂಬರ್ 22 ಮತ್ತು 23ರಲ್ಲಿ 1 ಬಿಎಚ್‌ಕೆ ಮತ್ತು 3 ಬಿಎಚ್‌ಕೆ ಫ್ಲಾಟ್‌ಗಳನ್ನು ನಿರ್ಮಿಸಲು ಟರ್ನ್‌ಕೀ ಆಧಾರದಲ್ಲಿ 2017ರಲ್ಲಿ ಟೆಂಡರ್ ಕರೆಯಲಾಗಿತ್ತು. ಮೊದಲ ಹಂತದ ನಿರ್ಮಾಣಕ್ಕೆ ₹567 ಕೋಟಿ ಅಂದಾಜು ವೆಚ್ಚ ನಿಗದಿ ಮಾಡಲಾಗಿತ್ತು. ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿ ಪ್ರೈ ಲಿ ಮತ್ತು ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ ಪ್ರೈ ಲಿ ಬಿಡ್ ಸಲ್ಲಿಸಿದ್ದವು. ರಾಮಲಿಂಗಂ ಸಂಸ್ಥೆ ₹666.22 ಕೋಟಿ ನಮೂದಿಸಿತ್ತು. ಈ ಮೊತ್ತ ಅಂದಾಜು ವೆಚ್ಚಕ್ಕಿಂತ ₹99.22 ಕೋಟಿ ಹೆಚ್ಚಾಗಿತ್ತು. ನಾಗಾರ್ಜುನ ₹691.74 ಕೋಟಿ ನಮೂದು ಮಾಡಿತ್ತು. ಇದು ಅಂದಾಜು ವೆಚ್ಚಕ್ಕಿಂತ ₹124.74 ಕೋಟಿ ಹೆಚ್ಚಾಗಿತ್ತು ಎಂದು ಪಾಟೀಲ ವಿವರಿಸಿದರು.

2019ರಲ್ಲಿ ಅಧಿಕಾರಕ್ಕೆ ಬಂದ ಬಿ.ಎಸ್.ಯಡಿಯೂರಪ್ಪ ಅವರು, ಅಂದಿನ ಬಿಡಿಎ ಆಯುಕ್ತ ಜಿ.ಸಿ.ಪ್ರಕಾಶ್ ಅವರ ಮೂಲಕ ರಾಮಲಿಂಗಂ ಸಂಸ್ಥೆಯಿಂದ ₹12 ಕೋಟಿ ಲಂಚ ಕೇಳಿದ್ದರು. ಪ್ರಕಾಶ್ ಅವರ ಪರವಾಗಿ ಕೆ.ರವಿ ಎಂಬುವರು ಲಂಚದ ಹಣ ಪಡೆದಿದ್ದರು. ಲಂಚದ ಹಣ ಕೈ ಬದಲಾವಣೆಯ ಸಂಭಾಷಣೆಯ ಆಡಿಯೊ ಖಾಸಗಿ ಸುದ್ದಿವಾಹಿನಿಯೊಂದರಲ್ಲಿ ಪ್ರಸಾರವಾಗಿತ್ತು. ಆ ಸುದ್ದಿವಾಹಿನಿಯ ಮೇಲೆ ಪೊಲೀಸ್‌ರು ದಾಳಿ ನಡೆಸಿದ್ದರು. ಪ್ರಕರಣದ ಎರಡನೇ ಆರೋಪಿ ಬಿ.ವೈ. ವಿಜಯೇಂದ್ರ ಅವರು ತಮಗೆ ಆಯುಕ್ತರಿಂದ ₹12 ಕೋಟಿ ತಲುಪಿಲ್ಲ ಎಂದು ಹೇಳಿರುವುದು ಆಡಿಯೋದಲ್ಲಿ ದಾಖಲಾಗಿತ್ತು ಎಂದು ಅಬ್ರಹಾಂ ದೂರಿನಲ್ಲಿ ಹೇಳಿದ್ದರು. ಈ ಸಂಬಂಧ ಅಬ್ರಹಾಂ ಅವರು ಮೊದಲಿಗೆ ಎಸಿಬಿಗೆ ದೂರು ಸಲ್ಲಿಸಿದ್ದರು. ಆದರೆ, ಎಸಿಬಿ ಎಫ್‌ಐಆರ್ ದಾಖಲಿಸಿರಲಿಲ್ಲ. ಅದೇ ಸಂದರ್ಭದಲ್ಲಿ ಅವರು ರಾಜ್ಯಪಾಲರಿಗೂ ದೂರು ಸಲ್ಲಿಸಿ, ಯಡಿಯೂರಪ್ಪ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ತನಿಖೆ ನಡೆಸಲು ಪೂರ್ವಾನುಮತಿ ನೀಡುವಂತೆ ದೂರು ನೀಡಿದ್ದರು. ರಾಜ್ಯಪಾಲರು ಅದನ್ನು ತಿರಸ್ಕರಿಸಿದ್ದರು.

ಈಗ ಪೂರ್ವಾನುಮತಿ ಏಕೆ?: ಈಗ ಯಡಿಯೂರಪ್ಪ ಶಾಸಕ ಅಲ್ಲದಿದ್ದರೂ, ಹಿಂದೆ ಮುಖ್ಯಮಂತ್ರಿ ಆಗಿದ್ದಾಗ ಈ ನಿರ್ಣಯ ಕೈಗೊಂಡಿದ್ದರಿಂದ ರಾಜ್ಯಪಾಲರ ಅನುಮತಿ ಅಗತ್ಯವಿದೆ ಎಂದು ಎಚ್. ಕೆ.ಪಾಟೀಲ ಅವರು ಪ್ರತಿಕ್ರಿಯಿಸಿದರು.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_MARUTI SUPER CARRY
YOM – 2020
Reg No – KA04AC4896
2) CB_ASHOK LEYLAND 3718IL
YOM – 2018
Reg No – KA37B0189
3) CB_CITYRIDE_40_1_SCHOOL_BUS_TATAMOTORS
YOM – 2023
Reg No – KA07B7935
4) CB_SUPRO_MINI_TRUCK
YOM – 2023
Reg No – KA09AA8442
5) CB_MAH_JEETO
YOM – 2023
Reg No – KA469662
6) CB_TATA_LPT_1616_GOODS
YOM – -
Reg No – KA707792
7) CB_PRO_2095_B_14_N_AB_PKN9PS_HSD_EICHR_VECV
YOM – 2022
Reg No – KA01AM9825
8) CB_EICHER_PRO_2110_E_BS_6_CAB_CHASSIS
YOM – 2022
Reg No – KA11C2685
9) CB_Ashok Leyland Dost GOODS
YOM – 2024
Reg No – KA09AA9716
10) CB_Ashok Leyland Dost GOODS
YOM – 2023
Reg No – KA19AE3622
11) CB_EICHER_PRO_3018_SLP_HSD_BS6_22FT_FBT
YOM – 2024
Reg No – KA22AA5212
12) CB_JEETO_X_7_16
YOM – 2023
Reg No – KA09AA6284

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 29.11.2024 (Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Arunlaxman Kokare
Kotak Mahindra Bank Ltd.
Contact / 080 - 61564249

THE FEDERAL BANK LIMITED
Regd. Office: Aluva, Kerala.

ZONAL OFFICE: 2nd Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2024-25 **NOTICE FOR PRIVATE SALE OF GOLD** 28/11/2024

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-12-2024 as shown below:

Br. Bangalore/St Marks Road: No. 9, Halcyon Complex, St. Marks Road, Bangalore-560 001, Ph No. 080-32994454 :- 11046100117431,11046400010666,11046100117977,11046100118421,11046100115583,11046400010682,11046100118199,11046100118355,11046400012696,11046400013868,11046400012654,11046100118363,11046100118405,11046400012068,11046100118207,1046100118371.

Br. Bangalore/Gandhi Nagar: P B No. 9981, No. 24, 2Nd Cross, Gandhi Nagar, Bangalore- 560 009, Ph No. 080-22385208:- 11896400030613,11896400033385,11896400035380,11896400035794,11896400035810,11896400036180,11896400036354,11896400036586,11896400037196,11896400037204,11896400037535,11896400034078,11896400034094,11896400038194.

Br. Bangalore/Rajaji Nagar : No. 60/60, Raj Chambers, Dr. Rajkumar Road, 2nd Block, Rajaji Nagar, Bangalore-560 010, Ph No. 080-23522007:- 13346400260669,13346400269025,13346400272490,13346400272508,13346400272516,13346400274181,13346400246486,13346400249852,13346400249860,13346400268928,13346400269108,13346400274496,13346400274504,13346400274512,13346400234953,13346400235216,13346400239085,13346400254100,13346400266872,13346400266880,13346400262970,13346400264158,13346400264166,13346400260503,13346400254183.

Br. Bangalore/R T Nagar : No.20, Ist Main Road, 108 'B' Bus Station, Ganga Nagar, R T Nagar P O, Bangalore- 560 032, Ph no. 080-23434258 :- 14726100217128,14726400058297,14726400072751,14726400075234,14726400044479,14726400062398,14726400072769,14726400076091,14726400045104,14726400062505,14726400073296,14726400076224,14726400045112,14726400062521,14726400073361,14726400076992,14726400050575,14726400063321,14726400073775,14726400077008,14726400053108,14726400066332,14726400073783,14726400077297,14726400053561,14726400066720,14726400073908,14726400077305,14726400056721,14726400067025,14726400073940,14726400077339,14726400057349,14726400067546,14726400074112,14726500013853,14726400057455,14726400072249,14726400075143,14726500013903,14726500014042.

Br. Bangalore/Indiranagar: 315/1, 100 Feet Road, Indiranagar, Bangalore-560 038, Ph No. 080-25212341 :- 15356400051412,15356400054358,15356400047436,15356400052741,15356400045372,15356100089480,15356400048988,15356400057955,15356100088953,15356400042874,15356400053640,15356400058540,15356100088961,15356400046826,15356400057922,15356400052360,15356100088979,15356400046834,15356400044961,15356400057310,15356400046321,15356400051479,15356400046479,15356400057328,15356400046776,15356400051560,15356400052071,15356400039771,15356400049887,15356400027651,15356400053244,15356400051479,15356400046586,15356400047428,15356400047329,15356400051560,15356400052790,15356400053053.

Br. Bangalore/Banaswadi: No 13, Banaswadi Main Road, Bangalore- 560 043 Ph No. 080-25420700 :- 14716100299614,14716400034703,14716400033234,14716400029471,14716400033630,14716400034711,14716400032699,14716100304752,14716400034091,14716400024589,14716100299705,14716500002642,14716400036104,14716100302228,14716100305981,14716500002675,14716400036112,14716400035551,14716400021429,14716500002683,14716400036195,14716400037193,14716400032863,14716400036344,14716400036765,14716500002501,14716400035171,14716100300123,14716100297998,14716100300230,14716400035197,14716100296859,14716100304356,14716400031212,14716400035866,14716500002766,14716400022856,14716400034760,14716400033101,14716400036948,14716400034315.

Br. Bangalore/Jalahalli: 17/1, Savithri, S M Road, Jalahalli West, Bangalore-560 015, Ph no. 080-28372201:- 15826100624569,15826100634659,15826400130069,15826400130127,15826400134996,15826400135316,15826100627273,15826400132818,15826400131802,15826100629964,15826100624643,15826400133535,15826100624809,15826500013355,15826400135415,15826100612853,15826400134400,15826100601815,15826100602029,15826100602060,15826100623355,15826100625947,15826100625970,15826100626887,15826100630913,15826100628412,15826100613372,15826100633461,15826400136595,15826400129756,15826400131539,15826400133949,15826100629907,15826400137015,15826400128956,15826100614719,15826100630210,15826100635714,15826400134384,15826400134541,15826400134699,15826100624833,15826400124005,15826400129368,15826400135795,15826100612580,15826100631671,15826400134970,15826400135241,15826400126042,15826100602078,15826100602102,15826100602110,15826400118106,15826400128048,15826100629360,15826400124120,15826400130325,15826400130929,15826400124435,15826400135126,15826400128949,15826100633305,15826100626796,15826100627158.

Br. Bangalore/Vignana Nagar: No. 124, S R Plaza, Vignana Nagara, Main Road, Bangalore- 560 037 Ph No. 080-25348901 :- 16296400061210,16296400061863,16296400061434,16296400065765,16296400067514,16296400068314,16296400039901,16296400065518,16296400026296,16296400029423,16296400029431,16296400029449,16296400062697,16296400062705,16296400062937,16296400062945,16296400062952,16296400062960,16296400063034,16296400063927,16296400063604,16296400067191,16296400060907,16296400068322,16296400069734,16296400069981.

Br. Bangalore/Vijayanagar: Ground Floor of TRS Arcade, #3, 1st main road, Income Tax Layout, Opposite to AM Hospital, Vijayanagar, Bangalore-560 040 Ph No. 080-23159121 :- 16436400091599,16436400095111,16436400086078,16436400087936,16436400087357,16436400095814,16436400110324,16436400094734,16436400083190,16436400105662,16436400082051,16436400098768,16436400099527,16436400101158,16436400102271,16436400106066,16436500005051, 16436400098602,16436500004716,16436500005069.

Br. Chikkaballapur: No 1153/3, BB Road, Chikkaballapur, Karnataka- 562 101 Ph No. 08156-274088 :- 20216400046999.20216400047005.

Br. Chikkajala: Sri Byraveshwara Complex, No 82/3, Chikkajala Village, Chikkajala Post, KIAL Road, Bangalore North Taluk, Bangalore- 562 157, Ph. 080-28467032 :- 20866400048211,20866400048328,20866400048351,20866400048450,20866400048815,20866400048492.

Br. Doddaballapur: D Cross Road, Doddaballapur, Bangalore Rural- 561 203 Ph No.080-27622105 :- 16315500018084,16315500019173,16316400081636,16316400096071,16316400111946,16316400096691,16316400104933.

Br. Devanahalli: 135/9, Next To Corporation Bank, D B Cross, Devanahalli , Bangalore Rural- 562 110, Ph No. 080 27683906 :- 15296400164767,15296400147622,15296400164494,15296400163710,15296400163231,15296400163256,15296400162837,15296400162811,15296400088826,15296400162548,15296400162209,15296400161961,15296400161862,15296400143704,15296400148166,15296400160062,15296400158660,15296400158678,15296400157902,15296400171499,15296400118243.

Br. Hirandahalli: Sy. No.81/1, Hirandahalli Main Road, Opp. Aswathakatte, Virgonagar P O, Bangalore- 560 049 Ph No:8867121675 :- 21636400076671,21636400086167,21636400071938,21636400086035,21636400074841,21636400085318,21636400086464,21636400069676,21636400086787,21636400085417. **Br. Jangamakote Cross: No. 295, Hosapet Village, Jangamakote Cross, Shidlaghtta (Tq), Chikballapur-562 102 Ph;0815825222 2:-** 21696400039707,21696400041166,21696400032918,21696400030664,21696400040770,21696400035127,21696400040838,21696400039715,21696400035044,21696400035739,21696400035697,21696400039681,21696400040358,21696400035846,21696400039277.

Br. Kunigal: KRS Agrahara, BM Road, Kunigal, Tumkur- 572 130 Ph no. 08132221111 :- 20706400114284,20706400105944,20706400105878,20706400068407,20706400091508,20706400109375.

Br. Nelamangala: Paramanna Layout, B H Road, Nelamangala, Bangalore Rural, Karnataka- 562 123 Ph no.0 80-27722251 :- 15536400123747,15536400124455,15536400119166.

Br.Tumkur: Amogh Mansion, KR Extension, Tumkur-572101 Ph:0816-2255470:- 16036400086522,16036400095762,16036400079261,16036400096489,16036400092124,16036400094948,16036400097123,16036400097594,16036400081739,16036400099665,16036400099467,16036400091779,16036400090615,16036400091456,16036400092488,16036400092843,16036400087694.

Br. Tiptur: 156 & 157 , Opp Janata Deluxe lodge, Vinayaka Nagara, Off B H Road, Tiptur- 572 201 Ph: 083134250114 :- 19906400031727,19906400031669,19906400033269,19906400034440,19906400023690.

Br. Bangalore / Thanisandra : GF, No.89/1, Thanisandra, K Narayanapura Road, Dr.S R K Nagar PO, Bangalore- 560 077 :- 23886400005844,23886400006008,23886400006784,23886400005851,23886400005471,23886400005273.

Br. Bangalore / Basaveshwaranagar : #33, 1st main road, 3rd Stage, 4th block, West of Chord Road, Basaveshwaranagar, Bangalore- 560 079:- 24666400003794,24666400003323,24666400000238,24666400002390,24666400003802,24666400004586,24666400002085,24666400002408,24666400003919,24666400004651,24666400001467,24666400001194,24666400003893,24666400001905,24666400001053,24666400003364,24666400004008,24666400004610,24666400001376,24666400001921,24666400004107,24666400004750,24666400001384,24666400002572,24666400004156,24666400002549,24666400001574,24666400002978,24666400004321,24666400002614,24666400001673,24666400003398,24666400003216,24666400002812,24666400002291,24666400003406,24666400003232,24666400002903,24666400005013,24666400004115,24666400006185,24666400003018,24666400001020,24666400004164,24666400006656,24666400006425,24666400001145,24666400005674,24666400007175,24666400006821,24666400000816,24666400005393,24666400007266,24666400007290,24666400002242,24666400001095.

Bangalore 28-11-2024 Vice President & Zonal Head

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

MAJOR AKSHAY GIRISH
51 Engineer Regiment
8th Year Remembrance

Led his team and courageously sacrificed his life to save many people from terrorists in Nagrota on 29.11.2016.
Immortal Patriot.
Forever Thirty. Always Missed.
Major Akshay Girish Memorial Trust
https://majorakshaytrust.org/

8ನೇ ವರ್ಷದ ಸವಿನೆನಪು

ಕೆ.ಆರ್. ಆಂಜನಪ್ಪನವರು
ಮಾಜಿ ಛೇರ್ಮನ್
ಜನನ: 1-1-1917 – ಮರಣ: 29-11-2016
ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಚ್ಚ ಹಸಿರು. ನಿಮ್ಮ ನಡೆ, ನುಡಿ ಮತ್ತು ತತ್ವಗಳು ನಮಗೆಲ್ಲ ದಾರಿದೀಪ. ನಿಮ್ಮ ಆತ್ಮಕ್ಕೆ ಶಾಂತಿ ಕೋರುವ
ಪಟೇಲ್ ರಾಮೇಗೌಡರ ಕುಟುಂಬದವರಿಂದ
ಕೋಡಿಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು
ಎ. ಪಾಪಯ್ಯ ಗೌಡ (ಎ.ಜಿ.ಎಸ್. ಆಫೀಸ್) ಮತ್ತು ಮಂಜುನಾಥ್ ಪಿ.ಜಿ
ಫೋನ್: 9342512441, 9845750704

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,274
ಇಂದಿನ ಅಂತ್ಯ	23,914
▼	360
ದಿನದ ಕನಿಷ್ಠ	23,873

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹610
12 ಕ್ಕೆ	₹80
ಮೈಸೂರು	
100ಕ್ಕೆ	₹612

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹455-690
ದ್ವಿತಳಿ (ಬಿ.ವಿ)	₹418-775

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹186
ಆರ್‌ಎಸ್‌ಎಸ್-5	₹180
ಗುಡ್ ಲಾಟ್	₹175

(ಪ್ರತಿ ಕೆ.ಜಿಗೆ)

ನ್ಯಾಯಸಮ್ಮತವಲ್ಲದ ವ್ಯಾಪಾರ: ವಿಂಜೊ ಗೇಮ್ಸ್‌ನಿಂದ ದೂರು

ಗೂಗಲ್ ವಿರುದ್ಧ ಸಿಸಿಐ ತನಿಖೆ

ನವದೆಹಲಿ (ಪಿಟಿಐ): ನ್ಯಾಯ ಸಮ್ಮತವಲ್ಲದ ವ್ಯಾಪಾರ ನಡೆಸಿರುವ ಆರೋಪದ ಮೇರೆಗೆ ಗೂಗಲ್ ಕಂಪನಿ ವಿರುದ್ಧ ಭಾರತೀಯ ಸ್ಪರ್ಧಾತ್ಮಕ ಆಯೋಗವು (ಸಿಸಿಐ) ತನಿಖೆಗೆ ಆದೇಶಿಸಿದೆ.

ಗೂಗಲ್ ಹಾಗೂ ಅದರ ಅಂಗಸಂಸ್ಥೆಗಳು ಪ್ಲೇ ಸ್ಟೋರ್‌ನಲ್ಲಿ ರಿಯಲ್ ಮನಿ ಗೇಮಿಂಗ್ (ಆರ್‌ಎಂಜಿ) ಆ್ಯಪ್‌ಗಳನ್ನು ಪಟ್ಟಿ ಮಾಡುವುದಕ್ಕೆ ಸಂಬಂಧಿಸಿದಂತೆ ಕಾನೂನು ಬಾಹಿರವಾಗಿ ನಡೆದುಕೊಳ್ಳುತ್ತಿವೆ ಎಂದು ವಿಂಜೊ ಗೇಮ್ಸ್, ಆಯೋಗಕ್ಕೆ ದೂರು ಸಲ್ಲಿಸಿದೆ.

ಪ್ಲೇ ಸ್ಟೋರ್‌ನಲ್ಲಿ ಆಯ್ದ ಗೇಮಿಂಗ್ ಗಳಿಗಷ್ಟೇ ಹೆಚ್ಚು ಪ್ರಾಶಸ್ತ್ಯ ನೀಡಲಾಗುತ್ತಿದೆ. ಆ ಮೂಲಕ ಸಮಾನ ನೆಲೆಯಲ್ಲಿ ನಡೆಯಬೇಕಿರುವ ಸ್ಪರ್ಧೆಗೆ ಧಕ್ಕೆ ತರಲಾಗಿದೆ ಎಂದು ಹೇಳಿದೆ.

ಆರ್‌ಎಂಜಿ ಆ್ಯಪ್‌ಗಳ ಡೌನ್‌ಲೋಡ್ ವೇಳೆ ಅವುಗಳ ಬಳಕೆಯಿಂದ ಎದುರಾಗುವ ಸಮಸ್ಯೆ ಮತ್ತು ಹಣ ಪಾವತಿ ಬಗ್ಗೆ ಎಚ್ಚರಿಕೆಯ ಸಂದೇಶ ಪ್ರಕಟಿಸಬೇಕಿದೆ. ಬಳಕೆದಾರರ ಸುರಕ್ಷತೆ ದೃಷ್ಟಿಯಿಂದ ಈ ನಿಯಮ ಪಾಲಿಸಬೇಕಿದೆ ಎಂದು ದೂರಿನಲ್ಲಿ ಹೇಳಿದೆ.

ವರದಿ ಸಲ್ಲಿಕೆಗೆ 60 ದಿನದ ಗಡುವು

ಈ ದೂರನ್ನು ಪರಿಶೀಲಿಸಿರುವ ಆಯೋಗವು, ಸಿಸಿಐ ಕಾಯ್ದೆಯ ಸೆಕ್ಷನ್ 26(1) ಅಡಿ ಸಮಗ್ರವಾಗಿ ತನಿಖೆ ನಡೆಸಿ 60 ದಿನದೊಳಗೆ ವರದಿ ಸಲ್ಲಿಸುವಂತೆ ಆಯೋಗದ ಮಹಾನಿರ್ದೇಶಕರಿಗೆ ಸೂಚಿಸಿದೆ.

ಡಿಎಫ್‌ಎಸ್ ಮತ್ತು ರಮ್ಮಿ ಆ್ಯಪ್ ಹೆಚ್ಚು ಸ್ಪರ್ಧಾತ್ಮಕ ಪ್ರಯೋಜನ ಪಡೆಯುತ್ತಿವೆ. ಇದರಿಂದ ಇತರೆ ಆರ್‌ಎಂಜಿ ಆ್ಯಪ್‌ಗಳಿಗೆ ಅನನುಕೂಲವಾಗಿದೆ ಎಂದು ಆದೇಶದಲ್ಲಿ ಹೇಳಿದೆ.

ಬಳಕೆದಾರರು ಆರ್‌ಎಂಜಿ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡುವ ವೇಳೆ ಎಚ್ಚರಿಕೆಯ ಸಂದೇಶ ಪ್ರಕಟಿಸುತ್ತಿಲ್ಲ. ಗೂಗಲ್‌ನ ಪ್ರಾಯೋಗಿಕ ಕಾರ್ಯಕ್ರಮ, ಜಾಹೀರಾತು ನೀತಿಗಳು ಅಸಮಂಜಸ ಮತ್ತು ಅಸ್ಪಷ್ಟವಾಗಿವೆ ಎಂದು ಹೇಳಿದೆ.

ಅದಾನಿ ಐದು ಕಂಪನಿಗಳ ಷೇರಿನ ಮೌಲ್ಯ ಏರಿಕೆ

ನವದೆಹಲಿ (ಪಿಟಿಐ): ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್ (ಎಜಿಇಎಲ್) ಸೇರಿ ಅದಾನಿ ಸಮೂಹದ ಐದು ಕಂಪನಿಗಳ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಅದಾನಿ ಟೋಟಲ್ ಗ್ಯಾಸ್ ಶೇ 15.69, ಅದಾನಿ ಎನರ್ಜಿ ಸಲ್ಯೂಷನ್ಸ್ ಶೇ 10, ಅದಾನಿ ಗ್ರೀನ್ ಎನರ್ಜಿ ಶೇ 10, ಅದಾನಿ ಪವರ್ ಶೇ 6.95 ಮತ್ತು ಅದಾನಿ ಎಂಟರ್‌ಪ್ರೈಸಸ್ ಷೇರಿನ ಮೌಲ್ಯದಲ್ಲಿ ಶೇ 1.63ರಷ್ಟು ಏರಿಕೆಯಾಗಿದೆ.

ಅದಾನಿ ಪೋರ್ಟ್ಸ್ ಶೇ 2.37, ಎನ್‌ಡಿಟಿವಿ ಶೇ 2.03, ಎಸಿಸಿ ಶೇ 0.75, ಅಂಬುಜಾ ಸಿಮೆಂಟ್ಸ್ ಶೇ 0.48, ಅದಾನಿ ವಿಲ್ಮರ್ ಶೇ 0.44 ಹಾಗೂ ಶಾಂಘಿ ಇಂಡಸ್ಟ್ರಿಸ್ ಷೇರಿನ ಮೌಲ್ಯದಲ್ಲಿ ಶೇ 0.17ರಷ್ಟು ಇಳಿಕೆಯಾಗಿದೆ.

ಸುದ್ದಿ 2 ನಿಮಿಷ

ಷೇರುಪೇಟೆಯಲ್ಲಿ ಕರಡಿ ಕುಣಿತ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಗುರುವಾರ ಕರಡಿ ಕುಣಿತ ಜೋರಾಯಿತು. ಇದರಿಂದ ಸೂಚ್ಯಂಕಗಳು ಶೇ 1.50ರಷ್ಟು ಇಳಿಕೆ ಕಂಡಿವೆ.

ಇನ್ಫೊಸಿಸ್, ರಿಲಯನ್ಸ್ ಇಂಡಸ್ಟ್ರಿಸ್ ಲಿಮಿಟೆಡ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,190 ಅಂಶ ಇಳಿಕೆ ಕಂಡು, 79,043 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 360 ಅಂಶ ಇಳಿಕೆ ಕಂಡು 23,914 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಮಹೀಂದ್ರ ಆ್ಯಂಡ್ ಮಹೀಂದ್ರ, ಇನ್ಫೊಸಿಸ್, ಎಚ್‌ಸಿಎಲ್ ಟೆಕ್ನಾಲಜೀಸ್, ಅದಾನಿ ಪೋರ್ಟ್ಸ್, ಬಜಾಜ್ ಫೈನಾನ್ಸ್, ಟೆಕ್ ಮಹೀಂದ್ರ, ಟೈಟನ್, ಟಿಸಿಎಸ್, ರಿಲಯನ್ಸ್ ಇಂಡಸ್ಟ್ರಿಸ್, ಪವರ್ ಗ್ರಿಡ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಟೆಸ್ಲಾ, ಸ್ಟಾರ್‌ಲಿಂಕ್ ಹೂಡಿಕೆ ಬಗ್ಗೆ ಚರ್ಚೆಸಿಲ್ಲ: ಗೋಯಲ್

ನವದೆಹಲಿ (ಪಿಟಿಐ): 'ಭಾರತದಲ್ಲಿ ಅಮೆರಿಕದ ಉದ್ಯಮಿ ಇಲಾನ್ ಮಸ್ಕ್ ಒಡೆತನದ ಟೆಸ್ಲಾ ಮತ್ತು ಸ್ಟಾರ್‌ಲಿಂಕ್ ಕಂಪನಿಯ ಹೂಡಿಕೆಗೆ ಸಂಬಂಧಿಸಿದಂತೆ ಯಾವುದೇ ಚರ್ಚೆ ನಡೆದಿಲ್ಲ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆಟೊಮೊಬೈಲ್ ವಲಯದಲ್ಲಿ ಟೆಸ್ಲಾ ಹೂಡಿಕೆಯು ಬೃಹತ್ ಕೈಗಾರಿಕಾ ಸಚಿವಾಲಯದ ವ್ಯಾಪ್ತಿಗೆ ಬರುತ್ತದೆ. ಸ್ಟಾರ್‌ಲಿಂಕ್‌ನ ಹೂಡಿಕೆಯು ಬಾಹ್ಯಾಕಾಶ ಇಲಾಖೆಗೆ ಬರುತ್ತದೆ. ಈ ಕಂಪನಿಗಳ ಹೂಡಿಕೆ ವಿಷಯವನ್ನು ಇಬ್ಬರು ಸಚಿವರು ನಿಭಾಯಿಸುತ್ತಾರೆ. ಹಾಗಾಗಿ, ನನಗೆ ಹೆಚ್ಚಿನ ಮಾಹಿತಿ ಇಲ್ಲ' ಎಂದರು.

'ನನಗೆ ತಿಳಿದಿರುವಂತೆ ದೇಶದಲ್ಲಿ ಮಸ್ಕ್ ಅವರು, ಹೂಡಿಕೆ ಮಾಡುವ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ' ಎಂದರು.

ಮಸ್ಕ್ ಅವರು ಭಾರತಕ್ಕೆ ಭೇಟಿ ನೀಡಲಿದ್ದು, ಹೂಡಿಕೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರೊಟ್ಟಿಗೆ ಚರ್ಚಿಸಲಿದ್ದಾರೆ ಎಂದು ಏಪ್ರಿಲ್‌ನಲ್ಲಿ ಸುದ್ದಿ ಹರಿದಾಡಿತ್ತು.

ಬೆಳ್ಳಿ ದರ ₹4,900 ಇಳಿಕೆ

ನವದೆಹಲಿ (ಪಿಟಿಐ): ಆಭರಣ ತಯಾರಕರು ಮತ್ತು ಗ್ರಾಹಕರಿಂದ ಖರೀದಿ ಕಡಿಮೆಯಾಗಿರುವುದರಿಂದ ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹4,900 ಇಳಿಕೆಯಾಗಿದ್ದು, ₹90,900ರಂತೆ ಮಾರಾಟವಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) ₹100 ಕಡಿಮೆಯಾಗಿದ್ದು, ₹78,700 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ಬೆಲೆಯು ₹400 ಇಳಿಕೆಯಾಗಿ, ₹78,300 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

43 ಇಂಚಿನ ಡೋರ್ ಟಿ.ವಿ ಡಿ.1ರಿಂದ ಫ್ಲಿಪ್‌ಕಾರ್ಟ್‌ನಲ್ಲಿ ಲಭ್ಯ

ಅಗ್ಗದ ಟಿ.ವಿಗೆ ತೆರೆದ 'ಬಾಗಿಲು'

• ಎಂ. ಮಹೇಶ

ಮುಂಬೈ: ಸ್ಟ್ರೀಮ್‌ಬಾಕ್ಸ್ ಮೀಡಿಯಾ ಹಾಗೂ ಮೈಕ್ರೊಮ್ಯಾಕ್ಸ್ ಇನ್ಫರ್ಮ್ಯಾಟಿಕ್ಸ್ ಲಿಮಿಟೆಡ್ ಸಹಯೋಗದಡಿ 'ಹಲವು ಚಂದಾದಾರಿಕೆ ಒಳಗೊಂಡಿರುವ 'ಡೋರ್' (ಡಿಒಆರ್) ಸ್ಮಾರ್ಟ್ ಟಿ.ವಿಯನ್ನು ಬಿಡುಗಡೆ ಮಾಡಲಾಯಿತು.

ಇಲ್ಲಿನ ಬಾಂದ್ರಾದಲ್ಲಿರುವ ನೀತಾ ಮುಕೇಶ್ ಅಂಬಾನಿ ಕಲ್ಚರಲ್ ಸೆಂಟರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ, ತಮ್ಮ ಹೊಸ ಯೋಜನೆ ಘೋಷಿಸಿದ ಸ್ಟ್ರೀಮ್‌ಬಾಕ್ಸ್ ಮೀಡಿಯಾ ಸಿಇಒ ಅನುಜ್ ಗಾಂಧಿ ಮತ್ತು ಮೈಕ್ರೊಮ್ಯಾಕ್ಸ್ ಇನ್ಫರ್ಮ್ಯಾಟಿಕ್ಸ್ ಕಂಪನಿಯ ಸಹ ಸಂಸ್ಥಾಪಕ ರಾಹುಲ್ ಶರ್ಮಾ, 'ಡೋರ್', ದೇಶದ ಮೊದಲ ಚಂದಾದಾರಿಕೆ ಟಿ.ವಿ ಸೇವೆ ಆಗಿದೆ. ಹಲವು ಒಟಿಟಿಗಳ ಚಂದಾದಾರಿಕೆಗೆ ಪ್ರತ್ಯೇಕವಾಗಿ ಹಣ ಪಾವತಿಸಿ ಪಡೆದುಕೊಳ್ಳುವ ಅಗತ್ಯ ಇರುವುದಿಲ್ಲ' ಎಂದು ಮಾಹಿತಿ ನೀಡಿದರು.

'43, 55 ಹಾಗೂ 65 ಇಂಚಿನ ಅಳತೆಯ ಟಿ.ವಿಗಳನ್ನು ವಿನ್ಯಾಸಗೊಳಿಸಲಾಗಿದೆ. 43 ಇಂಚಿನ ಟಿ.ವಿಯು ಡಿಸೆಂಬರ್ 1ರಿಂದ ಫ್ಲಿಪ್‌ಕಾರ್ಟ್ ವೇದಿಕೆಯಲ್ಲಿ ಖರೀದಿಗೆ ಲಭ್ಯವಿದೆ. ಶೀಘ್ರವೇ ಟಿ.ವಿ ಮಳಿಗೆಗಳಲ್ಲೂ ದೊರೆಯಲಿದೆ. 55 ಹಾಗೂ 65 ಇಂಚಿನ ಅಳತೆಯ ಟಿ.ವಿಗಳನ್ನು 2025ರಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು' ಎಂದರು.

ಮುಂಬೈನಲ್ಲಿ ಡೋರ್ ಟಿ.ವಿ ಬಿಡುಗಡೆ ಮಾಡಿದ ಮೈಕ್ರೊಮ್ಯಾಕ್ಸ್ ಇನ್ಫರ್ಮ್ಯಾಟಿಕ್ಸ್ ಕಂಪನಿಯ ಸಹ ಸಂಸ್ಥಾಪಕ ರಾಹುಲ್ ಶರ್ಮಾ ಮತ್ತು ಸ್ಟ್ರೀಮ್‌ಬಾಕ್ಸ್ ಮೀಡಿಯಾ ಸಿಇಒ ಅನುಜ್ ಗಾಂಧಿ

'ಏಕ್ ಸೈನ್‌ಇನ್ ಹಾಗೂ ಏಕ್ ಚಂದಾದಾರಿಕೆಯ ಡೋರ್ ಟಿ.ವಿಯು ಪ್ರೈಮ್ ವಿಡಿಯೊ, ಜಿಯೊ ಸಿನಿಮಾ, ಡಿಸ್ನಿ ಹಾಟ್‌ಸ್ಟಾರ್, ಝೀ5, ಸೋನಿ ಲೈವ್, ಯೂಟ್ಯೂಬ್, ಡಿಸ್ಕವರಿ ಫಸ್ಟ್, ಸನ್ ನೆಕ್ಸ್ಟ್, ಹಂಗಾಮ ಸೇರಿ 24+ ಒಟಿಟಿಗಳು ಹಾಗೂ 300ಕ್ಕೂ ಅಧಿಕ ವಾಹಿನಿಗಳನ್ನು ಒಳಗೊಂಡಿರುತ್ತದೆ' ಎಂದರು.

'43 ಇಂಚಿನ ಟಿ.ವಿಗೆ ಮುಂಗಡ ಸಕ್ರಿಯಗೊಳಿಸುವಿಕೆ ಶುಲ್ಕ ₹10,799 (ಪ್ರತಿ ತಿಂಗಳಿಗೆ ₹799 ಚಂದಾದಾರಿಕೆ ಶುಲ್ಕ ಸಹಿತ) ನಿಗದಿಪಡಿಸಲಾಗಿದೆ. 12 ತಿಂಗಳ ನಂತರ ಗ್ರಾಹಕರು ತಮಗೆ ಬೇಕಾದ ಪ್ಯಾಕೇಜ್ ಆಯ್ಕೆ ಮಾಡಿಕೊಳ್ಳಬಹುದು' ಎಂದರು.

ಕೃತಕ ಬುದ್ಧಿಮತ್ತೆ (ಎ.ಐ) ಆಧರಿಸಿ 'ಆಸ್ಕ್ ಡೋರ್' ವಿಭಾಗದಲ್ಲಿ ಬಯಸಿದ ಒಟಿಟಿ, ವಾಹಿನಿ ಅಥವಾ ವಿಷಯವನ್ನು ತ್ವರಿತವಾಗಿ ಪಡೆದುಕೊಳ್ಳಬಹುದು. ಮಕ್ಕಳಿಗೆಂದೇ ಪ್ರತ್ಯೇಕ ವಿಭಾಗವಿದೆ. ಎಲ್ಲವೂ ಸರಳವಾಗಿ ಸಿಗುವಂತೆ ವಿನ್ಯಾಸಗೊಳಿಸಲಾಗಿದೆ' ಎಂದು ವಿವರಿಸಿದರು.

ಹೆಚ್ಚಿನ ಮಾಹಿತಿಗೆ www.dorworld.in.

ಮುಕ್ತ ಮಾರುಕಟ್ಟೆಯಲ್ಲಿ 25 ಲಕ್ಷ ಟನ್ ಗೋಧಿ ಮಾರಾಟ

ನವದೆಹಲಿ (ಪಿಟಿಐ): ಮುಂದಿನ ವರ್ಷದ ಮಾರ್ಚ್‌ವರೆಗೆ ಭಾರತೀಯ ಆಹಾರ ನಿಗಮವು ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯಡಿ (ಒಎಂಎಸ್‌ಎಸ್) 25 ಲಕ್ಷ ಟನ್ ಗೋಧಿ ಮಾರಾಟ ಮಾಡಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಆಹಾರ ಹಣದುಬ್ಬರವನ್ನು ನಿಯಂತ್ರಿಸಲು ಈ ಕ್ರಮ ಕೈಗೊಳ್ಳಲಾಗಿದೆ. ರಾಜ್ಯಗಳಲ್ಲಿ ಇರುವ ಭಾರತೀಯ ಆಹಾರ ನಿಗಮಗಳು ಗೋಧಿ ಪೂರೈಕೆ ಮತ್ತು ಬೆಲೆಯನ್ನು ನಿಯಂತ್ರಿಸಲಿವೆ ಎಂದು ಗುರುವಾರ ಹೇಳಿದೆ.

ಎಫ್‌ಎಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಲ್ ಗೋಧಿಗೆ ₹2,325 ಹಾಗೂ ಸಾಧಾರಣ ಗುಣಮಟ್ಟದ ಗೋಧಿಗೆ ₹2,300 ದರ ನಿಗದಿ ಪಡಿಸಲಾಗಿದೆ ಎಂದು ಕೇಂದ್ರ ಆಹಾರ ಸಚಿವಾಲಯ ತಿಳಿಸಿದೆ.

ಇ-ಟೆಂಡರ್ ಮೂಲಕ ಗಿರಣಿಗಳು, ಗೋಧಿ ಉತ್ಪನ್ನ ತಯಾರಕರು ಮತ್ತು ಸಂಸ್ಕರಣೆ ಮಾಡುವವರಿಗೆ ಮಾರಾಟ ಮಾಡಲಾಗುತ್ತದೆ. ಆದರೆ, ಸರ್ಕಾರ ಇನ್ನೂ ಮಾರಾಟದ ದಿನಾಂಕವನ್ನು ಪ್ರಕಟಿಸಿಲ್ಲ.

'ಮಂಜು: ಸುರಕ್ಷತಾ ಕ್ರಮ ಕೈಗೊಳ್ಳಿ'

ನವದೆಹಲಿ (ಪಿಟಿಐ): ಹೆದ್ದಾರಿಗಳಲ್ಲಿ ದಟ್ಟ ಮಂಜು ಆವರಿಸುವುದರಿಂದ ವಾಹನಗಳ ಚಾಲಕರಿಗೆ ರಸ್ತೆಯು ಸ್ಪಷ್ಟವಾಗಿ ಕಾಣುವುದಿಲ್ಲ. ಹಾಗಾಗಿ, ಅಧಿಕಾರಿಗಳು ಹೆದ್ದಾರಿಗಳಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಗುರುವಾರ ನಿರ್ದೇಶನ ನೀಡಿದೆ.

ರಸ್ತೆಯಲ್ಲಿ ಇಳಿಜಾರು ಗುರುತಿಸುವಿಕೆ, ಸಿಗ್ನಲ್ ಪುನರ್ ಸ್ಥಾಪನೆ ಅಥವಾ ಬದಲಾವಣೆ, ರಿಫ್ಲೆಕ್ಟಿವ್ (ಮಿನುಗುವ ದೀಪ) ಅಳವಡಿಕೆ, ಅಪಘಾತ ವಲಯದ ಗುರುತು, ಸೌರ ಫಲಕ ಅಳವಡಿಕೆ ಸೇರಿದಂತೆ ಇತರೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದೆ.

ಕಡಿಮೆ ಗೋಚರತೆ ವೇಳೆ ಬಳಕೆದಾರರಿಗೆ ಎಚ್ಚರಿಕೆ ನೀಡಬೇಕು. ಮಂಜು ಆವರಿಸಿದಾಗ ವೇಗದ ಮಿತಿಯು ಗಂಟೆಗೆ 30 ಕಿ.ಮೀ ಇರಬೇಕು. ರೇಡಿಯೊ, ಸಾಮಾಜಿಕ ಮಾಧ್ಯಮಗಳ ಮೂಲಕ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಬೇಕು. ರಾತ್ರಿ ವೇಳೆ ಅಧಿಕಾರಿಗಳು ನಿಯಮಿತವಾಗಿ ಹೆದ್ದಾರಿ ಪರಿಶೀಲನೆ ನಡೆಸಬೇಕು. ಮಂಜು ಆವೃತವಾಗಿರುವ ಸ್ಥಳಗಳ ಸಮೀಪದಲ್ಲಿ ಹೆದ್ದಾರಿ ಗಸ್ತು ವಾಹನಗಳನ್ನು ನಿಯೋಜಿಸಬೇಕು ಎಂದು ಹೇಳಿದೆ.

ಇಪಿಎಸ್–95 ಪರಿಷ್ಕರಣೆ?

ನವದೆಹಲಿ (ಪಿಟಿಐ): ಕೇಂದ್ರ ಕಾರ್ಮಿಕ ಸಚಿವಾಲಯವು ಉದ್ಯೋಗಿ ಪಿಂಚಣಿ ಯೋಜನೆ (ಇಪಿಎಸ್) 1995 ಅನ್ನು ಪರಿಷ್ಕರಿಸಲು ನಿರ್ಧರಿಸಿದೆ. ಆ ಮೂಲಕ ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಸದಸ್ಯರಿಗೆ ನಿವೃತ್ತಿ ವೇಳೆ ಹೆಚ್ಚಿನ ಅನುಕೂಲ ಕಲ್ಪಿಸಲು ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಪ್ರಸ್ತುತ ಉದ್ಯೋಗಿಗಳ ಮೂಲ ವೇತನದಲ್ಲಿ ಕಡಿತಗೊಳಿಸುವ ಶೇ 12ರಷ್ಟು ಹಣವು ಉದ್ಯೋಗಿಗಳ ಭವಿಷ್ಯ ನಿಧಿಗೆ (ಇಪಿಎಫ್) ಜಮೆಯಾಗುತ್ತದೆ. ಉದ್ಯೋಗದಾತ ಸಂಸ್ಥೆಯು ಇಷ್ಟೇ ಮೊತ್ತವನ್ನು ಪಾವತಿಸಲಿದೆ. ಇದರಲ್ಲಿ ಶೇ 8.33ರಷ್ಟು ಹಣವು ಇಪಿಎಸ್–95ಗೆ ಜಮೆಯಾದರೆ, ಉಳಿದ ಶೇ 3.67ರಷ್ಟು ಮೊತ್ತವು ಇಪಿಎಫ್ ಖಾತೆಗೆ ಜಮೆಯಾಗುತ್ತದೆ. ಉದ್ಯೋಗಿಗಳು ಇಪಿಎಸ್-95 ಖಾತೆಗೆ ಹೆಚ್ಚು ಕೊಡುಗೆ ನೀಡಿದರೆ ನಿವೃತ್ತಿ ವೇಳೆ ಅವರಿಗೆ ಹೆಚ್ಚಿನ ಪಿಂಚಣಿ ಮೊತ್ತ ದೊರೆಯಲಿದೆ. ಹಾಗಾಗಿ, ಇಪಿಎಸ್‌ಗೆ ನೀಡುವ ಕೊಡುಗೆ ಹೆಚ್ಚಿಸಲು ಮುಂದಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಉದ್ಯೋಗಿಗಳ ಭವಿಷ್ಯ ನಿಧಿ ಪಿಂಚಣಿ ಲೆಕ್ಕಾಚಾರಕ್ಕೆ ಪ್ರಸ್ತುತ ₹15 ಸಾವಿರ ಗರಿಷ್ಠ ವೇತನ ಮಿತಿ ನಿಗದಿಪಡಿಸಲಾಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ಹೊಸತು	33009-49599	ಬೆಟ್ಟೆ	26199-35218
ಚಾಲಿ	32555-36519	ರಾಶಿ	29169-50019	ಬಿಳೆಗೋಟು	24300-30399
ಚಿಪ್ಪು	19089-26899	ಸರಕು	47100-83610	ಚಾಲಿ	34018-37818
ಕೋಕ	6100-25600	ಸಿದ್ದಾಪುರ		ರಾಶಿ	43208-46699
ಹಳೆಚಾಲಿ	38999-38999	ಬಿಳೆಗೋಟು	24289-28159	ಯಲ್ಲಾಪುರ	
ಹೊಸಚಾಲಿ	18309-25699	ಚಾಲಿ	31309-36439	ಬಿಳೆಗೋಟು	15500-28689
ಪುತ್ತೂರು		ಕೋಕ	22159-24119	ಚಾಲಿ	30600-37599
ಹೊಸತು	25000-33500	ಕೆಂಪುಗೋಟು	17109-21109	ಕೋಕ	5000-17109
ಹಳತು	36000-50000	ರಾಶಿ	43009-47099	ಕೆಂಪುಗೋಟು	17299-26009
ಶಿವಮೊಗ್ಗ		ತಟ್ಟಿಬೆಟ್ಟೆ	27509-41099	ರಾಶಿ	38119-54900
ಬೆಟ್ಟೆ	49116-56200	ಶಿರಸಿ		ತಟ್ಟಿಬೆಟ್ಟೆ	28009-34869
ಗೊರಬಲು	16100-32069				

ದೇಶದ್ರೋಹ ಆರೋಪ: ಚಿನ್ಮಯಿ ಕೃಷ್ಣದಾಸ್ ಬಂಧನ ಬೆನ್ನಲ್ಲೇ ಇಸ್ಕಾನ್ ಪರ–ವಿರುದ್ಧ ಚರ್ಚೆ

ಇಸ್ಕಾನ್ ನಿಷೇಧ ಇಲ್ಲ: ಬಾಂಗ್ಲಾ ಹೈಕೋರ್ಟ್

ಪ್ರಜಾವಾಣಿ ವಾರ್ತೆ/ಪಿಟಿಐ

ಢಾಕಾ: ಬಾಂಗ್ಲಾದೇಶದಲ್ಲಿ ಇಸ್ಕಾನ್‌ನ ಕಾರ್ಯ ಚಟುವಟಿಕೆಗಳನ್ನು ನಿಷೇಧಿಸಲು ಹೈಕೋರ್ಟ್ ಗುರುವಾರ ನಿರಾಕರಿಸಿದೆ.

ಸುಪ್ರೀಂ ಕೋರ್ಟ್ ವಕೀಲ ಅಲ್ ಮಾಮೂನ್ ರಸೂಲ್ ಅವರು 10 ವಕೀಲರ ಪರವಾಗಿ 'ಬಾಂಗ್ಲಾದೇಶದಲ್ಲಿ ಇಸ್ಕಾನ್ ಅನ್ನು ನಿಷೇಧ ಮಾಡಬೇಕು' ಎಂದು ಕೋರಿ ಹೈಕೋರ್ಟ್‌ಗೆ ಬುಧವಾರ ಅರ್ಜಿ ಸಲ್ಲಿಸಿದ್ದರು. '2009ರ ಭಯೋತ್ಪಾದನೆ ವಿರೋಧಿ' ಕಾಯ್ದೆ ಅನ್ವಯ ಇಸ್ಕಾನ್ ಮೇಲೆ ನಿಷೇಧ ಹೇರಬೇಕು ಎಂದೂ ಅರ್ಜಿಯಲ್ಲಿ ಕೋರಿದ್ದರು.

ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್, 'ಇಸ್ಕಾನ್‌ನ ಚಟುವಟಿಕೆಗಳ ಸಂಬಂಧ ಸರ್ಕಾರ ಯಾವೆಲ್ಲಾ ಕ್ರಮಗಳನ್ನು ಕೈಗೊಂಡಿದೆ ಎಂಬ ಕುರಿತು ವಿವರಣೆ ನೀಡಿ' ಎಂದು ಮಧ್ಯಂತರ ಸರ್ಕಾರಕ್ಕೆ ತಿಳಿಸಿತ್ತು.

'ವಕೀಲ ಸೈಫುಲ್ ಇಸ್ಲಾಂ ಹತ್ಯೆ ಹಾಗೂ ಇಸ್ಕಾನ್‌ನ ಚಟುವಟಿಕೆಗಳ ಕುರಿತು ಮೂರು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ಪ್ರಕರಣಗಳ ಸಂಬಂಧ 33 ಜನರನ್ನು ಬಂಧಿಸಲಾಗಿದೆ' ಎಂದು ಹೆಚ್ಚುವರಿ ಅಟಾರ್ನಿ ಜನರಲ್ ಅನೀಕ್ ಆರ್. ಹಕ್ ಅವರು ನ್ಯಾಯಾಲಯಕ್ಕೆ ಗುರುವಾರ ತಿಳಿಸಿದರು.

ಚಿನ್ಮಯಿ ಕೃಷ್ಣದಾಸ್ ಬಂಧನವನ್ನು ಖಂಡಿಸಿ ಗುರುವಾರ ಕೋಲ್ಕತ್ತದಲ್ಲಿ ಇಸ್ಕಾನ್ ಪ್ರಚಾರಕರು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

'ದೇಶದಲ್ಲಿ ಕಾನೂನು-ಸುವ್ಯವಸ್ಥೆ ಕಾಪಾಡುವಲ್ಲಿ ಸರ್ಕಾರ ಎಚ್ಚರಿಕೆ ವಹಿಸುತ್ತದೆ ಎಂಬ ನಂಬಿಕೆ ಇದೆ' ಎಂದು ಅಭಿಪ್ರಾಯ ಪಟ್ಟ ನ್ಯಾಯಮೂರ್ತಿಗಳಾದ ಫರಾ ಮೆಹಬೂಬ್ ಹಾಗೂ ದೆಬಶಿಶ್ ರಾಯ್ ಚೌಧರಿ ಅವರಿದ್ದ ಪೀಠವು, ಇಸ್ಕಾನ್ ಮೇಲೆ ನಿಷೇಧ ಹೇರುವುದನ್ನು ನಿರಾಕರಿಸಿತು.

ಸೋಮವಾರ 'ಸಮ್ಮಿಲಿತ್ ಸನಾತನಿ ಜಾಗರಣ ಜೋತೆ'ಯ ವಕ್ತಾರ ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ ಅವರನ್ನು ದೇಶದ್ರೋಹದ ಆರೋಪದಲ್ಲಿ ಬಂಧಿಸಲಾಗಿತ್ತು. ಮಂಗಳವಾರ ಇವರ ಜಾಮೀನು ಅರ್ಜಿಯನ್ನು ಚಟ್ಟೋಗ್ರಾಮ ನ್ಯಾಯಾಲಯವು ವಜಾ ಮಾಡಿ, ಜೈಲಿಗೆ ಕಳುಹಿಸಿತ್ತು. ಇದನ್ನು ವಿರೋಧಿಸಿ ಚಿನ್ಮಯಿ ಅವರ ಬೆಂಬಲಿಗರು ನ್ಯಾಯಾಲಯದ ಮುಂದೆ ಪ್ರತಿಭಟನೆ ನಡೆಸಿದ್ದು, ಭದ್ರತಾ ಪಡೆಗಳೊಂದಿಗೆ ಘರ್ಷಣೆಗೆ ಇಳಿದಿತ್ತು. ಈ ವೇಳೆ ವಕೀಲ ಸೈಫುಲ್ ಇಸ್ಲಾಂ ಹತ್ಯೆ ನಡೆದಿತ್ತು.

ಬಾಂಗ್ಲಾದೇಶವು ಭಾರತಕ್ಕೆ ಸೇರಿಲ್ಲ. ಬೇರೆ ದೇಶದ ಬಗ್ಗೆ ಭಾರತ ಸರ್ಕಾರವು ಗಮನ ಹರಿಸುತ್ತದೆ. ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಈ ವಿಚಾರದಲ್ಲಿ ಭಾರತ ಸರ್ಕಾರದ ನೀತಿಗಳನ್ನು ನಾವು ಪಾಲಿಸುತ್ತೇವೆ

ಮಮತಾ ಬ್ಯಾನರ್ಜಿ, ಮುಖ್ಯಮಂತ್ರಿ, ಪಶ್ಚಿಮ ಬಂಗಾಳ

ವಿದೇಶಾಂಗ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಯ ಮುಂದೆ ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಕುರಿತು ಸಚಿವಾಲಯವು ಡಿ.11ಕ್ಕೆ ಮಾಹಿತಿ ನೀಡಲಿದೆ

ಶಶಿ ತರೂರ್, ಮುಖ್ಯಸ್ಥ, ವಿದೇಶಾಂಗ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ

ಅಮೆರಿಕ ಅಧ್ಯಕ್ಷ ಜೋ ಬೈಡನ್, ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮೊಹಮ್ಮದ್ ಯೂನುಸ್ ಅವರೊಂದಿಗೆ ಚರ್ಚಿಸಿ, ಚಿನ್ಮಯಿ ದಾಸ್ ಬಿಡುಗಡೆಗೆ ಒತ್ತಾಯಿಸಬೇಕು

ಖಂಡೇರಾವ್ ಕಂಡ್, ಅಧ್ಯಕ್ಷ, ಫೌಂಡೇಷನ್ ಫಾರ್ ಇಂಡಿಯಾ ಆ್ಯಂಡ್ ಇಂಡಿಯನ್ ಡೆಸ್ಪೊರಾ ಸ್ಟಡೀಸ್ (ಎಫ್‌ಐಐಡಿಎಸ್)

ಚಿನ್ಮಯಿ ಕೃಷ್ಣದಾಸ್ ಅವರನ್ನು ನ್ಯಾಯಯುತ ಮಾರ್ಗದಲ್ಲಿ ಬಂಧಿಸಲಾಗಿಲ್ಲ. ಅವರನ್ನು ಕೂಡಲೇ ಬಿಡುಗಡೆ ಮಾಡಿ. ದೇಶದಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಪಡಿಸಿ

ಶೇಖ್ ಹಸೀನಾ, ಮಾಜಿ ಪ್ರಧಾನಿ (ಅವಾಮಿ ಲೀಗ್ ಪಕ್ಷದ 'ಎಕ್ಸ್' ಖಾತೆಯಿಂದ ಮಾಡಲಾದ ಪೋಸ್ಟ್)

ಇಸ್ಕಾನ್ ಮೇಲಿನ ಆರೋಪಗಳೇನು?

'ಇಸ್ಕಾನ್ ಒಂದು ತೀವ್ರಗಾಮಿ ಸಂಘಟನೆಯಾಗಿದ್ದು, ದೇಶದಲ್ಲಿ ಕೋಮು ಸಂಘರ್ಷವನ್ನು ಪ್ರಚೋದಿಸುವ ಚಟುವಟಿಕೆಗಳನ್ನು ರೂಪಿಸುತ್ತದೆ' ಎಂದು ವಕೀಲ ರಸೂಲ್ ಅವರು ಸಲ್ಲಿಸಿದ್ದ ಅರ್ಜಿಯಲ್ಲಿ ಹೇಳಲಾಗಿದೆ. ಬಾಂಗ್ಲಾದೇಶದ ಗುಪ್ತಚರ ಇಲಾಖೆಯ ಮಾಜಿ ಅಧಿಕಾರಿಯೊಬ್ಬರ ಪುಸ್ತಕದಲ್ಲಿನ ಮಾಹಿತಿಗಳನ್ನು ಹಾಗೂ ಕೆಲವು ಪತ್ರಿಕೆಗಳ ವರದಿಗಳನ್ನು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

- ಹಿಂದೂ ಪರಂಪರೆಗಳ ಕುರಿತು ತನ್ನ ನಂಬಿಕೆಗಳನ್ನು ಹಿಂದೂ ಸಮುದಾಯದ ಮೇಲೆ ಹೇರುತ್ತದೆ. ಹಿಂದೂ ಧರ್ಮದ ತಳಸಮುದಾಯಗಳ ಜನರನ್ನು ಒತ್ತಾಯಪೂರ್ವಕವಾಗಿ ತನ್ನ ಸಂಘಟನೆಗಳಿಗೆ ಸೇರಿಸಿಕೊಳ್ಳುತ್ತದೆ
- ಭಾರತೀಯ ಮಾಧ್ಯಮಗಳೊಂದಿಗೆ ಸೇರಿ ಜನರ ಮಧ್ಯೆ ಇರುವ ಸೌಹಾರ್ದವನ್ನು ಹಾಳು ಮಾಡಿ ದೇಶವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿದೆ. ಮಲೇಷ್ಯಾ, ಇಂಡೊನೇಷ್ಯಾ, ಸೌದಿ ಅರೇಬಿಯಾದಲ್ಲಿ ಇಸ್ಕಾನ್‌ಗೆ ನಿಷೇಧ ಇದೆ. ಸೋವಿಯತ್ ಒಕ್ಕೂಟ (1970–1980) ನಿಷೇಧ ಹೇರಿತ್ತು. ಇನ್ನಷ್ಟು ದೇಶಗಳಲ್ಲಿ ಇದರ ಕಾರ್ಯಚಟುವಟಿಕೆಗಳ ಬಗ್ಗೆ ತೀವ್ರ ನಿಗಾವಹಿಸಲಾಗುತ್ತಿದೆ
- ಸನಾತನ ಸಮುದಾಯಕ್ಕೆ ಸೇರಿದ ದೇವಾಲಯಗಳನ್ನು ಕೈವಶ ಮಾಡಿಕೊಳ್ಳುತ್ತದೆ ಮತ್ತು ಆ ದೇವಾಲಯಗಳಲ್ಲಿರುವ ಸನಾತನ ಸಮುದಾಯುದ ಜನರನ್ನು ಓಡಿಸುತ್ತದೆ. ನಂತರ ಮಸೀದಿಗಳ ಮೇಲೆ ದಾಳಿ ನಡೆಸುತ್ತದೆ
- ತರಾವೀಹ್ (ರಂಜಾನ್ ತಿಂಗಳ ರಾತ್ರಿಯ ವಿಶೇಷ ನಮಾಜ್) ಸಂದರ್ಭದಲ್ಲಿ ಇಸ್ಕಾನ್ ಭಜನೆ ಮಾಡುತ್ತದೆ. ಮುಸ್ಲಿಮರ ಪ್ರಾರ್ಥನೆಗೆ ಅಡ್ಡಿಪಡಿಸಿದ ಇಂಥ ಘಟನೆಯು ಢಾಕಾದ ಸ್ವಾಮಿಭಾಗ್‌ನಲ್ಲಿರುವ ಮಸೀದಿಯಲ್ಲಿ ನಡೆದಿತ್ತು. ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರೆ ಪೊಲೀಸರನ್ನು ಕರೆಸಿತ್ತು. ನಂತರ ಇದು ಕೋಮು ಸಂಘರ್ಷಕ್ಕೆ ಕಾರಣವಾಯಿತು
- ಸಿಲಹಟ್‌ನಲ್ಲಿದ್ದ ಇಸ್ಕಾನ್ ದೇವಸ್ಥಾನದಲ್ಲಿ 2016ರಲ್ಲಿ ಬಂದೂಕುಗಳು ದೊರೆತಿದ್ದವು ಎಂಬ ಆರೋಪವಿದೆ

ಆರೋಪ ತಳ್ಳಿ ಹಾಕಿದ ಇಸ್ಕಾನ್

ತಮ್ಮ ಮೇಲೆ ಮಾಡಿರುವ ಎಲ್ಲ ಆರೋಪಗಳನ್ನು ಬಾಂಗ್ಲಾದೇಶದಲ್ಲಿನ ಇಸ್ಕಾನ್ ತಳ್ಳಿ ಹಾಕಿದ್ದು ನಿಷೇಧ ಹೇರುವುದಕ್ಕೆ ನಿರಾಕರಿಸಿದ ಹೈಕೋರ್ಟ್‌ನ ಕ್ರಮವನ್ನು ಸ್ವಾಗತಿಸಿದೆ.

'ನಮ್ಮದು ಶಾಂತಿಯುತ ಸಂಘಟನೆ. ನಾವು ಮಾನವೀಯತೆಯ ಪ್ರಚಾರಕರು. ಮೂಲಭೂತವಾದಿಗಳು ನಮ್ಮನ್ನು ಗುರಿಯಾಗಿಸುತ್ತಿದ್ದಾರೆ. ದೇಶದಲ್ಲಿ ಕಿರುಕುಳ ಅನುಭವಿಸುತ್ತಿರುವ ಹಿಂದೂ ಸಮುದಾಯವನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದ್ದೇವೆ' ಎಂದು ಬಾಂಗ್ಲಾದೇಶದಲ್ಲಿನ ಇಸ್ಕಾನ್‌ನ ಮುಖ್ಯಸ್ಥ ಚಾರು ಚಂದ್ರದಾಸ್ ಬ್ರಹ್ಮಚಾರಿ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

'ಒತ್ತಾಯಪೂರ್ವಕವಾಗಿ ಹಿಂದೂಗಳ ಮತಾಂತರ ಮಾಡುವುದನ್ನು ನಾವು ತಡೆಯುತ್ತಿದ್ದೇವೆ. ಇದಕ್ಕಾಗಿ ಮೂಲಭೂತವಾದಿಗಳು ನಮ್ಮ ಸಂಘಟನೆಯ ಮಾನ ಹರಾಜು ಹಾಕಲು ಹೊರಟಿದ್ದಾರೆ' ಎಂದು ತಿಳಿಸಿದ್ದಾರೆ.

ಈ ಬಗ್ಗೆ ಚಾರು ಚಂದ್ರದಾಸ್ ಅವರು ಗುರುವಾರ ಪತ್ರಿಕಾಗೋಷ್ಠಿಯನ್ನೂ ನಡೆಸಿದರು. 'ವಕೀಲ ಇಸ್ಲಾಂ ಅವರ ಹತ್ಯೆ ಪ್ರಕರಣದಲ್ಲಿ ಇಸ್ಕಾನ್ ಕೈವಾಡವಿದೆ ಎಂದು ತಪ್ಪಾಗಿ ಬಿಂಬಿಸುವ ಯತ್ನ ನಡೆಯುತ್ತಿದೆ. ಈ ಹತ್ಯೆ ಪ್ರಕರಣದಲ್ಲಿ ನಮ್ಮ ಪಾತ್ರವಿಲ್ಲ. ಜೊತೆಗೆ ಹಿಂದೂಗಳು ನಡೆಸುತ್ತಿರುವ ಪ್ರತಿಭಟನೆಯಲ್ಲಿಯೂ ನಮ್ಮ ಪಾತ್ರವಿಲ್ಲ. ರಸ್ತೆ ಅಪಘಾತ ನಡೆದರೂ ಅದಕ್ಕೆ ಇಸ್ಕಾನ್ ಕಾರಣ ಎನ್ನುವ ಸಂಕಥನವನ್ನು ಸೃಷ್ಟಿಸಲಾಗಿದೆ' ಎಂದರು.

'ಸಂಘಟನೆಯ ಶಿಸ್ತನ್ನು ಉಲ್ಲಂಘಿಸಿದ ಕಾರಣಕ್ಕೆ ದೇಶದ್ರೋಹದ ಆರೋಪದಲ್ಲಿ ಸದ್ಯ ಬಂಧನದಲ್ಲಿರುವ ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ ಸೇರಿದಂತೆ ಇನ್ನು ಕೆಲವರನ್ನು ಸಂಘಟನೆಯ ಎಲ್ಲ ಹುದ್ದೆಗಳಿಂದ ಸೆಪ್ಟೆಂಬರ್‌ನಲ್ಲಿಯೇ ಕೆಳಗಿಳಿಸಲಾಗಿದೆ. ಜೂನ್‌ನಲ್ಲಿಯೇ ಚಿನ್ಮಯಿ ಅವರ ಕುರಿತು ದೂರುಗಳು ಬಂದಿದ್ದವು. ಚಿನ್ಮಯಿ ಕೃಷ್ಣದಾಸ್ ಅವರ ಚಟುವಟಿಕೆಗಳು ನಮ್ಮ ಸಂಘಟನೆಯನ್ನು ಪ್ರತಿನಿಧಿಸುವುದಿಲ್ಲ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

PUBLIC NOTICE
Our client intends to purchase All that piece and parcel of the immovable property Site bearing No.1312(in Survey No. 40 of Gidadakonenhalli), situated at 8th Block,Sir.M.Vishweshwaraiah Layout, Yeshwantapura Hobli, Bangalore, Measuring East to west 24.00 Mts and North to South 15.00 Mts in all measuring 360.00 Sq.mtrs, morefully described in the schedule here under as Schedule Property from the present owner Monhar Inapur S/o late.Umakanth. R/at. No. 78,918/A, Dwaraka, Vivek nagar(West) Bijapur-586109 (owner).
Any person or persons asserting any right title interest are claim in the schedule property or any part there off, in any manner whatsoever or having any claim against the schedule property or any part there off or having any kind of claim against the documents of title objecting to the property which stands in the name of owner, should write to the undersigned within 15 days from the date of issuance of this public notice with all documentary proof on which they are basing and asserting their rights with regard to the schedule property or any part thereof, Further if no claims or objections are received within the date stipulated above my client would conclude the proposed sale transaction as though there are no claims or objections on expiry of 15 days period, as though there are no claims or objections.
SCHEDULE PROPERTY
All that piece and parcel of the immovable property Site bearing No.1312(in Survey No. 40 of Gidadakonenhalli), situated at 8th Block, Sir. M. Vishweshwaraiah Layout, Yeshwantapura Hobli, Bangalore, Measuring East to west 24.00 Mts & North to South 15.00 Mts in all measuring 360.00 Sq. mtrs, and Bounded on the: East by: Site No.1307, West by: Road, North by: Site No. 1311, South by: Site No. 1313.
Place:Bangalore Date:29-11-2024
M.S.NARAYAN & ARJUN PR ADVOCATES
No.18, 3rd Cross Annayappa Block, Kumar Park West Bangalore-560020
Mob: 9845062134 / 9845559355
Email: msn_adv@yahoo.com

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Hassan

1 ACRE Commercial Alienation Land For Sale Hassan- Beluru NH-373 Huvinahalli Kaval From Hassan Ring Road 3kms: 9590353813

ಉದ್ಯೋಗಾವಕಾಶ

Cook

ಸಸ್ಯಾಹಾರಿ & ಮಾಂಸಾಹಾರಿ ಹೋಟೆಲಗೆ, ನುರಿತ "ಆಲ್ ರೌಂಡರ್" ಇಂಡಿಯನ್, ಚೈನೀಸ್ & ತಂದೂರಿ ಮಾಸ್ಟರಗಳು ಬೇಕಾಗಿದ್ದಾರೆ. ನೆಲಮಂಗಲ: 9845684631

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 13,000- 17,000. 8951315839, 9141634619

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ಪುಸ್ತಕ ಬರೆಯುವ ಹಾಗು ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಇದೆ. 9611874742, 9611574742.

Wanted

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ನೈವೇದ್ಯ ಪ್ರಸಾದ ಮಾಡಲು ಗೊತ್ತಿರುವ ಅರ್ಚಕರಿಗೆ ಆದ್ಯತೆ ನೀಡಲಾಗುತ್ತದೆ. ವಯೋಮಿತಿ 50 ವರ್ಷ, ಸಂಪರ್ಕಿಸಿ: 7019132200, 080-25300714

ಭವಿಷ್ಯ

Astrology

ಒಂದೇ ಕರೆಯಲ್ಲಿ 100% ಶಾಶ್ವತ ಪರಿಹಾರ ಕೆಲವೇ ಗಂಟೆಗಳಲ್ಲಿ ಅಸಾಧ್ಯವಾದದ್ದು ಇಲ್ಲಿ ಸಾಧ್ಯ ಸಮಸ್ಯೆ ನಿಮ್ಮದು ಪರಿಹಾರ ನಮ್ಮದು: 9741637382

ಪ್ರವಾಸ

Travel

21.01.2025 ಕುಂಭಮೇಳ ಪ್ರಯುಕ್ತ ರಿಯಯಿತಿ ದರದಲ್ಲಿ 6 ದಿನ ವಿಮಾನದಲ್ಲಿ ಅಲಹಾಬಾದ್ ಕಾಶಿ ಗಯಾ ಅಯೋಧ್ಯಾ. ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Royal Package "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9739847429/ 9845560219

ಭಾರತಪರಂಪರ ದರ್ಶನ: 23.12.2024 5ದಿನ ಅಹೋಬಿಲಂ ಶ್ರೀಶೈಲಂ, ಮಂತ್ರಾಲಯ. 18.1.2025 11ದಿನ 4 ಜ್ಯೋತಿರ್ಲಿಂಗ ಗುಜರಾತ್,ಮಧ್ಯಪ್ರದೇಶ. ಪ್ರಕಾಶ್ ಹೆಬ್ಬಾರ್ 9448792891.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಮೊಯಿನುದ್ದೀನ್ ಚಿಶ್ತಿ ದರ್ಗಾದಲ್ಲಿ ಶಿವನ ದೇಗುಲ ಇರುವ ಕುರಿತು ದಾವೆ– ನೋಟಿಸ್ ಜಾರಿ

ಅಜ್ಮೇರ್: ಜೋರಾದ ಜಟಾಪಟಿ

ಜೈಪುರ(ಪಿಟಿಐ): ಅಜ್ಮೇರ್‌ದಲ್ಲಿರುವ, ಸೂಫಿ ಸಂತ ಮೊಯಿನುದ್ದೀನ್ ಚಿಶ್ತಿ ದರ್ಗಾ ಒಳಗಡೆ ಶಿವನ ದೇವಸ್ಥಾನವಿದೆ ಎಂಬುದಾಗಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿ ಮೂರು ಕಕ್ಷಿದಾರರಿಗೆ ಸ್ಥಳೀಯ ನ್ಯಾಯಾಲಯವೊಂದು ನೋಟಿಸ್ ಜಾರಿ ಮಾಡಿದ ಬೆನ್ನಲ್ಲೇ, ಗುರುವಾರ ಚರ್ಚೆ, ಜಟಾಪಟಿ ತೀವ್ರಗೊಂಡಿದೆ.

'ಈ ಬೆಳವಣಿಗೆ ಆತಂಕಕಾರಿ', 'ನೋವಿನ ಸಂಗತಿ' ಎಂಬ ಬೇಸರದ ಮಾತುಗಳಿಂದ ಹಿಡಿದು, 'ಸಮೀಕ್ಷೆ ನಡೆದರೆ ಸಮಸ್ಯೆ ಏನು?' ಎಂಬ ವಾದಗಳು ಕೇಳಿಬಂದಿವೆ.

ಈ ವಿಚಾರವಾಗಿ ಸೆಪ್ಟೆಂಬರ್‌ನಲ್ಲಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶ ಮನಮೋಹನ್ ಚಂದೇಲ್, ನೋಟಿಸ್ ನೀಡಿದ್ದಾರೆ.

ಹಿಂದೂ ಸೇನಾ ಸಂಘಟನೆ ಮುಖಂಡ ವಿಷ್ಣು ಗುಪ್ತ ಎಂಬುವವರು ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ವಿಚಾರಣೆಯನ್ನು ಡಿ. 20ಕ್ಕೆ ಮುಂದೂಡಲಾಗಿದೆ.

'ಕೋಮು ಸೌಹಾರ್ದ ಕದಡುವ ಯತ್ನ': ಸೂಫಿ ಸಂತ ಮೊಯಿನುದ್ದೀನ್ ಚಿಶ್ತಿ (ಖ್ವಾಜಾ ಗರೀಬ್ ನವಾಜ್) ದರ್ಗಾವನ್ನು ಶಿವನ ದೇಗುಲ ಎಂಬುದಾಗಿ ಘೋಷಿಸುವಂತೆ ಅರ್ಜಿ ಸಲ್ಲಿಸಿರುವುದನ್ನು ದರ್ಗಾ ಉಸ್ತುವಾರಿಗಳ ಸಮಿತಿ ಸದಸ್ಯರು (ಖಾದಿಮ್‌ಗಳು) ಖಂಡಿಸಿದ್ದಾರೆ.

'ಈ ನಡೆಯು ಮುಸ್ಲಿಮರನ್ನು ಸಮಾಜದಿಂದ 'ಪ್ರತ್ಯೇಕಿಸುವುದು' ಹಾಗೂ ದೇಶದಲ್ಲಿನ ಸೌಹಾರ್ದವನ್ನು ಹಾಳು ಮಾಡುವ ಪ್ರಯತ್ನವಾಗಿದೆ' ಎಂದು ದರ್ಗಾದ ಖಾದಿಮ್‌ರನ್ನು ಪ್ರತಿನಿಧಿಸುವ ಅಂಜುಮಾನ್ ಸೈಯದ್ ಜದ್ಗಾನ್‌ನ ಕಾರ್ಯದರ್ಶಿ ಸೈಯದ್ ಸರ್ವಾರ್ ಚಿಶ್ತಿ ಹೇಳಿದ್ದಾರೆ.

'ಈ ದರ್ಗಾ ಅಲ್ಪಸಂಖ್ಯಾತರ ವ್ಯವಹಾರ ಸಚಿವಾಲಯದಡಿ ಬರಲಿದ್ದು, ಎಎಸ್‌ಐಗೂ ಇದಕ್ಕೂ ಯಾವುದೇ ಸಂಬಂಧ ಇಲ್ಲ' ಎಂದಿರುವ ಅವರು, 'ಈ ಪ್ರಕರಣದಲ್ಲಿ ಅಂಜುಮಾನ್ ಸೈಯದ್ ಜದ್ಗಾನ್ ಅನ್ನು ಸಹ ಪಕ್ಷಗಾರವಾಗಿ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

'ಸಮಸ್ಯೆ ಏನು?: 'ಈ ವಿಚಾರವಾಗಿ ಜಟಾಪಟಿ ನಡೆಯುತ್ತಿರುವುದು ಅಚ್ಚರಿ ತಂದಿದೆ' ಎಂದು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಹೇಳಿದ್ದಾರೆ.

'ಅಜ್ಮೇರ್ ದರ್ಗಾದಲ್ಲಿ ಸಮೀಕ್ಷೆ ನಡೆಸುವಂತೆ ಕೋರ್ಟ್ ಆದೇಶಿಸಿದೆ. ನ್ಯಾಯಾಲಯವೇ ಆದೇಶ ಹೊರಡಿಸಿರುವಾಗ ಸಮಸ್ಯೆ ಏನು?' ಎಂದಿದ್ದಾರೆ.

'ಮೊಘಲರು ಭಾರತಕ್ಕೆ ಬಂದಿದ್ದು, ದೇವಾಲಯಗಳನ್ನು ಧ್ವಂಸಗೊಳಿಸಿದ್ದು ಸತ್ಯ ಸಂಗತಿ. ಕಾಂಗ್ರೆಸ್ ಇದುವರೆಗೆ ಓಲೈಕೆ ಮಾಡುತ್ತಾ ಬಂದಿದೆ. 1947ರಲ್ಲಿ ಜವಾಹರಲಾಲ್ ನೆಹರೂ ಅವರು ಇಂಥ ಸಮಸ್ಯೆಗಳನ್ನು ಬಗೆಹರಿಸಿದ್ದರೆ, ಕೋರ್ಟ್ ಮೆಟ್ಟಿಲೇರುವ ಅಗತ್ಯವೇ ಇರುತ್ತಿರಲಿಲ್ಲ' ಎಂದು ಹೇಳಿದ್ದಾರೆ.

ಇಂತಹ ಬೆಳವಣಿಗೆಗಳಿಗೆ ಸಂಬಂಧಿಸಿ, ನಿವೃತ್ತ ಸಿಜೆಐ ಡಿ.ವೈ. ಚಂದ್ರಚೂಡ್ ಅವರತ್ತಲೇ ಪಿಡಿಪಿ ಮುಖ್ಯಸ್ಥೆ ಮೆಹಬೂಬ ಮುಫ್ತಿ ಬೊಟ್ಟು ಮಾಡಿದ್ದಾರೆ.

'ನಿವೃತ್ತ ಸಿಜೆಐ ನೀಡಿದ ತೀರ್ಪಿನಿಂದಾಗಿ ಅಲ್ಪಸಂಖ್ಯಾತರ ಧಾರ್ಮಿಕ ಸ್ಥಳಗಳ ಕುರಿತು ವಿವಾದಗಳು ಉದ್ಭವಿಸುವಂತಾಗಿದೆ' ಎಂದು ದೂರಿದ್ದಾರೆ.

'ಪೂಜಾಸ್ಥಳಗಳ ವಿಚಾರವಾಗಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ 'ಸುಪ್ರೀಂ' ತೀರ್ಪು ಇದ್ದರೂ, ಚಂದ್ರಚೂಡ್ ನೀಡಿದ ತೀರ್ಪುಗಳು ಮುಸ್ಲಿಮರ ಧಾರ್ಮಿಕ ಸ್ಥಳಗಳ ಸಮೀಕ್ಷೆಗೆ ದಾರಿ ಮಾಡಿಕೊಟ್ಟವು. ಹಿಂದೂ–ಮುಸ್ಲಿಮರ ನಡುವೆ ಸಂಘರ್ಷಕ್ಕೂ ಕಾರಣವಾದವು' ಎಂದಿದ್ದಾರೆ.

ಅಜ್ಮೇರ್ ದರ್ಗಾ

ಅರ್ಜಿದಾರರ ವಾದ

'ಒಳಗೆ ಶಿವನ ದೇವಸ್ಥಾನ ಇದ್ದು, ಅಜ್ಮೇರ್ ದರ್ಗಾವನ್ನು ಸಂಕಟಮೋಚನ ಮಹಾದೇವ ದೇವಸ್ಥಾನ ಎಂದು ಘೋಷಿಸಬೇಕು. ದರ್ಗಾ ಏನಾದರೂ ನೋಂದಣಿ ಮಾಡಿಸಿದ್ದಲ್ಲಿ, ಅದನ್ನು ರದ್ದು ಮಾಡಬೇಕು' ಎಂಬುದು ನಮ್ಮ ಬೇಡಿಕೆಯಾಗಿದೆ ಎಂದು ಅರ್ಜಿದಾರ ವಿಷ್ಣು ಗುಪ್ತ ಹೇಳಿದ್ದಾರೆ.

'ದರ್ಗಾ ಇರುವ ಸ್ಥಳದಲ್ಲಿ ಮೊದಲು ಶಿವನ ದೇಗುಲ ಇತ್ತು. ನಂತರ, ಇಲ್ಲಿ 13ನೇ ಶತಮಾನದ ಸೂಫಿ ಸಂತ, ಪರ್ಷಿಯಾದ ಖ್ವಾಜಾ ಮೊಯಿನುದ್ದೀನ್ ಚಿಶ್ತಿ ಅವರ ದರ್ಗಾ ನಿರ್ಮಿಸಲಾಯಿತು. ಇದಕ್ಕೆ ಐತಿಹಾಸಿಕ ಸಾಕ್ಷ್ಯಗಳಿವೆ' ಎಂದು ಅವರು ಅರ್ಜಿಯಲ್ಲಿ ಹೇಳಿದ್ದಾರೆ.

'ದರ್ಗಾದಲ್ಲಿ ಎಎಸ್‌ಐನಿಂದ ಸಮೀಕ್ಷೆ ನಡೆಸಬೇಕು ಹಾಗೂ ಆ ಸ್ಥಳದಲ್ಲಿ ಹಿಂದೂಗಳಿಗೆ ಪೂಜೆ ಸಲ್ಲಿಸುವ ಹಕ್ಕು ನೀಡಬೇಕು ಎಂಬುದು ಕೂಡ ನಮ್ಮ ಬೇಡಿಕೆ' ಎಂದಿದ್ದಾರೆ.

ಪ್ರತಿವಾದಿಗಳು

'ಅಜ್ಮೇರ್ ದರ್ಗಾ ಸಮಿತಿ, ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ ಹಾಗೂ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಯನ್ನು ಪ್ರತಿವಾದಿಗಳನ್ನಾಗಿ ಮಾಡಿ, ನೋಟಿಸ್ ನೀಡಲಾಗಿದೆ' ಎಂದು ಎಂದು ಅರ್ಜಿದಾರರ ಪರ ವಕೀಲ ಯೋಗೇಶ್ ಸಿರೋಜಾ ಹೇಳಿದ್ದಾರೆ.

ಯಾರು ಏನೆಂದರು?

ಬಾಬರಿ ಮಸೀದಿ ಪ್ರಕರಣದಲ್ಲಿ ಮುಸ್ಲಿಂ ಸಮುದಾಯ ನ್ಯಾಯಾಲಯದ ತೀರ್ಪನ್ನು ಸ್ವೀಕರಿಸಿದೆ. ಈ ಪ್ರಕರಣ ನಂತರ ಮತ್ತೆ ಅಂತಹ ವ್ಯಾಜ್ಯಗಳು ಎದುರಾಗುವುದಿಲ್ಲ ಎಂದು ನಾವು ಭಾವಿಸಿದ್ದೆವು. ದುರದೃಷ್ಟವಶಾತ್ ಪದೇಪದೇ ಇಂತಹ ವಿಚಾರಗಳು ತಲೆ ಎತ್ತುತ್ತಿವೆ. ಉತ್ತರ ಪ್ರದೇಶದ ಸಂಭಲ್ ಘಟನೆ ನಮ್ಮ ಕಣ್ಣ ಮುಂದಿದೆ. ಇದು ನಿಲ್ಲಬೇಕು **ಸೈಯದ್ ಸರ್ವಾರ್ ಚಿಶ್ತಿ**, ಅಂಜುಮಾನ್ ಸೈಯದ್ ಜದ್ಗಾನ್ ಕಾರ್ಯದರ್ಶಿ

ಈ ಬೆಳವಣಿಗೆ ಆತಂಕಕಾರಿ. ಈ ರೀತಿ ಯಾಕೆ ಮಾಡಲಾಗುತ್ತಿದೆ? ರಾಜಕೀಯ ಲಾಭಕ್ಕಾಗಿ ದೇಶವನ್ನು ಯಾವ ದಿಕ್ಕಿಗೆ ಕೊಂಡೊಯ್ಯಲಾಗುತ್ತಿದೆ? **ಕಪಿಲ್ ಸಿಬಲ್**, ರಾಜ್ಯಸಭಾ ಸಂಸದ

ಅಜ್ಮೇರ್ ದರ್ಗಾ ಸಮೀಕ್ಷೆ ಕೋರಿ ಅರ್ಜಿ ಸಲ್ಲಿಸಿರುವುದು ಪೂಜಾ ಸ್ಥಳಗಳ ಕಾಯ್ದೆಯ ಉಲ್ಲಂಘನೆ. ಉರುಸು ಸಂದರ್ಭದಲ್ಲಿ ದರ್ಗಾಕ್ಕೆ ಚಾದರ್ ಸಮರ್ಪಿಸುವ ಸಂಪ್ರದಾಯವನ್ನು ಜವಾಹರಲಾಲ್ ನೆಹರೂ ಆರಂಭಿಸಿದರು. ಪ್ರಧಾನಿ ನರೇಂದ್ರ ಮೋದಿ ಕೂಡ ಸಂಪ್ರದಾಯ ಪಾಲನೆ ಮಾಡುತ್ತಿದ್ದಾರೆ **ಮುಜಾಫರ್ ಭಾರ್ತಿ**, ಯುನೈಟೆಡ್ ಮುಸ್ಲಿಂ ಫೋರಂ–ರಾಜಸ್ಥಾನ (ಯುಎಂಎಫ್‌ಆರ್) ಅಧ್ಯಕ್ಷ

ಅಜ್ಮೇರ್‌ದಲ್ಲಿ 800 ವರ್ಷಗಳಿಂದ ದರ್ಗಾ ಇದೆ. ಈಗ ಪೂಜಾಸ್ಥಳಗಳ ಕಾಯ್ದೆ ಏನಾಗಲಿದೆ? ಇಂಥ ನಡೆಗಳು ಯಾವಾಗ ನಿಲ್ಲುತ್ತವೆ? ಇದು ದೇಶಕ್ಕೆ ಒಳ್ಳೆಯದಲ್ಲ. ಅರ್ಜಿ ಹಾಕುವವರು ನೇರವಾಗಿ ಇಲ್ಲವೇ ಪರೋಕ್ಷವಾಗಿ ಬಿಜೆಪಿ, ಆರ್‌ಎಸ್‌ಎಸ್ ಜೊತೆ ಸಂಬಂಧ ಹೊಂದಿದವರಾಗಿದ್ದಾರೆ **ಅಸಾದುದ್ದೀನ್ ಒವೈಸಿ**, ಎಐಎಂಐಎಂ ಸಂಸದ

ಈ ವಿಚಾರವಾಗಿ ಸಲ್ಲಿಕೆಯಾಗಿರುವ ಅರ್ಜಿಯನ್ನು ನ್ಯಾಯಾಲಯ ಪರಿಗಣಿಸಿದ್ದು ಸಮರ್ಥನೀಯವಲ್ಲ. ಈ ಅರ್ಜಿ ಪೂಜಾ ಸ್ಥಳಗಳ ಕಾಯ್ದೆ–1991ರಲ್ಲಿನ ಅವಕಾಶಗಳ ವಿರುದ್ಧವಾಗಿದೆ. ಸುಪ್ರೀಂ ಕೋರ್ಟ್ ತಕ್ಷಣವೇ ಮಧ್ಯಪ್ರವೇಶಿಸಬೇಕು **ಸಿಪಿಎಂ**

ಇದು ನೋವಿನ ಸಂಗತಿ. 2024 ಲೋಕಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆಯುವಲ್ಲಿ ವಿಫಲಗೊಂಡವರು ಬಹುಸಂಖ್ಯಾತರನ್ನು ಓಲೈಸುವ ಸಲುವಾಗಿ ಮುಸ್ಲಿಮರನ್ನು ಗುರಿಯಾಗಿಸುತ್ತಿದ್ದಾರೆ **ಮೊಹಿಬುಬುಲ್ಲಾ ನದ್ವಿ**, ಸಮಾಜವಾದಿ ಪಕ್ಷದ ಸಂಸದ

ದೆಹಲಿಯ ಮಲ್ಟಿಪ್ಲೆಕ್ಸ್ ಬಳಿ ಸ್ಫೋಟ

ನವದೆಹಲಿ (ಪಿಟಿಐ): ದೆಹಲಿಯ ರೋಹಿಣಿ ನಗರದ ಪ್ರಶಾಂತ್ ವಿಹಾರ್ ಪ್ರದೇಶದ ಪಿವಿಆರ್ ಮಲ್ಟಿಪ್ಲೆಕ್ಸ್ ಬಳಿ ಗುರುವಾರ ಸ್ಫೋಟ ಸಂಭವಿಸಿ, ವ್ಯಕ್ತಿಯೊಬ್ಬರು ಗಾಯಗೊಂಡಿದ್ದಾರೆ.

ಸಿಆರ್‌ಪಿಎಫ್ ಶಾಲೆ ಬಳಿ ಅ.20 ರಂದು ಸ್ಫೋಟ ಸಂಭವಿಸಿ, ಗೋಡೆಗೆ ಹಾನಿಯಾಗಿತ್ತು. ಇದೇ ಪ್ರದೇಶದಲ್ಲಿನ ಉದ್ಯಾನ ಸಮೀಪದ ಸಿಹಿ ತಿನಿಸು ಅಂಗಡಿ ಬಳಿ ಈಗ ಸ್ಫೋಟ ಸಂಭವಿಸಿದೆ.

ಸ್ಫೋಟದ ಸಮಯದಲ್ಲಿ ಸಮೀಪದಲ್ಲೇ ನಿಲ್ಲಿಸಿದ್ದ ಮೂರು ಚಕ್ರ ವಾಹನದ ಚಾಲಕ ಚೇತನ್ ಕುಶ್ವಾಹ (28) ಎಂಬುವವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸ್ಫೋಟ ನಡೆದ ಸ್ಥಳದಲ್ಲಿ ಚೆಲ್ಲಿದ್ದ 'ಬಿಳಿ ಪುಡಿ'ಯ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸ್ಫೋಟ ಸಂಭವಿಸಿದ ಸ್ಥಳದಲ್ಲಿ ಭದ್ರತಾ ಸಿಬ್ಬಂದಿ ಪರಿಶೀಲನೆ ನಡೆಸಿದರು – ಪಿಟಿಐ ಚಿತ್ರ

'ಬೆಳಿಗ್ಗೆ ಸುಮಾರು 11.48ಕ್ಕೆ ಪ್ರಶಾಂತ್ ವಿಹಾರ್ ಬಳಿ ಸ್ಫೋಟ ಸಂಭವಿಸಿದ ಬಗ್ಗೆ ಕರೆ ಬಂದಿತ್ತು. ತಕ್ಷಣ ಸ್ಥಳಕ್ಕೆ ಧಾವಿಸಿದೆವು' ಎಂದು ದೆಹಲಿ ಅಗ್ನಿಶಾಮಕ ದಳದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾನೂನು ಸುವ್ಯವಸ್ಥೆ ಕಾಪಾಡದ ಕೇಂದ್ರ: ಸ್ಫೋಟ ಕುರಿತು ಪ್ರತಿಕ್ರಿಯಿಸಿರುವ ದೆಹಲಿ ಮುಖ್ಯಮಂತ್ರಿ ಆತಿಶಿ ಅವರು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದ್ದಾರೆ.

ಕಳೆದ ಎರಡು ತಿಂಗಳಲ್ಲಿ ಇದೇ ಪ್ರದೇಶದಲ್ಲಿ ನಡೆದ ಎರಡನೇ ಘಟನೆ ಇದಾಗಿದೆ. ಇದು ಕಾನೂನು ಕಟ್ಟುನಿಟ್ಟಿನ ಜಾರಿ ಮತ್ತು ಸುರಕ್ಷತಾ ಕ್ರಮಗಳ ವೈಫಲ್ಯವನ್ನು ಸೂಚಿಸುತ್ತದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಬಿಜೆಪಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಘಟನೆಗೆ ಜವಾಬ್ದಾರರಾಗಿದ್ದಾರೆ. ರಾಜಧಾನಿಯಲ್ಲಿ ತಮ್ಮ ಜವಾಬ್ದಾರಿ ನಿಭಾಯಿಸುವಲ್ಲಿ ವಿಫಲರಾಗಿದ್ದಾರೆ' ಎಂದು ದೂರಿದ್ದಾರೆ.

ಸುನ್ನಿ– ಶಿಯಾ ಗುಂಪುಗಳ ನಡುವೆ ಹಿಂಸಾಚಾರ: 10 ಮಂದಿ ಸಾವು

ಪೆಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಕುರ್ರಂ ಜಿಲ್ಲೆಯಲ್ಲಿ ಸುನ್ನಿ ಮತ್ತು ಶಿಯಾ ಬುಡಕಟ್ಟು ಗುಂಪುಗಳ ಮಧ್ಯೆ ಘರ್ಷಣೆ ಮುಂದುವರಿದಿದೆ. ಮಂಗಳವಾರ ರಾತ್ರಿ ನಡೆದ ಹಿಂಸಾಚಾರದಲ್ಲಿ 10 ಮಂದಿ ಸಾವಿಗೀಡಾಗಿದ್ದು 21 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಶಾಂತಿ ಕಾಪಾಡುವಂತೆ ಎರಡೂ ಪಂಗಡಗಳ ನಡುವಿನ ಒಪ್ಪಂದವನ್ನು ಮುಂದಿನ 10 ದಿನಗಳವರೆಗೆ ವಿಸ್ತರಿಸಲಾಗಿದೆ ಎಂದು ಕುರ್ರಂ ಜಿಲ್ಲಾಧಿಕಾರಿ ತಿಳಿಸಿದರು.

ಕಳೆದ ವಾರದ ಹಿಂಸಾಚಾರದಲ್ಲಿ ಒಟ್ಟು 100 ಜನರು ಮೃತಪಟ್ಟು, 180 ಜನರು ಗಾಯಗೊಂಡಿದ್ದಾರೆ.

ಕಳೆದ ಗುರುವಾರ ಪರಾಚಿನಾರ್‌ನಲ್ಲಿ ಪ್ರಯಾಣಿಕ ವಾಹನವೊಂದರ ಮೇಲೆ ನಡೆದ ದಾಳಿಯಲ್ಲಿ 47 ಜನ ಸಾವಿಗೀಡಾಗಿದ್ದರು. ಬಳಿಕ ಶುಕ್ರವಾರ ಕುರ್ರಂನಲ್ಲಿ ಅಲಿಜೈ ಹಾಗೂ ಬಗಾನ್ ಬುಡಕಟ್ಟು ಪಂಗಡಗಳ ನಡುವೆ ಘರ್ಷಣೆ ಆರಂಭವಾಯಿತು. ಎರಡು ದಿನ ನಡೆದ ಹಿಂಸಾಚಾರದಲ್ಲಿ 37 ಜನ ಮೃತಪಟ್ಟಿದ್ದಾರೆ. ವಾಹನದ ಮೇಲೆ ನಡೆದ ದಾಳಿಯ ಹೊಣೆಯನ್ನು ಈವರೆಗೆ ಯಾರೂ ಹೊತ್ತುಕೊಂಡಿಲ್ಲ.

ಘಟನೆ ಬಳಿಕ ಸ್ಥಳೀಯ ಸರ್ಕಾರ ಹಾಗೂ ಎರಡೂ ಪಂಗಡಗಳ ಮುಖಂಡರು ನಡೆಸಿದ ಸಭೆಯಲ್ಲಿ ಏಳು ದಿನಗಳ ಶಾಂತಿ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಆದರೂ, ಅಲ್ಲಲ್ಲಿ ಘರ್ಷಣೆಗಳು ಮುಂದುವರಿದಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಹತ್ಯೆ: ಅಮೆರಿಕ ಸಂಸದ ಕಿಡಿ

ಪಾಕಿಸ್ತಾನದಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿರುವವರ ಹತ್ಯೆಗೆ ಪ್ರಯತ್ನಗಳು ನಡೆದಿವೆ ಎಂದು ಆರೋಪಿಸಿರುವ ಭಾರತ ಮೂಲದ ಅಮೆರಿಕದ ಸಂಸದ ರೋ ಖನ್ನಾ 'ಅಮೆರಿಕವು ಪಾಕಿಸ್ತಾನದ ಹಿರಿಯ ಅಧಿಕಾರಿಗಳ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಬೇಕು ಮತ್ತು ಅವರ ವೀಸಾವನ್ನು ನಿಷೇಧಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಜೈಲಿನಲ್ಲಿರುವ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬಿಡುಗಡೆಗೆ ಒತ್ತಾಯಿಸಿ ಅವರ ಬೆಂಬಲಿಗರು ನಡೆಸಿದ ಪ್ರತಿಭಟನೆ ವೇಳೆ ಅಧಿಕಾರಿಗಳು ನಾಲ್ವರನ್ನು ಹತ್ಯೆ ಮಾಡಿದ್ದಾರೆ ಹಾಗೂ 50 ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

'ಪೆಶಾವರಕ್ಕೆ ಪ್ರಯಾಣಿಸಬೇಡಿ'

ಡಿ.16ರವರೆಗೆ ಪೆಶಾವರಕ್ಕೆ ಭೇಟಿ ನೀಡದಂತೆ ಪಾಕಿಸ್ತಾನದಲ್ಲಿರುವ ಅಮೆರಿಕ ರಾಯಭಾರ ಕಚೇರಿಯು ತನ್ನ ನಾಗರಿಕರಿಗೆ ಎಚ್ಚರಿಕೆ ನೀಡಿದೆ.

'ಪೆಶಾವರದ ಸೆರೆನಾ ಹೋಟೆಲ್‌ಗೆ ಬೆದರಿಕೆ' ಎಂಬ ಶೀರ್ಷಿಕೆಯಡಿ ಬುಧವಾರ ಎಚ್ಚರಿಕೆ ನೀಡಲಾಗಿದೆ. 'ಈ ಸಮಯದಲ್ಲಿ ಸೆರೆನಾ ಹೋಟೆಲ್ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಕ್ಕೆ ಪ್ರಯಾಣಿಸಬೇಡಿ' ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಕೆ4 ಬ್ಯಾಲಿಸ್ಟಿಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ: ದೀರ್ಘ ವ್ಯಾಪ್ತಿ ಸಾಮರ್ಥ್ಯದ 'ಕೆ4 ಬ್ಯಾಲಿಸ್ಟಿಕ್ ಕ್ಷಿಪಣಿ'ಗಳ (ಎಸ್‌ಎಲ್‌ಬಿಎಂ) ಪರೀಕ್ಷಾರ್ಥ ಪ್ರಯೋಗವನ್ನು ಅಣುಶಕ್ತಿ ಚಾಲಿತ ಜಲಾಂತರ್ಗಾಮಿ ಐಎನ್‌ಎಸ್ ಅರಿಘಾತ್ ಬಳಸಿ ಬುಧವಾರ ಯಶಸ್ವಿಯಾಗಿ ನಡೆಸಲಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

'ಈ ಕ್ಷಿಪಣಿಗಳು 3500 ಕಿ.ಮೀ. ದೂರದ ಗುರಿಯನ್ನು ತಲುಪುವ ಸಾಮರ್ಥ್ಯ ಹೊಂದಿವೆ. ಪರೀಕ್ಷೆ ವೇಳೆ ಸಂಗ್ರಹಿಸಿರುವ ದತ್ತಾಂಶಗಳನ್ನು ವಿಶ್ಲೇಷಿಸಲಾಗುತ್ತಿದೆ. ಸೇನೆಯ ಉನ್ನತ ಅಧಿಕಾರಿಗಳಿಗೆ ನಂತರ ಈ ಕುರಿತು ವಿವರಿಸಲಾಗುತ್ತದೆ' ಎಂದು ರಕ್ಷಣಾ ಮೂಲಗಳು ಹೇಳಿವೆ.

ಈ ಕ್ಷಿಪಣಿ ಪರೀಕ್ಷೆ ಕುರಿತು ಕೇಂದ್ರ ಸರ್ಕಾರ ಯಾವುದೇ ಹೇಳಿಕೆ ನೀಡಿಲ್ಲ.

ಮಕ್ಕಳಿಗೆ ಜಾಲತಾಣ ನಿಷೇಧ ಆಸ್ಟ್ರೇಲಿಯಾ ಸಂಸತ್ ಒಪ್ಪಿಗೆ

ಮೆಲ್ಬರ್ನ್ (ಎಪಿ): 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸಾಮಾಜಿಕ ಜಾಲತಾಣ ಬಳಸುವುದನ್ನು ನಿಷೇಧಿಸುವ ಮಸೂದೆಗೆ ಆಸ್ಟ್ರೇಲಿಯಾ ಸಂಸತ್ತು ಗುರುವಾರ ಒಪ್ಪಿಗೆ ನೀಡಿದೆ. ಈ ಮೂಲಕ ಮಕ್ಕಳಿಗೆ ಜಾಲತಾಣಗಳನ್ನು ನಿಷೇಧಿಸಿದ ಮೊದಲ ರಾಷ್ಟ್ರ ಎಂಬ ಹೆಗ್ಗಳಿಕೆ ಪಾತ್ರವಾಗಿದೆ.

ಈ ಕಾನೂನಿನ ಪ್ರಕಾರ ಟಿಕ್‌ಟಾಕ್, ಫೇಸ್‌ಬುಕ್, ಸ್ನ್ಯಾಪ್‌ಚಾಟ್, ರೆಡ್ಡಿಟ್, ಎಕ್ಸ್ ಹಾಗೂ ಇನ್‌ಸ್ಟಾಗ್ರಾಂನಲ್ಲಿ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಖಾತೆ ಹೊಂದುವುದನ್ನು ತಡೆಯಲು ವಿಫಲವಾದಲ್ಲಿ ಈ ಜಾಲತಾಣಗಳಿಗೆ ₹278 ಕೋಟಿವರೆಗೆ (50 ಮಿಲಿಯನ್ ಆಸ್ಟ್ರೇಲಿಯನ್ ಡಾಲರ್) ದಂಡ ವಿಧಿಸಲಾಗುತ್ತದೆ. ಮಕ್ಕಳು ಖಾತೆ ಹೊಂದುವುದನ್ನು ನಿಷೇಧಿಸುವ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸಲು ಜಾಲತಾಣಗಳಿಗೆ 1 ವರ್ಷ ಸಮಯಾವಕಾಶ ನೀಡಲಾಗಿದೆ.

ಸೆನೆಟ್‌ನಲ್ಲಿ ಮಸೂದೆ ಪರವಾಗಿ 34 ಮತ್ತು ವಿರುದ್ಧವಾಗಿ 19 ಮತಗಳು ಬಂದವು. ಜನಪ್ರತಿನಿಧಿಗಳ ಸಭೆಯಲ್ಲಿ ಪರವಾಗಿ 102 ಮತ್ತು ವಿರುದ್ಧವಾಗಿ 13 ಮತಗಳು ಬಂದವು. ಎರಡೂ ಸದನಗಳಲ್ಲಿ ಮಸೂದೆಗೆ ಒಪ್ಪಿಗೆ ದೊರೆತಿದ್ದು, ಶೀಘ್ರವೇ ಇದು ಕಾನೂನಾಗಿ ಜಾರಿಗೆ ಬರಲಿದೆ.

ಗುಜರಾತ್: ಆಸ್ಟ್ರೇಲಿಯಾ ಪ್ರಜೆ ಸೇರಿ ನಾಲ್ವರ ಬಂಧನ

ಅಹಮದಾಬಾದ್: ಆಸ್ಟ್ರೇಲಿಯಾದ ಖೋಟಾ ಡಾಲರ್‌ಗಳನ್ನು ಮುದ್ರಣ ಮಾಡುತ್ತಿದ್ದ ಜಾಲವನ್ನು ಭೇದಿಸಿರುವ ಗುಜರಾತ್ ಪೊಲೀಸರು, ಭಾರತ ಮೂಲದ ಆಸ್ಟ್ರೇಲಿಯಾ ಪ್ರಜೆ ಸೇರಿ ನಾಲ್ವರನ್ನು ಗುರುವಾರ ಬಂಧಿಸಿದ್ದಾರೆ.

ಆಸ್ಟ್ರೇಲಿಯಾ ಪ್ರಜೆ ಮೌಲಿಕ್ ಶಂಕರಭಾಯಿ ಪಟೇಲ್, ರಾಜ್ಯದವರಾದ ರೋನಕ್ ಚೇತನ್‌ಭಾಯಿ ರಾಠೋಡ್, ಖುಷ್ ಅಶೋಕಭಾಯಿ ಪಟೇಲ್ ಹಾಗೂ ಧ್ರುವ ಹಿಮಾಂಶು ದೇಸಾಯಿ ಬಂಧಿತರು.

ಬಂಧಿತರಿಂದ 151 ಖೋಟಾ ಡಾಲರ್, ಖೋಟಾ ಡಾಲರ್‌ಗಳ 18 ಶೀಟುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ರಾಕೇಶ್ ವಘೇಲಾ ಎಂಬುವವರು ನೀಡಿದ ಮಾಹಿತಿ ಮೇರೆಗೆ, ಅಹಮದಾಬಾದ್ ಪೊಲೀಸ್‌ನ ವಿಶೇಷ ಕಾರ್ಯಾಚರಣೆ ತಂಡ(ಎಸ್‌ಒಜಿ) ಈ ಕಾರ್ಯಾಚರಣೆ ನಡೆಸಿದೆ.

ಗಾಂಧಿನಗರದ ಪ್ರಮುಖ್ ಬಂಗಲೆ ನಿವಾಸಿ, 36 ವರ್ಷದ ಮೌಲಿಕ್ ಪಟೇಲ್ ಈ ಜಾಲದ ಸೂತ್ರಧಾರಿ ಎಂದು ಪೊಲೀಸರು ತಿಳಿಸಿದ್ದಾರೆ.

ಐಸಿಸಿಯಿಂದ ಹಸೀನಾ ವಿಚಾರಣೆ ಸಾಧ್ಯತೆ

ಢಾಕಾ (ಪಿಟಿಐ): ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರನ್ನು ಅಂತರರಾಷ್ಟ್ರೀಯ ಅಪರಾಧ ನ್ಯಾಯಾಲಯದ (ಐಸಿಸಿ) ವಿಚಾರಣೆಗೆ ಒಳಪಡಿಸಲು ಪ್ರಯತ್ನಿಸುತ್ತಿರುವುದಾಗಿ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ಅವರ ಕಚೇರಿ ಗುರುವಾರ ಹೇಳಿದೆ.

'ಹಸೀನಾ ಅವರನ್ನು ವಿಚಾರಣೆಗೆ ಒಳಪಡಿಸುವ ಸಂಬಂಧ ಯೂನುಸ್ ಅವರು ಐಸಿಸಿ ಪ್ರಾಸಿಕ್ಯೂಟರ್ ಕರೀಮ್ ಎ. ಖಾನ್ ಅವರೊಂದಿಗೆ ಚರ್ಚಿಸಿದ್ದಾರೆ' ಎಂದು ಕಚೇರಿಯ ಮಾಧ್ಯಮ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಪ್ರತಿಭಟನೆ ವೇಳೆ ನಡೆದ 'ನರಮೇಧ'ಕ್ಕೆ ಸಂಬಂಧಿಸಿದಂತೆ ಹಸೀನಾ ಹಾಗೂ ಇತರರ ವಿಚಾರಣೆ ಬಾಂಗ್ಲಾದೇಶದಲ್ಲಿ ನಡೆಯುತ್ತಿದೆ. ಅದರ ನಡುವೆಯೇ ಅವರನ್ನು ಐಸಿಸಿ ವಿಚಾರಣೆಗೆ ಒಳಪಡಿಸಲು ಮಧ್ಯಂತರ ಸರ್ಕಾರ ಬಯಸಿದೆ. ಆಗಸ್ಟ್ 5ರಂದು ದೇಶ ತೊರೆದಿದ್ದ ಹಸೀನಾ, ಭಾರತದಲ್ಲಿ ಆಶ್ರಯ ಪಡೆದಿದ್ದಾರೆ.

ಶೇಖ್ ಹಸೀನಾ

'ಒಪ್ಪಂದ ಜಾರಿಯಲ್ಲಿ ಪ್ರಗತಿ'

ಬೀಜಿಂಗ್ (ಪಿಟಿಐ): ಪೂರ್ವ ಲಡಾಖ್‌ನಲ್ಲಿ ನಾಲ್ಕು ವರ್ಷಗಳ ಸುದೀರ್ಘ ಬಿಕ್ಕಟ್ಟನ್ನು ಕೊನೆಗೊಳಿಸುವ ಸಂಬಂಧ ಮಾಡಿರುವ ಒಪ್ಪಂದದ ಜಾರಿಯಲ್ಲಿ ಚೀನಾ ಮತ್ತು ಭಾರತದ ಸೇನೆ ಉತ್ತಮ ಪ್ರಗತಿ ಸಾಧಿಸುತ್ತಿವೆ ಎಂದು ಚೀನಾದ ರಕ್ಷಣಾ ಸಚಿವಾಲಯ ಗುರುವಾರ ತಿಳಿಸಿದೆ.

'ಚೀನಾದ ಡ್ರ್ಯಾಗನ್ ಮತ್ತು ಭಾರತದ ಆನೆ ಜತೆಯಾಗಿ ಹೆಜ್ಜೆಯಿಟ್ಟು, ಸಾಮರಸ್ಯದ ನೃತ್ಯ ಮಾಡುವುದನ್ನು ನಾವು ಎದುರು ನೋಡುತ್ತಿದ್ದೇವೆ' ಎಂದು ರಕ್ಷಣಾ ಸಚಿವಾಲಯದ ವಕ್ತಾರ ಕರ್ನಲ್ ವು ಕ್ವಿಯಾನ್ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಚೀನಾದ ರಕ್ಷಣಾ ಸಚಿವ ಅಡ್ಮಿರಲ್ ಡಾಂಗ್ ಜುನ್ ಅವರು ಈಚೆಗೆ ಲಾವೋಸ್‌ನಲ್ಲಿ ನಡೆದ ಭದ್ರತಾ ಸಮಾವೇಶದ ಸಂದರ್ಭದಲ್ಲಿ ಸಕಾರಾತ್ಮಕ ಹಾಗೂ ರಚನಾತ್ಮಕ ಸಭೆ ನಡೆಸಿದ್ದಾರೆ ಎಂದು ತಿಳಿಸಿದರು.

ಪೂರ್ವ ಲಡಾಖ್‌ನಲ್ಲಿನ ಬಿಕ್ಕಟ್ಟು ಕೊನೆಗೊಳಿಸಲು ಉಭಯ ದೇಶಗಳು ಮಾಡಿಕೊಂಡ ಒಪ್ಪಂದದ ಅನುಷ್ಠಾನದ ಪ್ರಗತಿಯ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 'ಒಪ್ಪಂದವನ್ನು ಎರಡೂ ಕಡೆಯವರು ಕಾರ್ಯಗತಗೊಳಿಸುತ್ತಿದ್ದಾರೆ' ಎಂದರು.

ಪೂರ್ವ ಲಡಾಖ್‌ನ ಡೆಪ್ಸಾಂಗ್ ಮತ್ತು ಡೆಮ್‌ಚೋಕ್ ಪ್ರದೇಶಗಳಲ್ಲಿ ನಿಯೋಜಿಸಿರುವ ತಮ್ಮ ಸೇನೆಗಳನ್ನು ಒಪ್ಪಂದದ ಪ್ರಕಾರ ಚೀನಾ ಹಾಗೂ ಭಾರತ ವಾಪಸ್ ಕರೆಸಿಕೊಂಡಿವೆ.

ಸಂಸತ್ತಿನಲ್ಲಿ ಚರ್ಚೆಗೆ ಅವಕಾಶ ನೀಡುವಂತೆ ವಿರೋಧ ಪಕ್ಷಗಳ ಬಿಗಿಪಟ್ಟು

ಅದಾನಿ ಹಗರಣ: ಕಲಾಪ ಹರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಉದ್ಯಮಿ ಗೌತಮ್ ಅದಾನಿ ಲಂಚ ಹಗರಣ, ಮಣಿಪುರ ಹಾಗೂ ಸಂಭಲ್ ಹಿಂಸಾಚಾರ ಪ್ರಕರಣಗಳನ್ನು ಕೂಡಲೇ ಚರ್ಚೆಗೆ ಕೈಗೆತ್ತಿಕೊಳ್ಳಬೇಕೆಂಬ ಬಿಗಿಪಟ್ಟನ್ನು 'ಇಂಡಿಯಾ' ಮೈತ್ರಿಕೂಟದ ಸಂಸದರು ಗುರುವಾರವೂ ಸಡಿಲಿಸಲಿಲ್ಲ. ಇದರಿಂದಾಗಿ, ಸತತ ಮೂರನೇ ದಿನವೂ ಸಂಸತ್ ಕಲಾಪಗಳು ನಡೆಯಲಿಲ್ಲ.

ಸಂಭಲ್‌ನಲ್ಲಿ ಹಿಂಸಾಚಾರ ನಡೆಸಿದ ದುಷ್ಕರ್ಮಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಪಕ್ಷದ ಸದಸ್ಯರು ಲೋಕಸಭೆಯಲ್ಲಿ ಸಭಾಧ್ಯಕ್ಷರ ಪೀಠದ ಎದುರು ಧರಣಿ ನಡೆಸಿ ಘೋಷಣೆಗಳನ್ನು ಕೂಗಿದರು.

ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಪ್ರತಿಭಟನೆಯನ್ನು ಖಂಡಿಸಿದರು, 'ಸದನದ ಕಲಾಪಕ್ಕೆ ಅಡ್ಡಿಪಡಿಸುವ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಪ್ರಯತ್ನಗಳನ್ನು ನಾನು ಖಂಡಿಸುತ್ತೇನೆ' ಎಂದು ಅವರು ಹೇಳಿದರು.

ಆದರೆ, ಪ್ರತಿಪಕ್ಷಗಳ ಗದ್ದಲ ಮುಂದುವರಿದಿದ್ದರಿಂದ ಸಭಾಧ್ಯಕ್ಷರು ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು.

ರಾಜ್ಯಸಭೆಯಲ್ಲಿಯೂ ವಿರೋಧ ಪಕ್ಷದ ಸದಸ್ಯರ ಗದ್ದಲದಿಂದಾಗಿ ರಾಜ್ಯಸಭೆಯ ಕಲಾಪ ರದ್ದಾಯಿತು.

ಕಲಾಪ ನಡೆಸಲು ಸಹಕಾರ ನೀಡುವಂತೆ ಸಭಾಪತಿ ಜಗದೀಪ ಧನಕರ್ ಅವರು ವಿಪಕ್ಷ ಸದಸ್ಯರಿಗೆ ಮನವಿ ಮಾಡಿದರು. ಅವರ ಮನವಿಗೆ ವಿಪಕ್ಷ ಸದಸ್ಯರು ಕಿವಿಗೊಡಲಿಲ್ಲ. 'ಕಲಾಪಕ್ಕೆ ಅಡ್ಡಿಪಡಿಸುವುದು ಪರಿಹಾರ ಅಲ್ಲ, ಇದೊಂದು ರೋಗ. ಇದು ನಮ್ಮ ಅಡಿಪಾಯವನ್ನು ದುರ್ಬಲಗೊಳಿಸುತ್ತದೆ. ಇಂತಹ ಧೋರಣೆ ಸರಿಯಲ್ಲ. ಸಂಸದರು ಅರ್ಥಪೂರ್ಣ ಚರ್ಚೆಗಳಲ್ಲಿ ಪಾಲ್ಗೊಳ್ಳಬೇಕು' ಎಂದು ಧನಕರ್ ಸಲಹೆ ನೀಡಿದರು.

ಅದಾನಿ ಲಂಚ ಪ್ರಕರಣ, ಮಣಿಪುರ ಹಾಗೂ ಸಂಭಲ್ ಹಿಂಸಾಚಾರ ಪ್ರಕರಣಗಳ ಚರ್ಚೆಗೆ ಒತ್ತಾಯಿಸಿ ವಿಪಕ್ಷ ಸದಸ್ಯರು ನೀಡಿದ ನೋಟಿಸ್‌ಗಳನ್ನು ಸಭಾಪತಿ ತಿರಸ್ಕರಿಸಿದರು. ಬಳಿಕ ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಲಾಯಿತು.

ಕಾಂಗ್ರೆಸ್ ಸಂಸದ ರವೀಂದ್ರ ಚವಾಣ್ ಅವರು ಸಹ ಪ್ರಮಾಣ ವಚನ ಸ್ವೀಕರಿಸಿದರು.

ಚಳಿಗಾಲದ ಅಧಿವೇಶನ

ಸಂವಿಧಾನದ ಪ್ರತಿ ಹಿಡಿದು ಪ್ರಿಯಾಂಕಾ ಗಾಂಧಿ ಪ್ರಮಾಣ

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ವಯನಾಡ್ ಕ್ಷೇತ್ರದ ಲೋಕಸಭೆ ಸದಸ್ಯೆಯಾಗಿ ಪ್ರಮಾಣ ವಚನವನ್ನು ಗುರುವಾರ ಸ್ವೀಕರಿಸಿದರು.

52ರ ಹರೆಯದ ಪ್ರಿಯಾಂಕಾ ಅವರು ಸಕ್ರಿಯ ರಾಜಕೀಯಕ್ಕೆ ಸೇರಿದ ಐದು ವರ್ಷಗಳ ನಂತರ ಚುನಾಯಿತ ಪ್ರತಿನಿಧಿಯಾಗಿ ಹೊಸ ಪಯಣ ಆರಂಭಿಸಿದ್ದಾರೆ. ಸ್ಪೀಕರ್ ಓಂ ಬಿರ್ಲಾ ಪ್ರಮಾಣ ವಚನ ಬೋಧಿಸಿದರು. ಪ್ರಮಾಣ ವಚನ ಸ್ವೀಕರಿಸುವಾಗ ಪ್ರಿಯಾಂಕಾ ಕೈಯಲ್ಲಿ ಸಂವಿಧಾನದ ಪ್ರತಿಯನ್ನು ಹಿಡಿದಿದ್ದರು. ಕೇರಳದ ಸಾಂಪ್ರದಾಯಿಕ ಶೈಲಿಯ, ಕೆನೆ ಬಣ್ಣದ ಕಸೂತಿ ಸೀರೆಯನ್ನು ಉಟ್ಟಿದ್ದರು. ಪ್ರಮಾಣ ವಚನ ಸ್ವೀಕರಿಸುವಾಗ, ಕಾಂಗ್ರೆಸ್ ಸಂಸದರು 'ಜೋಡೊ ಜೋಡೊ, ಭಾರತ್ ಜೋಡೊ' ಎಂಬ ಘೋಷಣೆ ಕೂಗಿದರು.

ಪ್ರಿಯಾಂಕಾ ಪ್ರಮಾಣ ವಚನ ಸ್ವೀಕರಿಸಿದರು –ಪಿಟಿಐ ಚಿತ್ರ

ಪ್ರಿಯಾಂಕಾ ಪ್ರಮಾಣ ವಚನ ಸ್ವೀಕರಿಸುವುದನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಾ ಅವರ ತಾಯಿ, ಪಕ್ಷದ ಸಂಸದೀಯ ಪಕ್ಷದ (ಸಿಪಿಪಿ) ಮುಖ್ಯಸ್ಥೆ ಸೋನಿಯಾ ಗಾಂಧಿ, ಪತಿ ರಾಬರ್ಟ್ ವಾದ್ರಾ, ಮಗ ರೈಹಾನ್ ಮತ್ತು ಮಗಳು ಮಿರಾಯಾ ಅವರು ಪ್ರೇಕ್ಷಕರ ಗ್ಯಾಲರಿಯಿಂದ ವೀಕ್ಷಿಸಿದರು.

ಇದಕ್ಕೂ ಮೊದಲು, ಕಾಂಗ್ರೆಸ್ ಸಂಸದರು ಸಂಸತ್ತಿನ ಆವರಣದಲ್ಲಿರುವ ಸಿಪಿಪಿ ಕಚೇರಿಯಲ್ಲಿ ಪ್ರಿಯಾಂಕಾ ಅವರನ್ನು ಭೇಟಿ ಮಾಡಿ ಅಭಿನಂದಿಸಿದರು. ಪ್ರಮಾಣವಚನ ಸ್ವೀಕರಿಸಿದ ನಂತರ, ಪ್ರಿಯಾಂಕಾ ತಮ್ಮ ಸಹೋದರ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಆಲಿಂಗಿಸಿಕೊಂಡು ಸಂಭ್ರಮ ಹಂಚಿಕೊಂಡರು.

ವಕ್ಫ್ ಮಸೂದೆ: ಸಂಸದೀಯ ಸಮಿತಿಯ ಅಧಿಕಾರಾವಧಿ ವಿಸ್ತರಣೆ

ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿಯ ಕಾರ್ಯಾವಧಿಯನ್ನು ಮುಂದಿನ ವರ್ಷದ ಬಜೆಟ್ ಅಧಿವೇಶನದ ಕೊನೆಯ ದಿನದವರೆಗೆ ವಿಸ್ತರಿಸುವ ನಿರ್ಣಯವನ್ನು ಲೋಕಸಭೆ ಗುರುವಾರ ಅಂಗೀಕರಿಸಿತು.

ಸಮಿತಿ ಅಧ್ಯಕ್ಷ ಮತ್ತು ಬಿಜೆಪಿ ಸಂಸದ ಜಗದಂಬಿಕಾ ಪಾಲ್ ಅವರು ಲೋಕಸಭೆಯಲ್ಲಿ ಮಂಡಿಸಿದ ನಿರ್ಣಯವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಸಮಿತಿಯ ಕರಡು ವರದಿ ಸಿದ್ಧವಾಗಿದೆ ಎಂದು ಪಾಲ್ ಅವರು ಹೇಳಿದ್ದರು. ಹೀಗಾಗಿ, ಬುಧವಾರ ನಡೆದ ಸಭೆಯಲ್ಲಿ ಸಮಿತಿಯಲ್ಲಿದ್ದ ವಿಪಕ್ಷಗಳ ಸದಸ್ಯರು ಪಾಲ್ ಅವರನ್ನು ತರಾಟೆಗೆ ತೆಗೆದುಕೊಂಡು, ಸಭಾ ತ್ಯಾಗ ಮಾಡಿದ್ದರು. ನಂತರ, ಪಾಲ್ ಮತ್ತು ಸಮಿತಿಯಲ್ಲಿನ ಬಿಜೆಪಿಯ ಸಂಸದರು ವಿರೋಧ ಪಕ್ಷದ ಸದಸ್ಯರ ಮನವೊಲಿಸಿ, ಲೋಕಸಭೆಗೆ ಸಮಿತಿಯು ತನ್ನ ವರದಿ ಸಲ್ಲಿಸಲು ನಿಗದಿಪಡಿಸಿದ್ದ ನವೆಂಬರ್ 29ರ ಗಡುವು ವಿಸ್ತರಿಸಲು ಮನವಿ ಮಾಡುವ ಒಮ್ಮತದ ತೀರ್ಮಾನವನ್ನು ಕೈಗೊಂಡಿದ್ದರು.

ಜಾರ್ಖಂಡ್: 4ನೇ ಬಾರಿಗೆ ಸಿ.ಎಂ ಆಗಿ ಅಧಿಕಾರ • ವಿಶ್ವಾಸಮತ ಬಳಿಕ ಸಂಪುಟ ವಿಸ್ತರಣೆ

ಮುಖ್ಯಮಂತ್ರಿಯಾಗಿ ಹೇಮಂತ್ ಪ್ರಮಾಣ

ಪ್ರಜಾವಾಣಿ ವಾರ್ತೆ

ಪಟ್ನಾ: ಜಾರ್ಖಂಡ್ ರಾಜ್ಯದ 14ನೇ ಮುಖ್ಯಮಂತ್ರಿಯಾಗಿ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಪಕ್ಷದ ಮುಖ್ಯಸ್ಥ ಹೇಮಂತ್ ಸೊರೇನ್ ಗುರುವಾರ ಪ್ರಮಾಣವಚನ ಸ್ವೀಕರಿಸಿದರು.

ರಾಜ್ಯ ರಾಜಧಾನಿ ರಾಂಚಿಯ ಮೊರಬಡಿ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಸಂತೋಷ್ ಗ್ಯಾಂಗ್ವಾರ್ ಅವರು ಅಧಿಕಾರ ಮತ್ತು ಗೋಪ್ಯತೆಯ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ಗುರುವಾರ ಸೊರೇನ್ ಮಾತ್ರವೇ ಪ್ರಮಾಣವಚನ ಸ್ವೀಕರಿಸಿದ್ದು, ವಿಧಾನಸಭೆಯಲ್ಲಿ ವಿಶ್ವಾಸಮತವನ್ನು ಸಾಬೀತು ಪಡಿಸಿದ ಬಳಿಕ ಸಚಿವ ಸಂಪುಟ ವಿಸ್ತರಣೆ ಆಗುವ ಸಾಧ್ಯತೆಗಳಿವೆ.

49 ವರ್ಷ ವಯಸ್ಸಿನ ಹೇಮಂತ್ 4ನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಹಿರಿಮೆಗೆ ಪಾತ್ರರಾದರು. ಹೇಮಂತ್ ತಮ್ಮ ನೇತೃತ್ವದ ಸರ್ಕಾರವನ್ನು 'ಅಬುವಾ ಸರ್ಕಾರ' ಎಂದು ಬಣ್ಣಿಸಿದ್ದಾರೆ. 'ಅಬುವಾ' ಬುಡಕಟ್ಟು ಜನರ ಭಾಷೆಯ ಪದವಾಗಿದ್ದು, ಇದರರ್ಥ 'ನಮ್ಮ' ಎಂದಾಗಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ, ಪಶ್ಚಿಮ ಬಂಗಾಳದ ಸಿ.ಎಂ ಮಮತಾ ಬ್ಯಾನರ್ಜಿ, ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್, ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಸೇರಿ ಹಲವು ಪ್ರಮುಖರು ಈ ವೇಳೆ ಉಪಸ್ಥಿತರಿದ್ದರು.

'ಇಂಡಿಯಾ' ಮೈತ್ರಿಕೂಟದ ಮಿತ್ರ ಪಕ್ಷಗಳಾಗಿರುವ ಕಾಂಗ್ರೆಸ್ ಮತ್ತು ಆರ್‌ಜೆಡಿ ಕೂಡಾ ಸರ್ಕಾರದಲ್ಲಿ ಭಾಗಿಯಾಗಲಿವೆ ಎಂದು ಅಂದಾಜು ಮಾಡಲಾಗಿತ್ತು.

ಮೂಲಗಳ ಪ್ರಕಾರ ಮಿತ್ರಪಕ್ಷಗಳು ಸಂಪುಟ ಸೇರುವ ಶಾಸಕರ ಪಟ್ಟಿ ಅಂತಿಮಗೊಳಿಸಿರಲಿಲ್ಲ. ಹೀಗಾಗಿ, ಹೇಮಂತ್ ಒಬ್ಬರೇ ಅಧಿಕಾರ ಸ್ವೀಕರಿಸಿದರು. ಸಂಪುಟ ವಿಸ್ತರಣೆ ಡಿಸೆಂಬರ್‌ನಲ್ಲಿ ನಡೆಯುವ ಸಂಭವವಿದೆ.

ಜೆಎಂಎಂ ನೇತೃತ್ವದಲ್ಲಿ ವಿಧಾನಸಭೆ ಚುನಾವಣೆ ಎದುರಿಸಿದ 'ಇಂಡಿಯಾ' ಮಿತ್ರ ಪಕ್ಷಗಳು ಒಟ್ಟು 81 ಸ್ಥಾನಗಳ ಪೈಕಿ 56 ಸ್ಥಾನಗಳನ್ನು ಗೆದ್ದುಕೊಂಡಿವೆ. ಹೀಗಾಗಿ, ವಿಶ್ವಾಸಮತ ಸಾಬೀತು ಪಡಿಸುವುದು ಔಪಚಾರಿಕವಾದ ಪ್ರಕ್ರಿಯೆಯಾಗಿದೆ.



ಹೇಮಂತ್ ಸೊರೇನ್ – ಪಿಟಿಐ ಚಿತ್ರ

'ಶಿಂದೆ ಡಿಸಿಎಂ ಆಗುವ ಸಾಧ್ಯತೆಯಿಲ್ಲ'

ಮುಂಬೈ: ಏಕನಾಥ ಶಿಂಧೆ ಅವರು ಮಹಾರಾಷ್ಟ್ರದ ಹೊಸ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಹುದ್ದೆಯನ್ನು ಒಪ್ಪಿಕೊಳ್ಳುವ ಸಾಧ್ಯತೆಯಿಲ್ಲ ಎಂದು ಅವರ ಆಪ್ತ ಸಂಜಯ್ ಶಿರ್ಸಾಟ್ ಗುರುವಾರ ಹೇಳಿದ್ದಾರೆ.

ಆದರೆ ಶಿಂದೆ ಅವರು ನೂತನ ಸಂಪುಟದಲ್ಲಿ ಇರಲಿದ್ದಾರೆ ಎಂದು ಶಾಸಕ ಹಾಗೂ ಶಿವಸೇನಾದ (ಶಿಂದೆ ಬಣ) ವಕ್ತಾರರೂ ಆಗಿರುವ ಅವರು ತಿಳಿಸಿದರು.

'ಅವರು ಉಪಮುಖ್ಯಮಂತ್ರಿಯಾಗುವ ಸಾಧ್ಯತೆ ಕಡಿಮೆ. ಏಕೆಂದರೆ, ಈಗಾಗಲೇ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ ವ್ಯಕ್ತಿಗೆ ಇದು ಸರಿಹೊಂದುವುದಿಲ್ಲ. ಶಿಂದೆ ನೇತೃತ್ವದ ಶಿವಸೇನೆಯು ಉಪಮುಖ್ಯಮಂತ್ರಿ ಸ್ಥಾನಕ್ಕೆ ಇನ್ನೊಬ್ಬ ನಾಯಕನ ಹೆಸರನ್ನು ಸೂಚಿಸಲಿದೆ' ಎಂದು ಹೇಳಿದರು.

'ಮತದಾನ ಪ್ರಮಾಣ ದಿಢೀರ್ ಏರಿಕೆ ಏಕೆ?'

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ಮತದಾನ ಪ್ರಮಾಣ ಏಕಾಏಕಿ ಹೆಚ್ಚಳವಾಗಲು ಏನು ಕಾರಣ ಎಂಬುದನ್ನು ಚುನಾವಣಾ ಆಯೋಗ ಸ್ಪಷ್ಟಪಡಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

'ಮತದಾನ ನಡೆದ ನ.20ರಂದು ಸಂಜೆ 5ರ ವೇಳೆಗೆ ಶೇ 58.22 ರಷ್ಟು ಮತದಾನ ಆಗಿರುವುದನ್ನು ಆಯೋಗ ಬಿಡುಗಡೆ ಮಾಡಿರುವ ಅಂಕಿ–ಅಂಶ ತೋರಿಸಿದೆ. ಆದರೆ, ಅದೇ ರಾತ್ರಿ 11.30ರ ಅಂಕಿ–ಅಂಶವು ಮತದಾನ ಪ್ರಮಾಣ ಶೇ 65.02 ಹಾಗೂ ಮರುದಿನ ಪ್ರಕಟಿಸಿದ ಅಂತಿಮ ಅಂಕಿ–ಅಂಶ ಶೇ 66.05 ಆಗಿರುವುದನ್ನು ತೋರಿಸಿದೆ. ಅಲ್ಪ ಅವಧಿಯಲ್ಲಿ ಮತದಾನ ಪ್ರಮಾಣ ಶೇ 7.83ರಷ್ಟು ಹೆಚ್ಚಲು ಏನು ಕಾರಣ' ಎಂದು ಮಹಾರಾಷ್ಟ್ರ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ಪ್ರಶ್ನಿಸಿದ್ದಾರೆ.

ಕೋರ್ಸ್‌ಗಳ ಅವಧಿ ಕಡಿತ, ವಿಸ್ತರಣೆ ಅವಕಾಶ ಶೀಘ್ರ

ವಿದ್ಯಾರ್ಥಿಗಳಿಗೆ ಆಯ್ಕೆ ಅವಕಾಶ

ನವದೆಹಲಿ (ಪಿಟಿಐ): ಪದವಿ ವಿದ್ಯಾರ್ಥಿಗಳು ತಾವು ಕಲಿಯಲು ಬಯಸುವ ಕೋರ್ಸ್‌ಗಳ ನಿಗದಿತ ಅವಧಿಯನ್ನು ಕಡಿಮೆ ಮಾಡುವ ಅಥವಾ ವಿಸ್ತರಿಸುವ ಆಯ್ಕೆಯನ್ನು ಶೀಘ್ರದಲ್ಲೇ ಪಡೆಯಲಿದ್ದಾರೆ.

ವಿದ್ಯಾರ್ಥಿಗಳಿಗೆ ಇಂತಹ ಆಯ್ಕೆಯನ್ನು ನೀಡಲು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಾಧ್ಯವಾಗಲಿದೆ ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಜಗದೀಶ್ ಕುಮಾರ್ ಹೇಳಿದ್ದಾರೆ.

ಉನ್ನತ ಶಿಕ್ಷಣ ಸಂಸ್ಥೆಗಳು ಆಕ್ಸಲರೇಟೆಡ್ ಡಿಗ್ರಿ ಪ್ರೋಗ್ರಾಮ್ (ಎಡಿಪಿ) ಮತ್ತು ಎಕ್ಸ್‌ಟೆಂಡೆಡ್ ಡಿಗ್ರಿ ಪ್ರೋಗ್ರಾಮ್ (ಇಡಿಪಿ) ನೀಡಲಿಕ್ಕಾಗಿ ರಚಿಸಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನಕ್ಕೆ (ಎಸ್‌ಒಪಿ) ಈಚೆಗೆ ನಡೆದ ಸಭೆಯಲ್ಲಿ ಯುಜಿಸಿ ಅನುಮೋದನೆ ನೀಡಿದೆ. ಕರಡು ಮಾನದಂಡಗಳನ್ನು ಸಂಬಂಧಪಟ್ಟ ಭಾಗೀದಾರರಿಂದ ಪ್ರತಿಕ್ರಿಯೆಗಾಗಿ ಸಾರ್ವಜನಿಕರ ಮುಂದೆ ಇಡಲಾಗುತ್ತದೆ.

'ಪದವಿ ಕೋರ್ಸ್‌ಗೆ ಪ್ರವೇಶ ಪಡೆಯುವ ವೇಳೆ ವಿದ್ಯಾರ್ಥಿಗಳಿಗೆ ಎರಡು ಆಯ್ಕೆಗಳನ್ನು ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ಅಧ್ಯಯನದ ಅವಧಿಯನ್ನು ಕಡಿಮೆ ಮಾಡಲು ಅಥವಾ ವಿಸ್ತರಿಸಲು ಈ ಆಯ್ಕೆಗಳನ್ನು ಬಳಸಿಕೊಳ್ಳಬಹುದು' ಎಂದು ಜಗದೀಶ್ ಕುಮಾರ್ ಹೇಳಿದರು.

'ಮೂರು ವರ್ಷ ಅಥವಾ ನಾಲ್ಕು ವರ್ಷಗಳ ಪದವಿಯನ್ನು ಅದಕ್ಕಿಂತ ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಲು ಎಡಿಪಿ ವಿದ್ಯಾರ್ಥಿಗಳಿಗೆ ಅವಕಾಶ ನೀಡುತ್ತದೆ. ಇಡಿಪಿ ಪದವಿ ವ್ಯಾಸಂಗದ ಅವಧಿಯನ್ನು ವಿಸ್ತರಿಸಲು ಅವಕಾಶ ನೀಡುತ್ತದೆ' ಎಂದು ವಿವರಿಸಿದರು.

'ಎಲ್ಲ ರೀತಿಯ ಉದ್ಯೋಗ ಮತ್ತು ಶೈಕ್ಷಣಿಕ ಉದ್ದೇಶಗಳಿಗೆ ಸಾಮಾನ್ಯ ಅವಧಿಯ ಪದವಿಯನ್ನು ಹೇಗೆ ಪರಿಗಣಿಸಲಾಗುವುದೋ, ಎಡಿಪಿ ಮತ್ತು ಇಡಿಪಿ ಅಡಿಯಲ್ಲಿ ಪಡೆಯುವ ಪದವಿಯನ್ನೂ ಅದೇ ರೀತಿ ಪರಿಗಣಿಸಲಾಗುವುದು. ಈ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳ ಅರ್ಹತೆಯನ್ನು ಮೌಲ್ಯಮಾಪನ ಮಾಡಲು ಉನ್ನತ ಶಿಕ್ಷಣ ಸಂಸ್ಥೆಗಳು ಸಮಿತಿಗಳನ್ನು ಸ್ಥಾಪಿಸಲಿವೆ' ಎಂದು ಮಾಹಿತಿ ನೀಡಿದರು.

ಎಸ್‌ಒಪಿಯಲ್ಲಿ ಏನಿದೆ?

- ಕಾಲೇಜುಗಳು ತನಗೆ ಮಂಜೂರಾಗಿರುವ ಒಟ್ಟು ಸೀಟುಗಳಲ್ಲಿ ಶೇ10 ರಷ್ಟನ್ನು ಎಡಿಪಿಗಾಗಿ ಮೀಸಲಿಡಬಹುದು
- ಎಡಿಪಿಯ ಪಠ್ಯಕ್ರಮ ಮತ್ತು ಸಾಮಾನ್ಯ ಪದವಿಯ ಪಠ್ಯಕ್ರಮ ಒಂದೇ ಆಗಿರುತ್ತವೆ. ಒಟ್ಟು ಅಂಕಗಳೂ ಸಮಾನವಾಗಿರುತ್ತವೆ. ವ್ಯಾಸಂಗದ ಅವಧಿ ಮಾತ್ರ ಹೆಚ್ಚುಕಡಿಮೆ ಇರುತ್ತವೆ
- ವಿದ್ಯಾರ್ಥಿಗಳು ಮೊದಲ ಸೆಮಿಸ್ಟರ್ ಅಥವಾ ಎರಡನೇ ಸೆಮಿಸ್ಟರ್‌ನ ಕೊನೆಯಲ್ಲಿ ಎಡಿಪಿಯನ್ನು ಆಯ್ಕೆ ಮಾಡುವ ಅವಕಾಶ ಹೊಂದಿರುವರು. ಆ ಬಳಿಕ ಅವಕಾಶವಿಲ್ಲ
- ಇಡಿಪಿಯಲ್ಲಿ ಮೂರು ವರ್ಷ ಅಥವಾ ನಾಲ್ಕು ವರ್ಷಗಳ ಪದವಿ ಕೋರ್ಸ್ ಅವಧಿಯನ್ನು ಗರಿಷ್ಠ ಎರಡು ಸೆಮಿಸ್ಟರ್‌ಗಳವರೆಗೆ ವಿಸ್ತರಿಸಬಹುದು

ಸಂಕ್ಷಿಪ್ತ ಸುದ್ದಿ

ಇಗಾ ಶ್ವಾಂಟೆಕ್‌ಗೆ 1 ತಿಂಗಳ ನಿಷೇಧ

ಪ್ಯಾರಿಸ್ (ಎಎಫ್‌ಪಿ): ನಿಷೇಧಿತ ಮದ್ದನ್ನು ಸೇವಿಸಿದ್ದಕ್ಕಾಗಿ ತಮ್ಮ ಮೇಲೆ ವಿಧಿಸಲಾಗಿರುವ ಒಂದು ತಿಂಗಳ ನಿಷೇಧವನ್ನು ವಿಶ್ವದ ಎರಡನೇ ಕ್ರಮಾಂಕದ ಆಟಗಾರ್ತಿ ಇಗಾ ಶ್ವಾಂಟೆಕ್ ಒಪ್ಪಿಕೊಂಡಿದ್ದಾರೆ ಎಂದು ಅಂತರರಾಷ್ಟ್ರೀಯ ಟೆನಿಸ್ ಇಂಟೆಗ್ರಿಟಿ ಏಜನ್ಸಿ (ಐಟಿಐಎ) ಗುರುವಾರ ತಿಳಿಸಿದೆ.

ಪರೀಕ್ಷೆಯ ವೇಳೆ ಪೋಲೆಂಡ್‌ನ ಆಟಗಾರ್ತಿ ನಿಷೇಧಿತ ಮದ್ದು ಸೇವಿಸಿದ್ದು ಪತ್ತೆಯಾಗಿತ್ತು. ಸ್ಪರ್ಧೆಯಿಲ್ಲದ ವೇಳೆ ನಡೆಸಿದ ಪರೀಕ್ಷೆಯಲ್ಲಿ ಅವರು ಟ್ರಿಮೆಟಾಜಿಡೈನ್ (ಟಿಎಂಜಡ್) ಸೇವಿಸಿದ್ದು ಸಾಬೀತಾಗಿತ್ತು. ಇದನ್ನು ಹೃದ್ರೋಗದ ಚಿಕಿತ್ಸೆಗೆ ಬಳಸುತ್ತಾರೆ.

ಪ್ರಯಾಣದ ಬಳಲಿಕೆ ಮತ್ತು ನಿದ್ರಾಹೀನತೆ ಸಮಸ್ಯೆಗಾಗಿ ಈ ಮದ್ದು ತೆಗೆದುಕೊಂಡಿರುವ ಸಾಧ್ಯತೆ ಇರಬಹುದು ಎಂದು ಐಟಿಐಎ ಹೇಳಿದೆ. ಪೋಲೆಂಡ್‌ನಲ್ಲಿ ವೈದ್ಯರ ಚೀಟಿಯಿಲ್ಲದೇ ಈ ಮದ್ದು ಪಡೆಯಬಹುದಾಗಿದೆ.

ಟೆನ್‌ಪಿನ್ ಬೌಲಿಂಗ್ ಅನುರಾಧಾ ಮುನ್ನಡೆ

ಬೆಂಗಳೂರು: ತಾಳ್ಮೆಯುತ ಆಟವಾಡಿದ ಅನುರಾಧಾ ಸರ್ದಾ ಅವರು ಇಲ್ಲಿ ನಡೆಯುತ್ತಿರುವ 33ನೇ ರಾಷ್ಟ್ರೀಯ ಟೆನ್‌ಪಿನ್ ಬೌಲಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ ವಿಭಾಗದಲ್ಲಿ ಮುನ್ನಡೆ ಸಾಧಿಸಿದರು.

ಗುರುವಾರ ಅಮಿಬಾ ಬೌಲಿಂಗ್ ಸೆಂಟರ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಮೊದಲ ಎರಡು ಗೇಮ್‌ಗಳಲ್ಲಿ ಅನುರಾಧಾ ಅವರು ಕ್ರಮವಾಗಿ 154 ಮತ್ತು 168 ಪಿನ್ ಗಳನ್ನು ಕಲೆಹಾಕಿದರು. ಪುರುಷರ ವಿಭಾಗದಲ್ಲಿ ಕರ್ನಾಟಕದ ಆಕಾಶ್ ಅಶೋಕ ಕುಮಾರ್ ತಮ್ಮ ಅಗ್ರಸ್ಥಾನವನ್ನು ಕಾಪಾಡಿಕೊಂಡಿದ್ದಾರೆ.

ಫಲಿತಾಂಶಗಳು: ಪುರುಷರು (2ನೇ ಸುತ್ತು; 18 ಗೇಮ್‌ಗಳು); ಆಕಾಶ್ ಅಶೋಕಕುಮಾರ್ (ಕರ್ನಾಟಕ; 3881 ಪಿನ್ಸ್) –1, ಶೈಕ್ ಅಬ್ದುಲ್ ಹಮೀದ್ (ದೆಹಲಿ; 3752)–2, ಧ್ರುವ ಸರ್ದಾ (ದೆಹಲಿ; 3603)–3

ಮಹಿಳೆಯರು (ಮೊದಲ ಸುತ್ತು; 6 ಗೇಮ್ಸ್); ಅನುರಾಧಾ ಸರ್ದಾ (ದೆಹಲಿ; 3881)–1, ಕಶ್ಮೀರಾ ಕುಡಾಲೆ (ಮಹಾರಾಷ್ಟ್ರ; 3752)–2, ಜೆ. ಪ್ರೇಮಲ್ (ಕರ್ನಾಟಕ; 3603)–3.

ಜರ್ಮನೈಟ್‌ಗೆ ಜಯ

ಬೆಂಗಳೂರು: ಜರ್ಮನೈಟ್ ಹಾಕಿ ಅಕಾಡೆಮಿಯ ತಂಡವು ಗುರುವಾರ ನಡೆದ ಕೆಎಸ್‌ಎಚ್‌ಎ ಸಿ ಡಿವಿಷನ್ ಹಾಕಿ ಲೀಗ್ ಟೂರ್ನಿಯ ಪಂದ್ಯದಲ್ಲಿ ಐಐಎಸ್‌ಸಿ ಜಿಮ್ಖಾನಾ ತಂಡದ ಎದುರು 7–2ರಿಂದ ಜಯಿಸಿತು.

ಜರ್ಮನೈಟ್ ತಂಡದ ಭರತ್ (8ನೇ ನಿಮಿಷ), ಶರತ್ (13ನಿ, 14ನಿ), ಆ್ಯರನ್ (17ನಿ), ನವೀನ್ (21ನಿ), ಡೆನಿಸ್ ನಿಕೊಲಸ್ (38ನಿ) ಹಾಗೂ ರೋಷನ್ (43ನಿ) ಗೋಲು ಗಳಿಸಿದರು. ಐಐಎಸ್‌ಸಿ ಪರವಾಗಿ ವಿನೋದ್ (12ನಿ) ಮತ್ತು ಹರ್ಷ (28ನಿ) ಗೋಲು ಹೊಡೆದರು.

ಸೈಯ್ಯದ್ ಮೋದಿ ಅಂತರರಾಷ್ಟ್ರೀಯ ಟೂರ್ನಿ: ಹೊರಬಿದ್ದ ಕಿರಣ್ ಜಾರ್ಜ್

ಎಂಟರ ಘಟ್ಟಕ್ಕೆ ಸಿಂಧು, ಲಕ್ಷ್ಯ

ಲಖನೌ (ಪಿಟಿಐ): ಸಕಾಲದಲ್ಲಿ ಚೇತರಿಸಿಕೊಂಡ ಅಗ್ರ ಶ್ರೇಯಾಂಕದ ಪಿ.ವಿ.ಸಿಂಧು ಮೂರು ಗೇಮ್‌ಗಳ ಹೋರಾಟದಲ್ಲಿ ಸ್ವದೇಶದ ಇರಾ ಶರ್ಮಾ ಅವರನ್ನು ಸೋಲಿಸಿ ಸೈಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಪುರುಷರ ವಿಭಾಗದಲ್ಲಿ ಲಕ್ಷ್ಯ ಸೇನ್ ಕೂಡ ಗುರುವಾರ ಎಂಟರ ಘಟ್ಟ ತಲುಪಿದರು.

ವಿಶ್ವ ಕ್ರಮಾಂಕದಲ್ಲಿ 147ನೇ ಸ್ಥಾನದಲ್ಲಿರುವ, ಸೋಲುವ ಮೊದಲು 18ನೇ ಕ್ರಮಾಂಕದ ಸಿಂಧು ಅವರಿಗೆ ಹೋರಾಟ ನೀಡಿ ಎರಡನೇ ಗೇಮ್ ಪಡೆದಿದ್ದರು. ಆದರೆ ಮೂರನೇ ಗೇಮ್‌ನಲ್ಲಿ ಚೇತರಿಸಿಕೊಂಡ ಸಿಂಧು ಪಂದ್ಯವನ್ನು 49 ನಿಮಿಷಗಳಲ್ಲಿ ಗೆದ್ದರು.

29 ವರ್ಷದ ಸಿಂಧು ಇತ್ತೀಚಿನ ವರ್ಷಗಳಲ್ಲಿ ಉತ್ತಮ ಲಯದಲ್ಲಿಲ್ಲ. ಅವರು ಕೊನೆಯ ಸಲ ಪ್ರಶಸ್ತಿ ಗೆದ್ದುಕೊಂಡಿದ್ದು 2022ರ ಸಿಂಗಪುರ ಓಪನ್‌ನಲ್ಲಿ.

ಅವರು ಎಂಟರ ಘಟ್ಟದ ಪಂದ್ಯದಲ್ಲಿ ಚೀನಾದ ದಾಯಿ ವಾಂಗ್ ಎದುರು ಸೆಣಸಬೇಕಿದೆ. ದಾಯಿ ಎರಡನೇ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಭಾರತದ ದೇವಿಕಾ ಸಿಹಾಗ್ ಅವರನ್ನು 19–21, 21–18, 21–11ರಿಂದ ಹಿಮ್ಮೆಟ್ಟಿಸಿದರು.

ಭಾರತದ ಇರಾ ಶರ್ಮಾ ವಿರುದ್ಧದ ಪಂದ್ಯದಲ್ಲಿ ಷಟ್ಲ್ ಹಿಂತಿರುಗಿಸುವ ಯತ್ನದಲ್ಲಿ ಸಿಂಧು ಪಿಟಿಐ ಚಿತ್ರ

ಲಕ್ಷ್ಯಗೆ ಸುಲಭ ಜಯ: ಆದರೆ ಪುರುಷರ ವಿಭಾಗದಲ್ಲಿ ಲಕ್ಷ್ಯ ಸೇನ್ ಗೆಲ್ಲಲು ಅಷ್ಟೇನೂ ಪ್ರಯಾಸಪಡಲಿಲ್ಲ. ಅವರು ಎರಡನೇ ಸುತ್ತಿನಲ್ಲಿ 21–14, 21–13 ರಿಂದ ಇಸ್ರೇಲ್‌ನ ಡೇನಿಲ್ ದುಬೊವೆಂಕೊ ಅವರನ್ನು ಸೋಲಿಸಲು ತೆಗೆದುಕೊಂಡಿದ್ದು 35 ನಿಮಿಷಗಳನ್ನಷ್ಟೇ. ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಸ್ವದೇಶದ ಮೀರಬಾ ಲುವಾಂಗ್ ಅವರನ್ನು ಎದುರಿಸಲಿದ್ದಾರೆ.

ಮೀರಬಾ ಇನ್ನೊಂದು ಪಂದ್ಯದಲ್ಲಿ 21–15, 21–13 ರಿಂದ ಆರನೇ ಶ್ರೇಯಾಂಕದ ಎನ್ಗುಟ್ ಎನ್ಗುಯೆನ್ (ಐರ್ಲೆಂಡ್) ವಿರುದ್ಧ ಜಯಗಳಿಸಿದರು.

ಕಿರಣ್‌ಗೆ ಸೋಲು: ಮೂರನೇ ಶ್ರೇಯಾಂಕದ ಕಿರಣ್ ಜಾರ್ಜ್ ಹೊರಬಿದ್ದರು. ಜಪಾನ್‌ನ ಶೋಗೊ ಒಗಾವ 19–21, 22–20, 21–11 ರಿಂದ ಕಿರಣ್ ಮೇಲೆ ಜಯಗಳಿಸಿದರು.

ಆದರೆ ಎರಡನೇ ಶ್ರೇಯಾಂಕದ ಪ್ರಿಯಾಂಶು ರಾಜಾವತ್ ಮತ್ತು ಆಯುಷ್ ಶೆಟ್ಟಿ ಎಂಟರ ಘಟ್ಟ ತಲುಪಿದರು. ಪ್ರಿಯಾಂಶು 21-15, 21-8 ರಿಂದ ವಿಯೆಟ್ನಾಮಿನ ಲಿ ಡುಕ್ ಫಾಟ್ ಅವರನ್ನು ಸುಲಭವಾಗಿ ಸೋಲಿಸಿದರು. ಆಯುಷ್ 21-12, 21-19 ರಿಂದ ಮಲೇಷ್ಯಾದ ಹೂ ಜಸ್ಟಿನ್ ವಿರುದ್ಧ ಜಯಗಳಿಸಲು ಅಷ್ಟೇನೂ ಕಷ್ಟಪಡಲಿಲ್ಲ.

ಉನ್ನತಿಗೆ ಅಚ್ಚರಿಯ ಜಯ: ಮಹಿಳಾ ಸಿಂಗಲ್ಸ್‌ನಲ್ಲಿ, 17 ವರ್ಷ ವಯಸ್ಸಿನ ಉನ್ನತಿ ಹೂಡಾ 21–18, 22–20 ರಿಂದ ನಾಲ್ಕನೇ ಶ್ರೇಯಾಂಕದ ಪೊರ್ನ್‌ಪಿಚಾ ಚೊಯಿಕೀವೊಂಗ್ (ಥಾಯ್ಲೆಂಡ್) ಅವರಿಗೆ ಆಘಾತ ನೀಡಿದರು. ಉನ್ನತಿ ಗೆಲ್ಲಲು ತೆಗೆದುಕೊಂಡಿದ್ದು 46 ನಿಮಿಷಗಳನ್ನು.

ಎರಡನೇ ಶ್ರೇಯಾಂಕದ ಮಾಳವಿಕಾ ಬನ್ಸೋಡ್ ಸಹ ಹೊರಬಿದ್ದರು. ಅವರು 12–21, 15–21ರಲ್ಲಿ ಸ್ವದೇಶದ ಶ್ರೀಯಾನ್ಶಿ ವಲಿಶೆಟ್ಟಿ ಎದುರು ಸೋಲನುಭವಿಸಿದರು.

ವಿಶ್ವದ ಮಾಜಿ ಜೂನಿಯರ್ ಅಗ್ರಮಾನ್ಯ ಆಟಗಾರ್ತಿ ತಸ್ನಿಮ್ ಮೀರ್ 21–15, 13–21, 21–7 ರಿಂದ ಅನುಪಮಾ ಉಪಾಧ್ಯಾಯ ಅವರನ್ನು ಸೋಲಿಸಿ ಎಂಟರ ಘಟ್ಟಕ್ಕೆ ಮುನ್ನಡೆದರು.

ಆಸ್ಟ್ರೇಲಿಯಾದ ಪ್ರಧಾನಿ ಅಂತೋನಿ ಅಲ್ಬನಿಸ್ ಅವರೊಂದಿಗೆ ಭಾರತ ತಂಡದ ಆಟಗಾರರು ಪಿಟಿಐ ಚಿತ್ರ

ರೋಹಿತ್ ಪಡೆಗೆ ಅಲ್ಬನಿಸ್ ಔತಣ

ಕ್ಯಾನ್‌ಬೆರಾ(ಪಿಟಿಐ): ಭಾರತ ಕ್ರಿಕೆಟ್ ತಂಡಕ್ಕೆ ಗುರುವಾರ ಆಸ್ಟ್ರೇಲಿಯಾದ ಪ್ರಧಾನಿ ಅಂತೋನಿ ಅಲ್ಬನಿಸ್ ಅವರು ಔತಣಕೂಟ ಏರ್ಪಡಿಸಿದ್ದರು.

ಇದೇ 30ರಿಂದ ಇಲ್ಲಿ ನಡೆಯಲಿರುವ ಎರಡು ದಿನಗಳ ಅಭ್ಯಾಸ ಪಂದ್ಯ (ಪಿಂಕ್ ಬಾಲ್)ದಲ್ಲಿ ಭಾರತ ಮತ್ತು ಪ್ರಧಾನಿ ಇಲೆವನ್ ತಂಡಗಳು ಮುಖಾಮುಖಿಯಾಗಲಿವೆ.

ಡಿಸೆಂಬರ್ 6ರಿಂದ ಅಡಿಲೇಡ್‌ನಲ್ಲಿ ಹೊನಲು ಬೆಳಕಿನ ಟೆಸ್ಟ್ ಪಂದ್ಯ ನಡೆಯಲಿದೆ.

ಈಚೆಗೆ ಪರ್ತ್‌ನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ಎದುರು 295 ರನ್‌ಗಳಿಂದ ಜಯಿಸಿತ್ತು.

ಪ್ರಧಾನಿಯವರ ಔತಣಕೂಟದಲ್ಲಿ ಶಿಷ್ಟಾಚಾರದಂತೆ ನಾಯಕ ರೋಹಿತ್ ಶರ್ಮಾ ಅವರು ತಮ್ಮ ತಂಡದ ಸಹ ಆಟಗಾರರನ್ನು ಪರಿಚಯಿಸಿದರು. ಮೊದಲ ಟೆಸ್ಟ್ ಪಂದ್ಯದ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದ್ದ ವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಬ್ಯಾಟರ್ ವಿರಾಟ್ ಕೊಹ್ಲಿ ಅವರನ್ನು ಪ್ರಧಾನಿ ಶ್ಲಾಘಿಸಿದರು.

'ಈ ವಾರ ಪ್ರಧಾನಮಂತ್ರಿ ಇಲೆವನ್ ತಂಡಕ್ಕೆ ಬಹಳ ದೊಡ್ಡ ಸವಾಲು ಎದುರಾಗಲಿದೆ. ಅದ್ಭುತವಾದ ಭಾರತ ತಂಡವನ್ನು ಎದುರಿಸಬೇಕಿದೆ' ಎಂದು ಪ್ರಧಾನಿ ಅಲ್ಬನೀಸ್ ಅವರು ಎಕ್ಸ್‌ನಲ್ಲಿ ಸಂದೇಶ ಹಾಕಿದ್ದಾರೆ.

ಪ್ರಧಾನಿ ಬಳಗವನ್ನು ಜ್ಯಾಕ್ ಎಡ್ವರ್ಡ್ಸ್ ಮುನ್ನಡೆಸಲಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ರೋಹಿತ್ ಶರ್ಮಾ, ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ನಡುವಣ ಕ್ರಿಕೆಟ್ ಸಂಬಂಧದ ಇತಿಹಾಸವನ್ನು ವಿವರಿಸಿದರು. ಭಾರತ ತಂಡವು ಆಸ್ಟ್ರೇಲಿಯಾದ ಸವಾಲನ್ನು ಸದಾ ಪ್ರೀತಿಸುತ್ತದೆ. ಇಲ್ಲಿಯ ಸಂಸ್ಕೃತಿ ಮತ್ತು ಕ್ರಿಕೆಟ್ ಪ್ರೀತಿಯನ್ನು ಆಸ್ವಾದಿಸುವುದು ತಮಗೆಲ್ಲ ಅಚ್ಚುಮೆಚ್ಚಿನ ಸಂಗತಿ ಎಂದು ಹೇಳಿದರು.

ನೌಕರಿ ನಿರಾಕರಣೆ: 'ಸುಪ್ರೀಂ' ತರಾಟೆ

ನವದೆಹಲಿ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಜಯಿಸಿದ್ದ ಕಬಡ್ಡಿ ಆಟಗಾರ್ತಿ ಪೂಜಾ ಠಾಕೂರ್ ಅವರಿಗೆ 'ಕ್ರೀಡಾ ಮೀಸಲಾತಿ'ಯಲ್ಲಿ ಉದ್ಯೋಗ ನೀಡಲು ನಿರಾಕರಿಸಿದ ಹಿಮಾಚಲ ಪ್ರದೇಶ ಸರ್ಕಾರವನ್ನು ಸುಪ್ರೀಂ ಕೋರ್ಟ್ ಗುರುವಾರ ತರಾಟೆಗೆ ತೆಗೆದುಕೊಂಡಿತು.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಹಾಗೂ ಆಗಸ್ಟೀನ್ ಜಾರ್ಜ್ ಮಸೀಹ್ ಅವರಿದ್ದ ಪೀಠವು, 2014ರ ಏಷ್ಯನ್ ಕ್ರೀಡಾಕೂಟದ ಪದಕ ವಿಜೇತೆ ಪೂಜಾಗೆ ಉದ್ಯೋಗ ನೀಡದೆ ಸತಾಯಿಸಿದ ಹಿಮಾಚಲ ಸರ್ಕಾರದ ನಡೆಗೆ ಆಕ್ಷೇಪ ವ್ಯಕ್ತಪಡಿಸಿತು. 'ನೀವು ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವುದು ಹೀಗೆಯೇ' ಎಂದು ಕಟುವಾಗಿ ಪ್ರಶ್ನಿಸಿತು.

ಅಬಕಾರಿ ಮತ್ತು ತೆರಿಗೆ ಅಧಿಕಾರಿ ಹುದ್ದೆಗೆ ಪೂಜಾ ಅವರ ನೇಮಕ ಪ್ರಶ್ನಿಸಿ ಹಿಮಾಚಲ ಪ್ರದೇಶ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ತಿರಸ್ಕರಿಸಿತು.

'ಪೂಜಾ ಅವರಿಗೆ ಅಬಕಾರಿ ಮತ್ತು ತೆರಿಗೆ ಅಧಿಕಾರಿ ಹುದ್ದೆ ನೀಡಬೇಕೆಂದು ಹೈಕೋರ್ಟ್‌ನ ಏಕಸದಸ್ಯ ಪೀಠ ಆದೇಶಿಸಿರುವುದನ್ನು ಪ್ರಶ್ನಿಸಿ, ಹಿಮಾಚಲ ಪ್ರದೇಶ ಸರ್ಕಾರವು ಮೇಲ್ಮನವಿ ಸಲ್ಲಿಸಿರುವ ಕ್ರಮವು ತೀರಾ ಅಸಮಂಜಸವಾದುದು' ಎಂದು ಸುಪ್ರೀಂ ಕೋರ್ಟ್ ಹೇಳಿತು.

ಯೋಧಾಸ್ ರೇಡರ್‌ನನ್ನು ಹಿಡಿದೆಳೆದ ಜೈಪುರ ಪಿಂಕ್ ಪ್ಯಾಂಥರ್ಸ್ ಆಟಗಾರರು.

ಪ್ರೊ ಕಬಡ್ಡಿ: ಯೋಧಾಸ್‌ಗೆ ಜಯ

ನೊಯ್ಡಾ: ಪಂದ್ಯದ ದ್ವಿತೀಯಾರ್ಧದಲ್ಲಿ ಕೌಶಲದ ಆಟ ತೋರಿದ ಯು.ಪಿ. ಯೋಧಾಸ್ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಗುರುವಾರ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು 33–29ರಲ್ಲಿ 4 ಅಂಕಗಳಿಂದ ಸೋಲಿಸಿತು.

ನೊಯ್ಡಾ ಒಳಾಂಗಣ ಕ್ರೀಡಾಂಗಣ ದಲ್ಲಿ ನಡೆದ ಪಂದ್ಯದಲ್ಲಿ ಯೋಧಾಸ್ ತಂಡದ ಪರ ಕನ್ನಡಿಗ ಆಟಗಾರ ರಿಪ್ಪನ್‌ಪೇಟೆಯ ಗಗನ್ ಗೌಡ (6 ಅಂಕ) ಜೊತೆ ಭವಾನಿ ರಜ್‌ಪೂತ್ (6) ಮತ್ತು ಸುಮಿತ್ (5) ಮಿಂಚಿದರು. ಪ್ಯಾಂಥರ್ಸ್ ತಂಡದ ಪರ ನಾಯಕ ಅರ್ಜುನ್ ದೇಶ್ವಾಲ್ (6), ನೀರಜ್ ನರ್ವಾಲ್ (5) ಹೋರಾಟ ಪ್ರದರ್ಶಿಸಿದರು.

ಯೋಧಾಸ್ ತಂಡದ ನಾಯಕ ಸುಮಿತ್ ಲೀಗ್‌ನಲ್ಲಿ300 ಟ್ಯಾಕಲ್ ಪಾಯಿಂಟ್ಸ್ ಕಲೆಹಾಕಿದ ಗೌರವಕ್ಕೆ ಪಾತ್ರರಾದರು.

ಇನ್ನೊಂದು ಪಂದ್ಯದಲ್ಲಿ ತೆಲುಗು ಟೈಟನ್ಸ್ 41–35 ರಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು. ಟೈಟನ್ಸ್‌ನ ಶೀಷ್ ನರ್ವಾಲ್ 10 ಪಾಯಿಂಟ್ಸ್ ಗಳಿಸಿದರು.

ಚಾಂಪಿಯನ್ಸ್ ಟ್ರೋಫಿ ಹೈಬ್ರಿಡ್‌ಗೆ ಸಿದ್ಧವಿಲ್ಲ: ಪಿಸಿಬಿ

ಕರಾಚಿ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಆಯೋಜನೆಯನ್ನು ಹೈಬ್ರಿಡ್ ಮಾದರಿಯಲ್ಲಿ ಮಾಡಲು ತಾವು ಸಿದ್ಧವಿಲ್ಲ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಗೆ (ಐಸಿಸಿ) ಸ್ಪಷ್ಟಪಡಿಸಿದೆ.

ಚಾಂಪಿಯನ್ಸ್ ಟ್ರೋಫಿ ವೇಳಾ ಪಟ್ಟಿ ನಿಗದಿ ಮಾಡಲು ಕುರಿತು ಶುಕ್ರವಾರ ಐಸಿಸಿ ಸಭೆಯನ್ನು ನಡೆಸಲಾಗುತ್ತಿದೆ. ಅದಕ್ಕೂ ಮುನ್ನ ಪಿಸಿಬಿ ತನ್ನ ನಿಲುವು ತಿಳಿಸಿದೆ. 'ಕೆಲವು ಗಂಟೆಗಳ ಮುನ್ನ ಪಿಸಿಬಿ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ. ಹೈಬ್ರಿಡ್ ಮಾದರಿಯನ್ನು ಒಪ್ಪಲಾಗದೆಂದೂ ಪ್ರತಿಪಾದಿಸಿದೆ' ಎಂದು ಮೂಲಗಳು ತಿಳಿಸಿವೆ.

ಭಾರತ ತಂಡವನ್ನು ಪಾಕಿಸ್ತಾನಕ್ಕೆ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾಗವಹಿಸಲು ಕಳುಹಿಸುವುದಕ್ಕೆ ಬಿಸಿಸಿಐಗೆ ಕೇಂದ್ರ ಸರ್ಕಾರವು ಅನುಮತಿ ನೀಡಿಲ್ಲ. ಈ ಹಿನ್ನೆಲೆಯಲ್ಲಿ ತಟಸ್ಥ ಸ್ಥಳದಲ್ಲಿ ಪಂದ್ಯಗಳನ್ನು ನಡೆಸುವ ಸಾಧ್ಯತೆಯನ್ನು ಐಸಿಸಿ ಪರಿಶೀಲಿಸುತ್ತಿದೆ.

ಕ್ರಿಕೆಟ್‌ಗೆ ಸಿದ್ಧಾರ್ಥ್ ಕೌಲ್ ವಿದಾಯ

ನವದೆಹಲಿ (ಪಿಟಿಐ): ವೇಗದ ಬೌಲರ್ ಸಿದ್ಧಾರ್ಥ್ ಕೌಲ್(34) ಅವರು ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ್ದಾರೆ.

2018–19ರಲ್ಲಿ ಭಾರತ ತಂಡವನ್ನು ಮೂರು ಅಂತರರಾಷ್ಟ್ರೀಯ ಏಕದಿನ ಮತ್ತು ಮೂರು ಟಿ20 ಪಂದ್ಯಗಳಲ್ಲಿ ಪ್ರತಿನಿಧಿಸಿದ್ದ, ಅವರು ಗುರುವಾರ ಸಾಮಾಜಿಕ ಜಾಲತಾಣದ ಮೂಲಕ ತಮ್ಮ ನಿವೃತ್ತಿಯನ್ನು ಘೋಷಿಸಿದ್ದಾರೆ.

2008ರಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ಜಯಿಸಿದ್ದ ಭಾರತ ತಂಡದಲ್ಲಿ ಸಿದ್ಧಾರ್ಥ್ ಆಡಿದ್ದರು.

ಬಲಗೈ ವೇಗಿ ಕೌಲ್ ಅವರು 88 ಪ್ರಥಮ ದರ್ಜೆ ಪಂದ್ಯಗಳಲ್ಲಿ ಪಂಜಾಬ್ ತಂಡದಲ್ಲಿ ಆಡಿ 297 ವಿಕೆಟ್‌ಗಳನ್ನು ಗಳಿಸಿದ್ದಾರೆ. 111 ಲಿಸ್ಟ್ ಎ ಪಂದ್ಯಗಳಲ್ಲಿ 199 ವಿಕೆಟ್‌ಗಳು ಮತ್ತು ಟಿ20ಯಲ್ಲಿ 145 ಪಂದ್ಯಗಳಿಂದ 182 ವಿಕೆಟ್ ಗಳಿಸಿದ್ದಾರೆ.

ಕೌಲ್ ಅವರು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಅತಿ ಹೆಚ್ಚು ವಿಕೆಟ್ (155) ಪಡೆದ ಬೌಲರ್ ಆಗಿದ್ದಾರೆ. ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್‌ನಲ್ಲಿ 120 ವಿಕೆಟ್ ಗಳಿಸಿದ್ದಾರೆ. ಈಚೆಗೆ ರೋಹ್ಟಕ್‌ನಲ್ಲಿ ನಡೆದಿದ್ದ ಹರಿಯಾಣ ಮತ್ತು ಪಂಜಾಬ್ ನಡುವಣ ರಣಜಿ ಟ್ರೋಫಿ ಟೂರ್ನಿಯ ಪಂದ್ಯದಲ್ಲಿ ಆಡಿದ್ದರು. ಅದು ಅವರ ವೃತ್ತಿಜೀವನದ ಕೊನೆಯ ಪಂದ್ಯವಾಗಿದೆ.

ಕೂಚ್ ಬಿಹಾರ್ ಟ್ರೋಫಿ: ಕರ್ನಾಟಕ ಉತ್ತಮ ಮೊತ್ತ

ಮೈಸೂರು: ಕರ್ನಾಟಕ ತಂಡವು ಗುರುವಾರ ಇಲ್ಲಿ ಆರಂಭವಾದ ಕೂಚ್ ಬಿಹಾರ್ ಟ್ರೋಫಿ (19 ವರ್ಷದ ಒಳಗಿನವರ) ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಒಡಿಶಾ ವಿರುದ್ಧ ದಿನದಾಟದ ಕೊನೆಗೆ 8 ವಿಕೆಟ್ ನಷ್ಟಕ್ಕೆ 298 ರನ್‌ಗಳ ಗೌರವಾರ್ಹ ಮೊತ್ತ ಗಳಿಸಿತು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್‌ಗೆ ಕಳಿಸಲ್ಪಟ್ಟ ಆತಿಥೇಯ ತಂಡಕ್ಕೆ ಆರಂಭ ಆಟಗಾರರಾದ ಎಸ್.ಗಗನ್ ರಾವ್ (61) ಮತ್ತು ಶಿವಂ ಸಿಂಗ್ (49) ಅವರು 75 ರನ್ ಸೇರಿಸಿ ಉತ್ತಮ ಬುನಾದಿ ಹಾಕಿಕೊಟ್ಟರು.

ಮಣಿಕಾಂತ್ ಶಿವಾನಂದ (49) ಮತ್ತು ನಾಯಕ ಧೀರಜ್ ಗೌಡ (49, 49ಎ) ಅವರೂ ಅರ್ಧ ಶತಕದ ಅಂಚಿನಲ್ಲಿದ್ದಾಗ ಔಟ್ ಆದರು. ಗಗನ್ ರಾವ್ ಮತ್ತು ಮಣಿಕಾಂತ್ ಎರಡನೇ ವಿಕೆಟ್‌ಗೆ 69 ರನ್ ಸೇರಿಸಿದ್ದರು.

ಒಡಿಶಾ ಪರ ಎಡಗೈ ಸ್ಪಿನ್ನರ್ ಸೈಯದ್ ತೂಫೈಲ್ ಅಹಮ್ಮದ್ 4 ವಿಕೆಟ್ ಉರುಳಿಸಿ ಗಮನ ಸೆಳೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 90 ಓವರ್‌ಗಳಲ್ಲಿ 8 ವಿಕೆಟ್‌ಗೆ 298 (ಎಸ್. ಗಗನ್ ರಾವ್ 61, ಶಿವಂ ಸಿಂಗ್ 49, ಮಣಿಕಾಂತ್ ಶಿವಾನಂದ್ 49, ಸಿದ್ಧಾರ್ಥ್ ಅಖಿಲ್ 33, ಧೀರಜ್ ಗೌಡ 49, ರೋಹಿತ್ ವಾರಂಬಳ್ಳಿ 26, ಸೈಯದ್ ತುಫೈಲ್ ಅಹಮ್ಮದ್ 66ಕ್ಕೆ 4)

ಎಂಟರ ಘಟ್ಟಕ್ಕೆ ಗ್ರೀನ್‌ವುಡ್

ಬೆಂಗಳೂರು: ನಗರದ ಗ್ರೀನ್‌ವುಡ್ ಶಾಲೆ, ಸೇಂಟ್ ಅಲೋಷಿಯಸ್ ಶಾಲೆ, ಡೆಲ್ಲಿ ಪಬ್ಲಿಕ್ ಸ್ಕೂಲ್ ನಾರ್ತ್ ತಂಡಗಳು, ಗುರುವಾರ ಆರಂಭವಾದ 12ನೇ ಪರಿಕ್ರಮ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ (16 ವರ್ಷದೊಳಗಿನವರ) ಟೂರ್ನಿಯ ಮೊದಲ ಸುತ್ತಿನ ಪಂದ್ಯಗಳಲ್ಲಿ ಎದುರಾಳಿಗಳನ್ನು ಸೋಲಿಸಿ ಎಂಟರ ಘಟ್ಟ ತಲುಪಿದವು.

ಅಶೋಕನಗರದ ಕೆಎಸ್‌ಎಫ್‌ಎ ಕ್ರೀಡಾಂಗಣದಲ್ಲಿ ನಡೆದ ಪ್ರಿಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಗ್ರೀನ್‌ವುಡ್ ಶಾಲೆ 4–0 ಗೋಲುಗಳಿಂದ ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್ ತಂಡವನ್ನು ಸೋಲಿಸಿದರೆ, ಅಲೋಷಿಯಸ್ ಶಾಲಾ ತಂಡ 2–0 ಗೋಲುಗಳಿಂದ ವಿದ್ಯಾನಿಕೇತನ ತಂಡವನ್ನು, ಡೆಲ್ಲಿ ಪಬ್ಲಿಕ್ ಸ್ಕೂಲ್ 2–0 ಗೋಲುಗಳಿಂದ ರಯಾನ್ ಇಂಟರ್‌ನ್ಯಾಷನಲ್ ಸ್ಕೂಲ್ ತಂಡವನ್ನು ಸೋಲಿಸಿದವು.

ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲಾ ತಂಡ 5–0 ಗೋಲುಗಳಿಂದ ಆರ್ಮಿ ಪಬ್ಲಿಕ್ ಸ್ಕೂಲ್ ತಂಡವನ್ನು, ಪಾಟರಿ ಟೌನ್‌ನ ಸರ್ಕಾರಿ ಪ್ರೌಢಶಾಲಾ ತಂಡ 2–0 ಗೋಲುಗಳಿಂದ ಬಿಷಪ್ ಕಾಟನ್ಸ್ ತಂಡವನ್ನು ಸೋಲಿಸಿದವು.

ಅಸ್ಸಾಮಿನ ಹೈತೆ ಮೆಮೋರಿಯಲ್ ಫ್ರೆಂಡ್‌ಷಿಪ್ ಸ್ಕೂಲ್ ತಂಡ ಪೆನಾಲ್ಟಿ ಶೂಟೌಟ್‌ನಲ್ಲಿ 4–3 ರಿಂದ (ನಿಗದಿತ ಅವಧಿ 1–1) ಪರಿಕ್ರಮ ಹ್ಯೂಮಾನಿಟಿ ಫೌಂಡೇಷನ್ ತಂಡವನ್ನು ಪ್ರಯಾಸದಿಂದ ಸೋಲಿಸಿದರೆ, ಗೋವಾದ ಸೇಂಟ್ ಆ್ಯನ್ಸ್ ಶಾಲಾ ತಂಡ ಪೆನಾಲ್ಟಿ ಶೂಟೌಟ್‌ನಲ್ಲಿ 5–3 ಗೋಲುಗಳಿಂದ (ನಿಗದಿ ಅವಧಿ 1–1) ಉದಯಪುರದ ಸ್ಟೆಪ್ ಬೈ ಸ್ಟೆಪ್ ಶಾಲಾ ತಂಡವನ್ನು ಪರಾಭವಗೊಳಿಸಿತು.

ಮಾಜಿ ಅಂತರರಾಷ್ಟ್ರೀಯ ಅಥ್ಲೀಟ್ ರೀತ್ ಅಬ್ರಹಾಂ, ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಫುಟ್‌ಬಾಲ್ ಕೋಚ್ ಥಾಮಸ್ ಜೋಸೆಫ್, ಕೆಎಸ್‌ಎಫ್‌ಎ ಉಪಮಹಾ ಕಾರ್ಯದರ್ಶಿ ಅಸ್ಲಾಂ ಖಾನ್ ಇದ್ದರು.

ಯಾನ್ಸನ್ ದಾಳಿ; ಲಂಕಾ 42ಕ್ಕೆ ಆಲೌಟ್

ಡರ್ಬನ್ (ಎಪಿ): ದಕ್ಷಿಣ ಆಫ್ರಿಕಾದ ಎಡಗೈ ವೇಗಿ ಮಾರ್ಕೊ ಯಾನ್ಸೆನ್ ಅವರು ತಮ್ಮ ಜೀವನಶ್ರೇಷ್ಠ ಬೌಲಿಂಗ್ ದಾಖಲಿಸಿದರು. ಅವರ ದಾಳಿಯ ಮುಂದೆ ಶ್ರೀಲಂಕಾ ತಂಡವು ತತ್ತರಿಸಿತು.

ಡರ್ಬನ್‌ನಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಶ್ರೀಲಂಕಾ ತಂಡವು ಕೇವಲ 42 ರನ್‌ಗಳಿಗೆ ಕುಸಿಯಿತು. ಯಾನ್ಸೆನ್ (6.5–1–13–7) ತಮ್ಮ ವೃತ್ತಿಜೀವನದ ಶ್ರೇಷ್ಠ ಸಾಧನೆ ಮಾಡಿದರು.

ಮೊದಲು ಬ್ಯಾಟಿಂಗ್ ಮಾಡಿದ್ದ ಆತಿಥೇಯ ತಂಡ ಮೊದಲ ಇನಿಂಗ್ಸ್‌ನಲ್ಲಿ 191 ರನ್ ಗಳಿಸಿತ್ತು. ಉತ್ತರವಾಗಿ ಶ್ರೀಲಂಕಾ 50 ರನ್ ಕೂಡ ಗಳಿಸಲಿಲ್ಲ.

ಎರಡನೇ ಇನಿಂಗ್ಸ್ ಆರಂಭಿಸಿರುವ ಆತಿಥೇಯ ತಂಡವು 40 ಓವರ್‌ಗಳಲ್ಲಿ 3 ವಿಕೆಟ್‌ಗೆ 132 ರನ್ ಗಳಿಸಿದೆ. ಪ್ರಭಾತ್ ಜಯಸೂರ್ಯ 100 ವಿಕೆಟ್ ಪೂರೈಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 49.4 ಓವರ್‌ಗಳಲ್ಲಿ 191. ಶ್ರೀಲಂಕಾ: 13.5 ಓವರ್‌ಗಳಲ್ಲಿ 42 (ಕಮಿಂದು ಮೆಂಡಿಸ್ 13, ಲಹೀರು ಕುಮಾರ 10, ಮಾರ್ಕೊ ಯಾನ್ಸೆನ್ 13ಕ್ಕೆ7, ಗೆರಾಲ್ಡ್ ಕೊಯಿಟ್ಜಿ 18ಕ್ಕೆ2) ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 40 ಓವರ್‌ಗಳಲ್ಲಿ 3 ವಿಕೆಟ್‌ಗೆ 132 (ಏಡನ್ ಮರ್ಕರಂ 47, ತೆಂಬಾ ಬವುಮಾ ಔಟಾಗದೇ 24, ಪ್ರಭಾತ್ ಜಯಸೂರ್ಯ 48ಕ್ಕೆ2)

ದಕ್ಷಿಣ ಆಫ್ರಿಕಾದ ವೇಗಿ ಮಾರ್ಕೊ ಯಾನ್ಸೆನ್ ಅವರು 7 ವಿಕೆಟ್ ಪಡೆದು ಸಂಭ್ರಮಿಸಿದರು ಎಎಫ್‌ಪಿ ಚಿತ್ರ

ದಿವಿತ್‌ಗೆ ವಿಶ್ವ ಕೆಡೆಟ್ ಚೆಸ್ ಪ್ರಶಸ್ತಿ

ಮಾಂಟೆಸಿಲ್ವಾನೊ (ಇಟಲಿ), (ಪಿಟಿಐ): ಎಂಟು ವರ್ಷ ವಯಸ್ಸಿನ ದಿವಿತ್ ರೆಡ್ಡಿ ಅವರು ಮಂಗಳವಾರ ಇಲ್ಲಿ ಮುಕ್ತಾಯಗೊಂಡ ವಿಶ್ವ ಕೆಡೆಟ್ಸ್ (ಎಂಟು ವರ್ಷದೊಳಗಿನವರ) ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡನು.

ದಿವಿತ್ ರೆಡ್ಡಿ

ತೆಲಂಗಾಣದ ಪೋರ ದಿವಿತ್ (ಪ್ರಸ್ತುತ ರೇಟಿಂಗ್ 1784), ಸ್ವದೇಶದ ಸಾತ್ವಿಕ್ ಮತ್ತು ಚೀನಾದ ಝಿಮಿಂಗ್ ಗುವೊ ಜೊತೆ ಅಗ್ರಸ್ಥಾನಕ್ಕೆ ಟೈ ಮಾಡಿಕೊಂಡಿದ್ದನು. ಆದರೆ ಉತ್ತಮ ಟೈಬ್ರೇಕರ್ ಆಧಾರದಲ್ಲಿ ಚಿನ್ನ ದಿವಿತ್ ಪಾಲಾಯಿತು. ಸಾತ್ವಿಕ್ ಬೆಳ್ಳಿ ಮತ್ತು ಗುವೊ ಕಂಚಿನ ಪದಕ ಗಳಿಸಿದರು.

ನಾಲ್ಕು ಗೆಲುವಿನೊಡನೆ ಅಭಿಯಾನ ಆರಂಭಿಸಿದ ದಿವಿತ್ ನಂತರ ಎರಡು ಪಂದ್ಯಗಳಲ್ಲಿ ಸೋತಿದ್ದನು. ಆದರೆ ಕೊನೆಯ ಐದು ಸುತ್ತುಗಳಲ್ಲಿ ಜಯಗಳಿಸಿ ಪುಟಿದೆದ್ದ. ಹತ್ತನೇ ಸುತ್ತಿನಲ್ಲಿ ತನಗಿಂತ ಹೆಚ್ಚಿನ ರೇಟಿಂಗ್ ಹೊಂದಿದ್ದ ಲಿನ್‌ಯುವಾನ್ (1877) ಮತ್ತು ಕೊನೆಯ ಸುತ್ತಿನಲ್ಲಿ ರಿಯುಝಾತ್ (1783) ವಿರುದ್ಧ ಜಯಗಳಿಸಿದನು.

ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್: ಇಂದು ನಾಲ್ಕನೇ ಪಂದ್ಯ

ಗುಕೇಶ್‌ಗೆ ಹೆಚ್ಚಿದ ಮನೋಬಲ

ಸಿಂಗಪುರ (ಪಿಟಿಐ): ಒಂದೆಡೆ ಗುಕೇಶ್ ಸ್ವಲ್ಪ ಹೆಚ್ಚಿನ ಮನೋಬಲ ಹೊಂದಿದಂತೆ ಕಾಣುತ್ತಿದ್ದರೆ, ಇನ್ನೊಂದೆಡೆ ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ಕೊಂಚ ವಿಚಲಿತರಾಗಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ. ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ಗೆ ಗುರುವಾರ ಮೊದಲ ವಿರಾಮ ದಿನವಾಗಿದ್ದು, ಶುಕ್ರವಾರ ಇವರಿಬ್ಬರು ನಾಲ್ಕನೇ ಪಂದ್ಯ ಆಡಲು ಇಳಿಯಲಿದ್ದಾರೆ.

ಬುಧವಾರ ನಡೆದ ಮೂರನೇ ಪಂದ್ಯದಲ್ಲಿ ಗುಕೇಶ್ ಮೊದಲ ಜಯ ದಾಖಲಿಸಿದ್ದರು. ಈ ಗೆಲುವು 18 ವರ್ಷ ವಯಸ್ಸಿನ ಆಟಗಾರನಲ್ಲಿ ವಿಶ್ವಾಸ ವೃದ್ಧಿಸಿದೆ. ಸ್ಕೋರ್ ಈಗ 1.5–1.5 ರಲ್ಲಿ ಸಮನಾಗಿದೆ. 14 ಪಂದ್ಯಗಳ ಫೈನಲ್‌ನಲ್ಲಿ ಇನ್ನೂ 11 ಪಂದ್ಯಗಳು ಆಡಲು ಬಾಕಿಯಿವೆ. ಯಾರು ಮೊದಲು ಏಳೂವರೆ ಅಂಕ ತಲುಪುವರೊ ಅವರು ವಿಶ್ವ ಚಾಂಪಿಯನ್ ಪಟ್ಟಕ್ಕೇರಲಿದ್ದಾರೆ.

ಮೊದಲ ಪಂದ್ಯದಲ್ಲಿ ಕಪ್ಪುಕಾಯಿಗಳಲ್ಲಿ ಆಡಿದ್ದ ಲಿರೆನ್, ಪ್ರಶಸ್ತಿಗೆ ಫೇವರಿಟ್ ಆಗಿದ್ದ ಭಾರತದ ಆಟಗಾರನನ್ನು ತಬ್ಬಿಬ್ಬುಗೊಳಿಸಿದ್ದರು. ಆಟ ಮಧ್ಯಮಹಂತ

ಗುಕೇಶ್

ಲಿರೆನ್

ತಲುಪುತ್ತಿದ್ದಂತೆ ಎದುರಾಳಿಯನ್ನು ಗಲಿಬಿಲಿಗೊಳಿಸಲು ಹೋಗುವ ಯತ್ನ ಗುಕೇಶ್‌ಗೆ ದುಬಾರಿಯಾಗಿತ್ತು. ಆದರೆ ಎರಡನೇ ಪಂದ್ಯದಲ್ಲಿ ಕಪ್ಪು ಕಾಯಿಗಳಲ್ಲಿ ಆಡಿದ್ದ ಗುಕೇಶ್ 23 ನಡೆಗಳ ನಂತರ ಡ್ರಾ ಮಾಡಿಕೊಳ್ಳುವ ಮೂಲಕ ಚೇತರಿಸಿಕೊಂಡಿದ್ದರು.

ಮೂರನೇ ಪಂದ್ಯದಲ್ಲಿ ಗುಕೇಶ್ ಅವರು ಉತ್ತಮ ರೀತಿಯಲ್ಲಿ ಸಿದ್ಧತೆ ನಡೆಸಿದ್ದು ಆಟದ ವೇಳೆ ಕಾಣಿಸಿತು. ಅವರು ಸಿದ್ಧ ಯೋಜನೆಗೆ ತಕ್ಕಂತೆ ಆಡಿದರೆ, ಚೀನಾದ ಆಟಗಾರ ಆರಂಭದ ಕೆಲವು ನಡೆಗಳಲ್ಲೇ ಯೋಚನೆಗೆ ಬಿದ್ದರು. ನಡೆಗಳಿಗೆ ಸಾಕಷ್ಟು ಅವಧಿ ತೆಗೆದುಕೊಂಡ ಅವರು ಸಮಯದ ಒತ್ತಡಕ್ಕೆ ಸಿಲುಕಿದ್ದರು. ಗುಕೇಶ್ ಅಲ್ಪ ಮೇಲುಗೈಯನ್ನು ಕೊನೆಯವರೆಗೂ ಉಳಿಸಿಕೊಂಡಿದ್ದರು.

'ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಇಂಥ ಪ್ರಬಲ ಎದುರಾಳಿಯ ಎದುರು ಮೊದಲ ಗೆಲುವು ಸಾಧಿಸಿದ್ದು ಹಿತಕರ ಅನುಭವ. ಫೈನಲ್‌ನಲ್ಲಿ ಗೆಲುವು ಬಂದಿರುವುದಕ್ಕೆ ಹೆಚ್ಚು ಮಹತ್ವವಿದೆ' ಎಂದು ಪ್ರಸನ್ನವದನರಾಗಿದ್ದ ಗುಕೇಶ್ ಪ್ರತಿಕ್ರಿಯಿಸಿದ್ದರು.

ಗುಕೇಶ್ ಉತ್ತಮವಾಗಿ ಚೇತರಿಸಿಕೊಂಡಿರುವುದರಿಂದ, ಮುಂದಿನ ಪಂದ್ಯಗಳಲ್ಲಿ ಲಿರೆನ್ ಹೆಚ್ಚು ಎಚ್ಚರಿಕೆಯಿಂದ ಆಡುವ ನಿರೀಕ್ಷೆಯಿದೆ. ರಷ್ಯಾದ ಇಯಾನ್ ನಿಪೊಮ್‌ನಿಷಿ ವಿರುದ್ಧ ಈ ಹಿಂದಿನ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಲಿರೆನ್ ಮೂರು ಬಾರಿ ಹಿಂದೆಬಿದ್ದಿದ್ದರೂ ಪುಟಿದೆದ್ದಿದ್ದನ್ನು ಮರೆಯುವಂತಿಲ್ಲ.

2023ರ ಆ ಫೈನಲ್‌ನಲ್ಲಿ ಅಂತಿಮ ದಿನವಷ್ಟೇ (ಕೊನೆಯ ಸುತ್ತಿನಲ್ಲಿ) ಅವರು ಸಮಮಾಡಿಕೊಂಡು, ಟೈಬ್ರೇಕರ್‌ನಲ್ಲಿ ಗೆದ್ದು ಚೀನಾದ ಮೊದಲ ವಿಶ್ವ ಚಾಂಪಿಯನ್ ಆಗಿದ್ದರು. ಅವರ ಹೋರಾಟದ ಗುಣಗಳನ್ನು ನೋಡಿದರೆ ಅವರು ಸುಲಭದ ಎದುರಾಳಿಯಲ್ಲ ಎಂಬುದು ವೇದ್ಯವಾಗುತ್ತದೆ. ಅನುಭವ ಕೂಡ ಅವರ ಬೆನ್ನಿಗಿದೆ. ಆದರೆ ಯಶಸ್ಸಿನ ಹಸಿವಿನಲ್ಲಿರುವ ಕಿರಿಯ ಎದುರಾಳಿಯೆದುರು ಅವರು ಪರಿಸ್ಥಿತಿಯನ್ನು ಹೇಗೆ ನಿಭಾಯಿಸುವರು ಎಂಬುದನ್ನು ಕಾದುನೋಡಬೇಕಾಗಿದೆ.

ಒಟ್ಟಾರೆ, ಫೈನಲ್ ಪಂದ್ಯ ಕುತೂಹಲ ಕೆರಳಿಸಿರುವುದು ಆರಂಭದಲ್ಲೇ ವ್ಯಕ್ತವಾಗಿದೆ.